ಮಂಗಳವಾರ, ಅಕ್ಟೋಬರ್ 10, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನವರಾತ್ರಿ
ಅಹಮದಾಬಾದ್‌ನಲ್ಲಿ ನವರಾತ್ರಿ ಅಂಗವಾಗಿ ಮಹಿಳೆಯೊಬ್ಬರು 'ಗರ್ಬಾ' ನೃತ್ಯದ ಅಭ್ಯಾಸ ಮಾಡಿದರು

ಮಲ್ಟಿ-ಸೆನ್ಸ್ ಡ್ರೈವ್ ಮೋಡ್‌ಗಳು

ಮಲ್ಟಿ-ಸ್ಕಿನ್ 17.78 cm ರೀಕಾನ್ಫಿಗರೇಬಲ್ TFT ಕ್ಲಸ್ಟರ್

20.32 cm ಡಿಸ್ಪ್ಲೇ ಲಿಂಕ್ ಫ್ಲೋಟಿಂಗ್ ಟಚ್‌ಸ್ಕ್ರೀನ್, ವೈರ್‌ಲೆಸ್ ಸ್ಮಾರ್ಟ್‌ಫೋನ್ ರೆಪ್ಲಿಕೇಶನ್‌ನೊಂದಿಗೆ



ಇಲೆಕ್ಟ್ರಾನಿಕ್ ಸ್ಟೆಬಿಲಿಟಿ ಪ್ರೋಗ್ರಾಮ್ (ESP)

for a test drive, call on 1800 315 4444. select variants available in CSD. special offers for defence personnel, government, PSU and corporate employees. for bulk enquiries, contact corpsales@renault.com
for further details, connect on renault.co.in

terms and conditions apply. *₹7 999 EMI based on a loan amount of ₹4.74 lakh for a tenure of 84 months. EMI may vary based on actual loan amount and tenure. not valid for any added loan amount and tenure. finance at the sole discretion of Renault Finance. #benefits up to ₹65 000/- for Kiger includes cash benefits up to ₹25 000/- on select variants, exchange benefits up to ₹20 000/- on select variants & loyalty cash benefits up to ₹20 000/- on select versions. *Kiger has scored 4-star safety rating for adult occupant and 2-star safety rating for child occupant in crash test conducted by Global NCAP. the same has been published by NCAP on their website: https://www.globalncap.org/safercarsforindia. corporate/PSU/defense personnel/government employee/professionals benefits applicable on each model is basis eligibility of the customer and based on submission of required proof by the customer. price valid on the date of purchase. for detailed offers, visit www.renault.co.in/offers. Renault India Pvt. Ltd. reserves the right at its absolute discretion to terminate this scheme or vary, delete or add to any of these terms and conditions from time to time without notice including without limitation. offers may vary across variants and cities. model/accessories shown may not be a part of the standard fitment. the color in the image may vary slightly from the actual color of the product. the above mentioned offers & benefits are valid till 31st October 2023 and are through Renault dealership. Renault India Pvt. Ltd. shall not be liable for any loss or damage arising from your failure to comply or understand the offer details. in the event of any dispute, all matters shall be governed by all applicable laws of India and court at Gurugram shall have the exclusive jurisdiction. for detailed terms and conditions, please visit www.renault.co.in

SHOWROOMS: KARNATAKA: RENAULT Bannerghatta Road Mob: +91 85468 20204, RENAULT Mysore Road Mob: +91 8527240549 & +91 7026666922, RENAULT Palace Orchards Mob: +91 8527240717, RENAULT Silk Board Mob: +91 8527240654, RENAULT Whitefield Mob: +91 8527240685, RENAULT JP Nagar Mob: +91 8527240626 & +91 7353760555, RENAULT Kalyan Nagar Mob: +91 8527236137 & +91 8722866664, RENAULT Sarjapura Mob: +91 8448481374, +91 8746811000 & +91 8496915111, RENAULT Yelahanka Mob: +91 8527234592, +91 9071767600 & +91 8884498993, RENAULT Yeswanthpur Mob: +91 9311832962 & +91 9311832968. **TUMKUR:** RENAULT Tumkur Mob: +91 7353764337.

ಪರವಾನಗಿ ಬಗ್ಗೆ ದಾಖಲೆ ಸಂಗ್ರಹ • ಆರೋಪಿಗಳ ಕಸ್ಟಡಿ ಸಾಧ್ಯತೆ • ಮಾಹಿತಿ ಪಡೆದುಕೊಂಡ ತನಿಖಾ ತಂಡ

ಪಟಾಕಿ ದುರಂತ: ಸಿಐಡಿ ತಂಡ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಆನೇಕಲ್: ಅತ್ತಿಬೆಲೆ ಪಟಾಕಿ ದುರಂತ ಪ್ರಕರಣ ಸಂಬಂಧ ಸಿಐಡಿ ತನಿಖೆ ಆರಂಭವಾಗಿದ್ದು, ದುರಂತ ಸ್ಥಳಕ್ಕೆ ಸೋಮವಾರ ಭೇಟಿ ನೀಡಿದ್ದ ಸಿಐಡಿ ಐಜಿಪಿ ಪ್ರವೀಣ್ ಮಧುಕರ್ ಪವಾರ್ ನೇತೃತ್ವದ ತಂಡ ಪರಿಶೀಲನೆ ನಡೆಸಿತು.

ದುರಂತ ಸ್ಥಳಕ್ಕೆ ಭಾನುವಾರ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಕರಣವನ್ನು ಸಿಐಡಿಗೆ ವಹಿಸಿ ಸಮಗ್ರ ತನಿಖೆಗೆ ಸೂಚಿಸಲಾಗಿದೆ ಎಂದಿದ್ದರು. ಇದರ ಬೆನ್ನಲ್ಲೇ ಸಿಐಡಿ ತನಿಖೆ ಆದೇಶ ಹೊರಬಿದ್ದಿದ್ದು, ತನಿಖಾ ತಂಡ ರಚಿಸಲಾಗಿದೆ.

ಪ್ರಾಥಮಿಕ ಮಾಹಿತಿ ಸಂಗ್ರಹಿಸಲು ಭೇಟಿ ನೀಡಿದ್ದ ತನಿಖಾ ತಂಡ, ಸ್ಥಳೀಯ ಪೊಲೀಸ್ ಠಾಣೆ ಅಧಿಕಾರಿಗಳು ಹಾಗೂ ಬೆಂಗಳೂರು ಗ್ರಾಮಾಂತರ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಅವರಿಂದ ಮಾಹಿತಿ ಪಡೆದುಕೊಂಡರು.

ದುರಂತ ಸ್ಥಳದಲ್ಲಿ ಹಾಜರಿದ್ದ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು, ಅಗ್ನಿಶಾಮಕ ದಳದ ಸಿಬ್ಬಂದಿಯೂ ಮಾಹಿತಿ ಹಂಚಿಕೊಂಡರು.

‘ಶ್ರೀ ಬಾಲಾಜಿ ಟ್ರೇಡರ್ಸ್’ ಮಳಿಗೆ ಒಳಗೆ ಹಾಗೂ ಹೊರಗಿನ ಸ್ಥಳಗಳಲ್ಲಿ ಸುತ್ತಾಡಿದ ಸಿಐಡಿ ಅಧಿಕಾರಿಗಳು, ಅಲ್ಲಿಯ ಅವಶೇಷಗಳ ಬಗ್ಗೆ ತಪಾಸಣೆ ನಡೆಸಿದರು. ಮಳಿಗೆ ಹಾಗೂ ಮಳಿಗೆಯಲ್ಲಿದ್ದ ಅಕ್ರಮ ಗೋದಾಮು ಬಗ್ಗೆಯೂ ತಿಳಿದುಕೊಂಡರು. ಮಳಿಗೆ ವಿನ್ಯಾಸದ ಬಗ್ಗೆ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಸಿದ್ಧಪಡಿಸಿರುವ ವಿನ್ಯಾಸವನ್ನು ವೀಕ್ಷಿಸಿದರು.

ಕಡತ ವರ್ಗಾವಣೆ: ದುರಂತಕ್ಕೆ ಸಂಬಂಧಪಟ್ಟಂತೆ ಅತ್ತಿಬೆಲೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪ್ರಕರಣಕ್ಕೆ ಸಂಬಂಧಪಟ್ಟ ಹಲವು ದಾಖಲೆಗಳನ್ನು ಈಗಾಗಲೇ ಸಿಐಡಿಗೆ ವರ್ಗಾವಣೆ ಮಾಡಲಾಗಿದೆ.

ಆರೋಪಿಗಳ ಕಸ್ಟಡಿ ಸಾಧ್ಯತೆ: ಮಳಿಗೆಗೆ ಪರವಾನಗಿ ಪಡೆದಿದ್ದ ಸ್ಥಳೀಯ ನಿವಾಸಿ ವಿ. ರಾಮಸ್ವಾಮಿ ರೆಡ್ಡಿ, ಅವರ ಮಗ ನವೀನ್ ರೆಡ್ಡಿ ಹಾಗೂ ಜಾಗದ ಮಾಲೀಕ ಅನಿಲ್ ರೆಡ್ಡಿಯನ್ನು ಪೊಲೀಸರು ಈಗಾಗಲೇ ಬಂಧಿಸಿದ್ದಾರೆ. ದಾಖಲೆಗಳ ಪರಿಶೀಲನೆ ನಡೆಸಿರುವ ಸಿಐಡಿ ಅಧಿಕಾರಿಗಳು, ಮೂವರು ಆರೋಪಿಗಳನ್ನು ಕಸ್ಟಡಿಗೆ ಪಡೆಯುವ ಸಾಧ್ಯತೆ ಇದೆ.

ಪಟಾಕಿ ಅಂಗಡಿಗಳ ಪರಿಶೀಲನೆ: ದುರಂತದಿಂದ ಎಚ್ಚೆತ್ತಿರುವ ಜಿಲ್ಲಾಡಳಿತ, ಅತ್ತಿಬೆಲೆ ಮತ್ತು ಸುತ್ತಮುತ್ತಲಿನ ಪಟಾಕಿ ಮಳಿಗೆಗಳಲ್ಲಿ ಪರಿಶೀಲನೆ ನಡೆಸಲು ಮುಂದಾಗಿದೆ. ಇದಕ್ಕಾಗಿ ಉಪ ವಿಭಾಗಾಧಿಕಾರಿ ನೇತೃತ್ವದಲ್ಲಿ ತಂಡ ರಚಿಸಲಾಗಿದೆ.

‘ಆನೇಕಲ್ ತಾಲ್ಲೂಕಿನ ಎಲ್ಲ ಪಟಾಕಿ ಮಳಿಗೆಗಳಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸುವಂತೆ ಜಿಲ್ಲಾಧಿಕಾರಿ ಸೂಚನೆ ನೀಡಿದ್ದಾರೆ. ಮಳಿಗೆ ಪರಿಶೀಲನೆ ನಡೆಸಿ ವರದಿ ನೀಡುವಂತೆ ಹೇಳಿದ್ದಾರೆ’ ಎಂದು ಮೂಲಗಳು ಹೇಳಿವೆ.

ಅತ್ತಿಬೆಲೆ ಪಟಾಕಿ ದುರಂತ ಸ್ಥಳಕ್ಕೆ ಭೇಟಿ ನೀಡಿದ್ದ ಸಿಐಡಿ ಐಜಿಪಿ ಪ್ರವೀಣ್ ಮಧುಕರ್ ಪವಾರ್ ಪರಿಶೀಲನೆ ನಡೆಸಿದರು

‘ನಿಯಮ ಉಲ್ಲಂಘನೆ’

ಆನೇಕಲ್ ತಾಲ್ಲೂಕಿನ ಅತ್ತಿಬೆಲೆ, ನೆರಳೂರು ಮತ್ತು ಚಂದಾಪುರ ಸುತ್ತಮುತ್ತಲಿನ ಪಟಾಕಿ ಅಂಗಡಿಗಳಿಗೆ ಸೋಮವಾರ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

‘ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯಲ್ಲಿ ಚಂದ್ರಶೇಖರರೆಡ್ಡಿ ಎಂಬುವವರಿಗೆ ಸೇರಿದ ಪಟಾಕಿ ಮಳಿಗೆಯಲ್ಲಿ ಜಿಲ್ಲಾಧಿಕಾರಿ ನೀಡಿದ್ದ ಪರವಾನಗಿ ನಿಯಮ ಉಲ್ಲಂಘನೆಯಾಗಿದೆ. ದೂರು ದಾಖಲಿಸಲಾಗಿದ್ದು, ಮಳಿಗೆಗೆ ಬೀಗ ಹಾಕಲಾಗಿದೆ’ ಎಂದು ನಗರಸಭೆ ಆಯುಕ್ತ ನರಸಿಂಹಮೂರ್ತಿ ತಿಳಿಸಿದರು.

ಬಹುತೇಕ ಅಂಗಡಿಗಳಿಗೆ ಬೀಗ

ಆನೇಕಲ್ ತಾಲ್ಲೂಕಿನ ಅತ್ತಿಬೆಲೆ, ನೆರಳೂರು ಮತ್ತು ಚಂದಾಪುರ ಸುತ್ತಮುತ್ತಲಿನ ಬಹುತೇಕ ಪಟಾಕಿ ಅಂಗಡಿಗಳಿಗೆ ಸೋಮವಾರ ಬೀಗ ಹಾಕಲಾಗಿತ್ತು. ಅಂಗಡಿಗಳಿಗೆ ಹೋಗಿದ್ದ ಅಧಿಕಾರಿಗಳು, ವಾಪಸು ಬಂದರು. ನಂತರ, ಕೆಲ ಮಾಲೀಕರನ್ನು ಕಚೇರಿಗೆ ಕರೆಸಿ ಪರವಾನಗಿ ಹಾಗೂ ಇತರೆ ಮಾಹಿತಿಯನ್ನು ಪಡೆದುಕೊಂಡರು.

‘ಅತ್ತಿಬೆಲೆ ಪುರಸಭೆ ವ್ಯಾಪ್ತಿಯಲ್ಲಿ 7 ಖಾಯಂ ಪಟಾಕಿ ಅಂಗಡಿಗಳಿಗೆ ಪರವಾನಗಿ ನೀಡಲಾಗಿದೆ. ನೆರಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 11 ಖಾಯಂ ಅಂಗಡಿಗಳಿಗೆ ಪರವಾನಗಿ ನೀಡಲಾಗಿದೆ. ಚಂದಾಪುರ ಪುರಸಭೆ ವ್ಯಾಪ್ತಿಯಲ್ಲಿ 11 ಖಾಯಂ ಮಳಿಗೆ ಅನುಮತಿ ಪಡೆದಿವೆ. ಆದರೆ, ಮಾಲೀಕರು ಸಂಪರ್ಕಕ್ಕೆ ಸಿಗುತ್ತಿಲ್ಲ. ಪಟಾಕಿ ಮಳಿಗೆಗಳನ್ನು ಮುಚ್ಚಿದ್ದಾರೆ’ ಎಂದು ಅತ್ತಿಬೆಲೆ ಮುಖ್ಯಾಧಿಕಾರಿ ಮಂಜುನಾಥ್ ಹೇಳಿದರು.

ಸುದ್ದಿ 2 ನಿಮಿಷ

ಕೆಎಲ್‌ಇ ವಿ.ವಿಗೆ ಯುಜಿಸಿ ‘12ಬಿ’ ಮಾನ್ಯತೆ

ಬೆಳಗಾವಿ: ಕೆಎಲ್‌ಇ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಗೆ (ಕಾಹೆರ್) ವಿಶ್ವವಿದ್ಯಾಲಯ ಅನುದಾನ ಆಯೋಗದಿಂದ (ಯುಜಿಸಿ) ‘12(ಬಿ)’ ಮಾನ್ಯತೆ ದೊರೆತಿದೆ.

ಕೆಎಲ್‌ಇ ಸ್ವಾಯತ್ತ ವಿಶ್ವವಿದ್ಯಾಲಯದಲ್ಲಿನ ಶೈಕ್ಷಣಿಕ ಸೌಕರ್ಯ, ಎಲ್ಲ ಕ್ಷೇತ್ರಗಳಲ್ಲಿ ಮಾಡಿದ ಸಾಧನೆ ಮತ್ತು ಗುಣಮಟ್ಟದ ಶಿಕ್ಷಣ ಪರಿಗಣಿಸಿ ಯುಜಿಸಿ ಈ ಗ್ರಾಂಟ್ ನೀಡಿದೆ. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಕೈಗೊಳ್ಳುವ ಯಾವುದೇ ಶೈಕ್ಷಣಿಕ ಹಾಗೂ ಸಂಶೋಧನಾ ಚಟುವಟಿಕೆಗಳಿಗೆ ಈ ಅನುದಾನ ಸಿಗಲಿದೆ.

‘ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ, ಕಾಹೆರ್‌ನ ಕುಲಪತಿಯೂ ಆದ ಪ್ರಭಾಕರ ಕೋರೆ ಅವರ ದೂರದೃಷ್ಟಿ, ಪರಿಶ್ರಮದ ಕಾರಣ ವಿಶ್ವವಿದ್ಯಾಲಯಕ್ಕೆ ಈ ಮಾನ್ಯತೆ ಸಿಕ್ಕಿದೆ. ಸಂಶೋಧನಾ ವಲಯದಲ್ಲಿ ಇನ್ನಷ್ಟು ಉನ್ನತ ಸಾಧನೆ ತೋರಲು ಇದು ಅನುಕೂಲಕರ’ ಎಂದು ಕಾಹೆರ್ ಕುಲಸಚಿವ ಪ್ರೊ.ಎಂ.ಎಸ್. ಗಣಾಚಾರಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಈ ಸಾಧನೆಗೆ ಕಾಹೆರ್‌ನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಪರಿಶ್ರಮ ಕಾರಣ. ಅವರ ಸಮರ್ಪಣಾ ಭಾವಕ್ಕೆ ಸಾಕ್ಷಿಯಾಗಿದೆ. ಯುಜಿಸಿಯಿಂದ ಕೆಎಲ್‌ಇ ಸಂಸ್ಥೆಯ ಇನ್ನೊಂದು ಮೈಲಿಗಲ್ಲು ಸ್ಥಾಪಿಸಿದೆ’ ಎಂದು ಕಾಹೆರ್ ಕುಲಪತಿ ಪ್ರಭಾಕರ ಕೋರೆ, ಉಪಕುಲಪತಿ ಡಾ.ನಿತಿನ್ ಎಂ.ಗಂಗಾನೆ ಹರ್ಷ ವ್ಯಕ್ತಪಡಿಸಿದ್ದಾರೆ.

ಹೊಸಪೇಟೆಯಲ್ಲಿ ಅಪಘಾತ; ಏಳು ಮಂದಿ ಸಾವು

ಹೊಸಪೇಟೆ (ವಿಜಯನಗರ): ಇಲ್ಲಿಗೆ ಸಮೀಪದ ವ್ಯಾಸನಕೆರೆ ರೈಲು ನಿಲ್ದಾಣದ ಬಳಿ ಬೆಂಗಳೂರು– ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಸೋಮವಾರ ಸಂಜೆ ಸಂಭವಿಸಿದ ಅಪಘಾತದಲ್ಲಿ ಟಿಪ್ಪರ್ ಮತ್ತು ಟ್ರಕ್ ನಡುವೆ ಕಾರು ಅಪ್ಪಚ್ಚಿಯಾಗಿ, ಅದರಲ್ಲಿದ್ದ ಮೂವರು ಮಹಿಳೆಯರು ಸೇರಿ ಏಳು ಮಂದಿ ಮೃತಪಟ್ಟಿದ್ದಾರೆ.

‘ಹೊಸಪೇಟೆ ಉಕ್ಕಡಕೇರಿಯ ಗೋಣಿಬಸಪ್ಪ (65), ಕೆಂಚವ್ವ (80), ಯುವರಾಜ (5), ಭಾಗ್ಯಮ್ಮ (32), ಸಂಡೂರು ಸ್ಕಂದಪುರ ಬಡಾವಣೆಯ ಭೀಮಲಿಂಗಪ್ಪ (60), ಉಮಾ (55) ಮತ್ತು ಅನಿಲ್ (26) ಮೃತರು. ಎಲ್ಲರೂ ಒಂದೇ ಕುಟುಂಬದವರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಕಾರಿನಲ್ಲಿದ್ದ ಎರಡು ವರ್ಷದ ಬಾಲಕ ಈವನ್ ಸ್ಥಿತಿ ಗಂಭೀರವಾಗಿದ್ದು, ಟ್ರಕ್ ಚಾಲಕ ಪಳನಿಸ್ವಾಮಿ ಮತ್ತು ಟಿಪ್ಪರ್ ಚಾಲಕ ರಾಜೇಶ್‌ಗೂ ಗಾಯವಾಗಿದೆ. ಎಲ್ಲರನ್ನೂ ಚಿಕಿತ್ಸೆಗಾಗಿ ಕೊಪ್ಪಳಕ್ಕೆ ಸಾಗಿಸಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

‘ಕೂಡ್ಲಿಗಿಯತ್ತ ಸಾಗುತ್ತಿದ್ದ ಟಿಪ್ಪರ್‌ನ ಸ್ಟಿಯರಿಂಗ್ ತುಂಡಾಗಿ ರಸ್ತೆ ವಿಭಜಕ ದಾಟಿ ಇನ್ನೊಂದು ಬದಿಯ ರಸ್ತೆಗೆ ನುಗ್ಗಿಬಂತು. ಆದೇ ವೇಳೆ ಇನ್ನೊಂದು ಬದಿಯ ರಸ್ತೆಯಲ್ಲಿ ಕಾರು ಮತ್ತು ಟ್ರಕ್ ಅಕ್ಕಪಕ್ಕ ಸಮಾನ ವೇಗದಲ್ಲಿ ಸಾಗುತ್ತಿದ್ದವು. ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಕಾರು ಅಪ್ಪಚ್ಚಿಯಾದರೆ, ಪಕ್ಕದ ಕಮರಿಗೆ ಟ್ರಕ್ ಉರುಳಿಬಿತ್ತು’ ಎಂದಿದ್ದಾರೆ.

ಹಿರಿಯ ಪತ್ರಕರ್ತ ರಂಗನಾಥ ರಾವ್ ನಿಧನ



ಬೆಂಗಳೂರು: ‘ಪ್ರಜಾವಾಣಿ’ ಪತ್ರಿಕೆಯ ನಿವೃತ್ತ ಕಾರ್ಯನಿರ್ವಾಹಕ ಸಂಪಾದಕ ಜಿ.ಎನ್. ರಂಗನಾಥ ರಾವ್ (81) ಅವರು ವಯೋಸಹಜ ಅನಾರೋಗ್ಯದಿಂದ ನಗರದ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು.

ಮೃತರಿಗೆ ಒಬ್ಬ ಪುತ್ರ ಮತ್ತು ಪುತ್ರಿ ಇದ್ದಾರೆ. ಸೋಮವಾರ ಸಂಜೆ ನಗರದ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಿ.ಎನ್.ರಂಗನಾಥ್ ರಾವ್ 1942ರಲ್ಲಿ ಬೆಂಗಳೂರು ಜಿಲ್ಲೆಯ ಹಾರೋಹಳ್ಳಿಯಲ್ಲಿ ಜನಿಸಿದರು. ಹೊಸಕೋಟೆ ಹಾಗೂ ಬೆಂಗಳೂರು ನಗರದಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿದರು. ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಉಪ ಸಂಪಾದಕರಾಗಿ ವೃತ್ತಿ ಜೀವನ ಆರಂಭಿಸಿದ್ದರು. ನಂತರ ‘ಪ್ರಜಾವಾಣಿ’ ಸೇರಿದ ಅವರು ವಿವಿಧ ಹುದ್ದೆಗಳನ್ನು ನಿಭಾಯಿಸಿ, ಕಾರ್ಯನಿರ್ವಾಹಕ ಸಂಪಾದಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು.

ರಂಗನಾಥ ರಾವ್ ಅವರು ಸಣ್ಣ ಕಥೆ, ಕಾದಂಬರಿ, ನಾಟಕ, ಪ್ರಬಂಧ ಸೇರಿ ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಪತ್ರಿಕೋದ್ಯಮದ ವಿದ್ಯಾರ್ಥಿಗಳ ಅಧ್ಯಯನಕ್ಕೆ ಪೂರಕವಾಗುವ ಕೃತಿಗಳನ್ನೂ ರಚಿಸಿದ್ದಾರೆ.

ಕೃತಿಗಳು: ಹೊಸ ತಿರುವು, ಮಾಸ್ತಿಯವರ ನಾಟಕಗಳು, ಒಳನೋಟ, ಹಿಂದಣ ಹೆಜ್ಜೆ, ಅನ್ಯೋನ್ಯ, ಗುಣ–ದೋಷ–ಮುಖ್ಯ ಅವರ ಪ್ರಮುಖ ವಿಮರ್ಶಾ ಕೃತಿಗಳು.

ಶೇಕ್ಸ್‌ಪಿಯರ್‌ನ ರೋಮಿಯೋ ಜೂಲಿಯಟ್ ಮತ್ತು ಆಂಟನಿ ಕ್ಲಿಯೋಪಾಟ್ರ, ಬ್ರೆಕ್ಟ್‌ನ ಚಾಕ್ ಸರ್ಕಲ್, ಅನ್ವಿಯ ಅಂತಿಗೊನೆ, ಜೀನ್ ಜೆನೆಯ ದಿ ಬ್ಲ್ಯಾಕ್ಸ್, ಟಾಲ್ ಸ್ಟಾಯ್‌ನ ಡೆತ್ ಆಫ್ ಇವಾನ್ ಇಲ್ಯಿಚ್, ಸೋಲ್ಜೆನಿತ್ಸಿನ್‌ನ ಇವಾನ್ ದೆನಿಸೊವಿಚ್, ಕಾಫ್ಕ ಕತೆಗಳು, ಓ ಹೆನ್ರಿ ಕತೆಗಳು, ಜೆ.ಡಿ ಬರ್ನಾಲ್‌ನ ಸೋಶಿಯಲ್ ಸೈನ್ಸ್ ಇನ್ ಹಿಸ್ಟರಿ, ರಾಮಚಂದ್ರ ಗುಹಾ ಅವರ ಇಂಡಿಯಾ ಆಫ್ಟರ್ ಗಾಂಧಿ (ಬಾಪೂ ನಂತರದ ಭಾರತ), ಮೇಕರ್ಸ್ ಆಫ್ ಮಾಡರ್ನ್ ಇಂಡಿಯಾ (ನವಭಾರತದ ನಿರ್ಮಾಪಕರು), ಪೇಟ್ರಿಯೆಟ್ಸ್ ಅಂಡ್ ಪಾರ್ಟಿಸಾನ್ಸ್ (ದೇಶಪ್ರೇಮಿಗಳು ಮತ್ತು ಪಕ್ಷಪಾತಕರು), ಗಾಂಧಿ ಬಿಫೋರ್ ಇಂಡಿಯಾ (ಗಾಂಧಿ ಮಹಾತ್ಮರಾದುದು) ಮತ್ತು ಖಲೀಲ್ ಗಿಬ್ರಾನ್‌ನ ‘ಕಾಲಾತೀತ ವಿಖ್ಯಾತ’ –ಇವು ರಂಗನಾಥ ರಾವ್ ಅವರು ಅನುವಾದಿಸಿರುವ ಕೃತಿಗಳು.

ರಂಗನಾಥ ರಾವ್ ಅವರಿಗೆ 2009ನೇ ಸಾಲಿನ ಖಾದ್ರಿ ಶಾಮಣ್ಣ ಪ್ರಶಸ್ತಿ ಹಾಗೂ 2018ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ಸಂದೇಶ ಪ್ರಶಸ್ತಿ, ಕುವೆಂಪು ಭಾಷಾಭಾರತಿ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಫೆಲೋಷಿಪ್, ಟಿಎಸ್ಸಾರ್ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಅನುವಾದ ಸಾಹಿತ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ನೀಡುವ ಪ್ರಶಸ್ತಿ ಸಂದಿವೆ.

‘ಸಹಕಾರ ಸಂಸ್ಥೆಗಳಲ್ಲಿ ಅಕ್ರಮ ತಡೆಗೆ ಸಮಿತಿ’

ಬೆಂಗಳೂರು: ರಾಜ್ಯದ ಸಹಕಾರಿ ಸಂಸ್ಥೆಗಳಲ್ಲಿ ಅಕ್ರಮ ತಡೆಯಲು ಕೆಲವು ಬದಲಾವಣೆಗಳನ್ನು ತರುವ ಕುರಿತು ಅಧ್ಯಯನ ನಡೆಸಲು ಶಾಸಕ ಲಕ್ಷ್ಮಣ ಸವದಿ ಅಧ್ಯಕ್ಷತೆಯಲ್ಲಿ ಸಮಿತಿ ನೇಮಿಸಲಾಗಿದೆ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ತಿಳಿಸಿದರು.

ಸಹಕಾರ ಸಪ್ತಾಹದ ಸಿದ್ಧತೆ ಕುರಿತು ವಿಕಾಸಸೌಧದಲ್ಲಿ ಸೋಮವಾರ ನಡೆದ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದ ಕೆಲವು ಸಹಕಾರಿ ಬ್ಯಾಂಕ್‌ಗಳಲ್ಲಿ ಅಕ್ರಮ ನಡೆದಿರುವುದು ಪತ್ತೆಯಾಗಿದೆ. ಇಂತಹ ಪ್ರಕರಣಗಳು ನಡೆಯದಂತೆ ತಡೆಯಬೇಕಿದೆ. ಠೇವಣಿದಾರರು, ಸಹಕಾರಿ ಸಂಸ್ಥೆಗಳು ಇಬ್ಬರನ್ನೂ ರಕ್ಷಿಸುವಂತಹ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ’ ಎಂದರು.

ಸವದಿ ನೇತೃತ್ವದ ಸಮಿತಿಯಲ್ಲಿ, ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ, ಕಾಂಗ್ರೆಸ್ ಮುಖಂಡ ಎಸ್.ಆರ್. ಪಾಟೀಲ ಸೇರಿದಂತೆ ಹಲವರು ಸದಸ್ಯರಾಗಿದ್ದಾರೆ. ಈ ಸಮಿತಿಯು 15 ದಿನಗಳಲ್ಲಿ ವರದಿ ಸಲ್ಲಿಸಲಿದೆ. ವರದಿಯನ್ನು ಪರಿಶೀಲಿಸಿ ಕೆಲವು ಬದಲಾವಣೆಗಳನ್ನು ತರಲಾಗುವುದು ಎಂದು ತಿಳಿಸಿದರು.

ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಹಾಗೂ ಸಹಕಾರ ಸಂಘಗಳ ರಿಜಿಸ್ಟ್ರಾರ್ ಕಚೇರಿಗಳ ಡಿಜಿಟಲೀಕರಣಕ್ಕೆ ಕೇಂದ್ರ ಸರ್ಕಾರಕ್ಕೆ ಮುಂದಾಗಿದೆ. ಈ ಕುರಿತ ಪ್ರಸ್ತಾವಕ್ಕೆ ಕೇಂದ್ರ ಸಂಪುಟ ಸಭೆಯು ಒಪ್ಪಿಗೆ ನೀಡಿರುವುದು ಸ್ವಾಗತಾರ್ಹ ಎಂದರು.

13 ಜಿಲ್ಲೆಗಳಲ್ಲಿ ಬರದ ಅಧ್ಯಯನ ಪ್ರವಾಸ ಪೂರ್ಣ • ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿಕೆ

‘ಬರದ ತೀವ್ರತೆ ಕೇಂದ್ರ ತಂಡಕ್ಕೆ ಮನವರಿಕೆ’

ಪ್ರಜಾವಾಣಿ ವಾರ್ತೆ

ಕೃಷ್ಣ ಬೈರೇಗೌಡ

ಬೆಂಗಳೂರು: ‘ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪರಿಶೀಲನೆ ನಡೆಸಿರುವ ಕೇಂದ್ರ ಸರ್ಕಾರದ ಅಧಿಕಾರಿಗಳ ಅಧ್ಯಯನ ತಂಡಕ್ಕೆ ರಾಜ್ಯದಲ್ಲಿನ ಬರದ ತೀವ್ರತೆಯ ಮನವರಿಕೆಯಾಗಿದೆ. ತಂಡವು ರಾಜ್ಯದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

13 ಜಿಲ್ಲೆಗಳಲ್ಲಿ ಬರ ಅಧ್ಯಯನ ಪ್ರವಾಸ ಪೂರ್ಣಗೊಳಿಸಿ ಬೆಂಗಳೂರಿಗೆ ಹಿಂದಿರುಗಿದ ಕೇಂದ್ರದ ಅಧಿಕಾರಿಗಳ ತಂಡದೊಂದಿಗೆ ಸೋಮವಾರ ಸಭೆ ನಡೆಸಿದರು.

ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೆಲವೆಡೆ ಹಸಿರು ಬರ ಇರುವುದನ್ನು ತಂಡ ಒಪ್ಪಿಕೊಂಡಿದೆ. 10 ದಿನಗಳೊಳಗೆ ಅಧಿಕಾರಿಗಳ ತಂಡವು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ. ಶೀಘ್ರದಲ್ಲೇ ಪರಿಹಾರದ ಹಣ ಬಿಡುಗಡೆಯಾಗುವ ಸಾಧ್ಯತೆ ಇದೆ’ ಎಂದರು.

ರಾಜ್ಯದಲ್ಲಿ ಬರದಿಂದ ಆಗಿರುವ ಹಾನಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ (ಎನ್‌ಡಿಆರ್‌ಎಫ್) ₹ 4,800 ಕೋಟಿ ಪರಿಹಾರ ನೀಡುವಂತೆ ಈ ಹಿಂದೆ ಮನವಿ ಸಲ್ಲಿಸಲಾಗಿತ್ತು. ಆ ಬಳಿಕ ಕೇಂದ್ರ ಕೃಷಿ ಸಚಿವರ ಭೇಟಿಗೆ ಪ್ರಯತ್ನಿಸಲಾಗಿತ್ತು. ಕಾಲಾವಕಾಶ ಸಿಕ್ಕಿರಲಿಲ್ಲ. ಎರಡನೇ ಹಂತದ ಬರ ಘೋಷಣೆಯ ಮನವಿಯನ್ನಾದರೂ ಖುದ್ದಾಗಿ ಸ್ವೀಕರಿಸುವಂತೆ ಕೇಂದ್ರ ಕೃಷಿ ಸಚಿವರಿಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು.

ಬರ ಪೀಡಿತ ಪ್ರದೇಶಗಳ ಘೋಷಣೆಯ ಮಾರ್ಗಸೂಚಿಯಲ್ಲಿನ ತೊಡಕುಗಳ ಕುರಿತು ಕೇಂದ್ರದ ಅಧಿಕಾರಿಗಳ ತಂಡದ ಜತೆ ಚರ್ಚಿಸಲಾಗಿದೆ. ಮಾರ್ಗಸೂಚಿಗಳನ್ನು ಬದಲಾವಣೆ ಮಾಡುವಂತೆ ಮತ್ತೊಂದು ಪತ್ರ ಬರೆಯಲಾಗುವುದು ಎಂದರು.

ಹೊಸ ಅಂಕಿಅಂಶ: ಕೇಂದ್ರ ಸರ್ಕಾರವು ರಾಜ್ಯದ ಸಣ್ಣ ಮತ್ತು ಅತಿ ಸಣ್ಣ ರೈತರ ಹಳೆಯ ಅಂಕಿಅಂಶವನ್ನು ಆಧರಿಸಿ ಪರಿಹಾರ ನಿಗದಿ ಮಾಡುವ ಸಾಧ್ಯತೆ ಇದೆ. ಈಗ ಹೊಸ ಅಂಕಿಅಂಶವು ಲಭ್ಯವಿದೆ. ಅದರ ಪ್ರಕಾರ, ಹಳೆಯ ಅಂಕಿಅಂಶಗಳ ಪ್ರಕಾರ ರಾಜ್ಯದಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರ ಸಂಖ್ಯೆ ಶೇಕಡ 46ರಷ್ಟು ಮಾತ್ರ. ಈಗ ರಾಜ್ಯ ಸರ್ಕಾರದ ಬಳಿ ಇರುವ ಮಾಹಿತಿ ಪ್ರಕಾರ, ಶೇ 60ರಷ್ಟು ಮಂದಿ ಸಣ್ಣ ಮತ್ತು ಅತಿಸಣ್ಣ ರೈತರಿದ್ದಾರೆ. ಈ ಮಾಹಿತಿಯನ್ನು ಕೇಂದ್ರದ ಅಧಿಕಾರಿಗಳ ತಂಡಕ್ಕೆ ಒದಗಿಸಲಾಗುವುದು ಎಂದು ಹೇಳಿದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, ‘ಕೇಂದ್ರ ಸರ್ಕಾರವು ಅಧಿಕಾರಿಗಳ ವರದಿಯನ್ನು ಪರಿಶೀಲಿಸಿ, ಪರಿಹಾರದ ಹಣ ಬಿಡುಗಡೆ ಮಾಡಲು ಸ್ವಲ್ಪ ಸಮಯಾವಕಾಶ ಬೇಕಾಗುತ್ತದೆ. ಅಲ್ಲಿಯವರೆಗೂ ಕಾಯುತ್ತೇವೆ. ಕೇಂದ್ರದಿಂದ ಪರಿಹಾರ ಬರದಿದ್ದರೆ ಸಂಪುಟ ಸಭೆಯಲ್ಲಿ ಚರ್ಚಿಸಿ, ತೀರ್ಮಾನ ಕೈಗೊಳ್ಳುತ್ತೇವೆ. ರಾಜ್ಯದ ರೈತರಿಗೆ ಅನ್ಯಾಯವಾಗಲು ಬಿಡುವುದಿಲ್ಲ’ ಎಂದರು.

ಬೆಳೆ ವಿಮೆ ಕುರಿತು ಅಸಮಾಧಾನ

ಪ್ರಧಾನಮಂತ್ರಿ ಫಸಲ್ ವಿಮಾ ಯೋಜನೆಯಿಂದ ರೈತರಿಗೆ ಅನುಕೂಲವಾಗುತ್ತಿಲ್ಲ. ವಿಧಾನಮಂಡಲದಲ್ಲೂ ಈ ಬಗ್ಗೆ ಚರ್ಚೆಯಾಗಿತ್ತು. ಯೋಜನೆಯು ರೈತರ ಪರವಾಗಿ ಇಲ್ಲ ಎಂಬುದನ್ನು ಕೇಂದ್ರ ಸರ್ಕಾರದ ಅಧಿಕಾರಿಗಳ ತಂಡಕ್ಕೆ ತಿಳಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೂಲಿ ಬಾಬ್ತು ಕೇಂದ್ರದಿಂದ ₹ 475 ಕೋಟಿ ಬರಬೇಕಿದೆ. ಅದನ್ನು ಬಿಡುಗಡೆ ಮಾಡುವಂತೆಯೂ ಒತ್ತಾಯ ಮಾಡಲಾಗಿದೆ ಎಂದರು.

‘ರೈತರಿಗೆ ಆತ್ಮಹತ್ಯೆ ಗ್ಯಾರಂಟಿ ನೀಡಿದ ಸರ್ಕಾರ’

ಬೆಂಗಳೂರು: ‘ಐದು ಗ್ಯಾರಂಟಿಗಳಿಂದಾಗಿ ರಾಜ್ಯ ಸರ್ಕಾರದಲ್ಲಿ ಅಭಿವೃದ್ಧಿ ಕೆಲಸಗಳಿಗೆ ಹಣ ಇಲ್ಲವಾಗಿದೆ. ಬರದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಕಾಂಗ್ರೆಸ್ ಸರ್ಕಾರ ಆತ್ಮಹತ್ಯೆ ಗ್ಯಾರಂಟಿ ಕೊಟ್ಟಿದೆ’ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ವಾಗ್ದಾಳಿ ನಡೆಸಿದರು.

ಪಕ್ಷದ ಕಚೇರಿಯಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದ 195 ತಾಲ್ಲೂಕುಗಳಲ್ಲಿ ಬರ ಇದೆ ಎಂದು ಸರ್ಕಾರ ಘೋಷಿಸಿದೆ. ತೀವ್ರ ಬರಗಾಲ ಇರುವಾಗ ಕೃಷಿ ಇಲಾಖೆ ಸತ್ತು ಮಲಗಿದೆ. 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಒದಗಿಸುವುದಾಗಿ ಸರ್ಕಾರ ಘೋಷಿಸಿದೆ. ರೈತರಿಗೆ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಿಯಾಗಿ ಲಭ್ಯವಾಗುತ್ತಿಲ್ಲ. ರೈತರ ಬಗ್ಗೆ ಮಾತನಾಡಿದರೆ ಸಾಲದು. ರೈತರ ಕೆಲಸವನ್ನೂ ಮಾಡಬೇಕು ಎಂದು ಹೇಳಿದರು.

‘ಮೈತ್ರಿಗೆ ವಿರೋಧ ಅರ್ಥಹೀನ’: ಜೆಡಿಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾ ಖಾನ್ ಮಾತನಾಡಿ, ‘ಸೈದ್ಧಾಂತಿಕವಾಗಿ ಪರಸ್ಪರ ವಿರುದ್ಧ ಇರುವ ಕಾಂಗ್ರೆಸ್ ಮತ್ತು ಶಿವಸೇನೆ ಮೈತ್ರಿ ಮಾಡಿಕೊಂಡರೆ ಒಪ್ಪುವವರು ಜೆಡಿಎಸ್-ಬಿಜೆಪಿ ಮೈತ್ರಿಯನ್ನು ವಿರೋಧಿಸುವುದು ಅರ್ಥಹೀನ’ ಎಂದರು.

‘ಅಸಮಾಧಾನಿತರನ್ನು ಮನವೊಲಿಸುವ ಪ್ರಯತ್ನ ನಡೆಯುತ್ತಿದೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರು ವಿಷಕಂಠ ಆಗಿದ್ದರೆ ಎಲ್ಲವೂ ಅವರಿಗೆ ತಿಳಿದಿರಲೇಬೇಕಿತ್ತು. ಅವರು ಯಾವ ರೀತಿ ಕೆಲಸ ಮಾಡಿದ್ದಾರೆ ಗೊತ್ತಾಗಬೇಕು’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಾಗಮೋಹನ್‌ದಾಸ್, ಜಾನ್ ಮೈಕಲ್ ಕುನ್ಹಾ ನೇತೃತ್ವದ ಆಯೋಗ

ಶೇ 40ರ ಲಂಚ: ತನಿಖೆಗೆ ವ್ಯಾಪ್ತಿ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದ 2019ರ ಜುಲೈ 26ರಿಂದ 2023ರ ಮಾರ್ಚ್ 31ರ ಅವಧಿಯಲ್ಲಿ ನಡೆದ ಕಾಮಗಾರಿಗಳ ಬಿಲ್ ಮಂಜೂರು ಮಾಡಲು ಶೇ 40 ಲಂಚ, ಅವ್ಯವಹಾರ ನಡೆದಿರುವ ಆರೋಪ ಬಗ್ಗೆ ತನಿಖೆ ನಡೆಸುವಂತೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ನೇತೃತ್ವದ ವಿಚಾರಣಾ ಆಯೋಗಕ್ಕೆ ರಾಜ್ಯ ಸರ್ಕಾರ ಸೂಚಿಸಿದೆ.

ಆಯೋಗದ ತನಿಖಾ ವ್ಯಾಪ್ತಿಗೆ ಸಂಬಂಧಿಸಿದಂತೆ ಇದೇ 6ರಂದು ಅಧಿಸೂಚನೆ ಹೊರಡಿಸಿರುವ ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ), ತನಿಖೆಗೆ ಯಾವುದೇ ರೀತಿಯ ಕನಿಷ್ಠ ಅಥವಾ ಗರಿಷ್ಠ ಮೊತ್ತವನ್ನು ನಿರ್ದಿಷ್ಟಪಡಿಸಿಲ್ಲ. ಹೀಗಾಗಿ, ತನಿಖೆಯ ವ್ಯಾಪ್ತಿಗೆ ವಹಿಸಿದ ಎಲ್ಲ ಮೊತ್ತದ ಕಾಮಗಾರಿಗಳಿಗೆ ಸಂಬಂಧಿಸಿದ ಆರೋಪಗಳ ಕುರಿತು ಸಮಗ್ರವಾಗಿ ತನಿಖೆ ನಡೆಸಬೇಕು ಎಂದೂ ಹೇಳಿದೆ.

ಬಿಬಿಎಂಪಿ, ಬಿಡಿಎ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮತ್ತು ಜಲಸಂಪನ್ಮೂಲ ಇಲಾಖೆಗೆ ಸಂಬಂಧಪಟ್ಟ ಕಾಮಗಾರಿಗಳ ವ್ಯವಹಾರಗಳಿಗೆ ಕಮಿಷನ್ ಪಡೆದಿರುವ ಆರೋಪಕ್ಕೆ ಸಂಬಂಧಿಸಿದಂತೆ, ಕಾಮಗಾರಿಗಳಿಗೆ ಅನುಮೋದನೆ ನೀಡಿರುವ ಎಲ್ಲ ವಿಭಾಗಗಳಲ್ಲಿ ನಡೆದಿರುವ ಅವ್ಯವಹಾರ, ಭ್ರಷ್ಟಾಚಾರ ಆರೋಪಗಳನ್ನು ವಿಚಾರಣೆ ನಡೆಸಿ, ಸೂಕ್ತ ಕ್ರಮ ತೆಗೆದುಕೊಳ್ಳಲು ಶಿಫಾರಸು ಮಾಡಬೇಕು ಎಂದೂ ಆಯೋಗಕ್ಕೆ ಸೂಚಿಸಲಾಗಿದೆ.

ವಿಧಾನಸಭೆಯ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ (2020–21) ಸಲ್ಲಿಸಿದ್ದ ವರದಿಯಲ್ಲಿ ಪ್ರಸ್ತಾಪಿಸಿದ ವಿಷಯಗಳನ್ನು ಪರಿಶೀಲಿಸಲು ಮತ್ತು ಸಕ್ಷಮ ಅಧಿಕಾರಿಗಳು ಕೆಟಿಪಿಪಿ ಕಾಯ್ದೆ ಮತ್ತು ನಿಯಮಗಳನ್ನು ಉಲ್ಲಂಘಿಸಿ ನೀಡಿದ್ದ ಅನುಮೋದನೆ, ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಇತರ ಇಲಾಖೆಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸಂಸ್ಥೆಗಳಲ್ಲಿ ಔಷಧಿ, ಆಮ್ಲಜನಕ ಉಪಕರಣಗಳು, ಸಾಮಗ್ರಿಗಳ ಖರೀದಿ, ವಿತರಣೆಯ ನಿರ್ವಹಣೆಯಲ್ಲಿ ನಡೆದಿರುವ ಅವ್ಯವಹಾರ, ಲೋಪದೋಷಗಳ ತನಿಖೆ ನಡೆಸಬೇಕು ಎಂದು ಆಯೋಗಕ್ಕೆ ಸೂಚಿಸಲಾಗಿದೆ.

ಕಿದ್ವಾಯಿ ಸಂಸ್ಥೆಗೆ ಸಂಬಂಧಿಸಿದಂತೆ ಟೆಂಡರ್‌ಗಳು, ನೇಮಕಾತಿಗಳು, ಔಷಧಿ, ಉಪಕರಣಗಳು, ವೆಂಟಿಲೇಟರುಗಳು, ಆಕ್ಸಿಜನ್ ಘಟಕದ ನಿರ್ವಹಣೆ ಇವುಗಳ ಅವ್ಯವಹಾರಗಳ ತನಿಖೆ, ಮಹಾಲೇಖಪಾಲರು ತಮ್ಮ ವರದಿಯಲ್ಲಿ ಆಕ್ಷೇಪ ವ್ಯಕ್ತಪಡಿಸಿರುವ ವಿಷಯಗಳು, ಕೋವಿಡ್ ರೋಗಿಗಳಿಗೆ ಹಾಸಿಗೆ ಹಂಚಿಕೆಯಲ್ಲಿ ಮಾನದಂಡಗಳ ಉಲ್ಲಂಘನೆ, ಆಮ್ಲಜನಕ ಕೊರತೆ ಮತ್ತು ನಿರ್ವಹಣೆಯಲ್ಲಿ ನಿಯಮ ಪಾಲನೆ, ಕೋವಿಡ್ ನಿರ್ವಹಣೆಗೆ ಸಲ್ಲಿಕೆಯಾದ ಪ್ರಸ್ತಾವನೆಗಳಿಗೆ ಅನುಮೋದನೆ ವಿಳಂಬ ಮುಂತಾದ ವಿಷಯಗಳ ಕುರಿತು ತನಿಖೆ ನಡೆಸಿ, ಕೈಗೊಳ್ಳಬಹುದಾದ ಕ್ರಮದ ಕುರಿತು ಮತ್ತು ಮುಂದೆ ಇಂತಹ ಲೋಪ, ನಿಯಮ ಉಲ್ಲಂಘನೆ ಆಗದಂತೆ ವಹಿಸಬಹುದಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಸಲಹೆಗಳನ್ನು ನೀಡಬೇಕು ಎಂದೂ ತಿಳಿಸಲಾಗಿದೆ.

ಜಾನ್ ಮೈಕಲ್ ಕುನ್ಹಾ ಆಯೋಗದ ವ್ಯಾಪ್ತಿ

ಕೋವಿಡ್ ನಿವಾರಣೆ ಹೆಸರಿನಲ್ಲಿ ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಕುರಿತು ತನಿಖೆಗೆ ರಚಿಸಲಾಗಿರುವ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ನೇತೃತ್ವದ ವಿಚಾರಣಾ ಆಯೋಗವು ಮೊದಲ ಲಾಕ್‌ಡೌನ್ ಆರಂಭವಾದ ದಿನದಿಂದ 2022ರ ಡಿಸೆಂಬರ್ 31ರವರೆಗಿನ ಅವಧಿಯಲ್ಲಿನ ಆರೋಪ, ನಿಯಮ ಉಲ್ಲಂಘನೆ, ಲೋಪಗಳ ಕುರಿತು ತನಿಖೆ ನಡೆಸುವಂತೆ ಇದೇ 7ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ ಸೂಚಿಸಲಾಗಿದೆ.

ವಿಶ್ವಪ್ರಸನ್ನತೀರ್ಥ ಶ್ರೀ ಷಷ್ಟ್ಯಬ್ದ ಅಭಿವಂದನಾ ಸಮಾರಂಭ ನಾಳೆ

ಹುಬ್ಬಳ್ಳಿ: ‘ಅಖಿಲ ಭಾರತ ಮಾಧ್ವ ಮಹಾಮಂಡಲದ ವತಿಯಿಂದ ಇದೇ 11 ಮತ್ತು 12ರಂದು ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅವರ ಷಷ್ಟ್ಯಬ್ದ ಅಭಿವಂದನಾ ಸಮಾರಂಭ, ಸಂತ ಸಂಗಮ ಮತ್ತು ದಿ.ಪಂಢರೀನಾಥಾಚಾರ್ಯ ಗಲಗಲಿಯವರ ಜನ್ಮಶತಮಾನೋತ್ಸವ ಸಮಾರಂಭ ಹಮ್ಮಿಕೊಳ್ಳಲಾಗಿದೆ’ ಎಂದು ಮಹಾಮಂಡಲದ ಕಾರ್ಯದರ್ಶಿ ಶ್ರೀಪಾದ ಸಿಂಗನಮಲ್ಲಿ ಹೇಳಿದರು.

‘11ರಂದು ಮಧ್ಯಾಹ್ನ 3 ಗಂಟೆಗೆ ಉದ್ಘಾಟನೆ ಕಾರ್ಯಕ್ರಮ ಜರುಗಲಿದೆ. ಇದೇ 12ರಂದು ಸಂಜೆ 5.30ಕ್ಕೆ ಸಂತ ಸಂಗಮ ನಡೆಯಲಿದೆ.

ಕಾರಾಗೃಹ ಸ್ಫೋಟಿಸುವುದಾಗಿ ಬೆದರಿಕೆ ಕರೆ: ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಇಲ್ಲಿನ ಹಿಂಡಲಗಾ ಕೇಂದ್ರ ಕಾರಾಗೃಹ, ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹ ಮತ್ತು ನನ್ನ ವಸತಿ ಗೃಹದಲ್ಲಿ ಬಾಂಬ್ ಸ್ಫೋಟಿಸುವುದಾಗಿ ಅಪರಿಚಿತನೊಬ್ಬ ಭಾನುವಾರ (ಅಕ್ಟೋಬರ್ 8) ಕರೆಮಾಡಿ ಬೆದರಿಸಿದ್ದಾನೆ’ ಎಂದು ಬಂದಿಖಾನೆ ಇಲಾಖೆ ಉತ್ತರ ವಲಯ ಡಿಐಜಿಪಿ ಟಿ.ಪಿ.ಶೇಷ ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಸೋಮವಾರ ದೂರು ದಾಖಲಿಸಿದ್ದಾರೆ.

‘ಹಿಂಡಲಗಾ ಕೇಂದ್ರ ಕಾರಾಗೃಹದ ಹಿರಿಯ ವೀಕ್ಷಕರಾದ ಜಗದೀಶ ಗಸ್ತಿ, ಎಸ್.ಎಂ. ಗೋಟೆ ಅವರ ಪರಿಚಿತ ಎಂದು ಹೇಳಿಕೊಂಡ ಆತ, ಮೂರು ಪ್ರತ್ಯೇಕ ದೂರವಾಣಿ ಸಂಖ್ಯೆಗಳಿಂದ ಕರೆ ಮಾಡಿದ. ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿ ಗಲಭೆ ಸೃಷ್ಟಿಸುವುದಾಗಿ ಮತ್ತು ಹಲ್ಲೆ ಮಾಡುವುದಾಗಿ ಬೆದರಿಕೆ ಒಡ್ಡಿದ’ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

‘ರೌಡಿ ಬನ್ನಂಜೆ ರಾಜಾನಿಗೆ ಸಹಾಯ ಮಾಡಿರುವುದಾಗಿ ಹೇಳಿರುವ ಆ ಅಪರಿಚಿತನಿಂದ ಕಾರಾಗೃಹದ ಆಡಳಿತಕ್ಕೆ ಧಕ್ಕೆ ಬರುವ ಸಾಧ್ಯತೆ ಇದೆ. ಆತನ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಅವರು ತಿಳಿಸಿದ್ದಾರೆ.

‘ಕೇಂದ್ರದ ಎಫ್‌ಆರ್‌ಪಿ ಪ್ರಕಾರ ದರ ಕೊಡಿ’



ಶಿವಾನಂದ ಪಾಟೀಲ

ಬೆಳಗಾವಿ: ‘ಕೇಂದ್ರ ಸರ್ಕಾರವು ಕಬ್ಬಿಗೆ ನ್ಯಾಯಯುತ ಮತ್ತು ಲಾಭದಾಯಕ ದರ (ಎಫ್‌ಆರ್‌ಪಿ) ಘೋಷಿಸಿದೆ. ಪ್ರಸಕ್ತ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳು ಅದರಂತೆ ದರ ನೀಡಬೇಕು’ ಎಂದು ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

‘ಸಕ್ಕರೆ ಕಾರ್ಖಾನೆಗಳ ಜೊತೆ ಸಭೆ ನಡೆಸಿ, ನಿಗದಿತ ದಿನಾಂಕದಂತೆ ಕಬ್ಬು ನುರಿಸುವ ಪ್ರಕ್ರಿಯೆ ಆರಂಭಿಸಲು ಸೂಚಿಸಿದ್ದೇವೆ. ತೂಕದಲ್ಲಿ ಆಗುತ್ತಿರುವ ಮೋಸ ತಡೆಗಟ್ಟಲು, ಸಕ್ಕರೆ ಕಾರ್ಖಾನೆಗಳಲ್ಲಿ ಸರ್ಕಾರದಿಂದ ತೂಕದ ಮಾಪಕ ಅಳವಡಿಸಲಿದ್ದೇವೆ. ಮುಂದಿನ ವರ್ಷ ಇದು ಸಾಕಾರವಾಗಲಿದೆ’ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

‘ಈ ಸಲದ ಬರಗಾಲ ದೇಶದ ದಕ್ಷಿಣ ಭಾಗದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದ್ದು, ಕಬ್ಬಿನ ಇಳುವರಿ ಶೇ 30ರಿಂದ40ರಷ್ಟು ಕುಸಿಯುವ ಭೀತಿಯಿದೆ. ರೈತರಿಗೆ ಉತ್ತಮ ದರ ನೀಡುತ್ತಿದ್ದ ಸಕ್ಕರೆಯ ರಫ್ತನ್ನು ಕೇಂದ್ರ ಸರ್ಕಾರ ನಿಷೇಧಿಸಿದೆ. ಸರ್ಕಾರ ಈ ನಿಷೇಧ ಹಿಂಪಡೆಯಬೇಕು’ ಎಂದರು.

‘ಈಗ ಡಿಸಿಸಿ ಬ್ಯಾಂಕ್‌ಗಳೂ ರೈತರಿಗೆ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ನೀಡುವ ಸ್ಥಿತಿಯಲ್ಲಿಲ್ಲ. ಡಿಸಿಸಿ ಬ್ಯಾಂಕ್‌ಗಳಿಗೆ ತ್ವರಿತವಾಗಿ ಸಾಲ ಕೊಡುವಂತೆ ನಬಾರ್ಡ್‌ಗೆ ನಿರ್ದೇಶನ ಕೊಡುವಂತೆ ಕೇಂದ್ರ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಶೀಘ್ರ ಪತ್ರ ಬರೆಯುತ್ತೇವೆ’ ಎಂದು ಹೇಳಿದರು.

ಚಿಕ್ಕಬಳ್ಳಾಪುರ ವಿಧಾನಸಭೆ ಕ್ಷೇತ್ರದ ಕಾಂಗ್ರೆಸ್ ಶಾಸಕನ ನಡೆಗೆ ಸ್ವಪಕ್ಷೀಯರಿಂದಲೇ ಬೇಸರ

ಪ್ರದೀಪ್ ಈಶ್ವರ್ ‘ಬಿಗ್‌ಬಾಸ್’ ಪ್ರವೇಶ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಅವರು ಖಾಸಗಿ ವಾಹಿನಿಯಲ್ಲಿ ಆರಂಭವಾಗಿರುವ ‘ಬಿಗ್‌ಬಾಸ್’ ರಿಯಾಲಿಟಿ ಷೋನಲ್ಲಿ ಭಾಗವಹಿಸಿದ್ದಾರೆ. ಇದೇ ಮೊದಲ ಬಾರಿಗೆ ಜನಪ್ರತಿನಿಧಿಯೊಬ್ಬರು ‘ಬಿಗ್‌ಬಾಸ್’ ಮನೆ ಪ್ರವೇಶಿಸಿರುವುದು ರಾಜಕೀಯ ಬಣ್ಣ ಪಡೆದುಕೊಂಡಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಈ ಕುರಿತು ಪರ-ವಿರೋಧ ಅಭಿಪ್ರಾಯ ವ್ಯಕ್ತವಾಗುತ್ತಿವೆ. ಷೋನಲ್ಲಿ ಶಾಸಕರು ಅತಿಥಿಯೋ ಅಥವಾ ಸ್ಪರ್ಧಿಯೋ ಎಂಬ ಜಿಜ್ಞಾಸೆ ಆರಂಭವಾಗಿದೆ.

ಜನಪ್ರತಿನಿಧಿಯೊಬ್ಬರು ರಿಯಾಲಿಟಿ ಷೋನಲ್ಲಿ ಭಾಗಿಯಾಗಿರುವುದು ಎಷ್ಟು ಸಮಂಜಸ. ಎರಡು-ಮೂರು ತಿಂಗಳು ಅವರು ‘ಬಿಗ್‌ಬಾಸ್’ ಮನೆಯಲ್ಲಿ ಬಂಧಿಯಾದರೆ ಬರಪೀಡಿತ ಜಿಲ್ಲೆಯ ಗತಿ ಏನು? ಎಂದು ರಾಜಕೀಯ ವಿರೋಧಿಗಳು ವಾಗ್ದಾಳಿ ಶುರು ಮಾಡಿದ್ದಾರೆ.

ಪ್ರೇಕ್ಷಕರನ್ನು ಸೆಳೆಯಲು ಮತ್ತು ಪ್ರೇರಣೆಗಾಗಿ ಎರಡು ದಿನ ಮಾತ್ರ ಬಿಗ್‌ಬಾಸ್ ಅತಿಥಿಯಾಗಿ ಶಾಸಕ ಪ್ರದೀಪ್ ಈಶ್ವರ್ ಪಾಲ್ಗೊಳ್ಳಲಿದ್ದಾರೆಯೇ ಹೊರತು ಸ್ಪರ್ಧಿಯಾಗಿ ಅಲ್ಲ. ತಿಂಗಳುಗಟ್ಟಲೇ ಅವರು ಬಿಗ್‌ಬಾಸ್ ಮನೆಯಲ್ಲಿ ಇರಲ್ಲ. ಎರಡು ದಿನದಲ್ಲಿ ಹೊರ ಬರುತ್ತಾರೆ. ಈ ರಿಯಾಲಿಟಿ ಷೋ ನಡೆಸಿಕೊಡುವ ನಟ ಕಿಚ್ಚ ಸುದೀಪ್ ಮತ್ತು ಪ್ರದೀಪ್ ಚಿರಪರಿಚಿತರು. ಈ ಕಾರಣದಿಂದ ಶಾಸಕರು ಪಾಲ್ಗೊಂಡಿದ್ದಾರೆ ಎಂದು ಶಾಸಕರ ಆಪ್ತರು ಹೇಳುತ್ತಾರೆ.

ಕ್ಷೇತ್ರದಲ್ಲಿ ಹತ್ತು ಹಲವು ಸಮಸ್ಯೆ ಇವೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ತೀವ್ರ ಬರ ಆವರಿಸಿದೆ. ರೈತರು ಕಷ್ಟಕ್ಕೆ ಸಿಲುಕಿದ್ದಾರೆ. ಇದಕ್ಕೆ ಸ್ಪಂದಿಸಬೇಕಾದ ಶಾಸಕರು ಎಲ್ಲ ಬಿಟ್ಟು ರಿಯಾಲಿಟಿ ಷೋನಲ್ಲಿ ಪಾಲ್ಗೊಂಡಿದ್ದಾರೆ. ಇದು ವಿಪರ್ಯಾಸ ಎಂದು ಬಿಜೆಪಿ ಮುಖಂಡರು ಟೀಕಿಸಿದ್ದಾರೆ.

ಸ್ವಪಕ್ಷೀಯರ ಅಸಮಾಧಾನ: ಚಿಕ್ಕಬಳ್ಳಾಪುರ ಕಾಂಗ್ರೆಸ್ ಪ್ರಮುಖ ನಾಯಕರು ಪ್ರದೀಪ್ ಈಶ್ವರ್ ನಡೆಗೆ ಒಳಗೊಳಗೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

‘ಡಾ.ಕೆ. ಸುಧಾಕರ್ ಅವರನ್ನು ಸೋಲಿಸಬೇಕು ಎಂದು ಇವರನ್ನು ಗೆಲ್ಲಿಸಿದೆವು. ಆದರೆ ಈಗ ಗಂಟಲಲ್ಲಿ ಬಿಸಿತುಪ್ಪ ಸುರಿದುಕೊಂಡಂತೆ ಆಗಿದೆ. ನುಂಗಲು ಆಗುತ್ತಿಲ್ಲ, ಉಗುಳಲೂ ಆಗುತ್ತಿಲ್ಲ. ಪಕ್ಷದ ಸ್ಥಳೀಯ ಸಾಮಾನ್ಯ ಕಾರ್ಯಕರ್ತರು ಮತ್ತು ನಾಯಕರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಪಕ್ಷದ ತತ್ವ, ಸಿದ್ಧಾಂತಗಳ ಬಗ್ಗೆ ಬದ್ಧತೆ ಇಲ್ಲ’ ಎಂದು ಹೆಸರು ಹೇಳಲು ಇಚ್ಛಿಸದ ಸ್ಥಳೀಯ ಪ್ರಭಾವಿ ಕಾಂಗ್ರೆಸ್ ಮುಖಂಡರೊಬ್ಬರು ‘ಪ್ರಜಾವಾಣಿ’ಯೊಂದಿಗೆ ಅಸಮಾಧಾನ ತೋಡಿಕೊಂಡರು.

ಈ ನಡುವೆ, ‘ಷೋನಿಂದ ಬರುವ ಹಣವನ್ನು ಅನಾಥ ಮಕ್ಕಳಿಗೆ ನೀಡುವೆ’ ಎಂದು ‘ಬಿಗ್‌ಬಾಸ್’ ಮನೆಯಲ್ಲಿ ಪ್ರದೀಪ್ ಈಶ್ವರ್ ತಿಳಿಸಿದ್ದಾರೆ.



ಬಿಗ್‌ಬಾಸ್ ರಿಯಾಲಿಟಿ ಷೋನಲ್ಲಿ ಶಾಸಕ ಪ್ರದೀಪ್ ಈಶ್ವರ್

‘ಜಯಂತಿ’ಗಳಿಗೆ ಚಕ್ಕರ್; ‘ಬಿಗ್‌ಬಾಸ್’ಗೆ ಹಾಜರ್

ಕ್ಷೇತ್ರದಲ್ಲಿ ನಡೆಯುವ ಸರ್ಕಾರಿ ಕಾರ್ಯಕ್ರಮ ಮತ್ತು ಪ್ರಗತಿ ಪರಿಶೀಲನಾ ಸಭೆಗಳಿಗೆ ಶಾಸಕ ಪ್ರದೀಪ್ ಈಶ್ವರ್ ಸತತವಾಗಿ ಗೈರು ಹಾಜರಾಗುತ್ತಿದ್ದಾರೆ.

ಜಿಲ್ಲಾಡಳಿತದಿಂದ ಚಿಕ್ಕಬಳ್ಳಾಪುರದಲ್ಲಿ ನಡೆದ ಗಾಂಧಿ ಜಯಂತಿ ಕಾರ್ಯಕ್ರಮದತ್ತ ಅವರು ಸುಳಿಯಲಿಲ್ಲ. ವಿಶ್ವಕರ್ಮ ಜಯಂತಿ, ದೇವರಾಜ ಅರಸು ಜಯಂತಿ ಸೇರಿದಂತೆ ಸರ್ಕಾರದಿಂದ ನಡೆಯುವ ಮಹನೀಯರ ಜಯಂತಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಹಾಜರಾದರೂ, ಶಾಸಕರು ಮಾತ್ರ ಕಾಣಿಸಿಕೊಂಡಿಲ್ಲ.

ಜಿಲ್ಲಾ ಉಸ್ತುವಾರಿ ಸಚಿವರು ನಡೆಸುವ ಪ್ರಗತಿ ಪರಿಶೀಲನಾ ಸಭೆ, ಇತರ ಸಚಿವರು ಜಿಲ್ಲೆಗೆ ಭೇಟಿ ನೀಡಿದಾಗ ಶಾಸಕರ ಗೈರು ಹಾಜರಿ ಎದ್ದು ಕಾಣುತ್ತಿದೆ.

ಜನಪ್ರತಿನಿಧಿಯೊಬ್ಬರು ‘ಬಿಗ್‌ಬಾಸ್’ ರಿಯಾಲಿಟಿ ಷೋನಲ್ಲಿ ಭಾಗವಹಿಸಿದ ಉದಾಹರಣೆ ಎಲ್ಲಿಯೂ ಇಲ್ಲ. ರಾಜ್ಯದ ಜನರಿಗೆ ಇವರು ಆಹಾರ ಆಗಿದ್ದಾರೆ. ಇವರ ಮೂಲಕ ನಗೆಪಾಟಲಿಗೆ ಈಡಾಗಿದ್ದೇವೆ

ಡಾ.ಕೆ.ಸುಧಾಕರ್, ಮಾಜಿ ಸಚಿವ

ಮಂಗಳವಾರ, ಅಕ್ಟೋಬರ್ 10, 2023 | ಬೆಂಗಳೂರು | ₹ 7.00 | ಸಂಪುಟ 76| ಸಂಚಿಕೆ 281 | ಪುಟ 14
www.prajavani.net
prajavani.net prajavani prajavani prajavani
ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಜಾವಾಣಿ@75 ಜನ ಚಳವಳಿಗಳ ಸಂಗಾತಿ
ನಿರುದ್ಯೋಗ ಪ್ರಮಾಣ ನಗರದಲ್ಲಿ ಇಳಿಕೆ 10
ಪಾಕ್ ತಂಡಕ್ಕೆ ಲಂಕಾ ಸವಾಲು 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,512	19,512	₹54,775 (ಬೆಂಗಳೂರು)	₹75,512 (ಬೆಂಗಳೂರು)	83.28

ಐದು ರಾಜ್ಯಗಳ ಚುನಾವಣಾ ವೇಳಾಪಟ್ಟಿ ಪ್ರಕಟ • ಕಾಂಗ್ರೆಸ್, ಬಿಜೆಪಿ ಪಾಳಯಗಳಿಗೆ ಸತ್ವಪರೀಕ್ಷೆ

‘ಸೆಮಿಫೈನಲ್’ಗೆ ಅಖಾಡ ಸಜ್ಜು

• ಮಂಜುನಾಥ ಹೆಬ್ಬಾರ್

ನವದೆಹಲಿ: 2024ರ ಲೋಕಸಭಾ ಚುನಾವಣೆಗೆ ಮುನ್ನ ಸೆಮಿಫೈನಲ್ ಎಂದು ಬಿಂಬಿಸಲಾಗಿರುವ ಹಾಗೂ ಕಾಂಗ್ರೆಸ್ ಮತ್ತು ಬಿಜೆಪಿ ಪಾಳಯಗಳಿಗೆ ಸತ್ವಪರೀಕ್ಷೆಯಾಗಿರುವ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗೆ ಮುಹೂರ್ತ ನಿಗದಿಯಾಗಿದೆ.

ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢ, ತೆಲಂಗಾಣ, ಮಿಜೋರಾಂ ವಿಧಾನಸಭಾ ಚುನಾವಣೆಗಳು ನ. 7ರಿಂದ 30ರ ನಡುವೆ ನಡೆಯಲಿದ್ದು, ಡಿಸೆಂಬರ್ 3ರಂದು ಏಕಕಾಲಕ್ಕೆ ಮತ ಎಣಿಕೆ ನಡೆಯಲಿದೆ.

ಈ ರಾಜ್ಯಗಳಲ್ಲಿ ಹರಡಿರುವ 16 ಕೋಟಿಗೂ ಹೆಚ್ಚು ಮತದಾರರು ಚುನಾವಣೆಯಲ್ಲಿ ಹೊಸ ಸರ್ಕಾರವನ್ನು ಆಯ್ಕೆ ಮಾಡಲು ತಮ್ಮ ಹಕ್ಕು ಚಲಾಯಿಸಲಿದ್ದಾರೆ.

ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಸೋಮವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದರು. ಮಧ್ಯಪ್ರದೇಶ (ನವೆಂಬರ್ 17), ರಾಜಸ್ಥಾನ (ನವೆಂಬರ್ 23), ತೆಲಂಗಾಣ (ನವೆಂಬರ್ 30) ಹಾಗೂ ಮಿಜೋರಾಂನಲ್ಲಿ (ನವೆಂಬರ್ 7) ಒಂದೇ ಹಂತದ ಮತದಾನ ನಡೆಯಲಿದೆ. ಆದರೆ, ನಕ್ಸಲ್ ಬಾಧಿತ ಛತ್ತೀಸ ಗಢದಲ್ಲಿ ಎರಡು ಹಂತಗಳಲ್ಲಿ (ನವೆಂಬರ್ 7 ಹಾಗೂ 17) ಮತದಾನ ಜರುಗಲಿದೆ.

ಈ ಐದು ರಾಜ್ಯಗಳು 1.77 ಲಕ್ಷ ಮತಗಟ್ಟೆಗಳನ್ನು ಹೊಂದಿದ್ದು, ಅದರಲ್ಲಿ 1.01 ಲಕ್ಷ ವೆಬ್‌ಕಾಸ್ಟಿಂಗ್ ಸೌಲಭ್ಯಗಳನ್ನು ಹೊಂದಿರಲಿದೆ ಎಂದು ರಾಜೀವ್ ಕುಮಾರ್ ಹೇಳಿದರು.

ರಾಜೀವ್ ಕುಮಾರ್

ರಾಜಸ್ಥಾನ ಹಾಗೂ ಛತ್ತೀಸ ಗಢದಲ್ಲಿ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಮಧ್ಯಪ್ರದೇಶದಲ್ಲಿ ಬಿಜೆಪಿ ಅಧಿಕಾರದಲ್ಲಿದೆ.

ತೆಲಂಗಾಣದಲ್ಲಿ ಕಳೆದ 10 ವರ್ಷಗಳಿಂದ ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಅಧಿಕಾರ ನಡೆಸುತ್ತಿದೆ. ಮಿಜೋರಾಂನಲ್ಲಿ ಮಿಜೋ ನ್ಯಾಷನಲ್ ಫ್ರಂಟ್ (ಎಂಎನ್‌ಎಫ್) ಚುಕ್ಕಾಣಿ ಹಿಡಿದಿದೆ.

ಹಿಂದಿ ಹೃದಯ ಭಾಗದ ಮೂರು ರಾಜ್ಯಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ನೇರ ಪೈಪೋಟಿ ಇದೆ. ತೆಲಂಗಾಣದಲ್ಲಿ ಕೆ.ಚಂದ್ರಶೇಖರ ರಾವ್ ನೇತೃತ್ವದ ಬಿಆರ್‌ಎಸ್‌ಗೆ ‘ಕೈ’ ಪಾಳಯ ಪ್ರಬಲ ಪ್ರತಿಸ್ಪರ್ಧೆ ಒಡ್ಡಲು ಸಜ್ಜಾಗಿದೆ. ಮಿಜೋರಾಂನಲ್ಲಿ ಎಂಎನ್‌ಎಫ್, ಕಾಂಗ್ರೆಸ್ ಹಾಗೂ ಜೋರಂ ಪೀಪಲ್ಸ್ ಮೂವ್‌ಮೆಂಟ್ ನಡುವೆ ಹಣಾಹಣಿ ಏರ್ಪಟ್ಟಿದೆ. ಚುನಾವಣೆ ನಡೆಯುವ ರಾಜ್ಯಗಳಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಗಳನ್ನು ಬಿಂಬಿಸದಿರಲು ಬಿಜೆಪಿ ನಿರ್ಧರಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನಾಮಬಲವೇ ಪಕ್ಷಕ್ಕೆ ಗೆಲುವನ್ನು ತಂದುಕೊಡಲಿದೆ ಎಂಬ ನಂಬಿಕೆಯಲ್ಲಿ ಕೇಸರಿ ಪಾಳಯ ಇದೆ.

ಚುನಾವಣಾ ವೇಳಾಪಟ್ಟಿ ಪ್ರಕಟಕ್ಕೆ ಕೆಲವೇ ದಿನಗಳ ಮೊದಲು ಪ್ರಧಾನಿ ನರೇಂದ್ರ ಮೋದಿ ಅವರು ಈ ರಾಜ್ಯಗಳಲ್ಲಿ ಸಾವಿರಾರು ಕೋಟಿಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಶಂಕುಸ್ಥಾಪನೆ ಹಾಗೂ ಚಾಲನೆ ನೀಡಿ ಮತದಾರರ ಮನ ಗೆಲ್ಲಲು ಯತ್ನಿಸಿದ್ದಾರೆ.

ಐದು ರಾಜ್ಯಗಳಲ್ಲಿ 83 ಲೋಕಸಭಾ ಕ್ಷೇತ್ರಗಳಿವೆ. 2018ರ ವಿಧಾನಸಭಾ ಚುನಾವಣೆಯಲ್ಲಿ ಮಧ್ಯ ಪ್ರದೇಶ, ರಾಜಸ್ಥಾನ ಹಾಗೂ ಛತ್ತೀಸಗಢದಲ್ಲಿ ಬಿಜೆಪಿ ಸೋತಿತ್ತು. ಬಳಿಕ ಲೋಕಸಭಾ ಚುನಾವಣೆಯಲ್ಲಿ 65 ಕ್ಷೇತ್ರಗಳಲ್ಲಿ ಜಯಭೇರಿ ಸಾಧಿಸಿತ್ತು. ನಂತರ ‘ಆಪರೇಷನ್ ಕಮಲ’ ನಡೆಸಿ ಕಮಲನಾಥ್ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು ಕೆಡವಿತ್ತು.

2024ರ ಲೋಕಸಭಾ ಚುನಾವಣೆಗೆ ಹೊಸ ಉಮೇದಿನಿಂದ ತೆರಳಲು ಐದು ರಾಜ್ಯಗಳ ಚುನಾವಣೆಗಳಲ್ಲಿ ಗೆಲುವು ಸಾಧಿಸುವುದು ಎನ್‌ಡಿಎ ಹಾಗೂ ‘ಇಂಡಿಯಾ’ ಮೈತ್ರಿಕೂಟಗಳಿಗೆ ಅನಿವಾರ್ಯ.

‘ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ ಬಿಜೆಪಿಯು ಐದು ರಾಜ್ಯಗಳಲ್ಲಿ ಭಾರಿ ಬಹುಮತದೊಂದಿಗೆ ಸರ್ಕಾರ ರಚಿಸಲಿದೆ. ಮುಂದಿನ ಐದು ವರ್ಷಗಳಲ್ಲಿ ಜನರ ಆಶೋತ್ತರಗಳನ್ನು ಈಡೇರಿಸಲು ಬದ್ಧತೆಯಿಂದ ಕೆಲಸ ಮಾಡಲಿದೆ’ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ತಿಳಿಸಿದ್ದಾರೆ.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ (ಸಿಡಬ್ಲ್ಯುಸಿ) ಸಭೆಯಲ್ಲಿ ಪಕ್ಷದ ಮುಖಂಡರನ್ನು ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಚುನಾವಣೆಗೆ ಮುನ್ನ ಒಗ್ಗಟ್ಟು ಮತ್ತು ಶಿಸ್ತು ಪಾಲಿಸುವಂತೆ ಕಿವಿಮಾತು ಹೇಳಿದ್ದಾರೆ.

ಹಿಮಾಚಲ ಪ್ರದೇಶ ಮತ್ತು ಕರ್ನಾಟಕದಲ್ಲಿ ನಿರ್ಣಾಯಕ ಗೆಲುವಿನ ನಂತರ ಪಕ್ಷದಲ್ಲಿ ಹೊಸ ಉತ್ಸಾಹ ಮೂಡಿದೆ ಎಂದು ಹೇಳಿದ ಅವರು, ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ಮತದಾರರಿಗೆ ಎತ್ತಿ ತೋರಿಸಿ ಮನ ಗೆಲ್ಲಬೇಕು ಎಂದು ಸೂಚಿಸಿದ್ದಾರೆ. ಪಕ್ಷದ ಮುಖಂಡರು ಪರಸ್ಪರ ಸಮನ್ವಯ, ಸಂಪೂರ್ಣ ಶಿಸ್ತು ಮತ್ತು ಏಕತೆಯಿಂದ ಕೆಲಸ ಮಾಡಬೇಕು ಎಂದಿದ್ದಾರೆ.



ವೇಳಾಪಟ್ಟಿ

ಚುನಾವಣಾ ಪ್ರಕ್ರಿಯೆ	ಮಿಜೋರಾಂ (ಎಲ್ಲ 40 ಕ್ಷೇತ್ರ), ಛತ್ತೀಸಗಢ ಮೊದಲ ಹಂತ (20 ಕ್ಷೇತ್ರ)	ಮಧ್ಯಪ್ರದೇಶ (230 ಕ್ಷೇತ್ರ), ಛತ್ತೀಸಗಢ (70 ಕ್ಷೇತ್ರ)	ರಾಜಸ್ಥಾನ (200 ಕ್ಷೇತ್ರ)	ತೆಲಂಗಾಣ (119 ಕ್ಷೇತ್ರ)
ಚುನಾವಣಾ ಅಧಿಸೂಚನೆ	ಅಕ್ಟೋಬರ್ 13	ಅಕ್ಟೋಬರ್ 21	ಅಕ್ಟೋಬರ್ 30	ನವೆಂಬರ್ 3
ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ	ಅಕ್ಟೋಬರ್ 20	ಅಕ್ಟೋಬರ್ 30	ನವೆಂಬರ್ 6	ನವೆಂಬರ್ 10
ನಾಮಪತ್ರ ಪರಿಶೀಲನೆ	ಅಕ್ಟೋಬರ್ 21	ಅಕ್ಟೋಬರ್ 31	ನವೆಂಬರ್ 7	ನವೆಂಬರ್ 13
ನಾಮಪತ್ರ ವಾಪಸ್‌ಗೆ ಕೊನೆಯ ದಿನ	ಅಕ್ಟೋಬರ್ 23	ನವೆಂಬರ್ 2	ನವೆಂಬರ್ 9	ನವೆಂಬರ್ 15
ಮತದಾನ	ನವೆಂಬರ್ 7	ನವೆಂಬರ್ 17	ನವೆಂಬರ್ 23	ನವೆಂಬರ್ 30

ಗಾಜಾ ಪಟ್ಟಿಗೆ ದಿಗ್ಬಂಧನ

ಆಹಾರ, ವಿದ್ಯುತ್, ಇಂಧನ ಪೂರೈಕೆಗೆ ತಡೆ: ರಕ್ಷಣಾ ಸಚಿವ

ಜೆರುಸಲೇಂ (ಪಿಟಿಐ): ಹಮಾಸ್ ಹಿಡಿತದಲ್ಲಿರುವ ಗಾಜಾ ಪಟ್ಟಿಯ ಸುತ್ತ ಮುತ್ತಿಗೆಹಾಕಿ, ಸಂಪೂರ್ಣ ದಿಗ್ಬಂಧನ ಹೇರಲು ಇಸ್ರೇಲ್ ರಕ್ಷಣಾ ಸಚಿವ ಯೋವ್ ಗ್ಯಾಲಂಟ್ ಸೋಮವಾರ ಆದೇಶಿಸಿದ್ದಾರೆ.

‘ಗಾಜಾ ಪ್ರದೇಶಕ್ಕೆ ವಿದ್ಯುತ್, ಆಹಾರ ಮತ್ತು ಇಂಧನ ಪೂರೈಕೆ ನಿಲ್ಲಿಸುತ್ತೇವೆ. ನಾವು ಹೋರಾಡುತ್ತಿರುವುದು ಭಯೋತ್ಪಾದಕರ ವಿರುದ್ಧ, ಅದಕ್ಕೆ ಅನುಗುಣವಾಗಿ ಪ್ರತ್ಯುತ್ತರ ನೀಡುತ್ತೇವೆ’ ಎಂದು ಗುಡುಗಿದ್ದಾರೆ.

ಗಾಜಾ ಪ್ರದೇಶವು ತನ್ನ ಮೂಲಭೂತ ಅಗತ್ಯಗಳಿಗಾಗಿ ಇಸ್ರೇಲ್ ಮೇಲೆ ಹೆಚ್ಚು ಅವಲಂಬಿತವಾಗಿದೆ. ಇಸ್ರೇಲ್‌ನ ಈ ನಿರ್ಧಾರವು 23 ಲಕ್ಷ ಜನರ ಮೇಲೆ ಪರಿಣಾಮ ಬೀರುತ್ತದೆ.

ಹಮಾಸ್ ಬಂಡುಕೋರರು ಹಾಗೂ ಇಸ್ರೇಲ್ ಸೇನೆ ನಡುವಿನ ಸಮರದ ಮೂರನೇ ದಿನವಾದ ಸೋಮವಾರವೂ ಆಗಸದಲ್ಲಿ ಯುದ್ಧ ವಿಮಾನಗಳ ಗರ್ಜನೆ ಮುಂದುವರಿದಿತ್ತು. ಹಮಾಸ್ ಬಂಡುಕೋರರು ಜೆರುಸಲೇಂ ನತ್ತಲೂ ರಾಕೆಟ್ ದಾಳಿ ನಡೆಸುತ್ತಿದ್ದರು. ಜೆರುಸಲೇಂನಲ್ಲಿ ವಾಯು ದಾಳಿಯ ಸೈರನ್‌ಗಳು ಮೊಳಗಿದವು ಮತ್ತು ಸ್ಫೋಟದ ಶಬ್ದ ಕೇಳಿಬರುತ್ತಿತ್ತು.

ಇಸ್ರೇಲ್ ಈ ದಾಳಿಯನ್ನು ಅಮೆರಿಕದ ಮೇಲೆ ನಡೆದ ‘9/11’ ದಾಳಿಗೆ ಹೋಲಿಸಿದೆ. ಮಹಿಳೆಯರು, ಮಕ್ಕಳು ಸೇರಿದಂತೆ ನೂರಕ್ಕೂ ಹೆಚ್ಚು ಇಸ್ರೇಲ್ ಪ್ರಜೆಗಳನ್ನು ಬಂಡುಕೋರರು ಒತ್ತೆಯಾಳುಗಳಾಗಿ ಇರಿಸಿಕೊಂಡಿದ್ದಾರೆ ಎಂದು ಇಸ್ರೇಲ್ ಹೇಳಿದೆ.

ಮೂರು ದಿನಗಳಲ್ಲಿ ಇಸ್ರೇಲ್‌ನಲ್ಲಿ 900ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ. ಇಸ್ರೇಲ್ ನಡೆಸಿದ ಪ್ರತಿ ದಾಳಿಯಲ್ಲಿ ಸತ್ತವರ ಸಂಖ್ಯೆ 680ಕ್ಕೆ ಏರಿದೆ ಎಂದು ಪ್ಯಾಲೆಸ್ಟೀನ್ ಅಧಿಕಾರಿಗಳು ತಿಳಿಸಿದ್ದಾರೆ. ತನ್ನ ಒಂಬತ್ತು ಪ್ರಜೆಗಳು ಸಾವಿಗೀಡಾಗಿದ್ದಾರೆ ಎಂದು ಅಮೆರಿಕ ದೃಢಪಡಿಸಿದೆ ಎಂದು ಎನ್‌ಡಿಟಿವಿ ವರದಿ ಹೇಳಿದೆ.

ಇಸ್ರೇಲ್ ಸೈನಿಕರು ಗಾಜಾ ಪಟ್ಟಿಗೆ ಹೊಂದಿಕೊಂಡಿರುವ ಗಡಿಯ ಬಳಿ ಮೆರ್ಕಾವಾ ಟ್ಯಾಂಕ್‌ಗಳನ್ನು ನಿಯೋಜಿಸಿರುವುದು ಎಎಫ್‌ಪಿ ಚಿತ್ರ

‘ರಾತ್ರಿಯಿಡೀ ಐಡಿಎಫ್ ಫೈಟರ್ ಜೆಟ್‌ಗಳು, ಹೆಲಿಕಾಪ್ಟರ್‌ಗಳು, ವಿಮಾನಗಳು ಮತ್ತು ಫಿರಂಗಿಗಳು ಗಾಜಾ ಪಟ್ಟಿಯಲ್ಲಿರುವ 500ಕ್ಕೂ ಹೆಚ್ಚು ಹಮಾಸ್ ಮತ್ತು ಇಸ್ಲಾಮಿಕ್ ಜಿಹಾದ್ ಭಯೋತ್ಪಾದಕ ನೆಲೆಗಳ ಮೇಲೆ ದಾಳಿ ನಡೆಸಿದವು. ಲೆಬನಾನ್‌ನಿಂದ ಒಳನುಸುಳಿದ್ದ ಬಂದೂಕುಧಾರಿಗಳು ಸಾವನ್ನಪ್ಪಿದ್ದಾರೆ’ ಎಂದು ಇಸ್ರೇಲ್ ರಕ್ಷಣಾ ಪಡೆಗಳ ಹೇಳಿಕೆ ತಿಳಿಸಿದೆ.

ಹಮಾಸ್ ತಾಣಗಳಿಂದ ದೂರವಿರುವಂತೆ ಗಾಜಾ ನಾಗರಿಕರಿಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಎಚ್ಚರಿಕೆ ನೀಡಿದ್ದಾರೆ.

ಈ ಮಧ್ಯೆ ಯುದ್ಧದಲ್ಲಿ ಪಾಲ್ಗೊಳ್ಳುವಂತೆ ಮೂರು ಲಕ್ಷ ಮೀಸಲು ಸೈನಿಕರಿಗೆ ಸೂಚನೆ ನೀಡಿದ್ದಾರೆ.

50 ತಾಸಿಗೂ ಹೆಚ್ಚು ಕಾಲ ನಡೆದ ಗುಂಡಿನ ಚಕಮಕಿಯ ನಂತರ, ಗಾಜಾ ಗಡಿ ಪಟ್ಟಣಗಳ ನಿಯಂತ್ರಣವನ್ನು ಮರಳಿ ಪಡೆದುಕೊಳ್ಳಲಾಗಿದೆ ಎಂದು ಇಸ್ರೇಲ್ ಸೇನೆ ಹೇಳಿಕೊಂಡಿದೆ. ಆದರೆ, ಒಳನುಸುಳಿರುವ ಕೆಲವು ಉಗ್ರರು ಕೆಲವೆಡೆ ಉಳಿದಿರಬಹುದು ಎಂದು ಹೇಳಿದೆ.

‘ನಾವು ದುಷ್ಟರ ಮುಖ ಗಳನ್ನು ನೋಡಿದ್ದೇವೆ. ಹಮಾಸ್ ತಾನು ಮಾಡಿದ ತಪ್ಪನ್ನು ಬಹುಬೇಗ ಅರ್ಥಮಾಡಿಕೊಳ್ಳುತ್ತದೆ. ಇದಕ್ಕೆ ಭಾರಿ ಬೆಲೆ ತೆರಬೇಕಾಗುತ್ತದೆ. ಮುಂದಿನ 50 ವರ್ಷಗಳ ವಾಸ್ತವವನ್ನು ನಾವು ಬದಲಾಯಿಸುತ್ತೇವೆ. ಮೊದಲು ಇದ್ದದ್ದು ಇನ್ನು ಮುಂದೆ ಇರುವುದಿಲ್ಲ. ಪೂರ್ಣ ಬಲದೊಂದಿಗೆ ಕಾರ್ಯ ನಿರ್ವಹಿಸುತ್ತೇವೆ’ ಎಂದು ಗ್ಯಾಲಂಟ್ ಪ್ರತಿಪಾದಿಸಿದರು.

ಇನ್ನಷ್ಟು ಸುದ್ದಿಗಳು 07

ಪಟಾಕಿ ಘಟಕದಲ್ಲಿ ಅಗ್ನಿ ಅವಘಡ: 10 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಚೆನ್ನೈ: ಅರಿಯಾಲೂರು ಜಿಲ್ಲೆಯ ಪಟಾಕಿ ತಯಾರಿಕಾ ಘಟಕದಲ್ಲಿ ಸೋಮವಾರ ಸಂಭವಿಸಿದ ಸ್ಫೋಟದಲ್ಲಿ ಕನಿಷ್ಠ ಹತ್ತು ಜನರು ಸಾವಿಗೀಡಾಗಿದ್ದು, 12 ಮಂದಿ ಗಾಯಗೊಂಡಿದ್ದಾರೆ.

ಕೀಲಪಾಲೂರು ಪೊಲೀಸ್ ಠಾಣಾ ವ್ಯಾಪ್ತಿಯ ವೆಟ್ರಿಯೂರ್ ಗ್ರಾಮದಲ್ಲಿ ಬೆಳಿಗ್ಗೆ 9.30ರ ಸುಮಾರಿಗೆ ಈ ದುರಂತ ಸಂಭವಿಸಿದೆ. ಮೃತರ ಗುರುತು ಸಿಗದಷ್ಟು ದೇಹಗಳು ಸುಟ್ಟುಹೋಗಿವೆ. ಅರಿಯಾಲೂರು ಮತ್ತು ಪೆರಂಬಲೂರು ಜಿಲ್ಲೆಗಳ ಅಗ್ನಿಶಾಮಕ ಮತ್ತು ತುರ್ತುಸೇವೆ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಬೆಂಕಿ ನಂದಿಸಲು ಶ್ರಮಿಸಿದರು.

‘ಪಟಾಕಿ ತಯಾರಿಕಾ ಘಟಕದ ಆಡಳಿತ ಮಂಡಳಿಯು ಪಟಾಕಿಗಳನ್ನು ತಯಾರಿಸಲು ಸಮೀಪದ ಗ್ರಾಮಗಳ ತರಬೇತಿ ಪಡೆಯದ ಕೆಲಸಗಾರರನ್ನು ನೇಮಿಸಿಕೊಂಡಿರುವುದು ಗಮನಕ್ಕೆ ಬಂದಿದೆ. ಶಿವಕಾಶಿಯಿಂದ ತರಬೇತಿ ಪಡೆದ ಕಾರ್ಮಿಕರು ಘಟಕದಲ್ಲಿದ್ದರೂ ತರಬೇತಿ ಪಡೆಯದ ಕೆಲಸಗಾರರಿಂದ ಈ ದುರಂತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ತನಿಖೆ ಪೂರ್ಣಗೊಂಡ ಬಳಿಕ ಮಾತ್ರ ಖಚಿತ ತೀರ್ಮಾನಕ್ಕೆ ಬರಬಹುದು’ ಎಂದು ಅಧಿಕಾರಿಯೊಬ್ಬರು ಹೇಳಿದರು.

ಜಾತಿಗಣತಿಗೆ ಸಿಡಬ್ಲ್ಯುಸಿ ಬೆಂಬಲ

ನವದೆಹಲಿ (ಪಿಟಿಐ): ‘ದೇಶದಾದ್ಯಂತ ಜಾತಿಗಣತಿ ನಡೆಸಬೇಕು ಎಂಬ ಬೇಡಿಕೆಗೆ ಬೆಂಬಲವಾಗಿ ನಿಲ್ಲುವ ಐತಿಹಾಸಿಕ ತೀರ್ಮಾನವನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು (ಸಿಡಬ್ಲ್ಯುಸಿ) ಒಕ್ಕೊರಲಿನಿಂದ ಕೈಗೊಂಡಿದೆ’ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಸೋಮವಾರ ತಿಳಿಸಿದರು.

‘ಜಾತಿಗಣತಿಯ ಪರ ನಿಲುವು ತಾಳುವುದು ಜನರನ್ನು ಬಡತನದಿಂದ ಪಾರು ಮಾಡಲು ಇರುವ ಬಹಳ ಪ್ರಗತಿಪರವಾದ ಹೆಜ್ಜೆ’ ಎಂದು ಬಣ್ಣಿಸಿದ ರಾಹುಲ್, ‘ಆಡಳಿತಾರೂಢ ಬಿಜೆಪಿಯು ಜಾತಿ ಗಣತಿ ನಡೆಸುವಂತೆ ಕಾಂಗ್ರೆಸ್ ಒತ್ತಡ ತರಲಿದೆ’ ಎಂದು ತಿಳಿಸಿದರು.

ಸಿಡಬ್ಲ್ಯುಸಿ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಹುಲ್, ‘ಇಂಡಿಯಾ’ ಗುಂಪಿನ ಬಹುತೇಕ ಪಕ್ಷಗಳು ಜಾತಿ ಗಣತಿಯನ್ನು ಬೆಂಬಲಿಸುತ್ತವೆ ಎಂಬ ವಿಶ್ವಾಸ ಇದೆ’ ಎಂದರು. ‘ಕೆಲವು ಪಕ್ಷಗಳಲ್ಲಿ ಈ ವಿಚಾರವಾಗಿ ತುಸು ಭಿನ್ನವಾದ ನಿಲುವು ಇದ್ದಿರಬಹುದು. ಅದರಿಂದ ಸಮಸ್ಯೆ ಆಗುವುದಿಲ್ಲ. ನಾವು ಹೊಂದಿಕೊಳ್ಳುವ ಧೋರಣೆ ಇರಿಸಿಕೊಂಡಿದ್ದೇವೆ. ಯಾರಿಗಾದರೂ ಭಿನ್ನ ನಿಲುವುಗಳಿದ್ದರೆ ನಮಗೆ ಅದು ಸಮಸ್ಯೆ ಅಲ್ಲ, ನಾವು ಫ್ಯಾಸಿಸ್ಟ್ ಧೋರಣೆಯಿಂದ ವರ್ತಿಸುವುದಿಲ್ಲ’ ಎಂದು ಹೇಳಿದರು.

‘ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರವು ದೇಶದಾದ್ಯಂತ ಜಾತಿಗಣತಿ ನಡೆಸಬೇಕು. ಇಲ್ಲ ಎಂದಾದರೆ, ಗಣತಿಯ ಕೆಲಸ ಮಾಡಲು ಕಾಂಗ್ರೆಸ್‌ಗೆ ಅವಕಾಶ ಕೊಡಬೇಕು’ ಎಂದು ಹೇಳಿದರು.

> **ಜಾತಿಗಣತಿಯು ಜಾತಿ, ಧರ್ಮಕ್ಕೆ ಸಂಬಂಧಿಸಿದ್ದಲ್ಲ. ಇದು ಬಡತನಕ್ಕೆ ಸಂಬಂಧಿಸಿದ್ದು. ಇದರ ಹಿಂದೆ ರಾಜಕೀಯ ಲೆಕ್ಕಾಚಾರಗಳಿಲ್ಲ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ಮುಖಂಡ

‘ಜಾತಿಗಣತಿಯನ್ನು ನಡೆಸಲು ಪ್ರಧಾನಿ ನರೇಂದ್ರ ಮೋದಿ ಅಸಮರ್ಥರು, ಅದನ್ನು ನಡೆಸುವ ವಿಚಾರವಾಗಿ ಅವರಿಗೆ ಹೆದರಿಕೆ ಇದೆ. ಜಾತಿಗಣತಿಯ ವಿಚಾರದಿಂದ ಜನರ ಗಮನ ಬೇರೆಡೆ ತಿರುಗಿಸಲು ಅವರು ಯತ್ನಿಸುತ್ತಿದ್ದಾರೆ’ ಎಂದು ಆರೋಪಿಸಿದರು.

‘ಜಾತಿಗಣತಿಗೆ ಬೆಂಬಲ ನೀಡುವ ಸಿಡಬ್ಲ್ಯುಸಿ ತೀರ್ಮಾನವನ್ನು ಪಕ್ಷವು ಅಧಿಕಾರದಲ್ಲಿ ಇರುವ ರಾಜ್ಯಗಳಲ್ಲಿ ಮುಂದಿನ ಹಂತಕ್ಕೆ ಒಯ್ಯಲಾಗುತ್ತದೆ’ ಎಂದರು.

ಸಂಪತ್ತಿನ ಗಣತಿ: ‘ಜಾತಿಗಣತಿ ನಡೆಸಿದ ನಂತರ ಕಾಂಗ್ರೆಸ್ ಪಕ್ಷವು ಸಂಪತ್ತಿನ ಗಣತಿಯನ್ನು ಕೂಡ ನಡೆಸಲಿದೆ. ಸಂಪತ್ತು ಮತ್ತು ಆಸ್ತಿಗಳು ಯಾರ ಬಳಿ ಇವೆ ಎಂಬುದನ್ನು ಕಂಡುಕೊಳ್ಳಲಿದೆ’ ಎಂದು ರಾಹುಲ್ ತಿಳಿಸಿದರು.

11ನೇ ಪುಟ ನೋಡಿ

ನವದೆಹಲಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ಛತ್ತೀಸಗಢದ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಇದ್ದಾರೆ —ಪಿಟಿಐ ಚಿತ್ರ

‘ಜಾತಿ ಗಣತಿ ವರದಿ ಸಲ್ಲಿಕೆಗೆ ಸೂಚನೆ’

ನವದೆಹಲಿ: ‘ರಾಜ್ಯದಲ್ಲಿ ನಡೆದಿರುವ ಸಾಮಾಜಿಕ-ಆರ್ಥಿಕ ಮತ್ತು ಜಾತಿ ಗಣತಿ ವರದಿಯನ್ನು ಶೀಘ್ರ ಸಲ್ಲಿಸುವಂತೆ ಈಗಾಗಲೇ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗಕ್ಕೆ ಮನವಿ ಮಾಡಲಾಗಿದೆ. ವರದಿ ಬಂದ ನಂತರ ಅದನ್ನು ಸಾರ್ವಜನಿಕಗೊಳಿಸಲಾಗುವುದು’ ಎಂದು ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಹೇಳಿದರು.

ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿ ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಆಡಳಿತದ ಇತರ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಉಪಸ್ಥಿತರಿದ್ದ ಸಿದ್ದರಾಮಯ್ಯ, ‘2015ರಲ್ಲಿ ಕಾಂಗ್ರೆಸ್ ಸರ್ಕಾರವೇ ಸಮೀಕ್ಷೆಗೆ ಆದೇಶಿಸಿತ್ತು. ಆದರೆ, ಎಚ್. ಡಿ. ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರವು ವರದಿ ಸ್ವೀಕಾರ ಮಾಡಿರಲಿಲ್ಲ. ವರದಿ ಸಲ್ಲಿಸಲು ಆಯೋಗಕ್ಕೆ ಮನವಿ ಮಾಡಲಾಗಿದೆ’ ಎಂದರು. ‘ಕರ್ನಾಟಕ ಸರ್ಕಾರವು ಜನಗಣತಿ ದತ್ತಾಂಶವನ್ನು ಬಿಡುಗಡೆ ಮಾಡಲು ವಿಳಂಬ ಮಾಡುತ್ತಿದೆ’ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ರಾಹುಲ್ ಗಾಂಧಿ, ‘ನಾವು ಈ ಬಗ್ಗೆ ಚರ್ಚೆ ನಡೆಸುತ್ತಿದ್ದೇವೆ. ಈ ಸಂಬಂಧ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು’ ಎಂದರು.

ಶಾಲಾ ಸಮಯ: ಯಥಾಸ್ಥಿತಿಗೆ ಒಲವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಶಾಲೆಗಳ ಸಮಯ ಬದಲಾವಣೆ ಪ್ರಸ್ತಾವವನ್ನು ಸೋಮವಾರ ನಡೆದ ಶಾಲಾ ಆಡಳಿತ ಮಂಡಳಿಗಳು, ಪೋಷಕರು, ವಾಹನ ಚಾಲಕರ ಸಂಘಟನೆಗಳು ಸರ್ವಾನುಮತದಿಂದ ತಿರಸ್ಕರಿಸಿದವು.

ಬೆಂಗಳೂರು ನಗರದ ಸಂಚಾರ ದಟ್ಟಣೆ ಹಿನ್ನೆಲೆಯಲ್ಲಿ ಶಾಲಾ ಸಮಯ ಬದಲಾಯಿಸುವ ಕುರಿತು ಸೂಕ್ತ ನಿರ್ಧಾರ ತೆಗೆದುಕೊಳ್ಳುವಂತೆ ಈಚೆಗೆ ಹೈಕೋರ್ಟ್ ನೀಡಿದ್ದ ನಿರ್ದೇಶನದಂತೆ ಚರ್ಚೆ ನಡೆಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಭೆ ಕರೆದಿತ್ತು. ಶಾಲಾ ಆಡಳಿತ ಮಂಡಳಿಗಳು, ಪೋಷಕರು, ವಾಹನ ಚಾಲಕರ ಸಂಘಟನೆಗಳು, ಸಾರಿಗೆ ನಿಗಮದ ಅಧಿಕಾರಿಗಳು ಸೇರಿದಂತೆ ಹಲವು ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

‘ಅ.10 ರಂದು ಕೋರ್ಟ್ ಮುಂದೆ ಶಾಲಾ ಸಮಯ ಬದಲಾವಣೆ ವಿಷಯ ವಿಚಾರಣೆಗೆ ಬರಲಿದ್ದು, ಸಭೆಯ ಒಟ್ಟಾರೆ ಅಭಿಪ್ರಾಯವನ್ನು ಸಲ್ಲಿಸುತ್ತೇವೆ’ ಎಂದು ಸಭೆಯ ನಂತರ ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾತರ್ ಸಿಂಗ್ ಹೇಳಿದರು.

ಬೆಳಿಗ್ಗೆ ಮತ್ತು ಸಂಜೆಯ ಸಮಯದಲ್ಲಿ ಬಿಎಂಟಿಸಿಯ ಕೆಲ ಬಸ್‌ಗಳನ್ನು ಶಾಲಾ ಮಕ್ಕಳು ಹಾಗೂ ಶಿಕ್ಷಕರ ಪ್ರಯಾಣಕ್ಕೆ ಮೀಸಲಿಡಬೇಕು. ಪಾಶ್ಚಾತ್ಯ ದೇಶಗಳಲ್ಲಿ ಇರುವಂತೆ ವಾರಕ್ಕೆ ಒಂದು ದಿನ ಸರದಿಯಂತೆ ತಮಗೂ ಸಂಚಾರ ನಿಯಂತ್ರಕರಾಗಿ (ಟ್ರಾಫಿಕ್ ವಾರ್ಡನ್) ಕೆಲಸ ಮಾಡಲು ಅವಕಾಶ ನೀಡಬೇಕು ಎಂದು ಕೆಲ ಪೋಷಕರು ಸಲಹೆ ನೀಡಿದ್ದಾರೆ ಎಂದರು.

ಪ್ರಸ್ತುತ ಸರ್ಕಾರಿ ಶಾಲೆಗಳು ಬೆಳಿಗ್ಗೆ 9.20 ರಿಂದ 3.40ರವರೆಗೆ ಕಾರ್ಯನಿರ್ವಹಿಸುತ್ತಿವೆ. ಖಾಸಗಿ ಶಾಲೆಗಳ ಸಮಯದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿದೆ. ಹೆಬ್ಬಾಳ, ಸರ್ಜಾಪುರ, ಆಡುಗೋಡಿ, ಬನ್ನೇರುಘಟ್ಟ ರಸ್ತೆ ಸೇರಿದಂತೆ ಸಂಚಾರ ದಟ್ಟಣೆ ಹೆಚ್ಚಿರುವ ಮಾರ್ಗ, ಸ್ಥಳಗಳನ್ನು ಗುರುತು ಮಾಡಿ, ಸ್ಥಳೀಯವಾಗಿ ನಿಯಂತ್ರಿಸಲು ಬಿಎಂಟಿಸಿ ಅಧಿಕಾರಿಗಳು, ಪೊಲೀಸರು ಸಲಹೆ ನೀಡಿದ್ದಾರೆ ಎಂದು ಮಾಹಿತಿ ನೀಡಿದರು.

ಒಳ ಪುಟಗಳು
ತೊಗರಿಬೇಳೆ ಕೆ.ಜಿ.ಗೆ ₹180 10
ಕಾವೇರಿ ಪ್ರಾಧಿಕಾರ ರದ್ದು: ಕೇಂದ್ರಕ್ಕೆ ಮನವಿ 05
ಮಧ್ಯಪ್ರಾಚ್ಯ ಬಿಕ್ಕಟ್ಟು: ಸೆನ್ಸೆಕ್ಸ್ ಇಳಿಕೆ 10
‘ಟೋಲ್ ಬೂತ್ ಸುಡುತ್ತೇವೆ’ 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ರಾಜ್ಯ ಸರ್ಕಾರದ ವಿರುದ್ಧ ಹೈಕೋರ್ಟ್ ಕಿಡಿ

ಸರ್ಕಾರದ ನಿರ್ಲಕ್ಷ್ಯ: ಖಾಸಗಿ ಶಾಲೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲು ಯಾವುದೇ ಪರಿಹಾರ ಹುಡುಕದಿರುವ ನಿಮ್ಮ ನಿರ್ಲಕ್ಷ್ಯ ಧೋರಣೆಯಿಂದಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಹೆಚ್ಚುತ್ತಿದೆ‘ ಎಂದು ಹೈಕೋರ್ಟ್, ರಾಜ್ಯ ಸರ್ಕಾರದ ವಿರುದ್ಧ ಕೆಂಡ ಕಾರಿದೆ.

ಶಾಲೆಯಿಂದ ಹೊರಗುಳಿದಿರುವ ಮಕ್ಕಳಿಗೆ ಸಂಬಂಧಿಸಿದಂತೆ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಕರಣದ ಅಮಿಕಸ್ ಕ್ಯೂರಿಯಾದ ಹಿರಿಯ ವಕೀಲ ಕೆ.ಎನ್. ಫಣೀಂದ್ರ, ‘ಸೌಲಭ್ಯಗಳ ಕೊರತೆಯಿಂದ ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ. ಇದರಿಂದಾಗಿ ಹಣಕಾಸಿನ ಸಮಸ್ಯೆ ಎದುರಿಸುತ್ತಿರುವ ಪೋಷಕರೂ ಅನಿವಾರ್ಯವಾಗಿ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸುವಂತಹ ಪರಿಸ್ಥಿತಿ ಇದೆ’ ಎಂದರು.

ಈ ಆಕ್ಷೇಪಣೆಗೆ ದನಿಗೂಡಿಸಿದ ನ್ಯಾಯಪೀಠ, ‘ಸರ್ಕಾರಿ ಶಾಲೆಗಳಲ್ಲಿನ ಇಂತಹ ಕೆಟ್ಟ ಪರಿಸ್ಥಿತಿ ಖಾಸಗಿ ಶಾಲೆಗಳ ಮಾಲೀಕರಿಗೆ ಇಂಬು ನೀಡಿದೆ. ಎರಡು ಹೊತ್ತಿನ ಊಟಕ್ಕೂ ಗತಿಯಿಲ್ಲದ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಕಳುಹಿಸುವಂತಹ ಸನ್ನಿವೇಶ ಎದುರಾಗಿದೆ. ಇದು ಶ್ರೀಮಂತರು ಮತ್ತು ಬಡವರ ಮಧ್ಯದ ಕಂದಕ ಸೃಷ್ಟಿಗೆ ಕಾರಣವಾಗುತ್ತಿದೆಯಲ್ಲವೇ‘ ಎಂದು ಸರ್ಕಾರದ ಪರ ವಕೀಲರನ್ನು ಖಾರವಾಗಿ ಪ್ರಶ್ನಿಸಿತು.

‘ಸಂವಿಧಾನದಲ್ಲಿ ಪ್ರಾಥಮಿಕ ಶಿಕ್ಷಣ ಕಡ್ಡಾಯಗೊಳಿಸಿದ ಉದ್ದೇಶಕ್ಕೆ ಸೋಲಾಗುತ್ತಿದೆ‘ ಎಂಬ ಅಮಿಕಸ್ ಕ್ಯೂರಿ ಮತ್ತು ಅರ್ಜಿದಾರರ ಪರ ವಕೀಲರ ವಾದಕ್ಕೆ ಸಹಮತ ವ್ಯಕ್ತಪಡಿಸಿದ ನ್ಯಾಯಪೀಠ, ‘ಯಾವ ಮಕ್ಕಳು ಸರ್ಕಾರಿ ಶಾಲೆಗೆ ಹೋಗುತ್ತಾರೆ ಎಂಬುದನ್ನು ಸಂಶೋಧನೆ ಮಾಡಿ ತಿಳಿಯಬೇಕಿಲ್ಲ. ಕಡುಬಡವರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುತ್ತಾರೆ‘ ಎಂದು ಅತೃಪ್ತಿ ವ್ಯಕ್ತಪಡಿಸಿತು.

ಸರ್ಕಾರದ ಪರ ವಕೀಲರು, ‘ಅಮಿಕಸ್ ಕ್ಯೂರಿ ಸಲ್ಲಿಸಿರುವ ವರದಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆ ಅಧಿಕಾರಿಗಳ ಜೊತೆ ಚರ್ಚಿಸಲಾಗುವುದು. ಹಾಗಾಗಿ, ವರದಿ ಪರಿಶೀಲನೆಗೆ ಎಂಟು ವಾರಗಳ ಕಾಲಾವಕಾಶ ನೀಡಬೇಕು’ ಎಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಸರ್ಕಾರ ಎರಡು ತಿಂಗಳಲ್ಲಿ ಸಮೀಕ್ಷೆ ಪೂರ್ಣಗೊಳಿಸಬೇಕು. ಪುನಃ ಕಾಲಾವಕಾಶ ವಿಸ್ತರಿಸುವುದಿಲ್ಲ’ ಎಂದು ಖಡಕ್ ತಾಕೀತು ಮಾಡಿ ವಿಚಾರಣೆ ಮುಂದೂಡಿತು.

‘464 ಶಾಲೆಗಳಲ್ಲಿ ಶೌಚಾಲಯಗಳಿಲ್ಲ’

‘ಒಟ್ಟು 464 ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ಮತ್ತು 87 ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಶೌಚಾಲಯ ನಿರ್ಮಾಣಕ್ಕಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ₹ 80 ಕೋಟಿ ಹಂಚಿಕೆ ಮಾಡಲಾಗಿದೆ. ಅಂತೆಯೇ, 87 ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಎಂಬ ಅಂಶವನ್ನು ಸಮೀಕ್ಷೆಗೆ ಒಳಪಡಿಸಿದಾಗ ಅವುಗಳಲ್ಲಿ ಇಂದಿಗೂ 55 ಶಾಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ದೃಢಪಟ್ಟಿದೆ’ ಎಂದು ಅಮಿಕಸ್ ಕ್ಯೂರಿ ಸಲ್ಲಿಸಿರುವ ವರದಿಯಲ್ಲಿ ತಿಳಿಸಲಾಗಿದೆ.

ತಳವರ್ಗದವರು ಶಿಕ್ಷಣ ಪಡೆಯಬಾರದೆ?

‘ಪುಸ್ತಕ ಇಲ್ಲದ ಅಂಬೇಡ್ಕರ್ ಅವರ ಪುತ್ಥಳಿ ಅಥವಾ ಚಿತ್ರವನ್ನು ನೋಡಿದ್ದೀರಾ‘ ಎಂದು ಸರ್ಕಾರವನ್ನು ಪ್ರಶ್ನಿಸಿದ ನ್ಯಾಯಪೀಠ, ‘ಶಿಕ್ಷಣದಿಂದ ಸಮಾನತೆ ಸಾಧ್ಯ ಎಂಬ ಕಾರಣಕ್ಕಾಗಿಯೇ ನಾವು ಅಂಬೇಡ್ಕರ್ ಅವರನ್ನು ಪುಸ್ತಕ ಹಿಡಿದಿರುವ ರೀತಿಯಲ್ಲಿ ಕಾಣುತ್ತೇವೆ’ ಎಂದು ಹೇಳಿತು.

‘ನಿಮ್ಮ ಗ್ಯಾರಂಟಿಗಳನ್ನು ನಾವು ವಿರೋಧಿಸುವುದಿಲ್ಲ. ಆದರೆ, ಶಿಕ್ಷಣ ಅತ್ಯಗತ್ಯ. ರಾಜ್ಯದಲ್ಲಿನ ತಳವರ್ಗದ ಮಕ್ಕಳು ಶಿಕ್ಷಣ ಪಡೆಯಬಾರದೇ? ಉಳ್ಳವರಿಗೆ ಮಾತ್ರ ಶಿಕ್ಷಣವೇ? ಹಣವಿದ್ದವರು ತಮ್ಮ ಮಕ್ಕಳನ್ನು ಎಲ್ಲಾ ಸೌಲಭ್ಯಗಳಿರುವ ಉತ್ತಮ ಶಾಲೆಗಳಿಗೆ ಸೇರಿಸಬಹುದಾದರೆ, ಹಣವಿಲ್ಲದವರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಹಾಗಿಲ್ಲವೇ’ ಎಂದು ತೀವ್ರ ಅಸಮಾಧಾನ ಹೊರಹಾಕಿತು.

ಇಂದು ಆದೇಶ

ಬೆಂಗಳೂರು: ಶಾಸಕ ಎಸ್.ಆರ್. ವಿಶ್ವನಾಥ್ ವಿರುದ್ಧ ಹೊರಡಿಸಿದ್ದ ಜಾಮೀನು ರಹಿತ ಬಂಧನದ ವಾರಂಟ್ ರದ್ದುಪಡಿಸುವಂತೆ ಕೋರಲಾದ ಮನವಿ ಮೇಲಿನ ಆದೇಶವನ್ನು ಜನಪ್ರತಿನಿಧಿಗಳ ಕೋರ್ಟ್ ಮಂಗಳವಾರಕ್ಕೆ (ಅ.10) ಕಾಯ್ದಿರಿಸಿದೆ.

ವಿಶ್ವನಾಥ್ ವಿರುದ್ಧ ಎ.ಮೋಹನ್ ಕುಮಾರ್ ಸಲ್ಲಿಸಿರುವ ಕ್ರಿಮಿನಲ್ ಮಾನನಷ್ಟ ಮೊಕದ್ದಮೆಯನ್ನು, ನ್ಯಾಯಾಧೀಶ ಜೆ.ಪ್ರೀತ್ ಸೋಮವಾರ ವಿಚಾರಣೆ ನಡೆಸಿದರು.

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ

ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ.ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560059. ದೂ: 080–28484515/28484518

ಸಂ: ಡಿಪಿಎಸ್22ಖರೀದಿ(ಬ)/2023–24/ಹೆಚ್‌ಎಂಬೋರ್ಡ್ ದಿನಾಂಕ:06.10.2023

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಹ್ಯಾಂಡ್ ಮೇಡ್ ಬೋರ್ಡ್ಸ್‌ಗಳ ಸಂಗ್ರಹಣೆಗಾಗಿ ದರಗುತ್ತಿಗೆ ಆಧಾರದ ಮೇರೆಗೆ ಆನ್‌ಲೈನ್ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ. 36.00 ಲಕ್ಷಗಳು** ಹಾಗೂ ಇ.ಎಂ.ಡಿ.ಯು **ರೂ.1.80** ಲಕ್ಷಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: **21.10.2023, 17.30 ಗಂಟೆಗೆ.** ಮಾಹಿತಿಯನ್ನು **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ವಾಸಸಂಇ/ಉನಿ–ಸಿ.ಪಿ/1630/ಕೆಎಸ್‌ಎಂಸಿಎ/2023–24 ಸಹಿ/– ನಿರ್ದೇಶಕರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ

ರಾಮನಗರ ಜಿಲ್ಲೆ, ಕನಕಪುರ ತಾ॥, ಸಾತನೂರು ಹೋ॥, ಭೂಹಳ್ಳಿ ಗ್ರಾಮ
ಹಾಲಿವಾಸ : ಚನ್ನಪಟ್ಟಣ ಟೌನ್, 11ನೇ ಕ್ರಾಸ್, ಕುವೆಂಪುನಗರ ವಾಸಿ
ಲೇ॥ ಶ್ರೀ ದ್ಯಾವೇಗೌಡರ ಮಗ **ಶ್ರೀ ಡಿ. ಲಿಂಗೇಗೌಡ,**
ನಿ॥ ಎಕ್ಸಿಕ್ಯೂಟಿವ್ ಇಂಜಿನಿಯರ್ ಮಾಡುವ ವಿಜ್ಞಾಪನೆಗಳು
ತಾ॥ 01-10-2023ನೇ ಭಾನುವಾರ ನನ್ನ ಧರ್ಮಪತ್ನಿಯಾದ
ಶ್ರೀಮತಿ ವಿಮಲರವರು
(ಲೇ॥ ಶ್ರೀ ಎಂ.ಕೆ. ತಿಮ್ಮಯ್ಯಗೌಡರು, ರಿ॥ ಡಿ.ವೈ.ಎಸ್.ಪಿ. ಮಂಗಳವಾರಪೇಟೆ ಇವರ ಪುತ್ರಿ) ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರ ತತ್ಸಂಬಂಧವಾದ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ತಾ॥ 11-10-2023ನೇ ಬುಧವಾರ ಬೆಳಗ್ಗೆ 11 ಗಂಟೆಗೆ ಕನಕಪುರ ತಾ॥, ಭೂಹಳ್ಳಿ ಗ್ರಾಮದ ನಮ್ಮ ಸ್ವಗಹೃದಲ್ಲಿ ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಅಧಿಕೃತ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಮಗ ಡಾ॥ ಮಧುಶಂಕರ್, ಸೊಸೆ ಡಾ॥ ಶೋಭ ಮಗಳು ಕು॥ ಅನುಪಮ, ಮೊಮ್ಮಗ ಚಿ॥ ಆದಿತ್ಯ ಹಾಗೂ ಮೃತರ ಸಹೋದರಿಯರು ಹಾಗೂ ಕುಟುಂಬವರ್ಗ. ಡಾ. ಮಧು ಶಂಕರ್ ಮೊ.: 9880179087

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಅಗ್ರಹಾರ ಟ್ಯಾಂಕ್‌ಬಂಡ ರಸ್ತೆ, ಬಿನ್ನಿಪೇಟೆ, ಬೆಂಗಳೂರು–560023
ಜಿಲ್ಲೆ: ಬೆಂಗಳೂರು ರಾಜ್ಯ: ಕರ್ನಾಟಕ
ಇ–ಮೇಲ್: apmcfv@rediffmail.com, secretaryapmcfv@gmail.com
ದೂರವಾಣಿ ಸಂಖ್ಯೆ: 080–26704150, 26707575

ಸಂ: ಹಹೂಮತ(ವಿ)ಕೃಉಮಾಸ(ಬೆಂ)/1369/2023–24 ದಿನಾಂಕ: 09.10.2023

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ ಬೆಂಗಳೂರು. ಇವರು 2022–23ನೇ ಸಾಲಿನ ಆರ್.ಐ.ಡಿ.ಎಫ್–28ರ ಯೋಜನೆಯಡಿ ಅನುಮೋದನೆಗೊಂಡ **"Construction of Shops Covered Auction Platform and UGD at Fruit Market and Binnymill market"** ಕಾಮಗಾರಿಗೆ ಟೆಂಡರಿಗಿಟ್ಟ ಮೊತ್ತ ರೂ.5,50,97,921/–, ಇ.ಎಂ.ಡಿ. ಮೊತ್ತ ರೂ.8,26,468/– ಸದರಿ ಕಾಮಗಾರಿ ಪೂರ್ಣಗೊಳಿಸಲು 06 ತಿಂಗಳ ಅವಧಿ (ಮಳೆಗಾಲ ಹೊರತುಪಡಿಸಿ) ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರುಗಳಿಂದ ಇ–ಟೆಂಡರ್ ವೆಬ್‌ಸೈಟ್ **www.kppp.karnataka.gov.in** ರಲ್ಲಿ ಎರಡು ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರುಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-4 ರ ಷರತ್ತುಗಳನ್ವಯ ಅಹ್ವಾನಿಸಲಾಗಿದೆ. (APMC/2023-24/BD/Work_Indent56)

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ:– (1) ಪೂರ್ವಭಾವಿ ಸಭೆ ದಿನಾಂಕ: **26.10.2023 ಬೆಳಿಗ್ಗೆ 11.00 ಗಂಟೆಗೆ** (2) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **03.11.2023 ಸಂಜೆ 4.00 ಗಂಟೆಗೆ** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **06.11.2023 ಬೆಳಿಗ್ಗೆ 11.00 ಗಂಟೆಗೆ** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **10.11.2023 ಬೆಳಿಗ್ಗೆ 11.00 ಗಂಟೆಗೆ** (5) ಬಿಡ್ ತೆರೆಯುವ ಸ್ಥಳ: **ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆಡಳಿತ ಕಛೇರಿ, ಬಿನ್ನಿಪೇಟೆ, ಬೆಂಗಳೂರು.**

ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ, ಸಮಿತಿ ಕಛೇರಿ ವೇಳೆಯಲ್ಲಿ ಅಥವಾ ವೆಬ್‌ಸೈಟ್ **www.kppp.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080–22485867 ಮತ್ತು ಕಾರ್ಯದರ್ಶಿ, ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ ಬೆಂಗಳೂರು ಇವರ ಸಹಾಯವಾಣಿ: 080–26707575 / 080–26704150 ರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಆದಲ್ಲಿ ವೆಬ್‌ಸೈಟಿನಲ್ಲಿ ಮಾತ್ರ ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ DIPR/CP/1641/SPAN/2023-24 ಸಹಿ/– ಆಡಳಿತಾಧಿಕಾರಿಗಳು

ಆಕ್ಸಿಸ್ ಬ್ಯಾಂಕ್ ಹರಾಜಿಗೆ ಸಾರ್ವಜನಿಕ ಸೂಚನೆ
ಸಾರ್ವಜನಿಕ ಸೂಚನೆ – ಅಡಮಾನ ಚಿನ್ನಾಭರಣಗಳ ಇ–ಹರಾಜು ನೋಟಿಸ್

ಈ ಮೂಲಕ ಸಾಲಗಾರರರಿಗೆ ಹಾಗೂ ನಿರ್ದಿಷ್ಟವಾಗಿ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ಈ ಕೆಳಗಿನ ಖಾತೆಗಳಲ್ಲಿ ಒತ್ತೆಯಿಡಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಕೆಳಗೆ ಸೂಚಿಸಿದ ಶಾಖೆಯಲ್ಲಿ ನಡೆಸಲು ಆಕ್ಸಿಸ್ ಬ್ಯಾಂಕ್ ಉದ್ದೇಶಿಸಲಾಗಿದೆ.

ಈ ಕೆಳಗೆ ತಿಳಿಸಲಾದ ಸಾಲಗಾರರು ಭದ್ರತೆಗಾಗಿ ಬ್ಯಾಂಕ್ ಪರವಾಗಿ ಚಿನ್ನದ ಆಭರಣಗಳ ("ಚಿನ್ನದ ಸಾಲ ಸೌಲಭ್ಯ") ಭರವಸೆಯ ವಿರುದ್ಧ **ಆಕ್ಸಿಸ್ ಬ್ಯಾಂಕ್ ಲಿಮಿಟೆಡ್**ನಿಂದ ಕ್ರೆಡಿಟ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಾಲಗಾರರು/ಜಾಮೀನುದಾರರಿಗೆ ಡಿಮ್ಯಾಂಡ್ ನೋಟಿಸ್‌ಗಳನ್ನು ನೀಡಲಾಗಿದ್ದು, ಪಡೆದ ಚಿನ್ನದ ಸಾಲ ಸೌಲಭ್ಯಕ್ಕೆ ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ಸಾಲಗಾರರು/ಜಾಮೀನುದಾರರಿಗೆ ಈ ಮೂಲಕ ತಿಳಿಸಲಾಗಿದೆ. ಸಾಲಗಾರರು/ಜಾಮೀನುದಾರರು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, ಬ್ಯಾಂಕ್ ಈ ಮೂಲಕ ನಿರ್ಬಂಧಿಸಲಾದ ಆಸ್ತಿಯ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಗಿರವಿ ಇಟ್ಟಿರುವ ಚಿನ್ನದ ಆಭರಣಗಳ ಇ–ಹರಾಜು ಮಾರಾಟವನ್ನು **"ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ" "ಯಾವುದೇ ಆಧಾರ ಇಲ್ಲದೆ" ದಿನಾಂಕ : 20.10.2023 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ಹರಾಜು ನಡೆಸಲು ಪ್ರಸ್ತಾಪಿಸಲಾಗಿದೆ.

ಸಾಲಗಾರರು ಮತ್ತು ಬಾಕಿ ಮೊತ್ತಗಳ ವಿವರಗಳು

ಶಾಖೆಯ ಹೆಸರು	ಖಾತೆ ಸಂಖ್ಯೆ	ಗ್ರಾಹಕರ ಹೆಸರು	ಬರಬೇಕಾದ ಬಾಕಿ ಮೊತ್ತ	ಡಿಮ್ಯಾಂಡ್ ನೋಟೀಸ್ ದಿನಾಂಕ :	ಒಟ್ಟು ತೂಕ	ನಿವ್ವಳ ತೂಕ
ಬಸವೇಶ್ವರನಗರ, ಬೆಂಗಳೂರು	XXXXXXXXXXX1494	ಪವನ್.ಪಿ	413369.01	30-May-23	152.300	115.600
ಕನ್ನಿಂಗ್‌ಹ್ಯಾಮ್ ರಸ್ತೆ ಬೆಂಗಳೂರು [ಕ]	XXXXXXXXXXX0527	ಮೀನಾ.ಹೆಚ್.ಎ	88024	28-Aug-23	29.400	25.500
ಹೊಸಕೋಟೆ, ಬೆಂಗಳೂರು [ಕ]	XXXXXXXXXXX3180	ಡಿ.ಸುರೇಂದ್ರ	66000	18-Jul-23	21.200	20.000
ಐಟಿಐ ಲೇಔಟ್, ಬೆಂಗಳೂರು [ಕ]	XXXXXXXXXXX7160	ನಾಗೇಗೌಡ.ಹೆಚ್.ಎನ್	44787	25-Aug-23	13.500	13.100
ಜಯನಗರ, ಬೆಂಗಳೂರು	XXXXXXXXXXX3129	ನಾರ್ಥನ್ ಪೂವಣ್ಣ.ಎಂ.ಜೆ	48028	25-Aug-23	13.800	13.700
ಕಸ್ತೂರಿ ನಗರ, ಬೆಂಗಳೂರು [ಕ]	XXXXXXXXXXX7535	ಬಿ ಕೆ ಲೋಕೇಶ್	305040	28-Jul-23	79.700	79.000
ಕೋಲಾರ [ಕ]	XXXXXXXXXXX4444	ರೂಪೇಶ್ ಶರ್ಮಾ ಎಸ್ ಎನ್	100366	6-Aug-22	22.900	20.000
ಕೋಲಾರ [ಕ]	XXXXXXXXXXX0407	ವೆಂಕಟರವಣಪ್ಪ ವಿ	101032.53	25-Aug-23	31.900	31.300
ಮಲ್ಲೇಶ್ವರಂ, ಬೆಂಗಳೂರು [ಕ]	XXXXXXXXXXX9703	ಅನಂತ್ ಕುಮಾರ್.ಎಂ	28991	18-Jul-23	9.700	8.400
ಮಾರತಹಳ್ಳಿ, ಬೆಂಗಳೂರು [ಕ]	XXXXXXXXXXX4930	ಮೀನಾಕ್ಷಿ.ಕೆ.	98850	25-Aug-23	29.700	25.400
ಮಾರತಹಳ್ಳಿ, ಬೆಂಗಳೂರು [ಕ]	XXXXXXXXXXX5127	ಮೊಹಮ್ಮದ್ ಇಮ್ರಾನ್	41632	28-Jul-23	12.900	12.600
ಮಾಲೂರು [ಕ]	XXXXXXXXXXX9117	ಸುನಿಲ್ ಕುಮಾರ್ ದಾಸ್	62934	25-Aug-23	17.200	16.000
ನೆಲಮಂಗಲ, ಬೆಂಗಳೂರು	XXXXXXXXXXX3807	ಜಿ.ಶ್ರೀನಿವಾಸ್	326378.53	30-May-23	140.900	133.700
ಪ್ರಶಾಂತ್‌ನಗರ	XXXXXXXXXXX4115	ಪ್ರೇಮ್ ಸಿಂಗ್	232293	25-Aug-23	94.700	75.300
ಸರ್ಜಾಪುರ ರಸ್ತೆ, ಬೆಂಗಳೂರು [ಕ]	XXXXXXXXXXX0199	ಅಭಿಲಾಷ್.ಜಿ	49953	30-May-23	14.200	13.200
ತುಮಕೂರು[ಕ]	XXXXXXXXXXX9869	ಮಾರುತಿ ಬಿ ಎ	103405.41	27-Jun-23	35.200	33.400
ವಿಜಯನಗರ, ಬೆಂಗಳೂರು	XXXXXXXXXXX0343	ಹೀನಾ ಕೌಸರ್ ಶಫೀ ಉಲ್ಲಾ	39986	25-Aug-23	11.700	11.700
ಯಲಹಂಕ, ಬೆಂಗಳೂರು	XXXXXXXXXXX1961	ಪುರುಷೋತ್ತಮ.ಕೆ.	46026	18-Jul-23	13.300	13.000
ಯಲಹಂಕ, ಬೆಂಗಳೂರು	XXXXXXXXXXX1762	ಸಿದ್ದಲಿಂಗ್	91824	30-May-23	30.600	27.900
ಯಲಹಂಕ, ಬೆಂಗಳೂರು	XXXXXXXXXXX4649	ಊರ್ಮಿಳಾ ಮೀನಾ	739099	25-Aug-23	245.200	237.700

ಆಕ್ಸಿಸ್ ಬ್ಯಾಂಕ್ ಯಾವುದೇ ಪೂರ್ವ ಸೂಚನೆ ಇಲ್ಲದೆ ಖಾತೆಯನ್ನು ತೆಗೆದುಹಾಕುವ/ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಹೊಂದಿದೆ. ಹರಾಜು ಆನ್‌ಲೈನ್ **https://gold.samil.in** ನಲ್ಲಿ **ದಿನಾಂಕ : 20.10.2023 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ನಡೆಯಲಿದೆ.
ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ **https://gold.samil.in** ಗೆ ಲಾಗ್ ಇನ್ ಮಾಡಿ (ಆನ್‌ಲೈನ್ ಮಾರಾಟಗಾರರ ವೆಬ್‌ಸೈಟ್)

ಸ್ಥಳ: ಬೆಂಗಳೂರು ಸಹಿ/– ಅಧಿಕೃತ ಅಧಿಕಾರಿ, ಆಕ್ಸಿಸ್ ಬ್ಯಾಂಕ್ ಲಿಮಿಟೆಡ್

'ನನ್ನ ಸ್ವತ್ತು': ಎಲ್ಲ ಆಸ್ತಿಗಳ ತೆರಿಗೆ ಮರುಪರಿಶೀಲನೆ • ಮೂರು ಪಟ್ಟು ಆಸ್ತಿ ತೆರಿಗೆ ಸಂಗ್ರಹ ಹೆಚ್ಚಳ– ಡಿಸಿಎಂ

ಆಸ್ತಿ ಮಾಲೀಕರಿಗೆ ಡಿಜಿಟಲ್ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಎಲ್ಲ ಆಸ್ತಿಗಳ ತೆರಿಗೆಯನ್ನು ಪರಿಶೀಲಿಸಿ, ವಾಸ್ತವದಲ್ಲಿರುವ ಕಟ್ಟಡಕ್ಕೆ ತೆರಿಗೆ ವಿಧಿಸಲಾಗುತ್ತದೆ. ಇದಕ್ಕಾಗಿ 'ನನ್ನ ಸ್ವತ್ತು' ಯೋಜನೆ ಜಾರಿಗೆ ತರಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ (ಎಸ್‌ಎಎಸ್) ಯೋಜನೆಯಲ್ಲಿ ವಸತಿ ಹಾಗೂ ವಾಣಿಜ್ಯ ಕಟ್ಟಡಗಳಿಗೆ ಮಾಲೀಕರು ತೆರಿಗೆ ಪಾವತಿಸುತ್ತಿದ್ದಾರೆ. ಶೇ 50ಕ್ಕೂ ಹೆಚ್ಚು ಕಟ್ಟಡಗಳ ತೆರಿಗೆ ಪಾವತಿಯಲ್ಲಿ ದೋಷವಿದ್ದು, ವಾಸ್ತವದಲ್ಲಿರುವ ಕಟ್ಟಡಕ್ಕೆ ತೆರಿಗೆ ಪಾವತಿಸುತ್ತಿಲ್ಲ. ಹೀಗಾಗಿ, ಎಲ್ಲವನ್ನೂ ಡಿಜಿಟಲೀಕರಣ ಮಾಡಲಾಗುತ್ತದೆ ಎಂದರು.

ಸರ್ವತೋಮುಖ ಅಭಿವೃದ್ಧಿ ಮತ್ತು ನಗರವನ್ನು ಜಾಗತಿಕ ಆಕರ್ಷಣೆಯ ತಾಣವಾಗಿಸಲು 'ಬ್ರ್ಯಾಂಡ್ ಬೆಂಗಳೂರು' ಅಭಿಯಾನ ಹಮ್ಮಿಕೊಳ್ಳಲಾಗಿದೆ. ಇದರ ಅಂತಿಮ ಹಂತವಾಗಿ ಸೋಮವಾರ ನಡೆದ 'ಬ್ರ್ಯಾಂಡ್ ಬೆಂಗಳೂರು ಸಮ್ಮೇಳನ' ಹಾಗೂ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಎಸ್‌ಎಎಸ್‌ನಲ್ಲಿ ಮಾಲೀಕರು ಕಟ್ಟಡದ ಅಳತೆಯನ್ನು ಕಡಿಮೆ ನೀಡಿದ್ದಾರೆ. ಹೀಗಾಗಿ ಬಿಬಿಎಂಪಿಗೆ ವಾಸ್ತವದಲ್ಲಿ ಬರಬೇಕಾದ ಆಸ್ತಿ ತೆರಿಗೆ ಪಾವತಿಯಾಗುತ್ತಿಲ್ಲ. ಪಾಲಿಕೆ ವತಿಯಿಂದಲೇ ನಗರದಲ್ಲಿರುವ ಎಲ್ಲ ಆಸ್ತಿಗಳನ್ನು ಡಿಜಿಟಲೀಕರಣ ಮಾಡಿ, ಕಟ್ಟಡವನ್ನು ಸ್ಕ್ಯಾನಿಂಗ್ ಮಾಡಿ ವಾಸ್ತವ ಅಳತೆಯನ್ನು ನಮೂದಿಸಲಾಗುತ್ತದೆ. ಜೊತೆಗೆ ಆಸ್ತಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನೂ ಮಾಲೀಕರ ಮನೆಗೇ ತಲುಪಿಸಲಾಗುತ್ತದೆ. 'ನನ್ನ ಸ್ವತ್ತು' ಯೋಜನೆಗಾಗಿ ಪ್ರತ್ಯೇಕ ತಂಡ ಕಾರ್ಯ-ನಿರ್ವಹಿಸಲಿದೆ ಎಂದು ಮಾಹಿತಿ ನೀಡಿದರು.

ಆಸ್ತಿಗಳ ತೆರಿಗೆ ಮರುಪರಿಶೀಲನೆ ಮಾತ್ರ ಮಾಡಲಾಗುತ್ತದೆ. ಯಾವುದೇ ರೀತಿಯಲ್ಲಿ ಹೊಸ ತೆರಿಗೆ ವಿಧಿಸುತ್ತಿಲ್ಲ. ವಾಸ್ತವದಲ್ಲಿ ಕಟ್ಟಡದ ಅಳತೆ, ಅದಕ್ಕೆ ಆ ಭಾಗದಲ್ಲಿ ಎಷ್ಟು ತೆರಿಗೆ ನಿಗದಿಯಾಗಿದೆಯೋ ಅಷ್ಟನ್ನು ಲೆಕ್ಕಾಚಾರ ಮಾಡಿ, ಅಷ್ಟನ್ನು ಪಾವತಿಸುವಂತೆ ಮಾಲೀಕರಿಗೆ ಸೂಚಿಸಲಾಗುತ್ತದೆ. ಈ ಪ್ರಕ್ರಿಯೆಯಿಂದ ಈಗ ಸಂಗ್ರಹವಾಗುತ್ತಿರುವುದಕ್ಕಿಂತ ಎರಡರಿಂದ ಮೂರು ಪಟ್ಟು ಹೆಚ್ಚು ಸಂಗ್ರಹವಾಗಲಿದೆ ಎಂದು ಹೇಳಿದರು.

'ಸಂಚಾರ ದಟ್ಟಣೆ ನಿವಾರಣೆ, ತೆರಿಗೆ ಸಂಗ್ರಹ ಹೆಚ್ಚಳ, ಕಸ ವಿಲೇವಾರಿ ಈ ಮೂರು ವಿಚಾರಗಳೇ ಸರ್ಕಾರ ಹಾಗೂ ನನ್ನ ಪ್ರಮುಖ ಗುರಿ. ಮೆಟ್ರೊ, ಮೇಲ್ಸೇತುವೆ, ಸುರಂಗ ರಸ್ತೆಗಳು ನಮ್ಮ ಮುಂದಿರುವ ಪರಿಹಾರಗಳು. ಇದಕ್ಕೆ ಹಣಕಾಸು ಹೇಗೆ ಹೊಂದಿಸಿಕೊಳ್ಳಬೇಕು ಎಂದು ಚಿಂತಿಸಿ, ಅನುಷ್ಠಾನಗೊಳಿಸಲಾಗುತ್ತದೆ' ಎಂದರು.

ಅರಣ್ಯ ಹಾಗೂ ಕಂದಾಯ ಇಲಾಖೆಗಳೊಂದಿಗೆ ಸಭೆ ನಡೆಸಿ, ತ್ಯಾಜ್ಯ ವಿಲೇವಾರಿಗೆ ಜಾಗ ಪಡೆಯಲಾಗುತ್ತದೆ. ಮುಂದಿನ 30–40 ವರ್ಷಗಳ ಕಾಲ ಕಸವನ್ನು ಅಲ್ಲಿ ಹಾಕಲಾಗುತ್ತದೆ. ಆ ಸ್ಥಳದಲ್ಲೇ ವೈಜ್ಞಾನಿಕವಾಗಿ ವಿಂಗಡಣೆ ಮಾಡಿ, ಕಸವನ್ನು ಗೊಬ್ಬರ ಮಾಡಲಾಗುವುದು. ಇಂತಹ ದೀರ್ಘಾವಧಿ ಯೋಜನೆಯನ್ನು ಜಾರಿಗೊಳಿಸಲಾಗುತ್ತದೆ ಎಂದು ಹೇಳಿದರು.

'ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ವಿಚಾರವಾಗಿ ಬಿಬಿಎಂಪಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ನೀರು ಹರಿಯಲು ಎಲ್ಲೆಲ್ಲಿ ತೊಡಕುಂಟಾಗಿದೆಯೋ ಅಲ್ಲೆಲ್ಲಾ ಮುಂಚಿತವಾಗಿಯೇ ಒತ್ತುವರಿ ತೆರವುಗೊಳಿಸಲು ಸೂಚಿಸಲಾಗಿದೆ' ಎಂದರು.

'ಬ್ರ್ಯಾಂಡ್ ಬೆಂಗಳೂರು ಸಮ್ಮೇಳನ'ವನ್ನು ಮಾಜಿ ಸಚಿವೆ ರಾಣಿ ಸತೀಶ್ ಸೇರಿದಂತೆ ನಾಗರಿಕರು ಉದ್ಘಾಟಿಸಿದರು. ರಾಜ್ಯ ಪರಿವರ್ತನಾ ಸಂಸ್ಥೆ ಉಪಾಧ್ಯಕ್ಷ ಎಂ. ರಾಜೀವ್ ಗೌಡ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇದ್ದರು

ಬ್ರ್ಯಾಂಡ್ ಬೆಂಗಳೂರು– ನಾಗರಿಕರ ಧ್ವನಿ

'ಬ್ರ್ಯಾಂಡ್ ಬೆಂಗಳೂರು ಯೋಜನೆಯಲ್ಲಿ ಬೆಂಗಳೂರಿನ ಅಭಿವೃದ್ಧಿ ಬಗ್ಗೆ ಜನರ ಅಭಿಪ್ರಾಯ ಸಂಗ್ರಹಿಸಿ, ಅವರ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿಯ ನೀಲನಕ್ಷೆ ಸಿದ್ಧಪಡಿಸುತ್ತೇವೆ. ನಾಗರಿಕರ ಧ್ವನಿಯೇ ನಮ್ಮ ಸರ್ಕಾರದ ಧ್ವನಿ' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಬ್ರ್ಯಾಂಡ್ ಬೆಂಗಳೂರು' ಅಭಿಯಾನದಲ್ಲಿ ಅಧಿಕಾರಿಗಳು, ನಾಗರಿಕರು, ಶೈಕ್ಷಣಿಕ ಸಂಸ್ಥೆಗಳು 8 ವಿಷಯಗಳಲ್ಲಿ ಪ್ರತ್ಯೇಕವಾಗಿ ಸಭೆ ನಡೆಸಿ ವರದಿ ನೀಡಿದ್ದಾರೆ. ಈ ಸಮ್ಮೇಳನದಲ್ಲಿ 500ಕ್ಕೂ ಹೆಚ್ಚು ತಜ್ಞರು ಆ ಎಂಟು ವಿಷಯಗಳ ಮೇಲೆ ಮತ್ತೊಮ್ಮೆ ಚರ್ಚಿಸಿ ಅಂತಿಮ ವರದಿಯನ್ನು ನೀಡಲಿದ್ದಾರೆ. ನಂತರ ನನ್ನ ಅಧ್ಯಕ್ಷತೆಯಲ್ಲಿ ಸಮನ್ವಯ ಸಮಿತಿ, ಮುಖ್ಯ ಕಾರ್ಯ-ದರ್ಶಿಗಳ ನೇತೃತ್ವದಲ್ಲಿ ಸಮಿತಿ ಮಾಡುತ್ತೇವೆ. ಅವುಗಳ ಮೂಲಕ ಯೋಜನೆ ಅನುಷ್ಠಾನವಾಗಲಿದೆ' ಎಂದರು.

ಸ್ವಯಂಚಾಲಿತ ನಕ್ಷೆ ಮಂಜೂರು

'ನಾಗರಿಕರು ಮನೆ ನಿರ್ಮಾಣಕ್ಕೆ ಕಟ್ಟಡ ನಕ್ಷೆ ಪಡೆಯಲು ಬಿಬಿಎಂಪಿ ಕಚೇರಿಗೆ ಅಲೆಯಬೇಕಾಗಿಲ್ಲ. ಇದಕ್ಕಾಗಿ ಸ್ವಯಂಚಾಲಿತ ನಕ್ಷೆ ಮಂಜೂರು ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯಲ್ಲಿ, ಪಾಲಿಕೆಯಿಂದ ಪರವಾನಗಿ ಪಡೆದ ಆರ್ಕಿಟೆಕ್ಟ್‌ನಿಂದ ನಕ್ಷೆ ಅಪ್‌ಲೋಡ್ ಮಾಡಿಸಿದರೆ, ಎಲ್ಲವೂ ಆನ್‌ಲೈನ್‌ನಲ್ಲೇ ಪರಿಶೀಲನೆಗೊಂಡು, ಅನುಮೋದನೆಯಾಗುತ್ತದೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ನಗರದಲ್ಲಿ 50x80 ಅಡಿಗಳವರೆಗಿನ ನಿವೇಶನಗಳಿಗೆ ಈ ಯೋಜನೆಯಲ್ಲಿ ಅನುಮೋದನೆ ನೀಡಲಾಗುತ್ತದೆ ಎಂದರು.

ಉದ್ಯಾನ, ಆಟದ ಮೈದಾನಗಳ ನಿರ್ವಹಣೆಗೆ ಸ್ಥಳೀಯ ನಾಗರಿಕರ 'ರಾಜಕೀಯೇತರ ಸಾರ್ವಜನಿಕ ಸಮಿತಿ' ರಚಿಸಲಾಗುತ್ತದೆ. ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಿ ಸಿಎಸ್‌ಆರ್ ನಿಧಿಯಿಂದ ಅಭಿವೃದ್ಧಿ ಕೆಲಸಗಳನ್ನೂ ಈ ಸಮಿತಿ ಕೈಗೊಳ್ಳಬಹುದಾಗಿದೆ ಎಂದು ತಿಳಿಸಿದರು.

ನಾಗರಿಕರಿಗೆ 'ಸಹಾಯ ಹಸ್ತ'

ನಗರದ ನಾಗರಿಕರ ಸಮಸ್ಯೆಗಳಿಗೆ ಶೀಘ್ರವಾಗಿ ಸ್ಪಂದಿಸುವ ಹಿನ್ನೆಲೆಯಲ್ಲಿ ಡಿಸಿಎಂ ಕಚೇರಿಯಲ್ಲಿ 'ಸಹಾಯ ಹಸ್ತ' ವೆಬ್‌ಸೈಟ್ ಪ್ರಾರಂಭಿಸಲಾಗುತ್ತದೆ. ವೆಬ್‌ಸೈಟ್ ಮೂಲಕ ಸಮಸ್ಯೆಗಳನ್ನು ತಿಳಿಸಬಹುದು. ಇದರ ನಿವಾರಣೆಗೆ ಪ್ರತ್ಯೇಕ ತಂಡ ಕೆಲಸ ಮಾಡಲಿದ್ದು, ಎಲ್ಲ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಪರಿಹಾರ ಕಲ್ಪಿಸುತ್ತದೆ ಎಂದು ಶಿವಕುಮಾರ್ ಹೇಳಿದರು.

ನಿಧನ ವಾರ್ತೆ

ನಾಗಲಿಂಗಪ್ಪ ಆರ್. ಬಡಿಗೇರ

ಬೆಂಗಳೂರು: ಯಲಹಂಕ ನಿವಾಸಿ, ಕಲಾವಿದ ನಾಗಲಿಂಗಪ್ಪ ಆರ್. ಬಡಿಗೇರ (57) ಸೋಮವಾರ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ. ಬಡಿಗೇರ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಸಂಗನಾಳ ಗ್ರಾಮದವರಾಗಿದ್ದು, ಬೆಂಗಳೂರಿನಲ್ಲಿ ವಾಸವಾಗಿದ್ದರು. ವಿಜಯ ಕರ್ನಾಟಕ ಸೇರಿದಂತೆ ಹಲವು ಪತ್ರಿಕೆಗಳಲ್ಲಿ ಚಿತ್ರ ಕಲಾವಿದರಾಗಿ ಕೆಲಸ ಮಾಡಿದ್ದರು. ಮಂಗಳವಾರ ಬೆಳಿಗ್ಗೆ 11ಕ್ಕೆ ಲಕ್ಷ್ಮೀಪುರ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಕೌಶಲ್ಯ ಬಾಯಿ ಸರ್ವದೆ

ಬೆಂಗಳೂರು: ಪದ್ಮನಾಭ ನಗರದ ನಿವಾಸಿ ಕೌಶಲ್ಯ ಬಾಯಿ ಸರ್ವದೆ (88) ಸೋಮವಾರ ನಿಧನರಾದರು

ಅವರಿಗೆ ಮೂವರು ಪುತ್ರಿಯರು, ಇಬ್ಬರು ಪುತ್ರರು ಇದ್ದಾರೆ. ಅಂತ್ಯಕ್ರಿಯೆ ಸೋಮವಾರ ನೆರವೇರಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಜೆ.ಸಿ. ರಸ್ತೆ ಮೇಲ್ಸೇತುವೆ ರದ್ದು: ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ಹಂಚಿಕೆ

₹485 ಕೋಟಿ ವೆಚ್ಚದ ಕಾಮಗಾರಿ ರದ್ದು

ಪ್ರಜಾವಾಣಿ

ಬೆಂಗಳೂರು: 'ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ' ಯೋಜನೆಯಡಿ ಹಿಂದಿನ ಸರ್ಕಾರ ಅನುಮೋದಿಸಿದ್ದ ಜೆ.ಸಿ. ರಸ್ತೆ ಮೇಲ್ಸೇತುವೆ ಸೇರಿದಂತೆ ₹485 ಕೋಟಿ ಮೊತ್ತ ಕಾಮಗಾರಿಗಳನ್ನು ಸರ್ಕಾರ ರದ್ದು ಮಾಡಿದೆ.

ಬಿಬಿಎಂಪಿ ನಿರ್ವಹಿಸಬೇಕಿದ್ದ 20 ಕಾಮಗಾರಿಗಳನ್ನು ರದ್ದು ಮಾಡಿದೆ. ಅದರ ಬದಲಿಗೆ ಅದೇ ಮೊತ್ತದ ಅನುದಾನದಲ್ಲಿ ಕಾಂಗ್ರೆಸ್ ಶಾಸಕರ ಕ್ಷೇತ್ರದಲ್ಲಿ ರಸ್ತೆ, ಚರಂಡಿ ಕಾಮಗಾರಿ-ಗಳನ್ನು ಕೈಗೊಳ್ಳಲು ಆದೇಶಿಸಲಾಗಿದೆ. ಯಶವಂತಪುರ ಕ್ಷೇತ್ರ ಈ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ.

ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದವರೆಗೆ ₹213 ಕೋಟಿ ವೆಚ್ಚದಲ್ಲಿ ಜೆ.ಸಿ. ರಸ್ತೆ ಮೇಲ್ಸೇತುವೆಯನ್ನು ನಿರ್ಮಿಸಲು ಹಿಂದಿನ ಸರ್ಕಾರ ನಿರ್ಧರಿಸಿತ್ತು. ಇನ್ನೂ ಟೆಂಡರ್ ಕರೆಯದ ಕಾರಣದ ಈ ಯೋಜನೆ ರದ್ದು ಮಾಡಲಾಗಿದೆ. ಹೊರ ವರ್ತುಲ ರಸ್ತೆಯಲ್ಲಿ ₹45.5 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಅನುಮೋದನೆಯಾಗಿದ್ದ ಇಟ್ಟುಮಡು ಜಂಕ್ಷನ್ ಹಾಗೂ ಕಾಮಾಕ್ಯ ಜಂಕ್ಷನ್‌ನಲ್ಲಿ ಎಲಿವೇಟೆಡ್ ಕಾರಿಡಾರ್ ಅನ್ನು ರದ್ದು ಮಾಡಲಾಗಿದೆ. ಮುಖ್ಯಮಂತ್ರಿಯವರ ವಿವೇಚನಾ ಅನುದಾನ ₹11.5 ಕೋಟಿ, ಶಿವರಾಮ ಕಾರಂತ ಬಡಾವಣೆಯಲ್ಲಿ ಬಿಬಿಎಂಪಿ ನಿರ್ವಹಿಸಬೇಕಿದ್ದ ₹70 ಕೋಟಿ ಕಾಮಗಾರಿಗಳು ರದ್ದಾಗಿವೆ.

ಜಯನಗರ, ಚಿಕ್ಕಪೇಟೆ, ಆರ್.ಆರ್. ನಗರ, ಕೆ.ಆರ್. ಪುರ, ಮಹದೇವಪುರ, ಪದ್ಮನಾಭನಗರ, ದಾಸರಹಳ್ಳಿ ವಿಧಾನಸಭೆ ಕ್ಷೇತ್ರಗಳಲ್ಲಿ ಅನುಮೋದನೆಯಾಗಿದ್ದ ಸುಮಾರು ₹100 ಕೋಟಿ ಕಾಮಗಾರಿಗಳನ್ನು ರದ್ದು ಮಾಡಲಾಗಿದೆ. ಈ ವಿಧಾನಸಭೆ ಕ್ಷೇತ್ರ-ಗಳಲ್ಲಿ ಚರಂಡಿ, ರಸ್ತೆ, ತೋಟಗಾರಿಕೆ ಇಲಾಖೆಯ ಸೌಂದರ್ಯೀಕರಣ, ಘನತ್ಯಾಜ್ಯ ಮೂಲಸೌಕರ್ಯ, ರಾಜಕಾಲುವೆ ಕಾಮಗಾರಿಗಳನ್ನು ನಿರ್ವಹಿಸಲು ಅನುಮೋದಿಸಲಾಗಿತ್ತು.

ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆಯಡಿ 2023ರ ಮಾರ್ಚ್ 28ರಂದು ಮಂಜೂ ರಾಗಿರುವ ಬಳಕೆಯಾಗದಿ-ರುವ ₹56 ಕೋಟಿಯನ್ನು ವಾಪಸ್ ಪಡೆಯಲಾಗಿದೆ. ಈ ಮೊತ್ತ ರಾಜ-ರಾಜೇಶ್ವರಿನಗರ ಹಾಗೂ ಕೆ.ಆರ್. ಪುರ ವಿಧಾನಸಭೆ ಕ್ಷೇತ್ರಗಳಿಗೆ ಹಂಚಿಕೆಯಾಗಿತ್ತು.

ರದ್ದು ಮಾಡಲಾಗಿರುವ ಕಾಮಗಾರಿಗಳ ಮೊತ್ತದಲ್ಲಿ ಹೆಬ್ಬಾಳ, ಪುಲಕೇಶಿನಗರ, ಸರ್ವಜ್ಞನಗರ, ಶಿವಾಜಿನಗರ, ಚಾಮರಾಜಪೇಟೆ, ಗಾಂಧಿನಗರ, ಗೋವಿಂದರಾಜನಗರ, ಬಿಟಿಎಂ ಲೇಔಟ್, ವಿಜಯನಗರ, ಬ್ಯಾಟರಾಯನಪುರ, ಯಶವಂತಪುರ ವಿಧಾನಸಭೆ ಕ್ಷೇತ್ರಗಳಿಗೆ ತಲಾ ₹40 ಕೋಟಿ ವೆಚ್ಚದಲ್ಲಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಹಂಚಲಾಗಿದೆ. ಶಾಂತಿನಗರದಲ್ಲಿ 300 ಹಾಸಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ₹40 ಕೋಟಿ ಹಾಗೂ ಆನೇಕಲ್ ವಿಧಾನಸಭೆ ಕ್ಷೇತ್ರಕ್ಕೆ ₹5 ಕೋಟಿ ಹಂಚಿಕೆ ಮಾಡಿ ಸರ್ಕಾರ ಕ್ರಿಯಾಯೋಜನೆಗೆ ಅನುಮೋದನೆ ನೀಡಿದೆ.

₹70 ಕೋಟಿ ಮೌಲ್ಯದ ಜಮೀನು ವಶಕ್ಕೆ

ಬೆಂಗಳೂರು: ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಕಟ್ಟಿಗೇನಹಳ್ಳಿ ಗ್ರಾಮದ ಸರ್ವೆ ನಂ.28ರಲ್ಲಿ ಒತ್ತುವರಿಯಾಗಿದ್ದ ₹70 ಕೋಟಿ ಮೌಲ್ಯದ 6.05 ಎಕರೆ ಸರ್ಕಾರಿ ಜಮೀನನ್ನು ಜಿಲ್ಲಾಡಳಿತ ಸೋಮವಾರ ವಶಕ್ಕೆ ಪಡೆದಿದೆ.

ಗೋಮಾಳದ ಜಮೀನಿಗೆ ವಿವರವಾದ ವರದಿಯನ್ನು ದಾಖಲೆಗಳೊಂದಿಗೆ ಸಲ್ಲಿಸಬೇಕು ಜಮೀನಿನಲ್ಲಿ ಯಾವುದೇ ಖಾತೆ ಅನುಭವ-ವಿಲ್ಲದೇ ಇರುವ ಒತ್ತುವರಿದಾರರನ್ನು ತೆರವುಗೊಳಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶಿಸಲಾಗಿತ್ತು. ವಿಚಾರಣೆ ನಡೆಸಲು ನಿರ್ಧರಿಸಿ ಪ್ರತಿವಾದಿಗಳಿಗೆ ನೋಟಿಸ್ ಕೂಡ ನೀಡಲಾಗಿತ್ತು. ಅದರಂತೆ ಕಟ್ಟಿಗೇನಹಳ್ಳಿಯ ಜಮೀನನ್ನು ವಶಕ್ಕೆ ಪಡೆಯಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED BE in Electrical, Mechanical, Computers, Electronics English M.A to take part time / Full time Diploma classes Male Office Assistant. Contact personally with resume, original documents. Nadgir Institute Near Modi Hospital Rajajinagar Bangalore – 560010. Ph: 23387333, 8867065525

BUSINESS

Business Offers

Finance

NRI'S INVESTMENT
And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

PERSONAL

Change of Name

I, CHETHANA R RAO W/o.Rahul Rao M R/a#2-9-727/19, Prakruti, Sankaigudda, 2nd Cross Road, Anegundi,Bejai Mangalore- 575004 D.K. after Marriage have changed my Name from NAGACHETHANA V to CHETHANA R RAO vide`affidavit dated:3.10.2023 sworn before`Notary H.G.Venkataramu Bangalore

JC682136L, SUB/ASH, BIRENDRA KUMAR THAKUR, Vill - Belaur, Udwantnagar, Bhojpur, Bihar, changed daughter's name RITU to RITU KUMARI, 09/10/2023, Notary K.V. Mani, Bangalore

I, NARASAMMA W/o.Munikrishna.M, Residing at No.30,9th Main,4th Cross, Akiyappa Garden, Mohan Kumar Nagar, Bangalore-560022 have changed my name to SARASAMMA vide affidavit dated 07/10/2023 before notary: Chandrakala, Bangalore

I, BANASHANKARA, Residing at Bengaluru-20 have changed my name as BANASHANKAR S, vide affidavit dated 9/10/2023 before Notary P.C.Ramaiah, Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

DH Classifieds More value, more impact NAME CHANGE ಪ್ರಜಾವಾಣಿ
Tell us your New Name! Book your AD WITH US NOW!
www.dhclassifieds.com BOOK NOW
For more details contact:
9886213331 | 9901641752
9845114560 | 9900428036
9731810277 | 080- 45557163/164

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಎಸ್‌ಡಿಪಿಐ ಕಾರ್ಯಕರ್ತರು

2ಬಿ ಮೀಸಲಾತಿಗೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಮುಸ್ಲಿಂ ಸಮುದಾಯಕ್ಕೆ ನೀಡಿದ್ದ 2ಬಿ ಮೀಸಲಾತಿಯನ್ನು ಮರು ಸ್ಥಾಪಿಸಿ, ಮೀಸಲಾತಿ ಪ್ರಮಾಣವನ್ನು ಶೇ 8ರಷ್ಟು ಹೆಚ್ಚಿಸಬೇಕು' ಎಂದು ಆಗ್ರಹಿಸಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಕಾರ್ಯಕರ್ತರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು, 'ಸಿದ್ದರಾಮಯ್ಯ ಅಹಿಂದ ವರ್ಗದ ಪರವೆಂದಾದರೆ ಕಾಂತರಾಜ ಆಯೋಗದ ವರದಿ ಬಹಿರಂಗಗೊಳಿಸಿ', 'ಮುಸ್ಲಿಂ ಸಮುದಾಯದವರಿಗೆ 2ಬಿ ಮೀಸಲಾತಿ ಮರು ಸ್ಥಾಪಿಸಿ' ಎಂಬ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು.

'ಹಿಂದಿನ ಬಿಜೆಪಿ ಸರ್ಕಾರ, ಮುಸ್ಲಿಂ ಸಮುದಾಯವನ್ನು ಹಿಂದುಳಿದ ವರ್ಗಗಳಿಂದ ಹೊರಗಿಡಲು 2ಬಿ ಮೀಸಲಾತಿಯನ್ನು ರದ್ದುಗೊಳಿಸಿತ್ತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ 2ಬಿ ಮೀಸಲಾತಿಯನ್ನು ಪುನರ್ ಸ್ಥಾಪಿಸುವುದಾಗಿ ಘೋಷಿಸಲಾಗಿತ್ತು. ಅಧಿಕಾರಕ್ಕೆ ಬಂದು ನಾಲ್ಕು ತಿಂಗಳಾದರೂ ಕಾಂಗ್ರೆಸ್ ಸರ್ಕಾರ ಯಾವುದೇ ನಿರ್ಣಯ ಕೈಗೊಂಡಿಲ್ಲ' ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

'ರಾಜ್ಯದಲ್ಲಿ ಶೇ 90ರಷ್ಟು ಹಿಂದುಳಿದ ವರ್ಗದ ಜನರಿದ್ದಾರೆ. ಹಿಂದುಳಿದ ವರ್ಗಗಳ ಸರ್ವತೋಮುಖ ಅಭಿವೃದ್ಧಿಗಾಗಿ ಕಾಂತರಾಜ ಆಯೋಗದ ವರದಿಯನ್ನು ಸ್ವೀಕರಿಸಿ, ಅದನ್ನು ಜಾರಿಗೊಳಿಸಬೇಕು. ಈ ಮೂಲಕ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯ-ಬೇಕು' ಎಂದು ಆಗ್ರಹಿಸಿದರು

'ನಮ್ಮ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸೋಮವಾರದಿಂದ ಪ್ರತಿಭಟನೆ ಆರಂಭಿಸಲಾಗಿದೆ. ಇದೇ 13ರವರೆಗೂ ರಾಜ್ಯದಾದ್ಯಂತ ಧರಣಿ, ಪ್ರತಿಭಟನೆ, ವಿಚಾರಸಂಕಿರಣ, ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಯಾನ ಹಮ್ಮಿಕೊಳ್ಳಲಾಗುವುದು' ಎಂದು ಹೇಳಿದರು.

ನಗರದಲ್ಲಿ ಇಂದು

ಅಶೋಕ-ಅಂಬೇಡ್ಕರ್ ಧಮ್ಮಯಾತ್ರೆ: ಅತಿಥಿಗಳು: ಎಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ಉಪಸ್ಥಿತಿ: ವೆಂಕಮ್ಮ, ಮಾವಳ್ಳಿ ಶಂಕರ್, ಅಧ್ಯಕ್ಷತೆ: ಮೃದಲಾ ವನಂಗಮುಡಿ, ಧಮ್ಮ ಗೌರವ: ಮೂಡ್ನಾಕೂಡು ಚಿನ್ನಸ್ವಾಮಿ, ಗೊಲ್ಲಹಳ್ಳಿ ಶಿವಪ್ರಸಾದ್, ಹನಸೋಗೆ ಸೋಮಶೇಖರ್, ಆಯೋಜನೆ: ಬುದ್ಧಿಸ್ಟ್ ಫ್ರೆಟರ್ನಿಟಿ ಕೌನ್ಸಿಲ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

'ಕಾನೂನಿನಲ್ಲಿ ವೃತ್ತಿನೈಪುಣ್ಯ ವೃದ್ಧಿ ಮತ್ತು ವಿಚಾರಣಾ ನ್ಯಾಯಾಲಯದಲ್ಲಿ ವಕೀಲಿಕೆ' ಕುರಿತು ಉಪನ್ಯಾಸ: ಅರವಿಂದ್ ಐತಾಳ್, ಮುರಳೀಧರ್ ಪೈ, ಎಂ.ಎಲ್. ರಘುನಾಥ್, ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ವಕೀಲರ ಸಂಘ ಬೆಂಗಳೂರು, ಸ್ಥಳ: ವಕೀಲರ ಭವನ, ಸಿಟಿ ಸಿವಿಲ್ ಕೋರ್ಟ್, ಮಧ್ಯಾಹ್ನ 2

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ನೂತನ ಕೋರ್ಸ್ ಆರಂಭ: ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಅತಿಥಿಗಳು: ನಕಾನೆ, ಅಶೋಕ್ ಕುಮಾರ್ ಚಾವ್ಲಾ, ಗೀತಾಂಜಲಿ ವಿಕ್ರಮ್ ಕಿರ್ಲೋಸ್ಕರ್, ಆಯೋಜನೆ ಮತ್ತು ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಮಧ್ಯಾಹ್ನ 3

ಪ್ರವಚನ ವಾಹಿನಿ: 'ಪಿತೃ ಕಲ್ಪ' ಕುರಿತು ಉಪನ್ಯಾಸ: ಕೃಷ್ಣರಾಜಭಟ್ ಕುಟ್ಪಾಡಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಮೆಟ್ರೊ ಸಂಚಾರ: ಬೈಯಪ್ಪನಹಳ್ಳಿ–ಕೆ.ಆರ್‌. ಪುರ ಮಾರ್ಗದಲ್ಲೇ ಹೆಚ್ಚು ಬೇಡಿಕೆ

ಪ್ರಯಾಣಿಕರಿಂದ ಉತ್ತಮ ಸ್ಪಂದನೆ

ಪ್ರಜಾವಾಣಿ ವಾರ್ತೆ

ಮೆಟ್ರೊ ನೇರಳೆ ಮಾರ್ಗದ ವಿಸ್ತರಿತ ಪ್ರದೇಶಕ್ಕೆ ರೈಲು ಸಂಚಾರ ಆರಂಭಗೊಂಡಿದ್ದು, ಚಲ್ಲಘಟ್ಟ ನಿಲ್ದಾಣದಿಂದ ಸೋಮವಾರ ಸಂಚರಿಸಿದ ಮೆಟ್ರೊ ರೈಲು ಪ್ರಜಾವಾಣಿ ಚಿತ್ರ: ರಂಜು ಪಿ.

ಬೆಂಗಳೂರು: ಮೆಟ್ರೊ ನೇರಳೆ ಮಾರ್ಗದ ವಿಸ್ತರಿತ ಪ್ರದೇಶಕ್ಕೆ ರೈಲು ಸಂಚಾರ ಆರಂಭಗೊಂಡಿದ್ದು, ಪ್ರಯಾಣಿಕರಿಂದ ಉತ್ತಮ ಸ್ಪಂದನೆ ದೊರೆತಿದೆ.

ದಟ್ಟಣೆ ಅವಧಿಯಲ್ಲಿ (ಪೀಕ್ ಅವರ್) ಮಾತ್ರವಲ್ಲ, ಉಳಿದ ಸಮಯದಲ್ಲಿಯೂ ಪ್ರಯಾಣಿಕರ ಸಂಖ್ಯೆ ಅಧಿಕವಾಗಿತ್ತು. ಕೆಂಗೇರಿ–ಚಲ್ಲಘಟ್ಟಕ್ಕಿಂತಲೂ ಬೈಯಪ್ಪನಹಳ್ಳಿ–ಕೆ.ಆರ್. ಪುರ ನಡುವೆ ಪ್ರಯಾಣಿಸುವವರ ಸಂಖ್ಯೆ ಹೆಚ್ಚಿತ್ತು. ಕೇಂದ್ರ ಸ್ಥಾನವಾದ ಮೆಜೆಸ್ಟಿಕ್‌ನಲ್ಲಿರುವ ನಾಡಪ್ರಭು ಕೆಂಪೇಗೌಡ ನಿಲ್ದಾಣದಲ್ಲಿ ವೈಟ್‌ಫೀಲ್ಡ್ ಕಡೆಗೆ ಹೋಗುವವರು ಸಾಲುಗಟ್ಟಿ ನಿಂತಿದ್ದರು. ಎಲ್ಲ ಮೆಟ್ರೊ ಸ್ಟೇಷನ್‌ಗಳಲ್ಲಿಯೂ ಜನಸಂದಣಿ ಉಂಟಾಗಿತ್ತು.

ಹೆಚ್ಚುವರಿ ರೈಲು ಇಲ್ಲ: ವಿಸ್ತರಿತ ಮಾರ್ಗದಲ್ಲಿ ಮೆಟ್ರೊ ಸಂಚಾರ ಆರಂಭವಾಗಿದ್ದರಿಂದ ಪ್ರಯಾಣಿಕರ ಸಂಖ್ಯೆ ಒಮ್ಮೆಲೇ ಹೆಚ್ಚಿದ್ದರೂ ಮೆಟ್ರೊ ರೈಲುಗಳ ಸಂಖ್ಯೆಯನ್ನು ಸದ್ಯಕ್ಕೆ ಹೆಚ್ಚಿಸುವುದಿಲ್ಲ. ಜನರು ಕುತೂಹಲದಿಂದ ಆರಂಭದಲ್ಲಿ ಪ್ರಯಾಣಿಸುತ್ತಾರೆ. ಈ ಕುತೂಹಲ ತಣ್ಣಗಾದ ಮೇಲೆ ಕನಿಷ್ಠ ಒಂದು ತಿಂಗಳ ಕಾಲ ಪ್ರಯಾಣಿಸುವವರ ಪ್ರಮಾಣ ಎಷ್ಟಿದೆ ಎಂಬುದನ್ನು ನೋಡಬೇಕಾಗುತ್ತದೆ. ಆಗಲೂ ದಟ್ಟಣೆ ಹೆಚ್ಚಿದ್ದರೆ ರೈಲುಗಳ ಪ್ರಮಾಣ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು. ಮೆಟ್ರೊ ರೈಲುಗಳ ನಡುವಿನ ಅಂತರದ ಅವಧಿಯಲ್ಲಿಯೂ ಸದ್ಯ ಬದಲಾವಣೆ ಇರುವುದಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಉತ್ತಮ ಅನುಭವ: ‘ನಾನು ಕುತೂಹಲಕ್ಕಾಗಿ ನೇರಳೆ ಮಾರ್ಗದಲ್ಲಿ ಸೋಮವಾರ ಪ್ರಯಾಣಿಸಿದೆ. ಉತ್ತಮ ಅನುಭವ ನೀಡಿದೆ. ಬೈಯಪ್ಪನಹಳ್ಳಿವರೆಗೆ ಮತ್ತು ಕೆ.ಆರ್.ಪುರದಿಂದ ಮುಂದಕ್ಕೆ ಮೆಟ್ರೊ ಸಂಚಾರವಿದ್ದರೂ, ಬೈಯಪ್ಪನಹಳ್ಳಿ–ಕೆ.ಆರ್.ಪುರ ನಡುವೆ 2 ಕಿಲೋಮೀಟರ್‌ನಷ್ಟು ಸಂಪರ್ಕ ಇರಲಿಲ್ಲ. ಇದರಿಂದಾಗಿ ಕೆ.ಆರ್.ಪುರ–ಕಾಡುಗೋಡಿ ಮೆಟ್ರೊದಲ್ಲಿ ಹೆಚ್ಚು ಜನ ಪ್ರಯಾಣಿಸುತ್ತಿರಲಿಲ್ಲ. ಈಗ ಸಂಪರ್ಕ ಕೊಂಡಿ ಪೂರ್ಣವಾಗಿರುವುದು ಪ್ರಯಾಣಿಕರಿಗೆ ಅನುಕೂಲವಾಗಿದೆ’ ಎಂದು ಪ್ರಯಾಣಿಕ ಕೆ.ಎನ್. ಕೃಷ್ಣಪ್ರಸಾದ್ ಸಂಭ್ರಮ ಹಂಚಿಕೊಂಡರು.

ವೈಟ್‌ಫೀಲ್ಡ್ ಭಾಗದಲ್ಲಿ ನೂರಾರು ಕಂಪನಿಗಳಿವೆ. ಹೊಸಕೋಟೆ ರಸ್ತೆ ಯಾವಾಗಲೂ ವಾಹನ ದಟ್ಟಣೆಯಿಂದ ಕೂಡಿರುತ್ತದೆ. ಮೆಟ್ರೊ ಸಂಪರ್ಕದಿಂದಾಗಿ ವಾಹನ ದಟ್ಟಣೆ ಸ್ವಲ್ಪ ಕಡಿಮೆಯಾಗಲಿದೆ ಎಂದು ತಿಳಿಸಿದರು.

3 ರಿಂದ 4 ನಿಮಿಷಕ್ಕೊಂದು ರೈಲು ಬೇಕು: ನೇರಳೆ ಮಾರ್ಗದಲ್ಲಿ ಪ್ರಯಾಣಿಸುವ ಉದ್ಯೋಗಿಗಳ ಸಂಖ್ಯೆ ಹೆಚ್ಚಲಿದೆ. ನಿತ್ಯ ಪ್ರಯಾಣಿಕರ ದಟ್ಟಣೆ ಉಂಟಾಗಲಿದೆ. ದಟ್ಟಣೆ ಅವಧಿಯಲ್ಲಿ ಮೂರು ಅಥವಾ ನಾಲ್ಕು ನಿಮಿಷಗಳಿಗೊಂದು ರೈಲು ಸಂಚರಿಸುವಂತೆ ಮಾಡಬೇಕು ಎಂದು ಪ್ರಯಾಣಿಕರು ಒತ್ತಾಯ ಮಾಡಿದ್ದಾರೆ.

ವಿದ್ಯುತ್ ಸಮಸ್ಯೆ: 30 ನಿಮಿಷ ತಡ

ಮೆಟ್ರೊ ನೇರಳೆ ಮಾರ್ಗದಲ್ಲಿ ಸಂಭ್ರಮಿಸುವ ಸಮಯದಲ್ಲಿಯೇ ಹಸಿರು ಮಾರ್ಗದಲ್ಲಿ ಪ್ರಯಾಣಿಕರು ಪರದಾಡುವಂತಾಯಿತು. ಸೋಮವಾರ ಬೆಳಿಗ್ಗೆ ವಿದ್ಯುತ್ ಸರಬರಾಜಿನಲ್ಲಿ ಸಮಸ್ಯೆ ಉಂಟಾದ ಕಾರಣ ಮೆಟ್ರೊ ರೈಲು ಸಂಚಾರದಲ್ಲಿ ವ್ಯತ್ಯಯವಾಯಿತು.

ಬೆಳಿಗ್ಗೆ 9.15ರಿಂದ ಸುಮಾರು 30 ನಿಮಿಷಗಳ ಕಾಲ ಸಮಸ್ಯೆಯಾಯಿತು. ತಾಂತ್ರಿಕ ಎಂಜಿನಿಯರ್‌ಗಳು ಸಮಸ್ಯೆ ಸರಿಪಡಿಸಿ, ಮೆಟ್ರೊ ಸಂಚಾರಕ್ಕೆ ಅನುವು ಮಾಡಿಕೊಟ್ಟರು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದರು.

ಸಮಯ, ಹಣ ಉಳಿತಾಯ

ಚಲ್ಲಘಟ್ಟದಿಂದ ವೈಟ್‌ಫೀಲ್ಡ್‌ವರೆಗಿನ ದೂರ 43.49 ಕಿ.ಮೀ. ಓಲಾ ಕ್ಯಾಬ್‌ಗಾದರೆ ₹ 1,000, ಓಲಾ ಆಟೊಗೆ ₹ 600 ಬಾಡಿಗೆ ನೀಡಬೇಕು. ಬಿಎಂಟಿಸಿ ಬಸ್‌ಗೆ ₹ 70, ಮೆಟ್ರೊದಲ್ಲಿ ₹ 60 ದರ ಇದೆ. ಮೆಟ್ರೊದಲ್ಲಿ ವೇಗವಾಗಿ ತಲುಪಬಹುದು. ಇನ್ನೆರಡು ವರ್ಷಗಳಲ್ಲಿ ಉಳಿದ ಮೆಟ್ರೊ ಮಾರ್ಗಗಳ ಕಾಮಗಾರಿ ಪೂರ್ಣಗೊಳ್ಳಲಿದ್ದು, ಈಗಿರುವುದಕ್ಕಿಂತ ಉತ್ತಮ ಬೆಂಗಳೂರನ್ನು ಆಗ ನೋಡಬಹುದು ಎಂದು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಅಂಕಿ ಅಂಶ ಹಂಚಿಕೊಂಡಿದ್ದಾರೆ.

ಚಲ್ಲಘಟ್ಟದಿಂದ ವೈಟ್‌ಫೀಲ್ಡ್‌ಗೆ 80 ನಿಮಿಷಗಳಲ್ಲಿ ಮೆಟ್ರೊ ತಲುಪಲಿದೆ. ಇದರಿಂದ ಪ್ರಯಾಣಿಕರ ಸಮಯ ಮತ್ತು ಹಣ ಉಳಿತಾಯವಾಗಲಿದೆ ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಾಹಿತಿ ನೀಡಿದ್ದಾರೆ.

‘21 ತಾಲ್ಲೂಕು: ಬರ ಘೋಷಣೆಗೆ ಸಿದ್ಧತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಇನ್ನೂ 21 ತಾಲ್ಲೂಕುಗಳಲ್ಲಿ ಬರ ಘೋಷಣೆಗೆ ಸಿದ್ಧತೆ ನಡೆದಿದೆ. ಎರಡು ದಿನಗಳಲ್ಲಿ ಮತ್ತೊಮ್ಮೆ ಬೆಳೆ ಸಮೀಕ್ಷೆ ನಡೆಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈವರೆಗೆ 195 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಲಾಗಿದೆ. ಉಳಿದ 41 ತಾಲ್ಲೂಕುಗಳಲ್ಲಿ ಪರಿಸ್ಥಿತಿ ಅವಲೋಕಿಸಲಾಗುತ್ತಿದೆ. ಬರಪೀಡಿತ ತಾಲ್ಲೂಕುಗಳ ಘೋಷಣೆಗೆ ಅಕ್ಟೋಬರ್ ಕೊನೆಯವರೆಗೂ ಅವಕಾಶವಿದೆ. 11 ಜಿಲ್ಲೆಗಳ 21 ತಾಲ್ಲೂಕುಗಳನ್ನು ಪಟ್ಟಿಗೆ ಸೇರಿಸಲು ಪ್ರಕ್ರಿಯೆ ಆರಂಭಿಸಲಾಗಿದೆ’ ಎಂದರು.

ಬೆಳೆ ಹಾನಿಯ ಮಾಹಿತಿ ಸಂಗ್ರಹಿಸಬೇಕಿದೆ. ಸಂಪೂರ್ಣ ಮಾಹಿತಿ ಲಭ್ಯವಾಗುತ್ತಿದ್ದಂತೆ ಘೋಷಣೆ ಮಾಡಲಾಗುವುದು. ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಮತ್ತೊಂದು ಮನವಿಯನ್ನೂ ಸಲ್ಲಿಸಲಾಗುವುದು. ಬರಪೀಡಿತ ಪ್ರದೇಶಗಳ ಅಧ್ಯಯನಕ್ಕೆ ಬಂದಿದ್ದ ಕೇಂದ್ರ ಸರ್ಕಾರದ ಅಧಿಕಾರಿಗಳ ತಂಡದ ಜತೆಗೆ ಈ ಬಗ್ಗೆ ಚರ್ಚಿಸಲಾಗಿದೆ. ಮತ್ತೊಂದು ಮನವಿ ಸಲ್ಲಿಸಲು ಅವರು ಸಮ್ಮತಿಸಿದ್ದಾರೆ ಎಂದು ತಿಳಿಸಿದರು.

ಬರ ಪ್ರಸ್ತಾವಿತ ತಾಲ್ಲೂಕುಗಳು

ಚಾಮರಾಜನಗರ, ಕೆ.ಆರ್. ನಗರ, ಅಣ್ಣಿಗೇರಿ, ಆಲೂರು, ಹಾಸನ, ಯಳಂದೂರು, ಬೆಳಗಾವಿ, ಖಾನಾಪುರ, ಮುಂಡರಗಿ, ಬ್ಯಾಡಗಿ, ಹಾನಗಲ್, ಶಿಗ್ಗಾಂವಿ, ಕಲಘಟಗಿ, ಅಳ್ನಾವರ, ಅರಸೀಕೆರೆ, ಮೂಡಿಗೆರೆ, ತರೀಕೆರೆ, ಪೊನ್ನಂಪೇಟೆ, ಹೆಬ್ರಿ, ಸಿದ್ದಾಪುರ ಮತ್ತು ದಾಂಡೇಲಿ ತಾಲ್ಲೂಕುಗಳನ್ನು ತೀವ್ರ ಬರ ಪೀಡಿತ ಪ್ರದೇಶ ಎಂದು ಘೋಷಿಸುವ ಪ್ರಸ್ತಾವ ಸರ್ಕಾರದ ಮುಂದಿದೆ.

ವ್ಯಕ್ತಿ ದಹನ ವಿಡಿಯೊ ಬಹಿರಂಗ

ಇಂಫಾಲ್ (ಪಿಟಿಐ): ಹಿಂಸಾಚಾರಪೀಡಿತ ಮಣಿಪುರದಲ್ಲಿ ವ್ಯಕ್ತಿಯೊಬ್ಬರನ್ನು ದಹಿಸುತ್ತಿರುವ ವಿಡಿಯೊವೊಂದು ಭಾನುವಾರ ಜಾಲತಾಣದಲ್ಲಿ ಹರಿದಾಡಿದ್ದು, ಈ ಪ್ರಕರಣದ ತನಿಖೆಯನ್ನು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಸರ್ಕಾರವು ಸಿಬಿಐಗೆ ಒಪ್ಪಿಸಿದೆ.

ಮೇ 4ರಂದು ಈ ವಿಡಿಯೊ ಚಿತ್ರೀಕರಿಸಲಾಗಿದೆ. ಅದೇ ದಿನ ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ನಡೆಸಿದ್ದ ಪ್ರಕರಣ ನಡೆದಿತ್ತು. ಈ ಎರಡೂ ಪ್ರಕರಣಗಳಿಗೆ ಪರಸ್ಪರ ಸಂಬಂಧವಿದೆ. ಈ ಕುರಿತು ತನಿಖೆ ನಡೆಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಏಳು ಸೆಕೆಂಡ್‌ಗಳ ಈ ವಿಡಿಯೊದಲ್ಲಿ ಮೃತಪಟ್ಟಿರುವ ಪುರುಷನ ದೇಹಕ್ಕೆ ಬೆಂಕಿ ಹಚ್ಚುತ್ತಿರುವುದು ಸೆರೆಯಾಗಿದೆ. ಆತ ಕಪ್ಪು ಟಿ–ಶರ್ಟ್, ಮಿಲಿಟರಿ ಸಮವಸ್ತ್ರದ ಮಾದರಿಯ ಪ್ಯಾಂಟ್ ಧರಿಸಿರುವುದು ಕಂಡುಬರುತ್ತದೆ. ಜನರು ಸ್ಥಳೀಯ ಭಾಷೆಯಲ್ಲಿ ಮಾತನಾಡುವುದು ಮತ್ತು ಗುಂಡಿನ ಸದ್ದು ಕೂಡ ಹಿನ್ನೆಲೆಯಲ್ಲಿ ಕೇಳುತ್ತದೆ.

‘ಮೃತ ವ್ಯಕ್ತಿಯು ಕಾಂಗ್ಪೋಪಿ ಜಿಲ್ಲೆಯ ಗ್ರಾಮವೊಂದಕ್ಕೆ ಸೇರಿದ್ದಾರೆ. ಸದ್ಯ ಮೃತದೇಹವು ಆಸ್ಪತ್ರೆಯಲ್ಲಿದೆ’ ಎಂದ ಭದ್ರತಾ ಸಲಹೆಗಾರ ಕುಲದೀಪ್ ಸಿಂಗ್ ತಿಳಿಸಿದ್ದಾರೆ.

ನಾಳೆಯಿಂದ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬನ್ನೇರುಘಟ್ಟ, ಪ್ರೈಮಲ್ ಟೆಕ್‌ಪಾರ್ಕ್ ಮತ್ತು ಎಲ್ ಆ್ಯಂಡ್ ಟಿ ಸೌತ್ ಸಿಟಿ ವಿದ್ಯುತ್ ನಿರ್ವಹಣಾ ಕೇಂದ್ರಗಳಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 11ರಿಂದ 13ರವರೆಗೆ ಬೆಳಿಗ್ಗೆ 10ರಿಂದ ಮಧ್ಯಾಹ್ನ 3ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

11ಕ್ಕೆ ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ವೀವರ್ಸ್ ಕಾಲೊನಿ 1ರಿಂದ 9ನೇ ಕ್ರಾಸ್, ಮಾರುತಿ ನಗರ, ಪಿಲ್ಲಗಾನಹಳ್ಳಿ, ಗೊಟ್ಟಿಗೆರೆ, ಎಂಎಲ್‌ಎ ಲೇಔಟ್, ಭೋರಾ ಲೇಔಟ್, ಆಶ್ರಮ ರಸ್ತೆ, ಹಿಮಗಿರಿ ಮೆಡೋಸ್, ಕಮ್ಮನಹಳ್ಳಿ, ಬಾಲಾಜಿ ಗಾರ್ಡನ್ ಲೇಔಟ್, ಬಸವನಪುರ, ನೊಬೆಲ್ ರೆಸಿಡೆನ್ಸಿ, ಮೈಲಸಂದ್ರ, ಹೊಮ್ಮದೇವನಹಳ್ಳಿ, ವಡ್ಡರಪಾಳ್ಯ, ಬೇಟದಾಸಪುರ, ಹುಲ್ಲಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

12ಕ್ಕೆ: ಕಾರ್ಮೆಲರಾಮ್, ಜನತಾ ಕಾಲೊನಿ, ಚಿಕ್ಕನಾಯಕನಹಳ್ಳಿ, ಆರ್‌ಜಿಎ ಟೆಕ್‌ಪಾರ್ಕ್, ಮೈಕ್ರೊಸಾಫ್ಟ್, ಪ್ರಥಮ್ ಮೋಟಾರ್ಸ್, ಬೆಳ್ಳಂದೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ತುಮಕೂರು ರಸ್ತೆಯ ಹೆಸರಘಟ್ಟ ಕ್ರಾಸ್‌ನಲ್ಲಿ ಸಂಗ್ರಹಗೊಂಡಿದ್ದ ಮಳೆ ನೀರು (ಎಡಚಿತ್ರ). ಗೆದ್ದಲಹಳ್ಳಿ ರೈಲ್ವೆ ಸೇತುವೆ ಬಳಿ ಸಂಗ್ರಹವಾಗಿದ್ದ ನೀರು –ಪ್ರಜಾವಾಣಿ ಚಿತ್ರಗಳು

ಧಾರಾಕಾರ ಮಳೆ: ಹೊಳೆಯಂತಾದ ರಸ್ತೆಗಳು

ಇನ್ನೂ ಎರಡು ದಿನ ಭಾರಿ ಮಳೆ • ಬೆಂಗಳೂರು ನಗರ, ಗ್ರಾಮಾಂತರ ಜಿಲ್ಲೆಗೆ ಯೆಲ್ಲೊ ಅಲರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಹುತೇಕ ಕಡೆ ಸೋಮವಾರ ಸಂಜೆ ಆರಂಭವಾದ ಮಳೆ ತಡರಾತ್ರಿ ತನಕ ಅಬ್ಬರಿಸಿತು. ಭಾರಿ ಮಳೆಯಿಂದ ರಸ್ತೆಗಳಲ್ಲಿ ನದಿಯಂತೆ ನೀರು ಹರಿಯಿತು. ಗುಡುಗಿನ ಆರ್ಭಟ ಜೋರಾಗಿತ್ತು. ವಾಹನ ಸವಾರರು ರಸ್ತೆಗಳಲ್ಲಿ ಸಿಲುಕಿ ಪರದಾಡಿದರು.

ಪ್ರಮುಖ ಜಂಕ್ಷನ್‌ಗಳಲ್ಲಿ ಮಳೆಯ ನೀರು ಆವರಿಸಿದ್ದರ ಪರಿಣಾಮ ವಾಹನಗಳು ಮುಂದಕ್ಕೆ ಸಾಗಲು ಸಾಧ್ಯವಾಗದೇ ಸಾಲುಗಟ್ಟಿ ನಿಂತಿದ್ದವು. ನಗರದ ಉತ್ತರ ಭಾಗದ ಹಲವು ಬಡಾವಣೆಗಳಲ್ಲಿ ಧಾರಾಕಾರ ಮಳೆಯಾಗಿದೆ.

ಎಲೆಕ್ಟ್ರಾನಿಕ್ ಸಿಟಿಯಲ್ಲೂ ಭಾರಿ ಮಳೆಯಾಗಿದ್ದು, ರೂಪೇನ ಅಗ್ರಹಾರದ ರಸ್ತೆಯಲ್ಲಿ ವಾಹನ ಸಂಚಾರ ಬಂದ್ ಆಗಿತ್ತು. ಹೆಬ್ಬಾಳದಿಂದ ಕಸ್ತೂರಿ ಗಾರ್ಡನ್‌ಗೆ ತೆರಳುವ ರಸ್ತೆಯಲ್ಲಿ ಹೊಳೆಯಂತೆ ನೀರು ನಿಂತಿತ್ತು. ತುಮಕೂರು ರಸ್ತೆಯ ಹೆಸರಘಟ್ಟ ಕ್ರಾಸ್‌ನಲ್ಲಿ ರಸ್ತೆಯಲ್ಲಿ ನಾಲ್ಕು ಅಡಿಯಷ್ಟು ನೀರು ಸಂಗ್ರಹಗೊಂಡು ಬಸ್, ಲಾರಿ ಹಾಗೂ ಬೈಕ್ ಚಾಲಕರು ಪರದಾಡಿದರು.

ಮೈಸೂರು ರಸ್ತೆಯ ನಾಯಂಡಹಳ್ಳಿ, ಹೊಸೂರು ರಸ್ತೆಯ ಹರಲೂರು ಜಂಕ್ಷನ್, ಶೇಷಾದ್ರಿಪುರದ ರೈಲ್ವೆ ಕೆಳಸೇತುವೆ, ಬನ್ನೇರುಘಟ್ಟದ ನಾಗಾರ್ಜುನ ಜಂಕ್ಷನ್, ಎಂ.ಜಿ. ರಸ್ತೆಯ ಅನಿಲ್ ಕುಂಬ್ಳೆ ವೃತ್ತ, ಕಲ್ಯಾಣ್ ನಗರದ ಸೇತುವೆ, ಚಿಕ್ಕಪೇಟೆ ಮೆಟ್ರೊ ನಿಲ್ದಾಣದ ಬಳಿ, ಹೆಣ್ಣೂರಿನ ಥಣಿಸಂದ್ರದ ಜಂಕ್ಷನ್‌ನಲ್ಲಿ ನೀರು ನಿಂತು ಸಮಸ್ಯೆ ಉಂಟಾಗಿತ್ತು. ಭಾನುವಾರ ರಾತ್ರಿಯೂ ಹಲವು ಪ್ರದೇಶಗಳಲ್ಲಿ ಧಾರಾಕಾರ ಮಳೆಯಾಗಿತ್ತು.

ರಾಜಾಜಿನಗರ, ಮಲ್ಲೇಶ್ವರ, ವಿಜಯನಗರ, ಯಶವಂತಪುರ, ಪೀಣ್ಯ, ಸದಾಶಿವನಗರ, ಕೋರಮಂಗಲ, ಮಡಿವಾಳ, ಬೊಮ್ಮನಹಳ್ಳಿ, ಎಚ್.ಎಸ್.ಆರ್. ಲೇಔಟ್, ಸರ್ಜಾಪುರ, ಬಿಟಿಎಂ ಲೇಔಟ್, ರಾಜರಾಜೇಶ್ವರಿನಗರ, ಕೆಂಗೇರಿ, ಚಾಮರಾಜಪೇಟೆ, ಬಸವನಗುಡಿ, ಹನುಮಂತನಗರ, ಶಿವಾಜಿನಗರ, ಅಶೋಕನಗರ ಹಾಗೂ ಸುತ್ತಮುತ್ತ ಭಾರಿ ಮಳೆಯಾಗಿದೆ.

ಮಡಿವಾಳದ ಸಿಲ್ಕ್‌ಬೋರ್ಡ್ ಜಂಕ್ಷನ್, ಸರ್ಜಾಪುರ ರಸ್ತೆಯ ಐಬಲೂರು ಜಂಕ್ಷನ್, ಶಿವಾನಂದ ವೃತ್ತದ ರೈಲ್ವೆ ಕೆಳಸೇತುವೆ, ರಾಜರಾಜೇಶ್ವರಿನಗರದ ನಾಯಂಡನಹಳ್ಳಿ ಜಂಕ್ಷನ್, ಮಾರುತಿನಗರ, ಶಿವಾಜಿನಗರ, ಶಾಂತಿನಗರದ ಮುಖ್ಯರಸ್ತೆ, ಕೆ.ಎಚ್.ರಸ್ತೆ, ಕೋರಮಂಗಲ 80 ಅಡಿ, ಬಿಟಿಎಂ ಲೇಔಟ್‌ನ ಹಲವು ರಸ್ತೆಗಳಲ್ಲಿ ಮಳೆ ನೀರು ಸಂಗ್ರಹಗೊಂಡಿತ್ತು.

ನಾಯಂಡನಹಳ್ಳಿ ಮೆಟ್ರೊ ನಿಲ್ದಾಣ ಪಕ್ಕದ ರಾಜಕಾಲುವೆಯಲ್ಲಿ ನೀರು ತುಂಬಿಹರಿಯಿತು. ಪಕ್ಕದ ರಸ್ತೆ ಮೇಲೆಯೂ ರಾಜಕಾಲುವೆ ನೀರು ಹರಿಯಿತು. ಕೆಲಸ ಮುಗಿಸಿಕೊಂಡು ಬೈಕ್‌ನಲ್ಲಿ ಮನೆಗೆ ತೆರಳುತ್ತಿದ್ದ ಸವಾರರು ಮಳೆಯಲ್ಲಿ ಸಿಲುಕಿಕೊಂಡಿದ್ದರು. ದಿಢೀರ್ ಸುರಿದ ಮಳೆಯಿಂದ ಕೆಲವು ಭಾಗದಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿತ್ತು.

ನಗರ ಸೇರಿದಂತೆ ಸುತ್ತಮುತ್ತಲ ಪ್ರದೇಶದಲ್ಲಿ ಇನ್ನೂ ಎರಡು ದಿನಗಳ ಕಾಲ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಸೂಚನೆ ನೀಡಿದೆ. ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ.

ನಗರದಲ್ಲಿ ಸೋಮವಾರ ಧಾರಾಕಾರ ಮಳೆಯಾಗಿದ್ದು ಹಲಸೂರು ರಸ್ತೆಯಲ್ಲಿ ಬೈಕ್ ಸವಾರರೊಬ್ಬರು ಮಳೆಯಲ್ಲೇ ಸಾಗಿದರು

ಮಳೆ ಪ್ರಮಾಣ (ಮಿ.ಮೀನಲ್ಲಿ)	
ಕೆಂಗೇರಿ	82.50
ಎಚ್.ಗೊಲ್ಲಹಳ್ಳಿ	75.50
ರಾಜರಾಜೇಶ್ವರಿ ನಗರ	67.50
ನಾಯಂಡಹಳ್ಳಿ	63
ಎಚ್‌ಎಎಲ್ ವಿಮಾನ ನಿಲ್ದಾಣ	62.50
ಕೊಟ್ಟಿಗೆಪಾಳ್ಯ	62
ಪೀಣ್ಯ	58.80
ನಾಗಾಪುರ	55
ಅರಕೆರೆ	52
ಮಾರತಹಳ್ಳಿ	49.90
ದಯಾನಂದನಗರ	49
ಕೋರಮಂಗಲ	46.50
ಚೊಕ್ಕಸಂದ್ರ	46

ಉರುಳಿದ ಮರ, ವಿದ್ಯುತ್ ಕಂಬ

ಬಸವೇಶ್ವರನಗರ, ಹೆಬ್ಬಾಳದ ವಿ.ನಾಗೇನಹಳ್ಳಿ, ಯಲಹಂಕದಿಂದ ದೊಡ್ಡಬಳ್ಳಾಪುರಕ್ಕೆ ತೆರಳುವ ರಸ್ತೆಯಲ್ಲಿ ಮರಗಳು ಉರುಳಿದ್ದವು. ಸ್ಥಳಕ್ಕೆ ತೆರಳಿದ ಬಿಬಿಎಂಪಿ ಸಿಬ್ಬಂದಿ, ಸಂಚಾರ ಪೊಲೀಸರ ನೆರವಿನಿಂದ ಮರ ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಮಡಿವಾಳ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಸೇಂಟ್ ಜಾನ್ಸ್ ವೃತ್ತದಲ್ಲಿ ಮರ ಹಾಗೂ ವಿದ್ಯುತ್ ಕಂಬ ಉರುಳಿಬಿದ್ದು ವಾಹನ ಸಂಚಾರ ಬಂದ್ ಆಗಿತ್ತು. ವಾಹನ ಸವಾರರು ಪರ್ಯಾಯ ಮಾರ್ಗದಲ್ಲಿ ತೆರಳಿದರು.

ಎಸ್‌ಕೆಎಂ, ಜೆಸಿಟಿಯು ರಾಜ್ಯ ಸಮಾವೇಶದಲ್ಲಿ ನಿರ್ಧಾರ

ದೇಶದಾದ್ಯಂತ ಮಹಾ ಧರಣಿ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾಮಿನಾಥನ್ ವರದಿ ಜಾರಿ ಮಾಡುವುದೂ ಸೇರಿದಂತೆ ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಎಲ್ಲ ರಾಜ್ಯಗಳ ರಾಜಭವನದ ಎದುರು ಮತ್ತು ದೆಹಲಿಯಲ್ಲಿ ನ.26ರಿಂದ 28ರವರೆಗೆ ‘ಮಹಾ ಧರಣಿ ಸತ್ಯಾಗ್ರಹ’ ನಡೆಸಲು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಮತ್ತು ಸಂಯುಕ್ತ ಕಾರ್ಮಿಕರ ಸಂಘಟನೆಗಳು (ಜೆಸಿಟಿಯು) ನಿರ್ಧರಿಸಿವೆ.

ಈ ಸತ್ಯಾಗ್ರಹದ ಅಂಗವಾಗಿ ಸೋಮವಾರ ನಗರದಲ್ಲಿ ನಡೆದ ರಾಜ್ಯಮಟ್ಟದ ಸಮಾವೇಶವನ್ನು ಸಂಯುಕ್ತ ಕಿಸಾನ್ ಮೋರ್ಚಾ ರಾಷ್ಟ್ರೀಯ ನಾಯಕ ವಿಜು ಕೃಷ್ಣನ್ ಉದ್ಘಾಟಿಸಿದರು.

’ರೈತರ ಸಂಕಷ್ಟಕ್ಕೆ ಸ್ಪಂದಿಸುತ್ತೇವೆ, ಒಂದು ಅವಕಾಶ ನೀಡಿ’ ಎಂದು ಜನರನ್ನು ನಂಬಿಸಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ, ರೈತ ವಿರೋಧಿ ನೀತಿಗಳನ್ನು ಜಾರಿ ಮಾಡುವ ಮೂಲಕ ಮೋಸ ಮಾಡಿದ್ದಾರೆ’ ಎಂದು ವಿಜು ಕೃಷ್ಣನ್ ಕಿಡಿಕಾರಿದರು.

ದೆಹಲಿಯಲ್ಲಿ ನಡೆದಿದ್ದ ರೈತ ಹೋರಾಟಕ್ಕೆ ಹೆದರಿ ಮೋದಿ ಕ್ಷಮೆಯಾಚಿಸಿದ್ದರು. ಅನ್ನದಾತರ ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದ್ದರು. ಆದರೆ, ರೈತವಿರೋಧಿ ನೀತಿಗಳನ್ನು ಪರೋಕ್ಷವಾಗಿ ಜಾರಿಗೆ ತರುತ್ತಿದ್ದಾರೆ. ರೈತರ ಹೋರಾಟವನ್ನು ಪಸರಿಸಿದ್ದ ನ್ಯೂಸ್‌ಕ್ಲಿಕ್ ಮಾಧ್ಯಮ ಸಂಸ್ಥೆಯ ಮೇಲೆ ಯುಎಪಿಎ ಪ್ರಕರಣ ದಾಖಲಿಸಿದ್ದಾರೆ. ವಿದೇಶಿ ಶಕ್ತಿಗಳು ರೈತ ಹೋರಾಟ ನಡೆಸಿದ್ದು ಎಂದು ಬಿಂಬಿಸುತ್ತಿದ್ದಾರೆ ಎಂದು ಆರೋಪಿಸಿದರು.

ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ‘ಕೋಮುವಾದಿ ರಾಜಕಾರಣವನ್ನು ಪಾರ್ಲಿಮೆಂಟ್‌ನಿಂದ ಹೊರ ಹಾಕಲು ಸಂವಿಧಾನದ ಮಾಲೀಕರಾದ ರೈತರು, ಕಾರ್ಮಿಕರು, ದಲಿತರು, ಮಹಿಳೆಯರು, ಯುವಜನರು ಸಜ್ಜಾಗಬೇಕು’ ಎಂದು ಹೇಳಿದರು.

ನಗರದಲ್ಲಿಯೂ ರಾಜಭವನದ ಮುಂದೆ ಸತ್ಯಾಗ್ರಹ ನಡೆಸಲು ನಿರ್ಧಾರ ಮಾಡಲಾಗಿದೆ. ಆದರೆ, ಇಲ್ಲಿನ ಪೊಲೀಸರು ಅವಕಾಶ ನೀಡುವುದಿಲ್ಲ. ಹಾಗಾಗಿ ಸ್ವಾತಂತ್ರ್ಯ ಉದ್ಯಾನದಲ್ಲಿಯೇ ಸತ್ಯಾಗ್ರಹ ಆರಂಭಿಸಲಾಗುವುದು. ರಾಜ್ಯಪಾಲರು ನಾವಿದ್ದಲ್ಲಿಗೆ ಬರಬೇಕು. ಇಲ್ಲದಿದ್ದರೆ ಅವರಿದ್ದಲ್ಲಿಗೆ ನಾವು ಹೋಗಬೇಕಾಗುತ್ತದೆ ಎಂದು ಹೋರಾಟಗಾರ ನೂರ್ ಶ್ರೀಧರ್ ಎಚ್ಚರಿಸಿದರು.

ಅನ್ನದಾತ ರೈತರ ಪರ ನಾವು ಹೋರಾಟ ಮಾಡುವುದರ ಜೊತೆಗೆ ಭೂರಹಿತರ ಪರವಾಗಿಯೂ ಹೋರಾಟ ಮಾಡಬೇಕು ಎಂದು ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಸಲಹೆ ನೀಡಿದರು.

ರೈತರಿಗೆ ನೀಡುವ, ಬಿತ್ತನೆ ಬೀಜ, ರಸಗೊಬ್ಬರ ಹಾಗೂ ವಿದ್ಯುತ್ ಮೇಲಿನ ರಿಯಾಯಿತಿ ಹೆಚ್ಚಿಸಬೇಕು. ಸ್ವಾಮಿನಾಥನ್ ವರದಿಯಲ್ಲಿ ತಿಳಿಸಿರುವಂತೆ ಕನಿಷ್ಠ ಬೆಂಬಲ ಬೆಲೆ ಒದಗಿಸಬೇಕು. ಕನಿಷ್ಠ ಮಾಸಿಕ ವೇತನ ₹26,000 ನಿಗದಿ ಮಾಡಬೇಕು. ಫಸಲ್ ಬಿಮಾ ಯೋಜನೆಯನ್ನು ರದ್ದುಪಡಿಸಿ, ಸಮಗ್ರ ಬೆಳೆ ವಿಮೆ ಯೋಜನೆ ಜಾರಿಗೆ ತರಬೇಕು. ಹೋರಾಟಗಾರರ ಮೇಲಿನ ಪ್ರಕರಣ ಹಿಂಪಡೆಯಬೇಕು ಎಂಬುದು ಸೇರಿದಂತೆ 21 ಬೇಡಿಕೆಗಳನ್ನು ಸಮಾವೇಶದಲ್ಲಿ ಮಂಡಿಸಲಾಯಿತು.

ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಸೋಮವಾರ ನಡೆದ ರಾಜ್ಯ ಸಮಾವೇಶದಲ್ಲಿ ಹೋರಾಟಗಾರರಾದ ಎಚ್‌. ಆರ್‌. ಬಸವರಾಜಪ್ಪ, ಆರ್‌. ವೆಂಕಯ್ಯ, ವಿಜು ಕೃಷ್ಣನ್, ಪಂಜಾಬಿನ ಅವತಾರ್ ಸಿಂಗ್, ಚಾಮರಸ ಮಾಲಿ ಪಾಟೀಲ್, ಬಡಗಲಪುರ ನಾಗೇಂದ್ರ, ಮಾವಳ್ಳಿ ಶಂಕರ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

JSS MAHAVIDYAPEETA, MYSURU
JSS TRAINING INSTITUTE FOR COMPETITIVE EXAMINATIONS
JSSTICE BANGALORE Since 1991
J.S.S. College Campus, 2nd Floor, 38th Cross, 1st Main, 8th Block, Jayanagar, J.S.S. Circle, Bengaluru-560 070.
Email : jsstc8@gmail.com
GS Prelims-cum-Mains Integrated Course - 2023-24
ADMISSIONS OPEN
Our CSE Achievers
Smt. H.S. Bhavana AIR - 55 | Sri Benaka Prasad AIR - 92 | Kum. K.M. Priyanka AIR - 121 | Sri Manjunath R AIR - 219 | Kum. Netra Meti AIR - 326
New Batch Starts from 15th October 2023.
Enroll Now at JSSTICE for intensive Coaching to IAS / KAS IFS/IPS/IRS and other Competitive Exams.
Key Features of Coaching Program
- Prelims-cum-Mains integrated Batch
- 25 Prelims Tests (20 Topic wise + 5 Full Lengths)
- Experienced Faculty for every Subject
- Mains Answer Writing Sessions and many more
Well-Stocked Library with wide range of Books and Reference Materials
Offline & Online Classes
Mentorship | Hostel Facility
Course Duration Regular Classes : 10 months
Highly Affordable Course Fee
For further details contact: Mob : +91 98450 55718, Ph : 080 - 2954 2144 / 2297 0114
Website : www.jsstice.in

MDPH
Zed Black®
ಪ್ರೀಮಿಯಮ್ ಅಗರಬತ್ತಿಗಳು ಮತ್ತು ಧೂಪ
ಪ್ರಾರ್ಥನೆಯು® ಸ್ವೀಕೃತವಾಗಲಿದೆ



ಮೈಸೂರು ರಸ್ತೆ: ಸಂಚಾರ ದಟ್ಟಣೆ ತಾಣಗಳ ಪ್ರಾಬಲ್ಯ ● ವಾಹನ ಸವಾರರು ಹೈರಾಣ

ಜಂಕ್ಷನ್ ಹತ್ತಾರು, ಸಮಸ್ಯೆ ನೂರಾರು

● ಆರ್. ಮಂಜುನಾಥ್

ಬೆಂಗಳೂರು: ನಗರದ ದಕ್ಷಿಣ–ಪಶ್ಚಿಮ ಭಾಗದ ಪ್ರಮುಖ ಸಂಪರ್ಕ ರಸ್ತೆಯಾಗಿರುವ ಮೈಸೂರು ರಸ್ತೆ, ಹತ್ತಾರು ಜಂಕ್ಷನ್‌ಗಳಲ್ಲಿ ಅಸಮರ್ಪಕ ನಿರ್ವಹಣೆಯಿಂದಾಗಿ ವಾಹನ ಸವಾರರಿಗೆ ಇದು ನಿತ್ಯವೂ ಸಂಕಷ್ಟದ ಹಾದಿಯಾಗಿದೆ.

ಕೆಂಗೇರಿ ವೃತ್ತದಿಂದ ಟೌನ್‌ಹಾಲ್ ತಲುಪುವ 17 ಕಿ.ಮೀ ಉದ್ದದ ಮಾರ್ಗದಲ್ಲಿ 13 ಜಂಕ್ಷನ್‌ಗಳಲ್ಲಿ ಸದಾ ಹೆಚ್ಚಿನ ದಟ್ಟಣೆ ಸದಾ ಇರುತ್ತದೆ. ನಾಲ್ಕೈದು ಜಂಕ್ಷನ್‌ಗಳಲ್ಲಂತೂ ವಾಹನಗಳು ನಿಂತಿರುತ್ತವೆ. ಇದರಿಂದ, ದಿನದ ಬಹುತೇಕ ಸಂದರ್ಭದಲ್ಲಿ ದಟ್ಟಣೆ ಉಂಟಾಗುತ್ತಿದೆ.

ಉತ್ತರಹಳ್ಳಿಯಿಂದ ಮೈಸೂರು ರಸ್ತೆ ಸಂಪರ್ಕಿಸುವ ಕೆಂಗೇರಿ ವೃತ್ತದಲ್ಲಿ ಅತಿಯಾದ ವಾಹನ ದಟ್ಟಣೆ ಇರುತ್ತದೆ. ಇದು ಉತ್ತರಹಳ್ಳಿಯಿಂದ ಮೈಸೂರು ಕಡೆಗೆ ಹಾಗೂ ಜ್ಞಾನಭಾರತಿ ಕಡೆಗೆ, ಕೆಂಗೇರಿ ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಕೆಂಗೇರಿ ಉಪನಗರದ ಕಡೆಗೆ, ಅದಕ್ಕೆ ವಿರುದ್ಧವಾಗಿರುವ ನಗರ ಪ್ರವೇಶ ಮತ್ತು ಕೆಂಗೇರಿ ಪಟ್ಟಣದ ಒಳಗೆ ಹೋಗುವ ವಾಹನಗಳ ಜಂಕ್ಷನ್. ಇಲ್ಲಿ ದ್ವಿಚಕ್ರ ವಾಹನ ಹಾಗೂ ಭಾರಿ ವಾಹನಗಳ ಓಡಾಟ ಹೆಚ್ಚಾಗಿರುವುದು ಹಾಗೂ ರಸ್ತೆಯ ಅವ್ಯವಸ್ಥೆಯಿಂದ ಸಂಚಾರ ಅಸ್ತವ್ಯಸ್ತವಾಗಿರುತ್ತದೆ.

ಜ್ಞಾನಭಾರತಿ ಜಂಕ್ಷನ್ ಅತಿ ಕಿರಿದಾಗಿದ್ದು, ಇಲ್ಲಿ ಆರಂಭವಾಗುವ ವಾಹನಗಳ ಸಾಲು ರಾಜರಾಜೇಶ್ವರಿನಗರ ಆರ್ಚ್‌ವರೆಗೆ ತಲುಪುತ್ತದೆ. ಆರ್ಚ್ ಜಂಕ್ಷನ್‌ನಲ್ಲಿ ಸಿಗ್ನಲ್‌ಮುಕ್ತ ಸಂಚಾರಕ್ಕೆ ಮೇಲ್ಸೇತುವೆ ಕಾಮಗಾರಿ ನಡೆಯುತ್ತಿರುವುದರಿಂದ ದಟ್ಟಣೆಗೆ ಇದರ ಕೊಡುಗೆ ಹೆಚ್ಚಾಗಿದೆ.

ಇನ್ನು ನಾಯಂಡಹಳ್ಳಿ ಸಮೀಪ ಮೇಲ್ಸೇತುವೆ ಏರಲು ವಾಹನ ಸವಾರರು ಸಾಕಷ್ಟು ಪ್ರಯಾಸಪಡಬೇಕಿದೆ. ಇಲ್ಲಿ ಮೇಲ್ಸೇತುವೆ ಬಿಎಂಟಿಸಿ ತಂಗುದಾಣ ಇದ್ದು, ಬಸ್‌ಗಳನ್ನು ಅಡ್ಡಾದಿಡ್ಡಿ ನಿಲ್ಲಿಸುವುದರಿಂದ ಮೇಲ್ಸೇತುವೆ ಕಡೆಗೆ, ಕೆಳಭಾಗದ ವರ್ತುಲ ರಸ್ತೆ ಕಡೆಗೆ ಹೋಗುವ ವಾಹನಗಳಿಗೆ ತೊಂದರೆಯಾಗುತ್ತದೆ. ‘ಈ ಬಗ್ಗೆ ಹಲವು ಬಾರಿ ದೂರು ನೀಡಿದ್ದೇವೆ. ಕನಿಷ್ಠ ಒಬ್ಬರು ಸಂಚಾರ ಪೊಲೀಸರನ್ನಾದರೂ ಇಲ್ಲಿ ನಿಯೋಜಿಸಿ ಎಂದು ಒತ್ತಾಯಿಸಿದ್ದರೂ, ಪೊಲೀಸರು ಕ್ರಮ ಕೈಗೊಂಡಿಲ್ಲ’ ಎಂದು ದೂರುತ್ತಾರೆ ಸ್ಥಳೀಯರು.

ಬಿಎಚ್‌ಇಎಲ್– ದೀಪಾಂಜಲಿ ನಗರ ಜಂಕ್ಷನ್‌ನಲ್ಲಿ ವಿಜಯನಗರ ಕಡೆಗೆ ಹೋಗುವ ವಾಹನಗಳು, ಮೈಸೂರು ರಸ್ತೆಯಲ್ಲೇ ಮುಂದುವರಿಯುವ ವಾಹನಗಳು ಸೇರಿಕೊಳ್ಳುವುದರಿಂದ ದಟ್ಟಣೆ ಉಂಟಾಗುತ್ತಿದೆ. ಇನ್ನು ಟೋಲ್‌ಗೇಟ್, ಹಳೇಗುಡ್ಡದಹಳ್ಳಿ ಜಂಕ್ಷನ್‌ಗಳಲ್ಲಿ ಸಿಗ್ನಲ್ ಹಾಗೂ ನಿಯಮಮೀರಿ ಅಡ್ಡಾದಿಡ್ಡಿ ಸಂಚರಿಸುವ ದ್ವಿಚಕ್ರ ವಾಹನಗಳಿಂದ ದಟ್ಟಣೆ ಜೊತೆಗೆ ನಿತ್ಯ ಒಂದಲ್ಲ ಒಂದು ಅಪಘಾತ ಅಪಘಾತಗಳು ಸಂಭವಿಸುತ್ತಿರುತ್ತವೆ. ಸಿರ್ಸಿ ವೃತ್ತದಲ್ಲಿ ಮೇಲ್ಸೇತುವೆ ಏರಲು ವಾಹನಗಳಿಗೆ ಇಲ್ಲಿಯೂ ಪ್ರಯಾಸದಾಯಕ. ವೃತ್ತದ ಕೆಳಭಾಗದ ಸಿಗ್ನಲ್‌ನಿಂದ ದಟ್ಟಣೆ ಮೇಲ್ಸೇತುವೆಯ ಮುಂಭಾಗಕ್ಕೆ ಬಂದು ನಿಲ್ಲುತ್ತದೆ.

ಸಂಚಾರ ತ್ರಾಸ ಜನರ ಪ್ರಯಾಸ

ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿ ದಟ್ಟಣೆ

ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್.ಜಿ.



ಹೊರವರ್ತುಲ ರಸ್ತೆಯ ಪಿಇಎಸ್ ಕಾಲೇಜು ಬಳಿ ವಾಹನ ದಟ್ಟಣೆ -ಪ್ರಜಾವಾಣಿ ಚಿತ್ರ/ ರಂಜು ಪಿ

ರಾತ್ರಿಯಾದರೆ ದಟ್ಟಣೆ ಹೆಚ್ಚು

ಸ್ಯಾಟಲೈಟ್ ಬಸ್ ನಿಲ್ದಾಣದ ಸಮೀಪದ ಮೈಸೂರು ರಸ್ತೆಯಲ್ಲಿ ರಾತ್ರಿಯಾಗುತ್ತಿದ್ದಂತೆಯೇ ವಾಹನ ದಟ್ಟಣೆ ಮತ್ತಷ್ಟು ಹೆಚ್ಚಾಗುತ್ತದೆ. ಖಾಸಗಿ ಬಸ್‌ಗಳು ರಸ್ತೆಯಲ್ಲಿ ಅಕ್ರಮವಾಗಿ ನಿಲುಗಡೆ ಮಾಡುವುದರಿಂದ ಪ್ರತಿನಿತ್ಯ ರಾತ್ರಿ 12ರವರೆಗೂ ಸಂಚಾರ ಅಸ್ತವ್ಯಸ್ತವಾಗುತ್ತದೆ. ಸರ್ಕಾರಿ ಬಸ್‌ಗಳು ಒಂದು ಕ್ಷಣವೂ ಬಸ್ ನಿಲ್ದಾಣದಿಂದ ಹೊರಗೆ ನಿಲ್ಲುವಂತಿಲ್ಲ ಎಂದು ಪೊಲೀಸರು ಆದೇಶಿಸಿದ್ದಾರೆ. ಆದರೆ, ಹತ್ತಾರು ಖಾಸಗಿ ಬಸ್‌ಗಳು ವಾಹನ ಸಂಚಾರಕ್ಕೆ ಅಡ್ಡಿಯಾಗಿ ರಸ್ತೆಯಲ್ಲೇ ಸಾಲುಸಾಲಾಗಿ ನಿಂತಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಳ್ಳು ವುದಿಲ್ಲ. ಜೊತೆಗೆ, ಇಲ್ಲಿ ಹೋಟೆಲ್‌ಗಳು ಹೆಚ್ಚಾಗಿರುವುದರಿಂದ ಅವುಗಳ ಮುಂದೆಯೂ ವಾಹನಗಳು ನಿಂತಿರುತ್ತವೆ. ಈ ಅಕ್ರಮ ನಿಲುಗಡೆಯಿಂದ ಉಂಟಾಗುವ ಸಮಸ್ಯೆಯಿಂದ ಹಳೆಗುಡ್ಡದಹಳ್ಳಿ ಜಂಕ್ಷನ್‌ವರೆಗೂ ದಟ್ಟಣೆ ಉಂಟಾಗುತ್ತದೆ. ವಾರಾಂತ್ಯ, ಹಬ್ಬಗಳ ಸಂದರ್ಭದಲ್ಲಿ ದಟ್ಟಣೆ ಬಹಳಷ್ಟು ಹೆಚ್ಚಾಗುತ್ತದೆ.

ತಿರುವುಗಳಿಂದ ಸಮಸ್ಯೆ ಹಲವು

ಮೈಸೂರು ರಸ್ತೆಯ ಗಾಳಿ ಆಂಜನೇಯ ದೇವಸ್ಥಾನ ಹಾಗೂ ಹೊಸ ಗುಡ್ಡದಹಳ್ಳಿ ಸಮೀಪದಲ್ಲಿ ಪೈಪ್‌ಲೈನ್‌ರಸ್ತೆ ಹಾಗೂ ಹೊಸಗುಡ್ಡದಹಳ್ಳಿ ಒಳಭಾಗಕ್ಕೆ ಹೋಗಲು ವಾಹನಗಳು ತಿರುವು ಪಡೆದುಕೊಳ್ಳುತ್ತವೆ. ಇದರಿಂದ ಮುಖ್ಯರಸ್ತೆಯ ವಾಹನಗಳ ಸಂಚಾರ ಪೀಕ್ ಅವರ್‌ನಲ್ಲಿ ಬಹುತೇಕ ನಿಂತುಹೋಗುತ್ತದೆ. ಈ ಎರಡು ತಿರುವುಗಳಲ್ಲಿ ಬೆಳಿಗ್ಗೆ ಮತ್ತು ಸಂಜೆಯ ತಲಾ ಎರಡು ತಾಸು ಮಾತ್ರ ಸಂಚಾರ ಪೊಲೀಸರು ಇರುತ್ತಾರೆ. ಉಳಿದ ಸಮಯದಲ್ಲಿ ವಾಹನ ಸಂಚಾರ ಅಡ್ಡಾದಿಡ್ಡಿಯಾಗಿರುತ್ತದೆ. ದಟ್ಟಣೆ ಹೆಚ್ಚಿರುವ ಸಂದರ್ಭದಲ್ಲಿ ಈ ಎರಡು ಸ್ಥಳಗಳಲ್ಲಿ ತಿರುವು ತಡೆದರೆ ಸಾಕಷ್ಟು ದಟ್ಟಣೆ ನಿವಾರಣೆ ಆಗುತ್ತದೆ ಎಂಬುದು ಸ್ಥಳೀಯ ಅಂಗಡಿಯ ಮಾಲೀಕ ರಮೇಶ್ ಅವರ ಅಭಿಪ್ರಾಯ.

ಹೊರ ವರ್ತುಲ ರಸ್ತೆ; ತಣಿಯದ ದಟ್ಟಣೆ

ಕನಕಪುರ ರಸ್ತೆಯನ್ನು ಸಂಪರ್ಕಿಸುವ ಹೊರ ವರ್ತುಲ ರಸ್ತೆಯಲ್ಲಿ (ಡಾ. ಪುನೀತ್‌ರಾಜ್‌ಕುಮಾರ್ ರಸ್ತೆ) ಮೇಲ್ಸೇತುವೆ ಹಾಗೂ ಅಂಡರ್‌ಪಾಸ್‌ಗಳು ನಿರ್ಮಾಣವಾಗಿದ್ದರೂ ವಾಹನ ಸಂಚಾರ ಸುಗಮವಾಗಿಲ್ಲ. ನೈಸ್ ಜಂಕ್ಷನ್‌ನಲ್ಲಿ ಮೇಲ್ಸೇತುವೆ ಕಾಮಗಾರಿ ನಡೆಯುತ್ತಿದ್ದು, ದಟ್ಟಣೆಗೆ ಕೊಡುಗೆ ಇಲ್ಲಿಂದ ಆರಂಭವಾಗುತ್ತದೆ. ಇನ್ನು, ಗಿರಿನಗರಕ್ಕೆ ಹೋಗುವ ಜಂಕ್ಷನ್‌ನಲ್ಲಿ ಮೇಲ್ಸೇತುವೆ, ಸೀತಾ ವೃತ್ತದ ಕಡೆಗೆ ಹೋಗುವ ಜಂಕ್ಷನ್‌ನಲ್ಲಿ ಅಂಡರ್‌ಪಾಸ್‌ಗಳು ನಿರ್ಮಾಣವಾಗಿವೆ. ಈ ಜಂಕ್ಷನ್‌ಗಳಲ್ಲಿ ಸುಗಮಗೊಳ್ಳುವ ವಾಹನ ಸಂಚಾರಕ್ಕೆ ಇಟ್ಟುಮಡು ಜಂಕ್ಷನ್‌ನಲ್ಲಿ ತಡೆಯಾಗುತ್ತದೆ. ಇಲ್ಲಿನ ದಟ್ಟಣೆ ಹಿಂದಿನ ಅಂಡರ್‌ಪಾಸ್‌ವರೆಗೂ ತಲುಪುತ್ತದೆ. ಕತ್ತರಿಗುಪ್ಪೆ, ಕಾಮಾಕ್ಯ ಚಿತ್ರಮಂದಿರ ಜಂಕ್ಷನ್‌ನಲ್ಲಿ ಸಿಗ್ನಲ್‌ಗಳಿಂದ ವಾಹನಗಳು ನಿಲುಗಡೆಯಾಗುವುದರಿಂದ ದಟ್ಟಣೆ ಹೆಚ್ಚಾಗುತ್ತದೆ. ‘ಕಾಮಾಕ್ಯ ಹಾಗೂ ಕತ್ತರಿಗುಪ್ಪೆ ಜಂಕ್ಷನ್‌ಗಳನ್ನು ಸಿಗ್ನಲ್‌ಮುಕ್ತ ಮಾಡುವುದಾಗಿ ಜನಪ್ರತಿನಿಧಿಗಳು, ಚುನಾವಣೆಗೆ ಸ್ಪರ್ಧಿಸುವವರು ಹಲವು ಬಾರಿ ಭರವಸೆಗಳನ್ನು ನೀಡಿದ್ದಾರೆ. ಆದರೆ ಈ ಸಮಸ್ಯೆ ನೀಗಿಸಲು ಯೋಜನೆ ಅನುಷ್ಠಾನವಾಗಿಲ್ಲ’ ಎಂದು ಗಿರಿನಗರ ನಿವಾಸಿ ವೆಂಕಟೇಶ ರಾಜು ದೂರಿದರು.

ಬಿಡಬ್ಲ್ಯುಎಸ್‌ಎಸ್‌ಬಿ ನಿರ್ಲಕ್ಷ್ಯ

ಸಿರ್ಸಿ ಮೇಲ್ಸೇತುವೆ (ಬಾಲಗಂಗಾಧರನಾಥ ಸ್ವಾಮಿ ಮೇಲ್ಸೇತುವೆ) ಇಳಿದ ಮೇಲೆ ಎಸ್‌ಜೆಪಿ, ಎಸ್‌ಪಿ, ಒಟಿಸಿ ರಸ್ತೆಗಳಲ್ಲಿ ವಾಹನ ದಟ್ಟಣೆ ಬೆಳಿಗ್ಗೆಯಿಂದ ಮಧ್ಯರಾತ್ರಿಯವರೆಗೂ ಇರುತ್ತದೆ. ಈ ರಸ್ತೆಗಳು ಕಿರಿದಾಗಿದ್ದು, ಗುಂಡಿಗಳಿಂದ ಕೂಡಿವೆ. ಒಳಚರಂಡಿ ನೀರು ನಿತ್ಯವೂ ರಸ್ತೆಯ ಮೇಲೆ ಹರಿಯುತ್ತಿರುತ್ತದೆ. ಒಂದು ವರ್ಷದಿಂದ ಬಿಡಬ್ಲ್ಯುಎಸ್‌ಎಸ್‌ಬಿ ಇಲ್ಲಿ ಕಾಮಗಾರಿ ನಡೆಸುತ್ತಲೇ ಇದೆ. ಆದರೆ, ಸಮಸ್ಯೆ ಪರಿಹಾರವಾಗಿಲ್ಲ. ಗುಂಡಿ– ಜಲ್ಲಿ ಕಲ್ಲುಗಳ ಮಧ್ಯೆ ಒಳಚರಂಡಿಯ ಕೊಳಕಿನ ನಡುವೆ ನಾಗರಿಕರು ಸಂಚಾರಿಸಬೇಕಿದೆ. ಬಸ್‌ಗಳು ಹೆಚ್ಚಾಗಿ ಈ ರಸ್ತೆಗಳಲ್ಲಿ ಸಂಚರಿಸುವುದರಿಂದ ಕಿರಿದಾದ ರಸ್ತೆಯಲ್ಲಿ ತಿರುವು ಪಡೆಯಲು ಸಮಯವಾಗುತ್ತದೆ. ಇದರಿಂದಾಗಿ ಮೇಲ್ಸೇತುವೆ ಮೇಲೂ ವಾಹನಗಳು ಸಾಲು ನಿಲ್ಲುತ್ತವೆ.

ಸಿಲ್ವರ್ ಜುಬಿಲಿ ರಸ್ತೆಯಲ್ಲಿ ಹರಿಯುತ್ತಿರುವ ಒಳಚರಂಡಿ ನೀರು

ಸುದ್ದಿ 2 ನಿಮಿಷ

‘ಈಗ ಸಮಸ್ಯೆ ಬಗೆಹರಿದಿದೆ’

ದಾವಣಗೆರೆ: ‘ಲಿಂಗಾಯತ ಅಧಿಕಾರಿಗಳಿಗೆ ಸಂಬಂಧಿಸಿದ ಸಮಸ್ಯೆ ಬಗೆಹರಿದಿದೆ. ಅದು ಮುಗಿದ ಅಧ್ಯಾಯ’ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

ಬೆಂಗಳೂರಿಗೆ ತೆರಳುವ ಮುನ್ನ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಾಮಾನ್ಯವಾಗಿ ಭೇಟಿ ಮಾಡುತ್ತೇನೆ. ಈಗಲೂ ಭೇಟಿಗೆ ಹೊರಟಿದ್ದೇನೆ, ಅದರಲ್ಲೇನೂ ವಿಶೇಷವಿಲ್ಲ’ ಎಂದು ತಿಳಿಸಿದರು.

‘ಇತ್ತೀಚೆಗೆ ದಾವಣಗೆರೆಗೆ ಬಂದಿದ್ದ ಸಚಿವ ಈಶ್ವರ ಖಂಡ್ರೆ ಅವರು ನನ್ನೊಂದಿಗೆ ಯಾವುದೇ ವಿಷಯ ಚರ್ಚಿಸಿಲ್ಲ. ಅವರೇನೂ ನನ್ನನ್ನು ಸಮಾಧಾನಪಡಿಸಿಲ್ಲ. ಸುಮ್ಮನೆ ರಾಮಾಯಣ ಮಾಡಬೇಡಿ’ ಎಂದರು.

‘ಈ ಸರ್ಕಾರದಲ್ಲಿ ವೀರಶೈವ ಲಿಂಗಾಯತ ಅಧಿಕಾರಿಗಳದ್ದು ನಾಯಿ ಪಾಡಾಗಿದೆ’ ಎಂಬ ಹೇಳಿಕೆಯಿಂದ ಉಂಟಾದ ವಿವಾದಕ್ಕೆ ತೆರೆ ಎಳೆಯಲು ಸಿದ್ದರಾಮಯ್ಯ ಮುಂದಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಶಾಮನೂರು ಶಿವಶಂಕರಪ್ಪ ಅವರೊಂದಿಗೆ ಚರ್ಚಿಸುವ ಇಂಗಿತ ವ್ಯಕ್ತಪಡಿಸಿದ್ದು, ಅವರ ಆಹ್ವಾನದ ಮೇರೆಗೆ ಶಿವಶಂಕರಪ್ಪ ಅವರು ಸೋಮವಾರ ಬೆಂಗಳೂರಿಗೆ ತೆರಳಿದರು.

ಸೋಮಣ್ಣಗೆ ಸೂಕ್ತ ಸ್ಥಾನಮಾನ ಸಿಗಬಹುದು: ಶಾಸಕ ಮುನಿರತ್ನ

ಬೆಂಗಳೂರು: ಮಾಜಿ ಸಚಿವ ವಿ.ಸೋಮಣ್ಣ ಅವರಿಗೆ ಅನ್ಯಾಯವಾಗಿದೆ. ಅವರಿಗೆ ಚುನಾವಣೆಯಲ್ಲಿ ಎರಡು ಕ್ಷೇತ್ರಗಳ ಬದಲಿಗೆ ಒಂದೇ ಕ್ಷೇತ್ರ ನೀಡಬಹುದಿತ್ತು. ಮುಂದಿನ ದಿನಗಳಲ್ಲಿ ಅವರಿಗೆ ಪಕ್ಷ ಸೂಕ್ತ ಸ್ಥಾನಮಾನ ನೀಡಬಹುದು ಎಂದು ಬಿಜೆಪಿ ಶಾಸಕ ಮುನಿರತ್ನ ಹೇಳಿದ್ದಾರೆ.

ಶಾಸಕ ಎಸ್.ಟಿ.ಸೋಮಶೇಖರ್ ಅವರು ಜೆಡಿಎಸ್ ಜತೆಗಿನ ಮೈತ್ರಿ ಬಗ್ಗೆ ಟೀಕಿಸಿರುವುದನ್ನು ಪ್ರಸ್ತಾಪಿಸಿದ ಮುನಿರತ್ನ, ‘ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಿಸಿದಾಗ ಏಕೆ ಪ್ರಶ್ನಿಸಲಿಲ್ಲ. ಈಗ ಅವರು ಹೈಕಮಾಂಡ್ ನಮ್ಮ ಮಾತು ಕೇಳಬೇಕಿತ್ತು ಎನ್ನುತ್ತಾರೆ. ಆಗ ಅವರು ಯಾಕೆ ಈ ಮಾತು ಹೇಳದೇ ಸುಮ್ಮನಿದ್ದರು’ ಎಂದು ಪ್ರಶ್ನಿಸಿದರು.

ಮೈತ್ರಿ ಬಗ್ಗೆ ಹೈಕಮಾಂಡ್ ಸರಿಯಾದ ಸಮಯದಲ್ಲಿ ಸರಿಯಾದ ನಿರ್ಧಾರವನ್ನೇ ತೆಗೆದುಕೊಂಡಿದೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದಲ್ಲಿ ನೆಂಟರು ಜಾಸ್ತಿಯಾಗಿದ್ದಾರೆ. ಆದರೆ ಅಕ್ಕಿ ಕಡಿಮೆ ಇದೆ. ಐದು ಕೆ.ಜಿ ಅಕ್ಕಿಯಾದರೂ ಸಿಗುತ್ತದಾ ಎಂದು ಲೆಟರ್ ಹೆಡ್ ಹಿಡಿದು ನಿಂತಿದ್ದಾರೆ. ಅಲ್ಲಿ ಸಿಕ್ಕಿಲ್ಲಾ ಎಂದರೆ, ಪಕ್ಕದ ಮನೆಯಲ್ಲಾದರೂ ಸಿಗುತ್ತದಾ ಎಂದು ಕಾದು ನಿಂತಿದ್ದಾರೆ ಎಂದು ಅವರು ಲೇವಡಿ ಮಾಡಿದರು.

ಹೋಟೆಲ್ ಮಾಲೀಕರ ಬಳಿ ₹1.47 ಕೋಟಿ ನಗದು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ) ವಂಚನೆ ಮಾಡುತ್ತಿದ್ದ ಪ್ರಕರಣದಲ್ಲಿ ಶೋಧನೆ ನಡೆಸಿದಾಗ ಹೋಟೆಲ್ ಮಾಲೀಕರೊಬ್ಬರ ಮನೆಯಲ್ಲಿ ₹ 1.47 ಕೋಟಿ ನಗದು ಪತ್ತೆಯಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯ ಕೆಲವು ಹೋಟೆಲ್ ಮಾಲೀಕರು ವಹಿವಾಟಿನ ಮಾಹಿತಿ ಘೋಷಿಸಿಕೊಳ್ಳದೇ ಜಿಎಸ್‌ಟಿ ವಂಚಿಸುತ್ತಿರುವುದು ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳ ಗಮನಕ್ಕೆ ಬಂದಿತ್ತು.

ಇದನ್ನು ಆಧರಿಸಿ, ಶೋಧ ನಡೆಸಿದಾಗ ಭಾರಿ ನಗದು ಸಿಕ್ಕಿದೆ. ಈ ಬಗ್ಗೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿತ್ತು. ಅವರು ನಗದು ವಶಪಡಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ ಎಂದು ಆಯುಕ್ತೆ ಸಿ. ಶಿಖಾ ತಿಳಿಸಿದ್ದಾರೆ.

‘ಖಚಿತ ಮಾಹಿತಿ ಆಧರಿಸಿ ಇಲಾಖೆಯ 50 ಅಧಿಕಾರಿಗಳ ತಂಡ ಹೊಸಕೋಟೆಯ ಕೆಲವು ಬಿರಿಯಾನಿ ಹೋಟೆಲ್ ಮತ್ತು ಮಾಂಸಾಹಾರದ ಹೋಟೆಲ್‌ಗಳ ಮೇಲೆ ದಾಳಿಮಾಡಿ ಶೋಧ ನಡೆಸಿದೆ. ಹೋಟೆಲ್ ಮಾಲೀಕರ ಮನೆಗಳಲ್ಲೂ ಶೋಧ ನಡೆಸಲಾಗಿದೆ. ಯುಪಿಐ ಪಾವತಿ ಖಾತೆಗಳನ್ನು ಬಳಸಿಕೊಂಡು ತೆರಿಗೆ ವಂಚಿಸುತ್ತಿರುವುದು ಕಂಡುಬಂದಿದೆ’ ಎಂದು ತಿಳಿಸಿದ್ದಾರೆ.

ಹೋಟೆಲ್‌ಗಳ ಮಾಲೀಕರು ಆಗಾಗ ಯುಪಿಐ ಪಾವತಿ ಖಾತೆಗಳನ್ನು ಬದಲಾಯಿಸಿ, ವಹಿವಾಟಿನ ನೈಜ ಮೊತ್ತವನ್ನು ಮುಚ್ಚಿಟ್ಟು ತೆರಿಗೆ ವಂಚಿಸುತ್ತಿದ್ದಾರೆ. ಒಬ್ಬ ಹೋಟೆಲ್ ಮಾಲೀಕ 30 ಕ್ಯೂಆರ್ ಕೋಡ್‌ಗಳನ್ನು ಹೊಂದಿರುವುದು ಪತ್ತೆಯಾಗಿದೆ. ಹೋಟೆಲ್‌ಗಳಲ್ಲಿನ ಮಾರಾಟ ವಹಿವಾಟಿನ ಲೆಕ್ಕಪತ್ರವನ್ನೂ ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ. ಬಿಲ್‌ಗಳನ್ನೂ ಸರಿಯಾಗಿ ನೀಡದೇ ತೆರಿಗೆ ವಂಚಿಸುತ್ತಿರುವುದು ಪತ್ತೆಯಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಕಾಂಗ್ರೆಸ್ ನಾಯಕರ ಸಂಸ್ಥೆಗಳಲ್ಲೂ ಎಸ್‌ಇಪಿ ಅಳವಡಿಸಲಿ: ನಾಗೇಶ್

ಪ್ರಜಾವಾಣಿ ವಾರ್ತೆ



ಬಿ.ಸಿ.ನಾಗೇಶ್

ಬೆಂಗಳೂರು: ರಾಜ್ಯ ಸರ್ಕಾರ ಎನ್‌ಇಪಿ ರದ್ದುಪಡಿಸಿ, ಜಾರಿಗೊಳಿಸಲು ಹೊರಟಿರುವ ರಾಜ್ಯ ಶಿಕ್ಷಣ ನೀತಿಯನ್ನು (ಎಸ್‌ಇಪಿ) ಸಚಿವರು, ಕಾಂಗ್ರೆಸ್ ಶಾಸಕರು ಹಾಗೂ ಅವರ ಪಕ್ಷದ ಇತರೆ ನಾಯಕರ ಒಡೆತನದ ಶಿಕ್ಷಣ ಸಂಸ್ಥೆಗಳಲ್ಲೂ ಅಳವಡಿಸಿಕೊಳ್ಳಬೇಕು ಎಂದು ಮಾಜಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಒತ್ತಾಯಿಸಿದರು.

ಪೀಪಲ್ಸ್ ಫೋರಂ ಆಫ್ ಕರ್ನಾಟಕ ಸಿದ್ಧಪಡಿಸಿರುವ ಪ್ರಸಕ್ತ ಶೈಕ್ಷಣಿಕ ವರ್ಷದ ಪಠ್ಯಗಳಲ್ಲಿನ ‘ಲೋಪಗಳ ಪಟ್ಟಿ’ ಬಿಡುಗಡೆ ಮಾಡಿ ಮಾತನಾಡಿದರು.

ರಾಜ್ಯ ಶಿಕ್ಷಣ ನೀತಿಯನ್ನು ಸರ್ಕಾರಿ ಶಾಲೆಗಳಲ್ಲಷ್ಟೇ ಜಾರಿಗೊಳಿಸಲು ಸಾಧ್ಯ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಎಂ.ಬಿ. ಪಾಟೀಲ, ಎಸ್.ಎಸ್. ಮಲ್ಲಿಕಾರ್ಜುನ್ ಸೇರಿದಂತೆ ಬಹುತೇಕ ಸಚಿವರ ಒಡೆತನದ ಶಾಲೆಗಳಲ್ಲಿ ಓದುವ ಮಕ್ಕಳಿಗೂ ಈ ನೀತಿ ಪರಿಚಯಿಸಬೇಕು ಎಂದು ಆಗ್ರಹಿಸಿದರು.

ಪ್ರಸಕ್ತ ವರ್ಷ ಸರ್ಕಾರಿ ಶಾಲೆಗಳಲ್ಲಿ 2.75 ಲಕ್ಷ ಮಕ್ಕಳು ಕಡಿಮೆಯಾಗಿದ್ದಾರೆ. ಆ ಮಕ್ಕಳು ಎಲ್ಲಿ ಹೋದರು ಎನ್ನುವ ಮಾಹಿತಿಯೇ ಸರ್ಕಾರದ ಬಳಿ ಇಲ್ಲ ಎಂದರು. ವಿಧಾನ ಪರಿಷತ್ ಸದಸ್ಯರಾದ ಅ. ದೇವೇಗೌಡ, ಚಿದಾನಂದ ಗೌಡ, ಪೀಪಲ್ಸ್ ಫೋರಂ ಅಧ್ಯಕ್ಷ ರಾಮಚಂದ್ರ ಶೆಟ್ಟಿ, ಕಾರ್ಯದರ್ಶಿ ಆನಂದಮೂರ್ತಿ ಇದ್ದರು.

ಮಧು ಬಂಗಾರಪ್ಪಗೆ ‘ಗೊಬೆಲ್ಸ್’ ಪದ ಬಳಕೆ

ರಾಜ್ಯ ಸರ್ಕಾರ ಅಳವಡಿಸಿದ ಪಾಠಗಳಲ್ಲಿ ಇರುವ ಲೋಪಗಳನ್ನು ಪೀಪಲ್ಸ್ ಫೋರಂ ಆಫ್ ಕರ್ನಾಟಕ ಪಟ್ಟಿ ಮಾಡಿದೆ. ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರನ್ನು ಗೊಬೆಲ್ಸ್ (ಜರ್ಮನಿಯ ಹಿಟ್ಲರ್‌ನ ಪ್ರಚಾರ ಸಚಿವ) ಎಂದು ಕರೆದಿದೆ. ಮುಸ್ಲಿಂ ಭ್ರಾತೃತ್ವದ ಪ್ರತಿಪಾದನೆ, ಮಕ್ಕಳು ಭವಿಷ್ಯದಲ್ಲಿ ಸೈನ್ಯ ಸೇರಲು ನಿರುತ್ಸಾಹ ಮೂಡಿಸುವುದು, ಭಾರತದ ಬಗ್ಗೆ ನೀರಸ ಕಥಾವಸ್ತು ಇರುವ ಪಾಠ ಅಳವಡಿಸಿರುವುದು, ಆರ್ಯರನ್ನು ವಿದೇಶಿಯರಂತೆ ಬಿಂಬಿಸಿರುವುದು. ಸಭಾ, ಸಮಿತಿಯ ಪ್ರಾಮುಖ್ಯತೆ ಇಲ್ಲವೆಂದು ನಂಬಿಸಿರುವುದು ಸರಸ್ವತಿ ನದಿಯ ತಪ್ಪು ವ್ಯಾಖ್ಯಾನ ವೇದಗಳ ವಿಭಜನೆ ಸೇರಿ ಹಲವು ತಪ್ಪು ಸೇರಿಸಲಾಗಿದೆ ಎಂದು ಪಟ್ಟಿ ಮಾಡಲಾಗಿದೆ.

ಮೆಟ್ರೊ ರೈಲಿನಲ್ಲಿ ಲೈಂಗಿಕ ಕಿರುಕುಳ: ಪ್ರಕರಣ ವರ್ಗ

ಬೆಂಗಳೂರು: ‘ಮೆಟ್ರೊ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ ಅಪರಿಚಿತನೊಬ್ಬ ಲೈಂಗಿಕ ಕಿರುಕುಳ ನೀಡಿದ್ದಾನೆ’ ಎಂದು ಆರೋಪಿಸಿ ವಿದ್ಯಾರ್ಥಿನಿ ದೂರು ನೀಡಿದ್ದು, ಅದರನ್ವಯ ದಾಖಲಾಗಿರುವ ಪ್ರಕರಣವನ್ನು ಹಲಸೂರು ಗೇಟ್ ಠಾಣೆಗೆ ವರ್ಗಾಯಿಸಲಾಗಿದೆ.

‘ನಗರದ ಕಾಲೇಜೊಂದರ 20 ವರ್ಷದ ವಿದ್ಯಾರ್ಥಿನಿ, ಲೈಂಗಿಕ ಕಿರುಕುಳದ ಬಗ್ಗೆ ದೂರು ನೀಡಿದ್ದಾರೆ. ಕಬ್ಬನ್ ಪಾರ್ಕ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು, ಕೃತ್ಯ ನಡೆದ ಸ್ಥಳದ ಆಧಾರದ ಮೇಲೆ ಹಲಸೂರು ಗೇಟ್ ಠಾಣೆಗೆ ಇತ್ತೀಚೆಗೆ ವರ್ಗಾಯಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ದೂರಿನ ವಿವರ: ‘ಸೆ. 9ರಂದು ಸಂಜೆ ಸ್ನೇಹಿತೆ ಜೊತೆ ಮೆಜೆಸ್ಟಿಕ್‌ಗೆ ಹೋಗಲು, ಎಂ.ಜಿ. ರಸ್ತೆಯಲ್ಲಿರುವ ಮೆಟ್ರೊ ನಿಲ್ದಾಣದಲ್ಲಿ ರೈಲು ಹತ್ತಿದ್ದೆ. ಸೆಂಟ್ರಲ್ ಕಾಲೇಜು ನಿಲ್ದಾಣ ಬಳಿ ರೈಲು ಚಲಿಸುತ್ತಿದ್ದಾಗ, ಹಿಂದಗಡೆಯಲ್ಲಿದ್ದ ಆರೋಪಿ ತನ್ನ ಖಾಸಗಿ ಭಾಗವನ್ನು ತಾಗಿಸಿ ಅನುಚಿತವಾಗಿ ವರ್ತಿಸಿ ಲೈಂಗಿಕ ಕಿರುಕುಳ ನೀಡಿದ್ದ’ ಎಂದು ಯುವತಿ ದೂರಿನಲ್ಲಿ ತಿಳಿಸಿದ್ದಾರೆ.

‘ಘಟನೆಯಿಂದ ಭಯವಾಗಿತ್ತು. ಸ್ಥಳದಿಂದ ಸ್ವಲ್ಪ ದೂರಕ್ಕೆ ಹೋಗಿ ಸ್ನೇಹಿತೆ ಪಕ್ಕದಲ್ಲಿ ನಿಂತುಕೊಂಡಿದ್ದೆ. ಆಗಲೂ ಆರೋಪಿ ನನ್ನನ್ನು ದುರುಗುಟ್ಟಿ ನೋಡುತ್ತಿದ್ದ. ಇದರಿಂದ ಭಯವಾಗಿತ್ತು. ಮೆಜೆಸ್ಟಿಕ್ ನಿಲ್ದಾಣದಲ್ಲಿ ಇಳಿದು ಮನೆಗೆ ಹೋದೆ. ಘಟನೆಯಿಂದ ಖಿನ್ನತೆಗೆ ಒಳಗಾಗಿದ್ದೆ. ಪೋಷಕರಿಗೆ ವಿಷಯ ತಿಳಿಸಿದ್ದೆ. ಅವರ ಸಲಹೆಯಂತೆ ಠಾಣೆಗೆ ದೂರು ನೀಡುತ್ತಿದ್ದೇನೆ’ ಎಂದು ಯುವತಿ ಉಲ್ಲೇಖಿಸಿದ್ದಾರೆ.

ವಿಮಾನದಲ್ಲಿ ಬಂದು ಕಳವು ನೇಪಾಳದ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ನೇಪಾಳದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಮೋಹನ್ ಬಿಶ್ವಕರ್ಮ (29) ಹಾಗೂ ಗೋರಕ್ ಕಾಲೂ ಬಿಶ್ವಕರ್ಮ (38) ಬಂಧಿತರು. ಇವರಿಬ್ಬರಿಂದ ₹10.3 ಲಕ್ಷ ಮೌಲ್ಯದ 124.5 ಗ್ರಾಂ ಚಿನ್ನಾಭರಣ, 3 ಕೆ.ಜಿ ಬೆಳ್ಳಿ ಸಾಮಗ್ರಿ ಹಾಗೂ ₹ 2 ಸಾವಿರ ನಗದು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮೋಹನ್, ಗೋರಕ್ ಕಾಲೂ ಅಪರಾಧ ಹಿನ್ನೆಲೆಯುಳ್ಳವರು. ವಿದ್ಯಾರಣ್ಯಪುರ, ಪೀಣ್ಯ ಸೇರಿ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ನಡೆದಿದ್ದ 6 ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದರು’ ಎಂದರು.

‘ಹೆಸರಘಟ್ಟ ಬಳಿಯ ದಾಸೇನಹಳ್ಳಿ ಕ್ರಾಸ್‌ನಲ್ಲಿರುವ ಮನೆಯೊಂದರಲ್ಲಿ ಜುಲೈ 16ರಂದು ಕಳ್ಳತನ ನಡೆದಿತ್ತು. ತನಿಖೆ ಕೈಗೊಂಡಾಗ, ಆರೋಪಿಗಳ ಸುಳಿವು ಸಿಕ್ಕಿತ್ತು. ಕಳ್ಳತನದ ಬಳಿಕ ಪರಾರಿಯಾಗಿ ನೇಪಾಳಕ್ಕೆ ಹೋಗಿದ್ದ ಆರೋಪಿಗಳು, ಪುನಃ ಕಳ್ಳತನ ಎಸಗಲು ಇತ್ತೀಚೆಗೆ ನಗರಕ್ಕೆ ಬಂದಿದ್ದರು. ಇದೇ ಸಂದರ್ಭದಲ್ಲಿ ಇಬ್ಬರನ್ನೂ ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ವಿಮಾನ ನಿಲ್ದಾಣ ಬಳಿ ಮನೆ: ‘ಆರೋಪಿ ಮೋಹನ್, ನೇಪಾಳದಲ್ಲಿ ವಿಮಾನ ನಿಲ್ದಾಣದ ಬಳಿಯೇ ಮನೆ ಹೊಂದಿದ್ದಾನೆ. ಕೆಲ ವರ್ಷಗಳ ಹಿಂದೆ ಮುಂಬೈಗೆ ಹೋಗಿದ್ದ ಈತ, ಹೋಟೆಲ್‌ನಲ್ಲಿ ಕೆಲಸ ಮಾಡಿದ್ದ. ಗೋರಕ್ ಸ್ನೇಹ ಬೆಳೆಯುತ್ತಿದ್ದಂತೆ, ಇಬ್ಬರೂ ಸೇರಿ ಕಳ್ಳತನ ಮಾಡಲಾರಂಭಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ವಿಮಾನದ ಮೂಲಕ ಆಗಾಗ ಬೆಂಗಳೂರಿಗೆ ಬರುತ್ತಿದ್ದ ಇಬ್ಬರೂ ಸೆಕ್ಯುರಿಟಿ ಕೆಲಸಕ್ಕೆ ಸೇರುತ್ತಿದ್ದರು. ಬೀಗ ಹಾಕಿರುತ್ತಿದ್ದ ಹಾಗೂ ಅಂಗಳದಲ್ಲಿ ರಂಗೋಲಿ ಹಾಕಿರದ ಮನೆಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದರು. ನಂತರ, ವಿಮಾನದಲ್ಲಿ ಪರಾರಿಯಾಗುತ್ತಿದ್ದರು.’

‘ಆರೋಪಿ ಗೋರಕ್, ಗುಜರಾತ್ ಹಾಗೂ ಮಹಾರಾಷ್ಟ್ರದಲ್ಲೂ ಕೆಲ ಮನೆಗಳಲ್ಲಿ ಕಳ್ಳತನ ಮಾಡಿದ್ದ’ ಎಂದರು.

ಹಿಟ್ ಆ್ಯಂಡ್ ರನ್ ಮಾಡಿಲ್ಲ: ನಾಗಭೂಷಣ್

ಪ್ರಜಾವಾಣಿ ವಾರ್ತೆ

ನಾಗಭೂಷಣ್

ಬೆಂಗಳೂರು: ಉತ್ತರಹಳ್ಳಿಯ ವಸಂತಪುರ ಮುಖ್ಯರಸ್ತೆಯಲ್ಲಿ ಕಳೆದ ಶನಿವಾರ (ಸೆ.30) ನಡೆದ ಅಪಘಾತ ಪ್ರಕರಣಕ್ಕೆ ಸಂಬಂಧಿಸಿ ಪ್ರತಿಕ್ರಿಯೆ ನೀಡಿರುವ ನಟ ನಾಗಭೂಷಣ್, ‘ನಾನು ಹಿಟ್ ಆ್ಯಂಡ್ ರನ್ ಮಾಡಿಲ್ಲ. ಇದೊಂದು ಆಕಸ್ಮಿಕ ಘಟನೆ. ಅಪಘಾತಕ್ಕೆ ಈಡಾದವರ ಕುಟುಂಬದವರಿಗೆ ನನ್ನಿಂದ ಏನು ಸಹಾಯವಾಗುತ್ತದೆಯೋ ಅದನ್ನು ಮಾಡುತ್ತೇನೆ’ ಎಂದಿದ್ದಾರೆ.

ಘಟನೆಯಲ್ಲಿ ಎಸ್. ಪ್ರೇಮಾ (48) ಎನ್ನುವವರು ಮೃತಪಟ್ಟಿದ್ದರು. ಪ್ರೇಮಾ ಅವರ ಪತಿ ಬಿ. ಕೃಷ್ಣ ಗಂಭೀರವಾಗಿ ಗಾಯಗೊಂಡಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ. ‘ಹಲವರು ಹಿಟ್ ಆ್ಯಂಡ್ ರನ್ ಎಂಬ ಆರೋಪ ಮಾಡುತ್ತಿದ್ದಾರೆ. ಅಪಘಾತವಾದ ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಉದ್ದೇಶದಿಂದ ಸ್ವಲ್ಪ ಕಿತ್ತು ಬಂದಿದ್ದ ಕಾರಿನ ಬಂಪರ್ ಅನ್ನು ನಾನು ಪೂರ್ಣ ಕಿತ್ತೆಸೆದೆ. ಅವರನ್ನು ಆಸ್ಪತ್ರೆಗೆ ನಾನೇ ಸೇರಿಸಿದೆ. ಕರೆದೊಯ್ಯುವಾಗಲೇ ನಾನು ಪೊಲೀಸರಿಗೆ ಘಟನೆ ಕುರಿತು ಮಾಹಿತಿ ನೀಡಿದ್ದೆ. ಮಹಿಳೆ ಮೃತಪಟ್ಟ ವಿಷಯವನ್ನು ಕೇಳಿದ ಸಂದರ್ಭದಲ್ಲೇ ನಾನು ಮಾನಸಿಕವಾಗಿ ಕುಸಿದುಹೋಗಿದ್ದೆ’ ಎನ್ನುತ್ತಾ ನಾಗಭೂಷಣ್ ಗದ್ಗದಿತರಾದರು.

‘ಪೊಲೀಸರು, ಅಪಘಾತದಲ್ಲಿ ಮೃತಪಟ್ಟವರ ಸಂಬಂಧಿಕರ ಮುಂದೆಯೇ ನಾನು ಕುಡಿದಿದ್ದೇನೆಯೇ ಎಂದು ಪರೀಕ್ಷೆ ಮಾಡಿಸಿದ್ದರು. ಅದರಲ್ಲಿ ನಾನು ಕುಡಿದಿಲ್ಲ ಎಂದು ದಾಖಲಾಗಿತ್ತು. ನಂತರ ಪೊಲೀಸರ ಸೂಚನೆಯಂತೆ ರಕ್ತ ಪರೀಕ್ಷೆಯನ್ನೂ ಮಾಡಿಸಿದೆ. ಅಪಘಾತವಾದ ಕ್ಷಣದಲ್ಲಿ ಒಬ್ಬ ಮನುಷ್ಯನಾಗಿ ಏನು ಮಾಡಲು ಸಾಧ್ಯವೋ ಅದನ್ನು ಮಾಡಿದೆ. ಓಡಿಹೋಗಲಿಲ್ಲ. ಆ ಎರಡು ಜೀವಗಳನ್ನೂ ಉಳಿಸಬೇಕು ಎನ್ನುವುದೇ ಉದ್ದೇಶವಾಗಿತ್ತು. ನನಗೆ ಆ ನೋವು ಕಾಡುತ್ತಿದೆ. ನನಗಿಂತ ಹೆಚ್ಚು ನೋವು ಅವರಿಗಿದೆ ಎಂಬ ಅರಿವೂ ಇದೆ’ ಎಂದರು.

ಕುಟುಂಬದವರನ್ನು ಯಾಕಿನ್ನೂ ಭೇಟಿಯಾಗಿಲ್ಲ ಎನ್ನುವ ಪ್ರಶ್ನೆಗೆ ಪ್ರತಿಕ್ರಿಯಿಸಿದ ನಟ, ‘ಏನೆಂದು ಮಾತನಾಡಿಸಲಿ? ಅದಕ್ಕೂ ಧೈರ್ಯಬೇಕು. ಘಟನೆಯಿಂದ ಚೇತರಿಸಿಕೊಳ್ಳಲು ನನಗೂ ಸಮಯ ಬೇಕು. ನಮ್ಮ ಕಡೆಯಿಂದ ಸಹಾಯ ಬೇಕಿದ್ದರೆ ಕೇಳಿ ಎಂದು ಗೊತ್ತಿರುವವರ ಕಡೆಯಿಂದ ಆ ಕುಟುಂಬವನ್ನು ಸಂಪರ್ಕಿಸಿದ್ದೇನೆ. ಐಸಿಯುನಲ್ಲಿರುವವರ ಆರೋಗ್ಯ ವಿಚಾರಿಸುತ್ತಿದ್ದೇವೆ’ ಎಂದರು.

ಆರ್‌ಟಿಒ ವರದಿ ತಿಳಿದಿಲ್ಲ: ‘ವೇಗಕ್ಕೆ ಸಂಬಂಧಪಟ್ಟಂತೆ ಆರ್‌ಟಿಒ ನೀಡಿದ ವರದಿ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಆ ರಸ್ತೆಯಲ್ಲಿ ಅಷ್ಟು ವೇಗವಾಗಿ ಬರಲು ಸಾಧ್ಯವಿಲ್ಲ. ಜೊತೆಗೆ ರಸ್ತೆಯಲ್ಲಿ ಒಂದು ವಾಹನವೂ ಇತ್ತು. ನನ್ನ ವಾಹನಕ್ಕೆ ಸ್ವಲ್ಪ ಜಾಗವೇ ಇತ್ತು. ಹೀಗಿರುವಾಗ ಅವರಿಬ್ಬರೂ ಏಕಾಏಕಿ ಅಡ್ಡ ಬಂದರು’ ಎಂದು ನಾಗಭೂಷಣ್ ಹೇಳಿದರು.

ರ್‍ಯಾಂಕ್ ಪಡೆದ 59 ವಿದ್ಯಾರ್ಥಿಗಳಿಗೆ ಘಟಿಕೋತ್ಸವದಲ್ಲಿ ಚಿನ್ನದ ಪದಕ ನೀಡಿ ಗೌರವ

ರೇವಾ ವಿವಿ: ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿಕ್ಷಣದ ಸದುಪಯೋಗ ಪಡೆದುಕೊಂಡು ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ವಿಯಾಗುವುದರ ಮೂಲಕ ದೇಶಕ್ಕೆ ಏನಾದರೂ ಕೊಡುಗೆ ನೀಡುವಂತಾಗಲಿ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ನಗರದಲ್ಲಿ ಸೋಮವಾರ ರೇವಾ ವಿಶ್ವವಿದ್ಯಾಲಯ ಆಯೋಜಿಸಿದ್ದ 8ನೇ ಘಟಿಕೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಶಿಕ್ಷಣವೆಂಬುದು ವಿದ್ಯಾರ್ಥಿಗಳು ಉದ್ಯೋಗ ಪಡೆದುಕೊಳ್ಳಲು ಮತ್ತು ಉತ್ತಮ ಜೀವನ ರೂಪಿಸಿಕೊಳ್ಳಲು ಇರುವ ಒಂದು ಸಾಧನವಾಗಿದೆ. ರೇವಾ ವಿಶ್ವವಿದ್ಯಾಲಯದಲ್ಲಿ ಗುಣಮಟ್ಟದ ಶಿಕ್ಷಣ, ಉನ್ನತ ತಾಂತ್ರಿಕ ಸಲಕರಣೆಗಳು, ಅತ್ಯಾಧುನಿಕ ಪ್ರಯೋಗಾಲಯವಿದೆ. ಇಲ್ಲಿ ಶಿಕ್ಷಣಕ್ಕೆ ಪೂರಕವಾದ ಕೌಶಲ ಅಭಿವೃದ್ಧಿ ಕಾರ್ಯಕ್ರಮಗಳಿವೆ. ಜೊತೆಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗುತ್ತಿದೆ. ವಿದ್ಯಾರ್ಥಿಗಳು ಇದರ ಸಂಪೂರ್ಣ ಲಾಭ ಪಡೆದುಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಘಟಿಕೋತ್ಸವದ ಅಧ್ಯಕ್ಷತೆ ವಹಿಸಿದ್ದ ರಾಜ್ಯಪಾಲ ಥಾವರಚಂದ್ ಗೆಹಲೋತ್, ‘ವಿದ್ಯಾರ್ಥಿಗಳು ತಾವು ಪಡೆದ ಶಿಕ್ಷಣದಿಂದ ಉತ್ತಮ ಉದ್ಯೋಗ ಪಡೆದುಕೊಂಡು ದೇಶದ ಪ್ರಗತಿಗೆ ಕೊಡುಗೆ ನೀಡಬೇಕು. ರೇವಾ ವಿಶ್ವವಿದ್ಯಾಲಯವು ಪರಿಸರ ಜಾಗೃತಿ, ಮತದಾನ ಜಾಗೃತಿ ಮಾಡುವ ಮೂಲಕ ವಿದ್ಯಾರ್ಥಿಗಳಲ್ಲಿ ಉತ್ತಮ ಸಂಸ್ಕೃತಿಯನ್ನು ಬೆಳೆಸುತ್ತಿದೆ’ ಎಂದರು.

ವಿಶ್ವವಿದ್ಯಾಲಯದ ಕುಲಾಧಿಪತಿ ಪಿ. ಶ್ಯಾಮರಾಜು, ‘ವಿಶ್ವವಿದ್ಯಾಲಯದ 8ನೇ ಘಟಿಕೋತ್ಸವದಲ್ಲಿ 3,050 ವಿದ್ಯಾರ್ಥಿಗಳಿಗೆ ಪದವಿ, 1,183 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿ, 56 ವಿದ್ಯಾರ್ಥಿಗಳಿಗೆ ಪಿ.ಎಚ್‌ಡಿ ಪದವಿ ಸೇರಿದಂತೆ ಒಟ್ಟು 4,289 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. 47 ವಿದ್ಯಾರ್ಥಿಗಳಿಗೆ ರೇವಾ ಅಕಾಡೆಮಿ ಫಾರ್ ಕಾರ್ಪೊರೇಟ್ ಎಕ್ಸಲೆನ್ಸ್‌ನಿಂದ ಬಂದವರು ಇದ್ದಾರೆ.

ವಿವಿಧ ವಿಭಾಗಗಳಲ್ಲಿ ಉತ್ತಮ ರ್‍ಯಾಂಕ್ ಪಡೆದ 59 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು’ ಎಂದು ಮಾಹಿತಿ ನೀಡಿದರು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಅಧ್ಯಕ್ಷ ಟಿ.ಜಿ.ಸೀತಾರಾಂ, ವಿಶ್ವವಿದ್ಯಾಲಯದ ಕುಲಪತಿ ಎಂ. ಧನಂಜಯ, ಕುಲಸಚಿವ ಎನ್.ರಮೇಶ್ ಇದ್ದರು.

ರೇವಾ ವಿಶ್ವವಿದ್ಯಾಲಯ ಸೋಮವಾರ ಆಯೋಜಿಸಿದ್ದ 8ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಡಾ.ಎಂ.ಸಿ. ಸುಧಾಕರ್, ಥಾವರಚಂದ್ ಗೆಹಲೋತ್, ಪಿ. ಶ್ಯಾಮರಾಜು, ಟಿ.ಜಿ.ಸೀತಾರಾಂ, ಎಂ. ಧನಂಜಯ, ಎನ್.ರಮೇಶ್ ಇದ್ದಾರೆ.

ಜೆಡಿಎಸ್ ಜತೆಗಿನ ಮೈತ್ರಿಗೆ ಕಮಲ ಪಾಳಯದಲ್ಲಿ ಅಪಸ್ವರ • ವರಿಷ್ಠರ ನಿರ್ಣಯ ಪ್ರಶ್ನಿಸಿದ ಸದಾನಂದಗೌಡ

ಬಿಜೆಪಿ ಒಕ್ಕಲಿಗ ನಾಯಕರಿಗೆ 'ಮೈತ್ರಿ' ಇಕ್ಕಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಜತೆಗಿನ ಮೈತ್ರಿ ಬಿಜೆಪಿಯಲ್ಲಿನ ಒಕ್ಕಲಿಗ ಸಮುದಾಯದ ನಾಯಕರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಈ ಸಮುದಾಯದ ನಾಯಕರ ಪರವಾಗಿ ಸಂಸದ ಡಿ.ವಿ. ಸದಾನಂದಗೌಡ ಅವರು ಪಕ್ಷದ ವರಿಷ್ಠರ ನಿರ್ಣಯವನ್ನು ಪ್ರಶ್ನಿಸಿರುವುದು ಬಿಜೆಪಿಯಲ್ಲಿ ಈಗ ಚರ್ಚೆಗೆ ಕಾರಣವಾಗಿದೆ.

ಆರಂಭದಲ್ಲಿ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಆರ್.ಅಶೋಕ ಸೇರಿದಂತೆ ಹಲವು ನಾಯಕರು ಮೈತ್ರಿಯನ್ನು ಸ್ವಾಗತಿಸಿದ್ದರು. ಆದರೆ, ಉಳಿದ ನಾಯಕರು, ಅದರಲ್ಲೂ ಒಕ್ಕಲಿಗ ನಾಯಕರು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಇದರ ಅರ್ಥ ವರಿಷ್ಠರ ತೀರ್ಮಾನ ಎಲ್ಲರಿಗೂ ಒಪ್ಪಿಗೆ ಆಗಿಲ್ಲ ಎಂದು ಪಕ್ಷದ ಮೂಲಗಳು ಹೇಳಿವೆ.

> ನಾವು ಎಲ್ಲ ಕೂತು ಚರ್ಚೆ ಮಾಡುತ್ತೇವೆ. ಎಲ್ಲರೂ ಚರ್ಚಿಸಿ ಪ್ರವಾಸದ ರೂಪುರೇಷೆ ಬಗ್ಗೆ ತೀರ್ಮಾನ ಮಾಡುತ್ತೇವೆ. ಎಲ್ಲರೂ ಒಟ್ಟಾಗಿ ಪ್ರವಾಸ ಮಾಡುತ್ತೇವೆ
>
> **ಬಸವರಾಜ ಬೊಮ್ಮಾಯಿ,** ಶಾಸಕ

ಕಾಂಗ್ರೆಸ್‌ಗೆ ಜಿಗಿಯಲು ತುದಿಗಾಲಿನಲ್ಲಿ ನಿಂತಿದ್ದ ಮತ್ತು ಮಾನಸಿಕವಾಗಿ ಕಾಂಗ್ರೆಸ್ ನಾಯಕರ ಜತೆಗಿದ್ದ ಶಾಸಕ ಎಸ್.ಟಿ.ಸೋಮಶೇಖರ್ ಅವರು ಬದಲಾದ ರಾಜಕೀಯ ಸನ್ನಿವೇಶದಲ್ಲಿ, ತಮ್ಮ ಧಾವಂತಕ್ಕೆ ಕಡಿವಾಣ ಹಾಕಿಕೊಂಡಿದ್ದು, ಜೆಡಿಎಸ್ ಜತೆಗಿನ ಮೈತ್ರಿಯನ್ನು ಟೀಕಿಸಿದ್ದಾರೆ. ಯಶವಂತಪುರ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಶಕ್ತಿ ಜೋರಾಗಿಯೇ ಇದೆ. ಇದು ಸೋಮಶೇಖರ್ ಅವರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಅಲ್ಲದೇ, ಹಾಸನ ಜಿಲ್ಲೆಯಲ್ಲಿ ಮಾಜಿ ಶಾಸಕರಾದ ಪ್ರೀತಂಗೌಡ ಮತ್ತು ಎ.ಟಿ.ರಾಮಸ್ವಾಮಿ ಅವರೂ ಜೆಡಿಎಸ್ ಜತೆಗಿನ ಮೈತ್ರಿಯನ್ನು ಟೀಕಿಸಿದ್ದಾರೆ.

ಮೈತ್ರಿ ಬಗ್ಗೆ ತಮ್ಮನ್ನು ವಿಶ್ವಾಸ ತೆಗೆದುಕೊಳ್ಳದ ಬಗ್ಗೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅಸಮಾಧಾನಗೊಂಡಿದ್ದಾರೆ. ಅಲ್ಲದೇ, ತಮ್ಮ ಪುತ್ರನಿಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಕೊಡಿಸಬೇಕು ಎಂದು ನಡೆಸಿರುವ ಪ್ರಯತ್ನಕ್ಕೆ ವರಿಷ್ಠರು ಸೊಪ್ಪು ಹಾಕದೇ ಇರುವುದು ಕೂಡ ಅಸಮಾಧಾನದ ಬೆಂಕಿಗೆ ತುಪ್ಪ ಸುರಿದಂತಾಗಿದೆ. ಹೀಗಾಗಿ ಮೈತ್ರಿ ಕುರಿತು ದ್ವಂದ್ವದ ಹೇಳಿಕೆಗಳನ್ನೂ ನೀಡಲಾರಂಭಿಸಿದ್ದಾರೆ ಎಂದು ಬಿಜೆಪಿ ಮುಖಂಡರು ಹೇಳುತ್ತಾರೆ.

ಪಕ್ಷದ ಕಾರ್ಯಕರ್ತರಲ್ಲೂ ಹೈಕಮಾಂಡ್ ನಡೆ ಸಮಾಧಾನ ತಂದಿಲ್ಲ. ಇದಕ್ಕೆ ಮುಖ್ಯ ಕಾರಣ ಕಳೆದ ವಿಧಾನಸಭೆ ಚುನಾವಣೆ ವೇಳೆಯಲ್ಲಿ ಜೆಡಿಎಸ್ ನಾಯಕರು ಅದರಲ್ಲೂ ಎಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಿರುದ್ಧ ವಾಗ್ದಾಳಿ ನಡೆಸಿದ್ದರು. ಅದಕ್ಕೂ ಹಿಂದೆ ಆರ್‌ಎಸ್‌ಎಸ್ ವಿರುದ್ಧ ಹೇಳಿಕೆಗಳನ್ನು ನೀಡಿದ್ದರು. ಈಗ ಅವರ ಜತೆ ಮೈತ್ರಿ ಮಾಡಿಕೊಂಡಿರುವುದು ಮುಜುಗರಕ್ಕೆ ಕಾರಣವಾಗಿದೆ ಎಂದು ಕೆಲವು ಕಾರ್ಯಕರ್ತರು ಅಭಿಪ್ರಾಯಪಟ್ಟಿದ್ದಾರೆ.

ಲೋಕಸಭೆ ಚುನಾವಣೆಯಲ್ಲಿ ಅತಿ ಹೆಚ್ಚು ಸ್ಥಾನಗಳನ್ನು ಗೆಲ್ಲಲು ಮೈತ್ರಿ ಅನುಕೂಲವಾಗಬಹುದು. ಆದರೆ, ಜೆಡಿಎಸ್ ನಾಯಕರು ಮೈತ್ರಿ ಮತ್ತು ನಾಯಕತ್ವದ ವಿಚಾರದಲ್ಲೂ ಪ್ರಾಮಾಣಿಕವಾಗಿರಬೇಕು ಎಂಬುದು ಬಿಜೆಪಿ ಕಾರ್ಯಕರ್ತರ ಆಗ್ರಹ.

ಜೆಡಿಎಸ್ ಸದ್ಯಕ್ಕೆ ಎನ್‌ಡಿಎ ಒಕ್ಕೂಟವನ್ನು ಸೇರುವ ಪ್ರಕ್ರಿಯೆ ಮಾತ್ರ ಆಗಿದೆ. ಎನ್‌ಡಿಎ ಒಕ್ಕೂಟವನ್ನು ಸೇರಿಸಿಕೊಳ್ಳುವ ವಿಚಾರವನ್ನು ವರಿಷ್ಠರು ರಾಜ್ಯದ ಪ್ರಮುಖ ನಾಯಕರ ಗಮನಕ್ಕೆ ತಂದಿದ್ದರು. ರಾಜ್ಯದಲ್ಲಿ ಸೀಟು ಹಂಚಿಕೆ ವಿಚಾರ ಬಂದಾಗ ರಾಜ್ಯ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಾರೆ ಎಂಬ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

ಬಿಎಸ್‌ವೈ ಯಾತ್ರೆಗೆ ನಿವಾರಣೆಯಾಗದ ವಿಘ್ನ

ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನದಿಂದ ಇಳಿದ ಬಳಿಕ ಪಕ್ಷ ಸಂಘಟನೆಗಾಗಿ ರಾಜ್ಯದಾದ್ಯಂತ ಪ್ರವಾಸ ಕೈಗೊಳ್ಳುವುದಾಗಿ ಹಲವು ಬಾರಿ ಘೋಷಣೆ ಮಾಡಿದ್ದಾರೆ. ಆದರೆ, ಪಕ್ಷದ ವರಿಷ್ಠರು ಇದಕ್ಕೆ ಅವಕಾಶವನ್ನೇ ನೀಡಿಲ್ಲ.

ಪ್ರತಿ ಬಾರಿ ರಾಜ್ಯ ಪ್ರವಾಸದ ಹೇಳಿಕೆ ನೀಡಿದ ಬಳಿಕ ವರಿಷ್ಠರ ಹಸಿರು ನಿಶಾನೆಗಾಗಿ ಯಡಿಯೂರಪ್ಪ ಕಾದು ಕೂರುವುದೇ ಆಗಿದೆ. ಆದರೆ, ಹೈಕಮಾಂಡ್ ಅನುಮತಿ ನೀಡುತ್ತಿಲ್ಲ ಎಂದು ಅವರ ಆಪ್ತ ವಲಯದ ಮೂಲಗಳು ಹೇಳಿವೆ.

ರಾಜ್ಯ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಜನ ಜಾಗೃತಿಗೆ ರಾಜ್ಯ ವ್ಯಾಪಿ ಪ್ರವಾಸ ಮಾಡುವುದಾಗಿ ಸೆಪ್ಟೆಂಬರ್‌ನಲ್ಲಿ ಯಡಿಯೂರಪ್ಪ ಘೋಷಿಸಿದ್ದರು. ಇದಕ್ಕಾಗಿ ವಿನಾಯಕ ಚತುರ್ಥಿ ಮತ್ತು ಪ್ರಧಾನಿ ಮೋದಿ ಅವರ ಜನ್ಮದಿನದಂದು ಕೋಲಾರ ಜಿಲ್ಲೆ ಕುರುಡುಮಲೆಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಆ ಕಾರ್ಯಕ್ರಮದ ಬಳಿಕ ರಾಜ್ಯ ಪ್ರವಾಸಕ್ಕೆ ವರಿಷ್ಠರಿಂದ ಅನುಮತಿ ಸಿಗಲಿಲ್ಲ.

'ಕೆಲವೊಮ್ಮೆ ಯಡಿಯೂರಪ್ಪ ಯಾರ ಜೊತೆಗೂ ಚರ್ಚಿಸದೇ ಪಕ್ಷದ ಗಮನಕ್ಕೆ ತರದೇ ಸ್ವಯಂ ಪ್ರೇರಣೆಯಿಂದ ಪ್ರವಾಸದ ದಿನಾಂಕ ಘೋಷಿಸುತ್ತಾರೆ. ಪಕ್ಷದ ಸಂಘಟನೆಯ ಪ್ರವಾಸಗಳೂ ಎಲ್ಲ ನಾಯಕರು ಒಂದುಗೂಡಿ ಮಾಡಬೇಕಾಗುತ್ತದೆ. ಏಕಪಕ್ಷೀಯವಾಗಿ ಮಾಡಲು ಸಾಧ್ಯವಿಲ್ಲ' ಎಂದು ಬಿಜೆಪಿಯ ನಾಯಕರೊಬ್ಬರು ತಿಳಿಸಿದರು.

ಕುಕ್ಕೆ ಸುಬ್ರಹ್ಮಣ್ಯದಲ್ಲಿ ದೇವೇಗೌಡ ಅವರು ಪತ್ನಿ ಚನ್ನಮ್ಮ ಜತೆ ಪೂಜೆ ಸಲ್ಲಿಸಿದರು

ದಸರಾ ಬಳಿಕ ಟಿಕೆಟ್ ಹಂಚಿಕೆ: ದೇವೇಗೌಡ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): 'ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿಕೂಟದ ನಡುವೆ ಸೀಟು ಹಂಚಿಕೆಯ ಚರ್ಚೆ ದಸರಾ ಬಳಿಕ ನಡೆಯಲಿದೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ತಿಳಿಸಿದರು.

ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಸೋಮವಾರ ವಿಶೇಷ ಪೂಜೆ ಸಲ್ಲಿಸಿದ ಅವರು ಸುದ್ದಿಗಾರರ ಜೊತೆ ಮಾತನಾಡಿದರು. 'ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರ ಗೃಹಸಚಿವ ಅಮಿತ್ ಶಾ ಜೊತೆ ಮೈತ್ರಿ ಬಗ್ಗೆ ಚರ್ಚೆ ನಡೆಸಿದ್ದಾರೆ. ಸಂಸತ್ ಅಧಿವೇಶನದ ನಂತರ ನಾನು, ಇಲ್ಲವೇ ಕುಮಾರಸ್ವಾಮಿ ಅವರು ಮತ್ತೆ ಅಮಿತ್ ಶಾ ಜೊತೆ ಈ ಬಗ್ಗೆ ಚರ್ಚೆ ನಡೆಸಲಿದ್ದೇವೆ' ಎಂದರು.

'ಪಕ್ಷದ 19 ಶಾಸಕರು, ವಿಧಾನ ಪರಿಷತ್ತಿನ 8 ಸದಸ್ಯರು, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಜೊತೆ ಮತ್ರಿ ಬಗ್ಗೆ ಎರಡು ಸುತ್ತುಗಳ ಮಾತುಕತೆ ನಡೆದಿದೆ. ಆ ಬಳಿಕವೇ ಶಾ ಅವರನ್ನು ಕುಮಾರಸ್ವಾಮಿ ಭೇಟಿ ಮಾಡಿದ್ದಾರೆ' ಎಂದು ಸ್ಪಷ್ಟಪಡಿಸಿದರು.

'ಹಿಂದಿನ ಚುನಾವಣೆಗಳಲ್ಲಿ ಪಕ್ಷವಾರು ಮತಗಳಿಕೆ ಆಧರಿಸಿ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಪಕ್ಷಗಳ ನಡುವಿನ ಸೀಟು ಹಂಚಿಕೆ ಬಗ್ಗೆ ಒಂದು ನಿರ್ಧಾರಕ್ಕೆ ಬರಲಾಗುತ್ತದೆ' ಎಂದರು.

'ಕಾಂಗ್ರೆಸ್ 28 ಕ್ಷೇತ್ರಗೆಲ್ಲುವ ಉತ್ಸಾಹದಲ್ಲಿದೆ. ಆ ಕಾರಣಕ್ಕೆ ಬಿಜೆಪಿ–ಜೆಡಿಎಸ್ ಒಟ್ಟಾಗಿ ಚುನಾವಣೆ ಎದುರಿಸುವ ನಿರ್ಧಾರಕ್ಕೆ ಬಂದಿದ್ದೇವೆ. ಜಾತಿ ಆಧಾರದ ಮತ ವಿಭಜನೆಯ ಬಗ್ಗೆ ನಾನು ಈಗ ವಾದ ಮಾಡಲ್ಲ. ವಿಧಾನಸಭೆ ಚುನಾವಣೆಯಲ್ಲಿ ಶೇಕಡಾವಾರು ಮತ ಹಂಚಿಕೆ ಪ್ರಕಾರ ಬಿಜೆಪಿಗೆ ಶೇ 33, ಕಾಂಗ್ರೆಸ್‌ಗೆ ಶೇ 40, ಜೆಡಿಎಸ್‌ಗೆ ಶೇ 22ರಷ್ಟು ಮತ ಸಿಕ್ಕಿವೆ. ಈ ಬಾರಿ ಯಾರಿಗೆ ಮತ ಹಾಕಬೇಕೆಂಬುವುದನ್ನು ಜನ ತೀರ್ಮಾನಿಸುತ್ತಾರೆ' ಎಂದರು.

ದೇವೇಗೌಡ 91, ಚನ್ನಮ್ಮ 68 ಕೆ.ಜಿ.

ದೇವೇಗೌಡರು ತಮ್ಮ ಪತ್ನಿ ಚನ್ನಮ್ಮ ಅವರೊಟ್ಟಿಗೆ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಆಶ್ಲೇಷ ಬಲಿ ಸೇವೆ ಹಾಗೂ ತುಲಾಭಾರ ಸೇವೆ ನೆರವೇರಿಸಿದರು. ದೇವೇಗೌಡರು 91 ಕೆ.ಜಿ., ಚೆನ್ನಮ್ಮ ಅವರು 68 ಕೆ.ಜಿ. ತೂಕ ಇದ್ದು, ಅಷ್ಟು ತೂಕದ ಧಾನ್ಯ ಸಮರ್ಪಿಸಲಾಯಿತು.

ಕಲಬುರಗಿಯಲ್ಲಿ ಸೋಮವಾರ ನಡೆದ ಹಿಂದು ಜಾಗರಣ ವೇದಿಕೆ ಪ್ರತಿಷ್ಠಾಪಿಸಿದ ಹಿಂದೂ ಮಹಾಗಣಪತಿ ಮೂರ್ತಿಯ ವಿಸರ್ಜನೆ ಮೆರವಣಿಗೆಯಲ್ಲಿ ಪಂಜಾಬಿ ನೃತ್ಯ ಗಮನಸೆಳೆಯಿತು. –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಡಿಕೆಶಿ ವಿರುದ್ಧ ಹೇಳಿಕೆ: ಎಚ್‌ಡಿಕೆ ವಿರುದ್ಧ 'ಕೈ' ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಡಿ.ಕೆ. ಶಿವಕುಮಾರ್ ಒಮ್ಮೆ ತಿಹಾರ್ ಜೈಲು ನೋಡಿಕೊಂಡು ಬಂದಿದ್ದಾರೆ. ಕಾಯಂ ಆಗಿ ಅಲ್ಲಿಗೆ ಹೋದರೂ ಆಶ್ಚರ್ಯವಿಲ್ಲ' ಎಂಬ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಸಿಡಿಮಿಡಿಗೊಂಡಿರುವ 'ಕೈ' ನಾಯಕರು, ತೀವ್ರ ವಾಗ್ದಾಳಿ ನಡೆಸಿದ್ದಾರೆ.

'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಜೈಲಿಗೆ ಹಾಕಲು ಅವರೇನು (ಕುಮಾರಸ್ವಾಮಿ) ಜಡ್ಜ್ ಏನ್ರಿ' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಪ್ರಶ್ನಿಸಿದರೆ, 'ಶಿವಕುಮಾರ್ ಅವರನ್ನು ಜೈಲಿಗೆ ಹಾಕುವ ಉದ್ದೇಶದಿಂದ ಬಿಜೆಪಿ ಜೊತೆ ಕುಮಾರಸ್ವಾಮಿ ಮೈತ್ರಿ ಮಾಡಿಕೊಂಡಿದ್ದಾರೆಯೇ? ಜೈಲಿಗೆ ಹಾಕಿ ಎಂದು ಅರ್ಜಿ ಕೊಟ್ಟಿದ್ದಾರೆಯೇ' ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಖಾರವಾಗಿ ಕೇಳಿದ್ದಾರೆ.

'ಡಿ.ಕೆ. ಶಿವಕುಮಾರ್ ಕಳ್ಳತನವೇನಾದರೂ ಮಾಡಿದ್ದಾರಾ? ಈ ರೀತಿಯ ಮಾತು ಕುಮಾರಸ್ವಾಮಿಗೇ ಕಳಂಕ. ಮುಖ್ಯಮಂತ್ರಿ ಆಗಿದ್ದವರು ಮಾತನಾಡುವಾಗ ಗಾಂಭೀರ್ಯ ಇರಬೇಕು. ಅವರು ಗೆಲ್ಲುವುದಕ್ಕೆ ಹೋರಾಟ ಮಾಡುವುದಿಲ್ಲ. ಇನ್ನೊಬ್ಬರನ್ನು ಸೋಲಿಸಲು ಹೋರಾಟ ಮಾಡುತ್ತಾರೆ. ಅದೇ ಅವರಿಗೂ ನಮಗೂ ಇರುವ ವ್ಯತ್ಯಾಸ' ಎಂದೂ ಚಲುವರಾಯಸ್ವಾಮಿ ಹೇಳಿದರು.

ಸಂಸದ ಡಿ.ಕೆ. ಸುರೇಶ್, 'ದೆಹಲಿಯಲ್ಲಿ ಅಮಿತ್ ಶಾ ಅವರನ್ನು ಭೇಟಿಯಾಗಿದ್ದಾಗ ಡಿ.ಕೆ. ಶಿವಕುಮಾರ್ ಅವರನ್ನು ತಿಹಾರ್ ಜೈಲಿಗೆ ಕಳುಹಿಸಿ ಎಂದು ಕುಮಾರಸ್ವಾಮಿ ಮನವಿ ಮಾಡಿದ್ದಾರೆಂದು ಅನಿಸುತ್ತಿದೆ. ಆದರೆ, ಅವರ ಗೊಡ್ಡು ಬೆದರಿಕೆಗಳಿಗೆ ಹೆದರುವ ಜಾಯಮಾನ ನಮ್ಮದಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ಕೆ.ಎಂ. ಶಿವಲಿಂಗೇಗೌಡ, 'ಯಾಕೋ ಕುಮಾರಸ್ವಾಮಿ ಮತ್ತೆ ಉಪ ಮುಖ್ಯಮಂತ್ರಿ ಮೇಲೆ ಬಿದ್ದುಬಿಟ್ಟಿದ್ದಾರೆ. ಜೈಲಿಗೆ ಹಾಕಬೇಕೆಂಬ ಉದ್ದೇಶದಿಂದ ಬಿಜೆಪಿ ಜೊತೆ ಅವರು ಸಖ್ಯ ಬೆಳೆಸಿರಬೇಕೆಂದು ಕಾಣಿಸುತ್ತಿದೆ. ಸಮಾಜದ ಮತಗಳನ್ನು ಡಿ.ಕೆ. ಶಿವಕುಮಾರ್ ಸೆಳೆದುಕೊಂಡರೆ, ತಾವೆಲ್ಲಿ ಶೂನ್ಯ ಆಗಿಬಿಡುತ್ತೇವೆಂಬ ಆತಂಕದಿಂದ ಅವರು ಏನೇನೋ ಮಾತನಾಡುತ್ತಿದ್ದಾರೆ' ಎಂದರು.

ಮಾಡಲು ಹೊರಟಿರುವುದನ್ನೇ ಹೇಳಿದ್ದಾರೆ: ಡಿಕೆಶಿ

'ಕುಮಾರಣ್ಣ ಹಿಂದೆ ಏನು ಮಾಡಿದ್ದರು, ಮುಂದೆ ಏನು ಮಾಡಲು ಹೊರಟಿದ್ದಾರೆ ಎಂಬುದನ್ನು ತಮ್ಮ ಹೇಳಿಕೆ ಮೂಲಕ ತಿಳಿಸಿದ್ದಾರೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಶಿವಕುಮಾರ್ ತಿಹಾರ್ ಜೈಲಿಗೆ ಮತ್ತೆ ಶಾಶ್ವತವಾಗಿ ಹೋದರೂ ಅಚ್ಚರಿ ಇಲ್ಲ' ಎಂಬ ಕುಮಾರಸ್ವಾಮಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಕುಮಾರಸ್ವಾಮಿ ಅವರು ಏನೆಲ್ಲ ಮಾಡಲು ಸಾಧ್ಯವೋ ಅದನ್ನು ಹೇಳಿದ್ದಾರೆ. ಅವರು ಮುಖ್ಯಮಂತ್ರಿಯಾಗಿದ್ದಾಗ ನನ್ನ ತಂಗಿ, ತಮ್ಮ ಹಾಗೂ ನನ್ನ ಹೆಂಡತಿ ಮೇಲೆ ಕೇಸ್ ಹಾಕಿದ್ದನ್ನು ಈಗ ನೆನಪಿಸಿಕೊಂಡಿದ್ದಾರೆ' ಎಂದರು.

ಅಧಿಕಾರಿಯ ನಿಂದಿಸಿದ ಶಾಸಕ

ಮಂಗಳೂರು: ಅರಣ್ಯ ಭೂಮಿಯಲ್ಲಿ ಮನೆ ನಿರ್ಮಿಸಲಾಗುತ್ತಿದೆ ಎಂದು ನಿರ್ಮಾಣ ಕಾರ್ಯವನ್ನು ತಡೆಯಲು ಬಂದ ಅಧಿಕಾರಿಯನ್ನು ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಅವಾಚ್ಯ ಶಬ್ದ ಬಳಸಿ ನಿಂದಿಸಿದ ವಿಡಿಯೊ ಸಾಮಾಜಿಕ ತಾಣದಲ್ಲಿ ಹರಿದಾಡುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯ ಕಳೆಂಜ ಗ್ರಾಮದ ಅಮ್ಮಿನಡ್ಕದಲ್ಲಿ ಮನೆ ನಿರ್ಮಾಣಕ್ಕೆ ಅಡಿಪಾಯ ಹಾಕಲಾಗಿತ್ತು, ಇದನ್ನು ತೆರವು ಮಾಡಲು ಅರಣ್ಯ ಅಧಿಕಾರಿಗಳು, ಸಿಬ್ಬಂದಿ ಮತ್ತು ಪೊಲೀಸರು ಸೋಮವಾರ ಬೆಳಿಗ್ಗೆ ತೆರಳಿದ್ದರು. ಈ ಸಂದರ್ಭದಲ್ಲಿ ಅಧಿಕಾರಿಗಳು ಮತ್ತು ಶಾಸಕರ ನಡುವೆ ವಾಗ್ವಾದ ನಡೆದಿತ್ತು. ಏರುಧ್ವನಿಯಲ್ಲಿ ಮಾತನಾಡಿದ ಹರೀಶ್ ಪೂಂಜ ಅಧಿಕಾರಿಯನ್ನು ಅವಾಚ್ಯ ಪದಗಳಿಂದ ನಿಂದಿರುವುದು ವಿಡಿಯೊದಲ್ಲಿದೆ.

ವಿವಾದದ ಹಿನ್ನೆಲೆಯಲ್ಲಿ ಅರಣ್ಯಾಧಿಕಾರಿಗಳು ಮತ್ತು ಜನಪ್ರತಿನಿಧಿಗಳ ನಡುವಿನ ಮಾತುಕತೆಯ ಕೊನೆಯಲ್ಲಿ ಜಾಗದ ಜಂಟಿ ಸರ್ವೆ ಮಾಡಲು ನಿರ್ಧರಿಸಲಾಗಿದೆ. ಶಾಸಕರಾದ ರಾಜೇಶ್ ನಾಯಕ್ ಉಳಿಪ್ಪಾಡಿಗುತ್ತು, ಭಾಗೀರಥಿ ಮುರುಳ್ಯ, ಭರತ್ ಶೆಟ್ಟಿ, ಉಮಾನಾಥ ಕೋಟ್ಯಾನ್, ವಿಧಾನ ಪರಿಷತ್ ಸದಸ್ಯ ಕೆ.ಪ್ರತಾಪಸಿಂಹ ನಾಯಕ್ ಇದ್ದರು.

ಪ್ರತಿಕ್ರಿಯೆಗೆ ಶಾಸಕ ಹರೀಶ್ ಪೂಂಜ ಲಭ್ಯರಾಗಲಿಲ್ಲ.

ನೀರಿಗಾಗಿ ತಮಿಳುನಾಡು ನಿರ್ಣಯ

ಚೆನ್ನೈ (ಪಿಟಿಐ): ಸುಪ್ರೀಂಕೋರ್ಟ್ ನಿರ್ದೇಶನದಂತೆ ತಮಿಳುನಾಡಿಗೆ ಕಾವೇರಿ ನೀರು ಹರಿಸಲು ಕರ್ನಾಟಕಕ್ಕೆ ಸೂಚಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ತಮಿಳುನಾಡು ವಿಧಾನಸಭೆ ಸೋಮವಾರ ಅಂಗೀಕರಿಸಿತು.

ಪ್ರಮುಖ ವಿರೋಧ ಪಕ್ಷವಾದ ಎಐಎಡಿಎಂಕೆ ನಿರ್ಣಯ ಬೆಂಬಲಿಸಿತು. ಆದರೆ, ಕಾವೇರಿ ಜಲ ವಿವಾದಕ್ಕೆ ಶಾಶ್ವತವಾದ ಪರಿಹಾರ ಹೊಂದುವ ಉದ್ದೇಶವನ್ನು ನಿರ್ಣಯ ಹೊಂದಿಲ್ಲ ಹಾಗೂ ತಾನು ಸೂಚಿಸಿರುವ ತಿದ್ದುಪಡಿಗಳು ಈ ನಿರ್ಣಯದ ಭಾಗವಾಗಿಲ್ಲ ಎಂದು ಆರೋಪಿಸಿದ ಬಿಜೆಪಿಯು ಸಭಾತ್ಯಾಗ ಮಾಡಿತು.

ನದಿಗಳ ರಾಷ್ಟ್ರೀಕರಣವಾಗಬೇಕು ಹಾಗೂ ಕೇಂದ್ರದ ಅಣೆಕಟ್ಟು ಸುರಕ್ಷತಾ ಮಸೂದೆಗೆ ಬೆಂಬಲ ಸೂಚಿಸುವ ಅಂಶಗಳು ಈ ನಿರ್ಣಯದ ಭಾಗವಾಗಬೇಕು ಎಂದು ಬಿಜೆಪಿಯು ಒತ್ತಾಯಿಸಿತ್ತು. ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಗಿದೆ ಎಂದು ನಂತರ ಸ್ಪೀಕರ್ ಎಂ.ಅಪ್ಪಾವು ಘೋಷಿಸಿದರು.

ನಿರ್ಣಯ ಮಂಡಿಸಿದ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, 'ಕರ್ನಾಟಕ 'ಕೃತಕ ಬಿಕ್ಕಟ್ಟು' ಸೃಷ್ಟಿಸಿದೆ. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ನೀರು ಬಿಡುಗಡೆ ಮಾಡುತ್ತಿಲ್ಲ' ಎಂದು ಆರೋಪಿಸಿದರು. ಇದಕ್ಕೂ ಮುನ್ನ ಆಡಳಿತ–ವಿರೋಧಪಕ್ಷಗಳ ನಡುವೆ ಬಿಸಿ ಚರ್ಚೆ ನಡೆಯಿತು.

ಕಾವೇರಿ ಪ್ರಾಧಿಕಾರ ರದ್ದು: ಕೇಂದ್ರಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮಿಳುನಾಡಿಗೆ ಪ್ರತಿದಿನ 3 ಸಾವಿರ ಕ್ಯೂಸೆಕ್ ನೀರು ಹರಿಸಬೇಕು ಎಂಬ ಕಾವೇರಿ ನೀರು ನಿರ್ವಹಣಾ ಮಂಡಳಿಯ ಆದೇಶವನ್ನು ರದ್ದುಪಡಿಸಬೇಕು ಎಂದು ಕೋರಿ ಕರ್ನಾಟಕ ಜಲ ಸಂರಕ್ಷಣಾ ಸಮಿತಿಯು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರಿಗೆ ಸೋಮವಾರ ಮನವಿ ಸಲ್ಲಿಸಿತು.

'ರಾಜ್ಯದಲ್ಲಿ ಮಳೆ ಕಡಿಮೆಯಾಗಿದೆ. ಬರಗಾಲಕ್ಕೆ 195 ತಾಲ್ಲೂಕುಗಳು ತುತ್ತಾಗಿ 250ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೂ, ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಬಿಡುಗಡೆ ಮಾಡುತ್ತಿದೆ. ಇದನ್ನು ಕೂಡಲೇ ನಿಲ್ಲಿಸಬೇಕು' ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಕಾವೇರಿ ನೀರು ನಿಯಂತ್ರಣ ಸಮಿತಿಯು ರಾಜಕೀಯ ಪಕ್ಷಗಳ ಒತ್ತಡಕ್ಕೆ ಒಳಗಾಗಿ ಕಾರ್ಯನಿರ್ವಹಿಸುತ್ತಿದೆ. ಅದನ್ನು ರದ್ದುಪಡಿಸಬೇಕು. ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಪ್ರಾಧಿಕಾರ ಹಾಗೂ ಸಮಿತಿ ರಚಿಸಬೇಕು' ಎಂದು ಆಗ್ರಹಿಸಲಾಗಿದೆ.

ನೀರಿನಲ್ಲಿ ಪಾಲು ಕೇಳುವ ತಮಿಳುನಾಡಿನವರು ಅರಣ್ಯ ಸಂರಕ್ಷಣೆ ಮಾಡಲು ಕರ್ನಾಟಕ ಸರ್ಕಾರಕ್ಕೆ ವರ್ಷಕ್ಕೆ ₹2,000 ಕೋಟಿ ಹಣ ನೀಡುವ ವ್ಯವಸ್ಥೆ ಜಾರಿಗೆ ತರಬೇಕು ಎಂದು ಆಗ್ರಹಿಸಲಾಗಿದೆ. ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ಕೂಡಲೇ ಒಪ್ಪಿಗೆ ನೀಡಬೇಕು ಎಂದು ಒತ್ತಾಯಿಸಲಾಗಿದೆ.

ಚಾರ್ಮಾಡಿ ಘಾಟಿ: ₹490 ಕೋಟಿಗೆ ಅನುಮೋದನೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ಚಾರ್ಮಾಡಿ ಘಾಟಿಯ ಚಾರ್ಮಾಡಿ ಹಳ್ಳದಿಂದ ಘಾಟಿಯ 11ನೇ ತಿರುವು ವರೆಗಿನ 11.2 ಕಿ.ಮೀ ರಸ್ತೆ ಅಭಿವೃದ್ಧಿಯ ₹490 ಕೋಟಿ ವೆಚ್ಚದ ಕಾಮಗಾರಿಯ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರದ ರಸ್ತೆ ಸಾರಿಗೆ, ಹೆದ್ದಾರಿ ಸಚಿವಾಲಯ ಅನುಮೋದನೆ ನೀಡಿದೆ.

ಹೆದ್ದಾರಿಯ ಅಭಿವೃದ್ಧಿ ಕಾಮಗಾರಿಯ ಮೊದಲ ಹಂತ ಬಂಟ್ವಾಳದ ಬಿ.ಸಿ ರೋಡ್‌ನಿಂದ ಪುಂಜಾಲಕಟ್ಟೆವರೆಗೆ ಪೂರ್ಣಗೊಂಡಿದ್ದು ಪುಂಜಾಲಕಟ್ಟೆಯಿಂದ ಚಾರ್ಮಾಡಿ ವರೆಗಿನ ಕಾಮಗಾರಿ ಪ್ರಗತಿಯಲ್ಲಿದೆ. ಚಾರ್ಮಾಡಿ ಘಾಟಿಯಲ್ಲಿ 3ನೇ ಹಂತದ ಈ ಕಾಮಗಾರಿಯ ಡಿಪಿಆರ್ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಲೋಕೋಪಯೋಗಿ ಇಲಾಖೆ

ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.

ಸಂಖ್ಯೆ : ಲೋ.ಇ./ಬಾ.ವಿ./ಪಿ.ಬಿ./ಕೆ.ಡಬ್ಲ್ಯೂ/2023–24/1959 ದಿನಾಂಕ : 07–10–2023

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ 2000ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ – ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **ಬಾಗಲಕೋಟೆ ವಿಭಾಗದ** ಅಡಿಯಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಯ ಟೆಂಡರ್ ಅಹ್ವಾನಿಸಲಾಗಿದೆ. ಹಾಗೂ **ಟೆಂಡರ್ ಪ್ರಕಟಣೆ ಸಂಖ್ಯೆ. 1824 ದಿನಾಂಕ : 27–09–2023 ರಲ್ಲಿಯ ಕಾಮಗಾರಿಯ ಇಂಡೆಂಟ ಸಂಖ್ಯೆ. 4027 ಬದಲಾಗಿ 5489, 4029 ಬದಲಾಗಿ 5491 ಎಂದು ಓದಿಕೊಳ್ಳತಕ್ಕದ್ದು.**

ವರ್ಕ ಇಂಡೆಂಟ್ ನಂ. : <u>ಸಾಮಾನ್ಯ</u> : **3579, 3580, 4833, 3385 ಕರೆ–2, 3388 ಕರೆ–2, 4046 ಕರೆ–2, 4048 ಕರೆ–2.**

ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ 400.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ 7.80 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ.

ಅ) ಪ್ರೀಬಿಡ್ ಮಿಟಿಂಗ್ ದಿನಾಂಕ	: 16–10–2023 ರ ಮಧ್ಯಾಹ್ನ 11.30 ಘಂಟೆಯವರೆಗೆ.
ಬ) ಟೆಂಡರ್ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ	: 17–10–2023 ರ ಸಂಜೆ 5.30 ಘಂಟೆಯವರೆಗೆ.
ಕ) ಟೆಂಡರ್ ಸ್ವೀಕರಿಸುವ ದಿನಾಂಕ	: 18–10–2023 ರ ಸಂಜೆ 4.00 ಘಂಟೆಯವರೆಗೆ.
ಡ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ	: 19–10–2023 ರ ಸಂಜೆ 4.30 ಘಂಟೆಯವರೆಗೆ.
ಬ) ಆರ್ಥಿಕ ಬಿಡ್ ತೆರೆಯುವ ದಿನಾಂಕ	: 20–10–2023 ರ ಸಂಜೆ 4.30 ಘಂಟೆಯವರೆಗೆ.

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ https://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟೆ/144/ಮಣಿಪಾಲ್/2023–24

ಬೆಂಗಳೂರು ವಿಶ್ವವಿದ್ಯಾಲಯ

ಯು.ಜಿ.ಸಿ. ಮಾನ್ಯತೆ, ನ್ಯಾಕ್ "ಎ++" ಶ್ರೇಣಿ, ಮತ್ತು ಎನ್.ಐ.ಆರ್.ಎಫ್ 2022ರಲ್ಲಿ 64ನೇ ರ್‍ಯಾಂಕ್ ಪಡೆದಿದೆ.

ದೂರ ಶಿಕ್ಷಣ ನಿರ್ದೇಶನಾಲಯ

ಜ್ಞಾನಭಾರತಿ ಆವರಣ, ಬೆಂಗಳೂರು–560056,
ದೂರವಾಣಿ : 080–22961261, ಇ–ಮೇಲ್ : dccbub@gmail.com

ಅದ್ಭುತ ಅವಕಾಶ **ನಿರಂತರ ಕಲಿಕೆ**

ಸುಸಜ್ಜಿತ ತಾಂತ್ರಿಕ ತಂಡದೊಂದಿಗೆ ಹೆಚ್ಚು ಅರ್ಹ ತಜ್ಞರೊಂದಿಗೆ ನಿಮ್ಮ ಮನೆ ಬಾಗಿಲಿಗೆ, ದೂರ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಬಿ.ಯು/ಡಿಡಿಇ/ಆನ್–ಲೈನ್/2023–24 ದಿನಾಂಕ : 09.10.2023

ಪ್ರವೇಶಾತಿ ಅಧಿಸೂಚನೆ

ಆನ್‌ಲೈನ್ ಶಿಕ್ಷಣದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಿಗೆ

ಸದರಿ ಪದವಿಗಳು ಯು.ಜಿ.ಸಿ ಯ (ದೂರ ಶಿಕ್ಷಣ ಮತ್ತು ಮುಕ್ತ ಕಾರ್ಯಕ್ರಮಗಳ ಮತ್ತು ಆನ್‌ಲೈನ್ ಕಾರ್ಯಕ್ರಮಗಳ) ನಿಯಮಾವಳಿಗಳು, 2020 ರ ನಿಬಂಧನೆ 3(ಬಿ) (ಎ)ರ ಅನುಸಾರ ಯು.ಜಿ.ಸಿ. ಯ ಅರ್ಹತೆ ಪಡೆದಿದೆ.

ಬಿ.ಕಾಂ. – 3 ವರ್ಷಗಳು/6 ಸೆಮಿಸ್ಟರ್‌ಗಳು
ಎಂ.ಎ. – 2 ವರ್ಷಗಳು/4 ಸೆಮಿಸ್ಟರ್‌ಗಳು (1) ಕನ್ನಡ (2) ಇಂಗ್ಲೀಷ್ (3) ಹಿಂದಿ (4) ಅರ್ಥಶಾಸ್ತ್ರ (5) ಇತಿಹಾಸ, (6) ಸಮಾಜಶಾಸ್ತ್ರ, (7) ರಾಜ್ಯಶಾಸ್ತ್ರ
ಎಂ.ಕಾಂ. – 2 ವರ್ಷಗಳು/4 ಸೆಮಿಸ್ಟರ್‌ಗಳು
ಎಂ.ಎಸ್ಸಿ (ಗಣಿತ ಶಾಸ್ತ್ರ) – 2 ವರ್ಷಗಳು/4 ಸೆಮಿಸ್ಟರ್‌ಗಳು

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 20.10.2023

ಪ್ರವೇಶಾತಿಯ ಎಲ್ಲಾ ಪ್ರಕ್ರಿಯೆಗಳು ಆನ್‌ಲೈನ್ ಮತ್ತು ದೂರ ಶಿಕ್ಷಣ ಕಛೇರಿಯಲ್ಲಿ ನಡೆಯಲಿದೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ಅಂತರ್ಜಾಲವನ್ನು ಸಂಪರ್ಕಿಸಿ:
www.bangaloreuniversity.karnataka.gov.in

ಬೆಂಗಳೂರು ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದಿಂದ ನೀಡಲಾಗುವ ಆನ್‌ಲೈನ್ ಕೋರ್ಸ್‌ಗಳಿಗೆ ರಾಜ್ಯ/ದೇಶದ/ವಿದೇಶದ ಯಾವುದೇ ಭಾಗದ ಆಸಕ್ತ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಬಹುದಾಗಿದೆ.

ಸಹಿ/-
ಕುಲಸಚಿವರು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಪರಿಣಾಮಕಾರಿ ಮಿಷನ್ ಇಂದ್ರಧನುಷ್ 5.0 ಅಭಿಯಾನ

ಮೂರನೇ ಸುತ್ತು:
ಅಕ್ಟೋಬರ್ 09 - 14, 2023

ದಡಾರ ಮತ್ತು ರುಬೆಲ್ಲಾ ನಿವಾರಣೆಯತ್ತ ಒಂದು ದಿಟ್ಟ ಹೆಜ್ಜೆ

ನಿಮ್ಮ ಮಗುವಿನ ಹೆಸರನ್ನು U-WIN ಪೋರ್ಟಲ್ ನಲ್ಲಿ ನೋಂದಾಯಿಸಿ. ಲಸಿಕಾ ಕೇಂದ್ರಗಳಲ್ಲಿ ಹೆಸರು ನೋಂದಾವಣೆ ಮಾಡಲಾಗುತ್ತದೆ.

ಪ್ರತಿ ಡೋಸ್ ಲಸಿಕೆ ತೆಗೆದುಕೊಂಡಿರುವುದನ್ನು ಖಚಿತಪಡಿಸಿಕೊಳ್ಳಿ

ನೋಂದಾಯಿಸಲು ನಿಮ್ಮ ಆಧಾರ್ ಕಾರ್ಡ್ ಹಾಗು ತಾಯಿ ಮತ್ತು ಮಗುವಿನ ಸುರಕ್ಷಾ ಕಾರ್ಡ್ (ತಾಯಿ ಕಾರ್ಡ್) ತರಲು ಮರೆಯದಿರಿ.

ಲಸಿಕೆ ಹಾಕಿಸಿದ ನಂತರ ಇ-ಪ್ರಮಾಣಪತ್ರ ಪಡೆದುಕೊಳ್ಳಿ.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ಅವರು ಮಗುವಿನ ಆರೋಗ್ಯ ವಿಚಾರಿಸುತ್ತಿರುವುದು

ಲಸಿಕೆಯು ನೀವು ನಿಮ್ಮ ಮಗುವಿಗೆ ನೀಡಬಹುದಾದ ಆರೋಗ್ಯ ರಕ್ಷಣೆಯ ಉಡುಗೊರೆಯಾಗಿದೆ

ನಿಮ್ಮ ಮಗುವಿಗೆ ಹತ್ತಿರದ ಸರ್ಕಾರಿ ಆಸ್ಪತ್ರೆ / ಪ್ರಾಥಮಿಕ ಆರೋಗ್ಯ ಕೇಂದ್ರ / ಅಂಗನವಾಡಿ / ಆರೋಗ್ಯ & ಸ್ವಾಸ್ಥ್ಯ ಕೇಂದ್ರಗಳಲ್ಲಿ ತಪ್ಪದೇ ಲಸಿಕೆ ಹಾಕಿಸಿ.

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ರಕ್ಷಿಸುವುದು ಮತ್ತು ಗೌರವಿಸುವುದು" - ಇದು ನಮ್ಮ ದೇಶದ ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯ. ಸಂವಿಧಾನದಲ್ಲಿ ಇದನ್ನು ಪ್ರತಿಪಾದಿಸಲಾಗಿದೆ

ನಿಮ್ಮ ಆರೋಗ್ಯ ನಮ್ಮ ಬದ್ಧತೆ

ಕ್ಷೇಮ ಕುಶಲ

ಯೋಚಿಸಿ ತೀರ್ಮಾನಿಸಿ

ರಮ್ಯಾ ಶ್ರೀಹರಿ

ನಮ್ಮ ಜೀವನದಲ್ಲಿ ನಾವು ಕೈಗೊಂಡ ಐದು ನಿರ್ಧಾರಗಳನ್ನು ಗುರುತಿಸಿ 'ಅವನ್ನು ಕೈಗೊಳ್ಳಲು ಇದ್ದ ಬಲವಾದ ಕಾರಣಗಳು, ಆ ನಿರ್ಧಾರದ ಫಲಿತಾಂಶ ಹೇಗಿತ್ತು, ಅದರ ಕುರಿತು ಈಗ ಏನು ಅನಿಸುತ್ತಿದೆ' ಎನ್ನುವ ಒಂದು ಪಟ್ಟಿಯನ್ನು ತಯಾರಿಸಿ ಅವಲೋಕಿಸಿದರೆ ನಮ್ಮ ನಿರ್ಧಾರವನ್ನು ತೆಗೆದುಕೊಳ್ಳುವ, ಅದರ ಪರಿಣಾಮಗಳನ್ನು ನಿರ್ವಹಿಸುವ, ನಮಗೇ ವಿಶಿಷ್ಟವಾದ ಶೈಲಿಯಿರುತ್ತದೆ ಎನ್ನುವ ಅರಿವಾಗುತ್ತದೆ. ನಮ್ಮ ಈ ವಿಶಿಷ್ಟ ಶೈಲಿಯನ್ನು ವಿಶ್ಲೇಷಿಸಿದರೆ ನಮ್ಮ ಬಗ್ಗೆಯೇ ಅನೇಕ ವಿಷಯಗಳು ಅನಾವರಣಗೊಳ್ಳುತ್ತವೆ. ನಮ್ಮ ನಿರ್ಧಾರಗಳಿಂದ ಉಂಟಾಗುವ ಫಲಿತಾಂಶದ ಜವಾಬ್ದಾರಿಯನ್ನು ಹೇಗೆ ಹೊರುತ್ತೇವೆ, ಸಮಸ್ಯೆಗಳಿಗೆ ಯಾವ ರೀತಿಯ ಪರಿಹಾರವನ್ನು ಕಂಡುಕೊಳ್ಳಲು ಬಯಸುತ್ತೇವೆ, ಭಾವನೆಗಳು ಮತ್ತು ವೈಚಾರಿಕ ಚಿಂತನೆಯ ನಡುವಿನ ಸಮತೋಲನವನ್ನು ಹೇಗೆ ಕಂಡುಕೊಳ್ಳುತ್ತೇವೆ ಎಂಬುದೆಲ್ಲಾ ಗೊತ್ತಾಗುತ್ತ ಹೋಗುತ್ತದೆ.

ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಒಂದು ಗಹನವಾದ ತಾತ್ವಿಕ ಸಮಸ್ಯೆಯೂ ಅಡಕವಾಗಿದೆ. ನಮ್ಮೆಲ್ಲಾ ನಿರ್ಧಾರಗಳೂ ನಿಜವಾಗಿಯೂ ನಮ್ಮ 'ಸ್ವತಂತ್ರ' ನಿರ್ಧಾರಗಳೇ ಹೌದೇ? ಚೆನ್ನಾಗಿ ಯೋಚಿಸಿ ನಿರ್ಧಾರ ಮಾಡಬೇಕೆನ್ನುವುದೇನೋ ಸರಿ. ಆದರೆ ನಮ್ಮ ಯೋಚಿಸುವ ರೀತಿಯೇ ಪೂರ್ವಗ್ರಹಕ್ಕೆ, ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ ಪರಿಸರದ ಪ್ರಬಲ ಪ್ರಭಾವಗಳಿಗೆ ಒಳಗಾಗಿರುವಾಗ, ನಾವೆಷ್ಟೇ 'ಚೆನ್ನಾಗಿ' ಯೋಚಿಸಿದರೂ ಹೊಸದೇನೂ ಹೊಳೆಯುವುದಿಲ್ಲ. ಬದಲಾಗಿ, ನಾವೀಗ ಯಾವ ರೀತಿಯಲ್ಲಿ ಯೋಚಿಸುವುದಕ್ಕೆ ಒಗ್ಗಿಹೋಗಿ, ಯಾವುದು ಅಭ್ಯಾಸವಾಗಿರುತ್ತದೆಯೂ ಹಾಗೆಯೇ ಯೋಚಿಸುತ್ತ ಆ ಯೋಚನೆಯ ಫಲವಾಗಿ ತೆಗೆದುಕೊಂಡ ಹಳೆಯ ನಿರ್ಧಾರಗಳ ಹೊಸ ರೂಪವೊಂದನ್ನೇ 'ಸ್ವತಂತ್ರ' ನಿರ್ಧಾರ ಎಂದು ತಿಳಿದುಕೊಂಡುಬಿಡುತ್ತೇವೆ. ಉದಾಹರಣೆಗೆ, ಉನ್ನತ ವಿದ್ಯಾಭ್ಯಾಸ, ವೃತ್ತಿ ಇವುಗಳನ್ನು ಆಯ್ದುಕೊಳ್ಳುವಾಗ ನಮ್ಮ ಆಸಕ್ತಿ, ಸಾಮರ್ಥ್ಯ, ಆ ಕ್ಷೇತ್ರದಲ್ಲಿ ಮುಂದುವರಿಯುವ ಸಾಧ್ಯತೆಗಳು ಮುಂತಾದವುಗಳ ವಸ್ತುನಿಷ್ಠ ವಿಶ್ಲೇಷಣೆಯನ್ನು ಮಾಡಿ ಸಾಧ್ಯವಾದಷ್ಟು ಸ್ಪಷ್ಟತೆಯನ್ನು ಪಡೆದುಕೊಂಡು ಮುಂದುವರಿಯಬೇಕೆನ್ನುವುದು ಅಪೇಕ್ಷಿತ. ಆದರೆ ಇಂತಹ ಆಯ್ಕೆಗಳನ್ನು ಮಾಡುವಾಗ ನಮ್ಮ ಕೌಟುಂಬಿಕ ಹಿನ್ನೆಲೆ, ಸಮವಯಸ್ಕರ–ಸುತ್ತಲಿನವರ ಅವ್ಯಕ್ತ ಒತ್ತಡ, ಸಮಾಜ ನಮ್ಮನ್ನು ಹೇಗೆ ನೋಡುತ್ತದೆ ಎನ್ನುವ ಗ್ರಹಿಕೆ, ಭವಿಷ್ಯದ ಬಗೆಗೆ, ಜೀವನದ ಬಗೆಗೆ ನಮಗಿರುವ ಕಲ್ಪನೆಗಳು ಎಲ್ಲವೂ ಪ್ರಭಾವ ಬೀರುತ್ತವೆ. ಹಾಗಾಗಿಯೇ ಒಂದು ಪರಿಸರದಲ್ಲಿ ಸಹಜವಾಗಿ ಕಾಣಬಹುದಾದ ಆಯ್ಕೆಗಳು / ನಿರ್ಧಾರಗಳು ಇನ್ನೊಂದು ಪರಿಸರದಲ್ಲಿ ಅಸಹಜವಾಗಿ, ಅಸಂಬದ್ಧವಾಗಿ ಕಾಣುತ್ತವೆ. ಅಂದರೆ ನಮ್ಮೆಲ್ಲಾ ನಿರ್ಧಾರಗಳೂ ಯಾವುದೋ ಒಂದು ರೀತಿಯಲ್ಲಿ 'ಪೂರ್ವಯೋಜಿತ'. ಹಾಗಾಗಿ ನಾವು ಮಾಡಬಹುದಾದದ್ದು ಏನೂ ಇಲ್ಲ; ನಮ್ಮ ನಿರ್ಧಾರಗಳಿಗೆ ನಾವು ಜವಾಬ್ದಾರರಲ್ಲ; ನಾವು ಕೈಗೊಂಡ ತೀರ್ಮಾನಗಳ, ಅದಕ್ಕನುಗುಣವಾಗಿ ಮಾಡಿದ ಕೆಲಸಗಳ ನೈತಿಕ ಹೊಣೆ ಹೊರಬೇಕಾಗಿಲ್ಲ ಎನ್ನುವುದಲ್ಲ. ಬದಲಾಗಿ ನಮ್ಮ ನಿರ್ಧಾರಗಳು ಎಷ್ಟು 'ಸ್ವತಂತ್ರವಾದದ್ದು', ಎಷ್ಟು 'ಅನ್ಯ ಪ್ರಭಾವಗಳ ಹಿಡಿತಕ್ಕೆ ಒಳಗಾದದ್ದು' ಎನ್ನುವುದನ್ನು ಹಿನ್ನೆಲೆಯಲ್ಲಿರಿಸಿಕೊಂಡು ಯೋಚಿಸುವುದನ್ನು ಅಭ್ಯಾಸಮಾಡಿಕೊಂಡಾಗ ನಮ್ಮ ನಿರ್ಧಾರಗಳು ಹೆಚ್ಚು ಪ್ರಜ್ಞಾಪೂರ್ವಕವಾಗುತ್ತ, ಪ್ರೌಢವಾಗುತ್ತ, ಪಕ್ವಗೊಳ್ಳುತ್ತ ಹೋಗುತ್ತವೆ.

ನಾವು ಯೋಚಿಸಿ ನಂತರ ನಿರ್ಧಾರ ತೆಗೆದುಕೊಳ್ಳುತ್ತಿದ್ದೇವೆ ಎಂದುಕೊಂಡಿರುತ್ತೇವಷ್ಟೇ. ಆದರೆ ವಾಸ್ತವವಾಗಿ ನಾವು ಭಾವನೆಗಳ, ಕಲ್ಪನೆ, ಕನಸುಗಳ ಹಿಡಿತಕ್ಕೊಳಗಾಗಿ ಕೆಲವು ತೀರ್ಮಾನಗಳನ್ನು ಮೊದಲು ಕೈಗೊಂಡುಬಿಟ್ಟಿರುತ್ತೇವೆ. ನಂತರ ಬುದ್ಧಿಯನ್ನು ಉಪಯೋಗಿಸಿ ನಮ್ಮ ತೀರ್ಮಾನಗಳಿಗೆ ಸಮಜಾಯಿಷಿಯನ್ನು, ವಿವರಣೆಗಳನ್ನು ಹುಡುಕಿಕೊಳ್ಳುವುದನ್ನೇ 'ಯೋಚನೆ ಮಾಡುವುದು' ಎಂದು ಕರೆದುಕೊಳ್ಳುತ್ತೇವಷ್ಟೇ! ಹಾಗಾಗಿ ಯೋಚಿಸಿ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಹೇಳಿದಾಗ 'ತಾರ್ಕಿಕವಾಗಿ ವಿಶ್ಲೇಷಿಸಿ ನಿರ್ಧಾರ ತೆಗೆದುಕೊಳ್ಳುವುದು' ಎಂದರ್ಥವಲ್ಲ; ಬದಲಾಗಿ ಆಲೋಚನೆಗೆ, ನಿರ್ಧಾರಕ್ಕೆ ಪ್ರಚೋದಿಸುವ ಭಾವನೆಗಳನ್ನು ಆಳವಾದ ವಿಮರ್ಶೆಗೆ ಒಳಪಡಿಸುವುದು ಎಂದರ್ಥ.

ಇಲ್ಲಿಯವರೆಗೆ ಹೇಗೆ ನಾವು 'ಸ್ವತಂತ್ರ' ಎಂದು ತಿಳಿದುಕೊಂಡ ನಿರ್ಧಾರಗಳು ನಿಜವಾಗಿ ಸ್ವತಂತ್ರವೇ ಅಲ್ಲ; ಭಾವನೆಗಳ, ಗ್ರಹಿಕೆಗಳ ಪ್ರಭಾವಕ್ಕೆ ಒಳಗಾದದ್ದು ಎಂದು ನೋಡಿದೆವು. ಈಗ ಇದರ ಇನ್ನೊಂದು ಮಗ್ಗುಲನ್ನು ನೋಡೋಣ. ನಾವು ನಮ್ಮ ಕೆಲವು ಮಾತುಕತೆ, ವರ್ತನೆಗಳನ್ನು ನಮ್ಮ ಸ್ವತಂತ್ರ ನಿರ್ಧಾರಗಳೆಂದೇ ಒಪ್ಪಲು ತಯಾರಿರುವುದಿಲ್ಲ. 'ನಾನಿರುವುದೇ ಹಾಗೆ, ಹಾಗಲ್ಲದೆ ಬೇರೆ ರೀತಿಯಲ್ಲಿ ನನಗೆ ಆಲೋಚಿಸುವುದೇ ಸಾಧ್ಯವಿಲ್ಲ' ಎಂದುಕೊಂಡಿರುತ್ತೇವೆ; ಆದರೆ ಅಂತಹ ಮಾತುಕತೆ, ವರ್ತನೆಗಳೂ ನಾವೆಂದೋ ಅಪ್ರಜ್ಞಾಪೂರ್ವಕವಾಗಿ ಮಾಡಿಕೊಂಡ ನಿರ್ಧಾರಗಳೇ ಆಗಿರುತ್ತವೆ. ಉದಾಹರಣೆಗೆ, 'ಯಾರೂ ನಂಬಿಕೆಗೆ ಅರ್ಹರಲ್ಲ', 'ಅಳುವುದು ಅಪ್ರಯೋಜಕ' – ಹೀಗೆ ಹಲವಾರು ಇರುತ್ತವೆ. ನಾವು ಮಾಡಿಕೊಂಡ ಇಂತಹ – ಮೇಲ್ನೋಟಕ್ಕೆ 'ನಿರ್ಧಾರ' ಎಂದು ಅನಿಸದ – ತೀರ್ಮಾನಗಳನ್ನು ಅನುಸರಿಸಿಯೇ ಬದುಕನ್ನು ನಡೆಸುತ್ತಿರುತ್ತೇವೆ. ಒಮ್ಮೆ ಇಂತಹ ತೀರ್ಮಾನಗಳನ್ನು ಗುರುತಿಸಿ ಪ್ರಶ್ನಿಸುವುದನ್ನು ಅಭ್ಯಾಸಮಾಡಿಕೊಂಡರೆ ಅವುಗಳ ಆಳದಲ್ಲಿ ಅಡಗಿರುವ ಗ್ರಹಿಕೆಗಳನ್ನು ಬದಲಾಯಿಸಿಕೊಳ್ಳುವುದೂ ಸಾಧ್ಯವಿದೆ, ಆಗ ಮಾತ್ರ ನಮ್ಮ ನಿರ್ಧಾರ ನಮ್ಮ ಸ್ವತಂತ್ರ ಪ್ರಜ್ಞಾಪೂರ್ವಕ ಆಯ್ಕೆಯಾಗಿರುತ್ತದೆ.

ನಮ್ಮ ಆಲೋಚನೆಗಳೂ, ಭಾವನೆಗಳೂ ಹೀಗೆ ಮಥನಕ್ಕೆ ಒಳಗಾದಾಗ ಮಾತ್ರ 'ಯೋಚಿಸಿ ನಿರ್ಧಾರ ತೆಗೆದುಕೊಳ್ಳುವುದು' ಎನ್ನುವುದಕ್ಕೆ ಅರ್ಥವಿರುತ್ತದೆ, ಇಲ್ಲವಾದಲ್ಲಿ ಅನ್ಯಪ್ರಭಾವಕ್ಕೆ ಒಳಗಾಗಿ ಪ್ರಚೋದನೆಗೆ ತಕ್ಕ ಪ್ರತಿಕ್ರಿಯೆ ತೋರಿಸುವುದನ್ನೇ 'ನಿರ್ಧಾರ' ಎಂದುಕೊಳ್ಳುತ್ತೇವೆ. 'ನಿರ್ಧಾರ' ಎಂದರೆ ಅದು ನಮ್ಮ ಸ್ವಾತಂತ್ರ್ಯದ ಅಭಿವ್ಯಕ್ತಿ, ನಾವು ಪ್ರಪಂಚಕ್ಕೆ ಸ್ಪಂದಿಸುವ, ಸಾವಧಾನವಾಗಿ, ಪ್ರಜ್ಞಾಪೂರ್ವಕವಾಗಿ (mindful) ಬದುಕುವ ರೀತಿ ಎನ್ನುವ ಕಲ್ಪನೆಯೇ ಉಂಟಾಗುವುದಿಲ್ಲ. 'ನಿರ್ಧಾರ ಮಾಡುವುದು' ಎಂದರೆ ಆಯ್ಕೆ ಮಾಡುವುದು, ಅನೇಕ ಆಯ್ಕೆಗಳನ್ನು ಮಾಡುವ ಸಾಧ್ಯತೆಗೆ ತೆರೆದುಕೊಳ್ಳುವುದು ಎಂದರ್ಥ. ಆಯ್ಕೆಗಳೇ ಇಲ್ಲದಂತಹ ಭಾವನಾತ್ಮಕ, ಬೌದ್ಧಿಕ ಬಂಧನಕ್ಕೆ ಒಳಗಾಗಿರುವ ಸ್ಥಿತಿಯ ಬಗ್ಗೆ ಅರಿವೂ ಇಲ್ಲದಿದ್ದಾಗ ಏನು ಒದಗುತ್ತದೆಯೋ ಅದನ್ನೇ ಆಶ್ರಯಿಸಿ ಬದುಕುವುದನ್ನು 'ಸ್ವತಂತ್ರ ನಿರ್ಧಾರ' ಎಂದು ಕರೆಯುವುದು ಸಾಧ್ಯವೇ?

ನಿರ್ಧಾರಗಳನ್ನು ತೆಗೆದುಕೊಳ್ಳುವುದರಲ್ಲಿ ನಾವು ಎರಡು ರೀತಿಯ ಅತಿರೇಕಗಳನ್ನು ನೋಡುತ್ತೇವೆ. ಒಂದು, ನಿರ್ಧಾರಗಳಿಂದ ಉಂಟಾಗುವ ಪರಿಣಾಮದ ಜವಾಬ್ದಾರಿ ಹೊರಲಾರದೆ, ಯಾವ ನಿರ್ಧಾರದಿಂದ ಏನು ತಪ್ಪಾಗುವುದೋ ಎನ್ನುವ ಹೆದರಿಕೆಯಿಂದ ಯಾವ ನಿರ್ಧಾರಗಳನ್ನೂ ತೆಗೆದುಕೊಳ್ಳದೆ ತಟಸ್ಥರಾಗಿರುವುದು; ಬೇರೆಯವರೇ ತನ್ನ ಪರಿಸ್ಥಿತಿಗೆ ಕಾರಣ ಎಂದು ದೂಷಿಸುವುದು, ಜವಾಬ್ದಾರಿಯಿಂದ ತಪ್ಪಿಸಿಕೊಂಡು ಓಡಿ ಹೋಗುವುದು. ಯಾವುದೇ ನಿರ್ಧಾರವನ್ನು ಮಾಡಿದರೂ ಅದರ ಫಲಿತಾಂಶ ಭಾಗಶಃ ಅನಿಶ್ಚಿತತೆಯಿಂದ ಕೂಡಿರುತ್ತದೆ, ತೀರ್ಮಾನವೇ ತೆಗೆದುಕೊಳ್ಳದಿರುವುದೂ ಒಂದು ತೀರ್ಮಾನವೇ ಹೌದು ಎನ್ನುವುದು ನೆನಪಿನಲ್ಲಿಟ್ಟುಕೊಳ್ಳಬೇಕಾದ ವಿಚಾರ.

ನಿರ್ಧಾರಗಳನ್ನು ಕೈಗೊಳ್ಳುವ ದಿಕ್ಕಿನಲ್ಲಿ ಎದುರಾಗುವ ಇನ್ನೊಂದು ಅತಿರೇಕವೆಂದರೆ, ಎಲ್ಲ ಸಮಸ್ಯೆಗಳನ್ನು ಇಲ್ಲಿ, ಈ ಕ್ಷಣವೇ ಪರಿಹಾರ ಮಾಡಿಕೊಂಡುಬಿಡಬೇಕು ಎನ್ನುವಂತೆ ಆಡುತ್ತಾ, ಮೊದಲು ತೋಚಿದ ಸುಲಭ (ಆದರೆ ನಂತರ ಬಲು ದುಬಾರಿಯಾಗುವ) ತೀರ್ಮಾನವನ್ನು ತೆಗೆದುಕೊಳ್ಳುವ ಆತುರದ ಸ್ವಭಾವ. ಭಾವವೇಶದಿಂದ ತಕ್ಷಣದ ಪ್ರತಿಕ್ರಿಯಾತ್ಮಕ ನಿರ್ಧಾರ ತೆಗೆದುಕೊಳ್ಳುವವರು - ಬದುಕು, ಭಾವನೆ, ಸಂಬಂಧ, ಏನನ್ನಾದರೂ ಕಟ್ಟುವುದು, ಬೆಳೆಸುವುದು, ಸಾಧಿಸುವುದು ಎಲ್ಲವೂ ಒಂದು ಪ್ರಕ್ರಿಯೆ. ಕಾಲಕ್ಕೆ ತನ್ನದೇ ಗತಿ, ರೀತಿ–ನೀತಿಗಳಿವೆ ಎನ್ನುವುದನ್ನು ಮನನ ಮಾಡಿಕೊಂಡಾಗ ಅನೇಕ ಆಯ್ಕೆಗಳಿರುವುದನ್ನು, ಆಯ್ದುಕೊಳ್ಳುವ ಸ್ವಾತಂತ್ರ್ಯವಿರುವುದನ್ನು ಕಂಡುಕೊಳ್ಳಬಹುದು.

ಸವೆಯುವ ಮೂಳೆಗಳು...

ಡಾ. ವಿಜಯಲಕ್ಷ್ಮಿ ಪಿ.

ಈಗ ಮಕ್ಕಳಿಂದ ಮುದುಕರವರೆಗೂ ಹೆಚ್ಚಿನವರು ಹೇಳುವುದು; 'ನಮಗೆ ಕಾಲು ನೋವಿದೆ. ಮಂಡಿನೋವಿದೆ. ಸ್ವಲ್ಪ ಕೆಲಸ ಮಾಡಿದರೂ ಸುಸ್ತಾಗುತ್ತದೆ. ಇನ್ನು ಕೆಲವರು ಹೇಳುತ್ತಾರೆ: 'ನನಗೆ ವಾತ ಆಗಿದೆ. ಗಂಟು ನೋಯುತ್ತೆ'.

ಈ ಸಮಸ್ಯೆಗಳಿಗೆ ಕಾರಣ ಏನು?

ಅತಿಯಾದರೆ ಅಮೃತವೂ ವಿಷವೇ. ಒಳ್ಳೆಯದು ಎಂದು ಯಾವ ನಿತ್ಯಕರ್ಮಗಳನ್ನೇ ಆಗಲಿ ಅತಿಯಾಗಿ ಮಾಡಿದರೆ ಅಥವಾ ಕ್ರಮಬದ್ಧರಾಗದೇ ಇದ್ದರೆ ಅವು ಆರೋಗ್ಯ ಸಮಸ್ಯೆಗಳನ್ನು ಹುಟ್ಟುಹಾಕಬಹುದು.

ಮೊದಲನೆಯದಾಗಿ ಹಸಿವಿರುವಾಗ ಆಹಾರವನ್ನು ಸೇವಿಸದೇ ಇರುವುದು, ಅಥವಾ ಅತಿ ಅಲ್ಪಾಹಾರವನ್ನು ಸೇವಿಸುವುದು – ಹೀಗೆ ಮಾಡುವುದರಿಂದ ಮೂಳೆಯ ಬೆಳವಣಿಗೆಗೆ ಬೇಕಾದ ಪೋಷಕಾಂಶ ಸಿಗುವುದಿಲ್ಲ. ತೂಕವನ್ನು ಕಡಿಮೆ ಮಾಡಿಕೊಳ್ಳುವ ಭರದಲ್ಲಿ ಕ್ರಮಬದ್ಧವಲ್ಲದ ಆಹಾರ ಕ್ರಮಗಳನ್ನು, ವ್ಯಾಯಾಮದ ವಿಧಾನಗಳನ್ನು ಅಳವಡಿಸಿಕೊಂಡರೆ ತೊಂದರೆ ತಪ್ಪಿದ್ದಲ್ಲ. ಜಿಡ್ಡಿನಂಶ ಹೃದಯಕ್ಕೆ ತೊಂದರೆ ಕೊಡುತ್ತದೆ ಎಂಬ ಭ್ರಮೆಯಲ್ಲಿ ಕೆಲವರು ಸಂಪೂರ್ಣವಾಗಿ ಜಿಡ್ಡನ್ನು ವರ್ಜಿಸುತ್ತಾರೆ. ಹೀಗೆ ಮಾಡುವುದರಿಂದ ಸಂಧಿ ಮತ್ತು ಮೂಳೆಗಳ ಚಲನೆ ಕುಂಠಿತಗೊಂಡು, ಮೂಳೆಗಳ ನೋವು ಕಾಣಿಸಿಕೊಳ್ಳುತ್ತದೆ. ಅತಿಯಾದ ಶೀತದ ವಾತಾವರಣದಲ್ಲಿರುವುದು, ಅತಿ ತಂಪಿನ ಆಹಾರಗಳ ಸೇವನೆ, ಕ್ಷಾರೀಯವಾದ, ತಂಪಾದ ಪಾನೀಯಗಳ ನಿರಂತರ ಸೇವನೆಯಿಂದ ಮೂಳೆಗಳು ಸವೆಯಬಹುದು. ಹಗಲು-ರಾತ್ರಿ ಕೆಲಸ ಎಂದು ಅತ್ಯಲ್ಪ ನಿದ್ರೆ ಮಾಡುವುದು, ನಿದ್ರೆ ಬರುವಾಗಲೂ ನಿದ್ರೆಯನ್ನು ತಡೆಯುವುದು, ಹಗಲಿನಲ್ಲಿ ಅತಿಯಾಗಿ ನಿದ್ರೆ ಮಾಡುವುದು – ಇವೆಲ್ಲವೂ ದೇಹದಲ್ಲಿನ ವಾಯುವನ್ನು ಪ್ರಚೋದಿಸುತ್ತದೆ.

ಅತಿವ್ಯಾಯಾಮ; ನಿಯಮಿತವಲ್ಲದ ವ್ಯಾಯಾಮ, ಆಹಾರ ಜೀರ್ಣವಾಗುವ ಮೊದಲು, ಅಕಾಲದಲ್ಲಿ, ಏಕಾಂಗ ವೃದ್ಧಿಗಾಗಿ, ದೇಹ ದಷ್ಟಪುಷ್ಟಗೊಳ್ಳಲು ಮಾಡುವ ವ್ಯಾಯಾಮ, ಅತಿಯಾಗಿ ಈಜುವುದು, ಓಡುವುದು, ನಡೆಯುವುದು, ಅತಿ ಶ್ರಮದ ಕೆಲಸಗಳನ್ನು ನಿರಂತರವಾಗಿ ಮಾಡುವುದು ಅಥವಾ ಸದಾ ಕುಳಿತಿರುವುದು; ಅಸಾಮಾನ್ಯ ಭಂಗಿಗಳಲ್ಲಿ ಕುಳಿತುಕೊಳ್ಳುವುದು, ಅಥವಾ ಮಲಗಿಕೊಳ್ಳುವುದು – ಇವೆಲ್ಲವೂ ಮೂಳೆಗಳ ಸವೆತಕ್ಕೆ ಕಾರಣವಾಗುತ್ತವೆ. ದೇಹಬಲಕ್ಕೆ ಅನುಗುಣವಾಗಿ ನಿಯಮಿತವಾಗಿ ಮಾಡುವ ವ್ಯಾಯಾಮವು ಮೂಳೆಗಳ ಶಕ್ತಿಯನ್ನು ಹೆಚ್ಚಿಸುತ್ತದೆ. ಕೆಲವು ಔಷಧಗಳನ್ನು ಕ್ರಮವರಿಯದೆ ಸೇವಿಸುವುದೂ ಮೂಳೆಗಳ ಸವೆತಕ್ಕೆ ಕಾರಣವಾಗಬಹುದು. ದೈಹಿಕ ರೋಗದಿಂದಲೋ, ಮಾನಸಿಕ ಒತ್ತಡದಿಂದಲೋ ದೇಹದ ತೂಕ ವಿಪರೀತ ಕಡಿಮೆಯಾದರೆ, ಆಗಲೂ ಮೂಳೆಗಳ ಸವೆತಕ್ಕೆ, ಸಂಧಿಗಳ ಶೈಥಿಲ್ಯಕ್ಕೆ ಕಾರಣವಾಗುತ್ತದೆ.

ಮಲ-ಮೂತ್ರಗಳು, ಹಸಿವೆ-ಬಾಯಾರಿಕೆಗಳು ಮುಂತಾದ ದೇಹದ ಸಹಜ ಪ್ರಕ್ರಿಯೆಗಳನ್ನು ಬಲವಂತವಾಗಿ ತಡೆಯುವುದರಿಂದ ಮೂಳೆಗಳ ಕಾರ್ಯಕ್ಷಮತೆ ಕುಂಠಿತವಾಗುತ್ತದೆ. ಅಪಘಾತದಿಂದ, ಕೆಲವು ಶಸ್ತ್ರಚಿಕಿತ್ಸೆಯಿಂದಾಗಿ, ಶಸ್ತ್ರಚಿಕಿತ್ಸೆಯ ನಂತರ ಸೇವಿಸುವ ಆಹಾರಗಳಿಂದಲೂ ಮೂಳೆಗಳ ದೃಢತೆಯಲ್ಲಿ ವ್ಯತ್ಯಯ ಉಂಟಾಗುತ್ತದೆ.

ಮೂಳೆಗಳ ಸವೆತ ತಡೆಯಲು ಏನು ಮಾಡಬಹುದು?: ನಿತ್ಯವೂ ಬೇಯಿಸಿದ ಆಹಾರಸೇವನೆ, ದೇಸಿ ಹಸುವಿನ ತುಪ್ಪ, ಮಜ್ಜಿಗೆ, ಹಾಲಿನ ಸೇವನೆ, ಖರ್ಜೂರ, ಅಂಜೂರ, ದ್ರಾಕ್ಷಿ ಮುಂತಾದ ಒಣಹಣ್ಣುಗಳ ಸೇವನೆ ಇವು ಮೂಳೆಗಳ ಸವೆತವನ್ನು ತಡೆಯುತ್ತದೆ. ನುಗ್ಗೆ ಸೊಪ್ಪು, ನುಗ್ಗೆಕಾಯಿ, ಬಸಳೆ, ಬೆಂಡೆ, ನೆಲ್ಲಿಕಾಯಿ, ಮಂಗರವಳ್ಳಿ – ಇವುಗಳ ಸೇವನೆ ಮೂಳೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ಬಿಸಿ ಮಾಡಿ ಫ್ರಿಜ್‌ನಲ್ಲಿ ಶೇಖರಿಸಿಟ್ಟ ಆಹಾರವನ್ನು ಸೇವಿಸದಿರುವುದು ಒಳ್ಳೆಯದು. ಎಳ್ಳೆಣ್ಣೆ, ಕೊಬ್ಬರಿಯೆಣ್ಣೆ, ತುಪ್ಪ, ಹರಳೆಣ್ಣೆಗಳನ್ನು ಸಮಪ್ರಮಾಣದಲ್ಲಿ ಬೆರೆಸಿ, ಓಮ, ವಾಯುವಿಡಂಗ, ಜೀರಿಗೆ ಇವುಗಳನ್ನು ಸೇರಿಸಿ ಒಗ್ಗರಣೆ ಮಾಡಿ, ಆ ಎಣ್ಣೆಯನ್ನು ನಿತ್ಯ ಅಭ್ಯಂಗ ಮಾಡುವುದರಿಂದ ಸಂದುನೋವು, ಮೂಳೆಗಳ ಸವೆತ ಆಗದಂತೆ ತಡೆಗಟ್ಟಬಹುದು. ಈ ಎಣ್ಣೆಯ ಮಿಶ್ರಣವನ್ನು ನೋವಿರುವ ಭಾಗಕ್ಕೆ ಹಚ್ಚಿ, ಬಿಸಿ ಶಾಖವನ್ನು ಕೊಡುವುದರಿಂದ ನೋವು ಕಡಿಮೆಯಾಗುತ್ತದೆ.

ಅತಿ ಕಹಿ ಸೇವನೆ ಸಲ್ಲ: ಮೂಳೆಗಳ ನೋವು, ಸಂಧಿನೋವು ಇರುವವರು ಅತಿ ಕಹಿ ಪದಾರ್ಥಗಳಾದ ಹಾಗಲಕಾಯಿ, ಗೋರಿಕಾಯಿ, ಮೆಂತ್ಯ, ಬೇವಿನ ಸೊಪ್ಪಿನ ರಸವನ್ನು ನಿರಂತರವಾಗಿ ಔಷಧ ಅಥವಾ ಆಹಾರರೂಪದಲ್ಲಿ ಬಳಸಬಾರದು.

ದೇಹದ ಅಗತ್ಯಕ್ಕಿಂತ ಹೆಚ್ಚಿನ ಆಹಾರವನ್ನು ಸೇವಿಸುವುದು, ತಿಂದ ಆಹಾರ ಜೀರ್ಣವಾಗುವ ಮೊದಲೇ ಆಹಾರವನ್ನು ಸೇವಿಸುವುದು, ಬಲ ಬರಬೇಕೆಂದು ಜಿಡ್ಡಿನ ಕಾಳುಗಳಾದ ಬಾದಾಮಿ, ಪಿಸ್ತಾಗಳ ಅತಿಯಾದ ಸೇವನೆಯಿಂದ ದೇಹದ ತೂಕ ಹೆಚ್ಚಿ, ಕಾಲುಗಳ ಮೇಲೆ ಭಾರ ಹೆಚ್ಚುತ್ತದೆ. ಆಗಲೂ ಮಂಡಿಸವೆತ ಉಂಟಾಗಿ ಮಂಡಿನೋವು ಬರಬಹುದು. ಹಾಗಾಗಿ ದೇಹದ ತೂಕ ಹೆಚ್ಚಳವಾಗದಂತೆ ನೋಡಿಕೊಳ್ಳಬೇಕು.

ತೂಕ ಕಡಿಮೆಯಾದರೂ ಹೆಚ್ಚಾದರೂ, ಮಂಡಿ, ಮತ್ತು ಇತರ ಸಂದುಗಳಲ್ಲಿರುವ ಜಿಡ್ಡಿನ ಅಂಶದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಹೀಗಾಗದಂತೆ ಎಚ್ಚರ ವಹಿಸಬೇಕು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

ಅಭ್ಯಾಸ 1.2

1. ಕೆಳಗಿನ ಕೋಷ್ಟಕದಲ್ಲಿ ಬಿಟ್ಟಿರುವ ಜಾಗವನ್ನು ತುಂಬಿ. ಸಮಾಂತರ ಶ್ರೇಢಿಯ ಮೊದಲ ಪದ a, ಸಾಮಾನ್ಯ ವ್ಯತ್ಯಾಸ d ಮತ್ತು nನೇ ಪದ a_n ಆಗಿದೆ

	a	d	n	a_n
(i)	7	3	8	......
(ii)	– 18	......	10	0
(iii)	....	– 3	18	– 5
(iv)	– 18.9	2.5	......	3.6
(v)	3.5	0	105	......

ಪರಿಹಾರ:–

(i) $a_n = a + (n-1)d$
$= 7 + (8-1)3$
$= 7 + (7)3$
$= 7 + 21$
$a_n = 28$

(ii) $a_n = a + (n-1)d$
$0 = -18 + (10-1)d$
$18 = 9d$
$d = \frac{18}{9} = 2$

(iii) $a_n = a + (n-1)d$
$-5 = a + (18-1)(-3)$
$-5 = a - 51$
$a = 51 - 5$
$a = 46$

(iv) $a_n = a + (n-1)d$
$3.6 = -18.9 = (n-1)25$
$3.6 + 18.9 = (n-1)(2.5)$
$22.5 = (n-1)(2.5)$
$n - 1 = \frac{22.5}{2.5}$
$= n - 1 = 9$
$n - 1 = 9 + 1$
$n = 10$

(v) $a_n = a + (n-1)d$
$= 3.5 + (105-1)0$
$a_n = 3.5$

	a	d	n	a_n
(i)	7	3	8	28
(ii)	– 18	2	10	0
(iii)	46	– 3	18	– 5
(iv)	– 18.9	2.5	10	3.6
(v)	3.5	0	105	3.5

2. ಕೆಳಗಿನವುಗಳಿಗೆ ಸರಿಯಾದ ಆಯ್ಕೆಯನ್ನು ಆರಿಸಿ ಸಮರ್ಥಿಸಿ

(i) 10, 7, 4 ..... ಈ ಸಮಾಂತರ ಶ್ರೇಢಿಯ 30ನೇ ಪದ
(A) 97 (B) 77
(C) -77 (D) -87

(ii) $-3, -\frac{1}{2}, 2$............ ಈ ಸಮಾಂತರ ಶ್ರೇಢಿಯ 11 ನೇ ಪದ
(A) 28 (B) 22
(C) -38 (D) $-48\frac{1}{2}$

ಪರಿಹಾರ: (i)
a=10 d= 7-10=-3 n=30
$a_n = a + (n-1)d$
$a_{30} = 10 + (30-1)(-3)$
$= 10 - 87$
$a_{30} = -77$

ಸರಿಯಾದ ಉತ್ತರ:– (C) -77

ಪರಿಹಾರ: (ii) a = -3 n = 11
$d = -\frac{1}{2} - (-3) = -\frac{1}{2} + 3 = \frac{5}{2}$
$a_n = a + (n-1)d$
$a_{11} = -3 + (11-1)\left(\frac{5}{2}\right)$
$= -2 + 25 = 22$

ಸರಿಯಾದ ಉತ್ತರ:– (B) 22

3. ಕೆಳಗಿನ ಸಮಾಂತರ ಶ್ರೇಢಿಯ ಬಾಕ್ಸ್‌ಗಳಲ್ಲಿ ಖಾಲಿ ಬಿಟ್ಟಿರುವ ಪದಗಳನ್ನು ತುಂಬಿಸಿ.
(i) 2, ☐ , , 26
(ii) ☐, 13, ☐ 3
(iii) 5, ☐ ☐ 91/2
(iv) – 4, ☐ ☐ ☐ ☐
(v) ☐, 38, ☐ ☐ ☐ 22

ಪರಿಹಾರ: (1) ನೀಡಿರುವ ಸಮಾಂತರ ಶ್ರೇಢಿಯ ಸಾಮಾನ್ಯ ವ್ಯತ್ಯಾಸ d ಆಗಿರಲಿ

ಮೂರನೇ ಪದ $= 2 + d + d = 2 + 2d$

ಪ್ರಶ್ನೆಯ ಪ್ರಕಾರ
$2 + 2d = 26$
$2d = 26 - 2$
$2d = 24 \Rightarrow d = 24/2 = 12$

ದ್ವಿತೀಯ ಪದ $= 2 + d = 2 + 12 = 14$

(ii) ☐, 13, ☐, 3
2ನೇ ಪದ = 13
$a + d = 13$....................(1)
ನಾಲ್ಕನೇ ಪದ
$a + (4-1)d = 3$
$a + 3d = 3$.................(2)
(1) ಮತ್ತು (2)ನ್ನು ಬಿಡಿಸುವುದರಿಂದ
$a = 18 \quad d = -5$
$\therefore$ 3rd term $= a + (3-1)d$
$= a + 2d$
$= 18 + 2(-5)$
$= 18 - 10 = 8$
2ನೇ ಪದ $= 2 + d = 2 + 12 = 14$
ಹೀಗಾಗಿ ಬಿಟ್ಟುಹೋದ ಪದಗಳು 18 ಮತ್ತು 8

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC PHYSICS

Chapter – 1

ELECTRIC CHARGES AND FIELDS

Problems:-

7. Four charges +q, +q, -q, -q are placed respectively at the four corners of a square of side a. Find the magnitude and direction of the electric field at the centre of the square.

Soln:- Here, $AC = \sqrt{a^2 + a^2} = \sqrt{2}\ a = BD$

$\therefore AO = BO = CO = DO = \frac{\sqrt{2}}{2}a = \frac{a}{\sqrt{2}}$

Step- 1. Electric field at O due to charge at A is

$$E_A = \frac{1}{4\pi\epsilon_0}\frac{q}{AO^2}$$

$$= \frac{1}{4\pi\epsilon_0}\frac{2q}{a^2}, \text{ along OC}$$



Similarly, $E_B = \frac{1}{4\pi\epsilon_0}\frac{2q}{a^2}$; along OD

$$E_C = \frac{1}{4\pi\epsilon_0}\frac{2q}{a^2}, \text{ along OC}$$

$$E_D = \frac{1}{4\pi\epsilon_0}\frac{2q}{a^2}, \text{ along OD}$$

Step- 2. *Total electric field at 0 along OC,*

$E_1 = E_A + E_C$

$$= \frac{1}{4\pi\epsilon_0}\frac{2q}{a^2} + \frac{1}{4\pi\epsilon_0}\frac{2q}{a^2}$$

$$(\text{or})\ E_1 = \frac{1}{4\pi\epsilon_0}\frac{4q}{a^2}$$

Step- 3. ***Total electric field at 0 along OD,***

$$E_2 = E_B + E_D = \frac{1}{4\pi\epsilon_0}\frac{4q}{a^2}.$$

Step- 4. Since, E_1 and E_2 are perpendicular to each other, therefore, resultant electric field at O is

$$E = \sqrt{E_1^2 + E_2^2} = \sqrt{2E_1^2} \quad (\therefore E_1 = E_2)$$

$$= \sqrt{2}E_1 = \frac{1}{4\pi\epsilon_0}\frac{4\sqrt{2}q}{a^2};$$

parallel to BC or AD.

4. A Liquid drop having 6 excess electrons is kept stationary under a uniform electric field of 25.5 kVm^{-1}. The density of liquid is 1.26 x 10^3 kgm^{-3}. Find the radius of the drop.

Soln:- ***STEP 1 -*** When liquid drop is held stationary, net force acting on it is zero.

Forces acting on the drop:

i) Weight of the drop vertically downward
and
ii) Force due to electric field (F = qE) vertically upward.

Here, weight of drop, W = mg

But $m = \left(\frac{4}{3}\pi r^3\right)\rho$, where $\left(\frac{4}{3}\pi r^3\right)$ is the volume, ρ is density of liquid and r is radius of drop

$$\therefore \quad W = \frac{4}{3}\pi r^3 \rho g$$

And electric force, F = qE = 6e x E

STEP 2 - Since drop is stationary, so

W – F = 0 or W = F

$$\text{or } \frac{4}{3}\pi r^3 \rho g = 6eE$$

$$(\text{or})\ r^3 = \frac{3 \times 6eE}{4\pi\rho g}$$

Hence, $e = 1.6 \times 10^{-19}$C
$E = 25.5 \times 10^3\ Vm^{-1}$
$\rho = 1.26 \times 10^3\ kg\ m^{-3}$
$g = 9.8\ m\ s^{-2}$

$$\therefore r^3 = \frac{3 \times 6 \times 1.6 \times 10^{-19} \times 25.5 \times 10^3}{4 \times 3.142 \times 1.26 \times 10^3 \times 9.8}$$

$= 0.0789 \times 10^{-18}$

∴ radius of drop,

$r = (0.0789 \times 10^{-18})^{1/3}$
$= 4.3 \times 10^{-7}$ m.

5. A pendulum bob of mass 80 mg and carrying charge of 2 x 10^{-8} C is at rest at a certain angle with the vertical in a horizontal uniform electric field of 20,000 Vm^{-1}. Find the tension in thread of the pendulum and the angle, it makes with the vertical.

Soln:-

Let T be the tension in the thread of the pendulum. Various forces acting on the pendulum are:

i) Weight (*mg*) of the bob of the pendulum.
ii) Tension (T) in the thread.
iii) Force (F) due to electric field (F = qE).



STEP 1 - Resolve T into two components.

i) T cos θ, which balance mg

ii) T sin θ which is equal and opposite to qE because the bob is in equilibrium

STEP 1 - Resolve T into two components.

i) T cos θ, which balance mg

ii) T sin θ which is equal and opposite to qE because the bob is in equilibrium

then, T cos θ = *mg*

and T sin θ = qE

STEP 2 - **Dividing (ii) by (i),**

$$\tan\theta = \frac{qE}{mg}$$

Here $q = 2 \times 10^{-8}$ C,
$E = 20{,}000\ Vm^{-1}$
$m = 80 \times 10^{-6}$ kg (1 milligram = 10^{-6} kg)
$= 8 \times 10^{-5}$ kg
$g = 9.8\ m\ S^{-2}$

(Contd.......)

ಇಸ್ರೇಲ್‌ನ ಸಂಘರ್ಷ ಪೀಡಿತ ಪ್ರದೇಶಕ್ಕೆ ಯುದ್ಧ ವಿಮಾನ, ಕ್ಷಿಪಣಿ ನಾಶಕಗಳು

ಸೇನಾ ನೆರವು ನೀಡಿದ ಅಮೆರಿಕ

ಇಸ್ರೇಲ್ ಸೇನೆ ವೈಮಾನಿಕ ದಾಳಿ ನಡೆಸಿದ ನಂತರ ಗಾಜಾ ನಗರದಲ್ಲಿ ದಟ್ಟ ಹೊಗೆ ಆವರಿಸಿತು –ಎಎಫ್‌ಪಿ ಚಿತ್ರ

ವಾಷಿಂಗ್ಟನ್ (ಎಎಫ್‌ಪಿ): ಇಸ್ರೇಲ್‌ನ ದಕ್ಷಿಣ ಭಾಗದಲ್ಲಿ ಹಮಾಸ್ ಬಂಡುಕೋರರು ದಾಳಿ ನಡೆಸಿದ ಹಿನ್ನೆಲೆಯಲ್ಲಿ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಇಸ್ರೇಲ್‌ಗೆ ರಕ್ಷಣಾ ನೆರವು ರವಾನಿಸಿದ್ದಾರೆ.

ಯುದ್ಧ ವಿಮಾನಗಳನ್ನು ಹೊತ್ತೊಯ್ಯುವ ಅಮೆರಿಕದ ನೌಕಾಪಡೆಯ ಯುಎಸ್‌ಎಸ್ ಗೆರಾಲ್ಡ್ ಆರ್ ಫೋರ್ಡ್ ನೌಕೆ, ಕ್ಷಿಪಣಿಗಳು ಹಾಗೂ ಇತರ ಯುದ್ಧ ನೌಕೆಗಳನ್ನು ಕಳುಹಿಸುತ್ತಿರುವುದಾಗಿ ಪೆಂಟಗನ್‌ನ (ಅಮೆರಿಕ ಸೇನೆಯ ಮುಖ್ಯ ಕಚೇರಿ) ಹೇಳಿಕೆ ತಿಳಿಸಿದೆ.

ಯುದ್ಧವಿಮಾನಗಳು ಭಾನುವಾರ ಮಧ್ಯಾಹ್ನವೇ ಇಸ್ರೇಲ್‌ನತ್ತ ಹೊರಟಿವೆ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜತೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ದೂರವಾಣಿ ಮೂಲಕ ಚರ್ಚಿಸಿದ್ದಾರೆ. 'ಇಸ್ರೇಲ್‌ಗೆ ಹೆಚ್ಚುವರಿ ನೆರವು ನೀಡಲು ರಕ್ಷಣಾ ಪಡೆಗಳನ್ನು ಕಳುಹಿಸಲಾಗುತ್ತಿದ್ದು, ಮುಂಬರುವ ದಿನಗಳಲ್ಲಿ ಮತ್ತಷ್ಟು ನೆರವು ನೀಡಲಾಗುವುದು ಎಂದು ತಿಳಿಸಲಾಯಿತು ಎಂದು ಶ್ವೇತಭವನ ಹೇಳಿದೆ.

'ಇಸ್ರೇಲ್‌ನ ಯಾವುದೇ ಶತ್ರು ಪ್ರಸ್ತುತ ಪರಿಸ್ಥಿತಿಯ ಲಾಭ ಪಡೆಯುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಲು ನಡೆಯುತ್ತಿರುವ ಪ್ರಯತ್ನಗಳ ಬಗ್ಗೆಯೂ ನಾಯಕರು ಚರ್ಚಿಸಿದ್ದಾರೆ' ಎಂದು ಹೇಳಿಕೆ ತಿಳಿಸಿದೆ.

'ಇಸ್ರೇಲ್‌ಗೆ ಶಸ್ತ್ರಾಸ್ತ್ರಗಳನ್ನು ಪೂರೈಸುವ ಪ್ರಮುಖ ದೇಶ ಅಮೆರಿಕ, ರಕ್ಷಣಾ ನೆರವು ಒದಗಿಸುವ ಮೂಲಕ ನಮ್ಮ ವಿರುದ್ಧದ ಹೋರಾಟದಲ್ಲಿ ಭಾಗಿಯಾಗಿದೆ' ಎಂದು ಹಮಾಸ್ ಆರೋಪಿಸಿದೆ.

ಯುದ್ಧಪೀಡಿತ ಪ್ರದೇಶದಲ್ಲಿ ಪರಿಸ್ಥಿತಿ ಬಿಗಡಾಯಿಸಿರುವ ಕಾರಣ ಬೈಡನ್ ಆಡಳಿತ ಚರ್ಚಿಸುತ್ತಿರುವ ಹತ್ತಿಕ್ಕಲು ರಕ್ಷಣಾ ಪಡೆಗಳನ್ನು ಕಳುಹಿಸಲಾಗಿದೆ. ಯುದ್ಧವಿಮಾನಗಳ ಜತೆಗೆ ಕ್ಷಿಪಣಿ ಕ್ರೂಸರ್, ನಾಲ್ಕು ಕ್ಷಿಪಣಿ ನಾಶಕಗಳು ಸಹ ಇವೆ ಎಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಮೆರಿಕ ಸರ್ಕಾರ ಇಸ್ರೇಲ್ ರಕ್ಷಣಾ ಪಡೆಗಳಿಗೆ ಶಸ್ತ್ರಾಸ್ತ್ರಗಳು ಸೇರಿದಂತೆ ಹೆಚ್ಚುವರಿ ಸೇನಾ ಪರಿಕರಗಳು ಮತ್ತು ಸಂಪನ್ಮೂಲಗಳನ್ನು ತ್ವರಿತವಾಗಿ ಒದಗಿಸಲಿದೆ. ಸೇನಾ ನೆರವಿನಿಂದ ಇಸ್ರೇಲ್ ಜನರಿಗೆ ಉತ್ಕಟ ಬಲ ಬಂದಂತಾಗುತ್ತದೆ ಎಂದು ಹೇಳಿದ್ದಾರೆ.

ಇದಕ್ಕೂ ಮುನ್ನ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್, 'ಹಮಾಸ್ ಬಂಡುಕೋರರು ಅಮೆರಿಕದ ಪ್ರಜೆಗಳನ್ನು ಒತ್ತೆಯಾಳುಗಳಾಗಿ ಇರಿಸಿಕೊಂಡಿರುವುದು, ಇದು ಬೃಹತ್ ಭಯೋತ್ಪಾದಕ ದಾಳಿಯಾಗಿದೆ. ಮನೆಗಳಿಗೆ ನುಗ್ಗಿ ನಾಗರಿಕರನ್ನು ಗುಂಡಿಕ್ಕಿ ಕೊಲ್ಲಲಾಗುತ್ತಿದೆ' ಎಂದು ಹೇಳಿದ್ದಾರೆ.

ಒತ್ತೆಯಾಳುಗಳ ಬಿಡುಗಡೆಗೆ ಸಂಧಾನ (ದೋಹಾ/ಗಾಜಾ -ರಾಯಿಟರ್ಸ್): ಇಸ್ರೇಲ್ ಜೈಲುಗಳಿಂದ 36 ಮಂದಿ ಪ್ಯಾಲೆಸ್ಟೀನ್ ಮಹಿಳೆಯರು ಮತ್ತು ಮಕ್ಕಳ ಬಿಡುಗಡೆಗೆ ಪ್ರತಿಯಾಗಿ ಬಂಡುಕೋರರ ವಶದಲ್ಲಿರುವ ಮಹಿಳೆಯರು ಮತ್ತು ಮಕ್ಕಳ ಬಿಡುಗಡೆ ಮಾಡಿಸಲು ಕತಾರ್‌ನ ಸಂಧಾನಕಾರರು ಹಮಾಸ್ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕತಾರ್ ಮತ್ತು ಅಮೆರಿಕದ ನೆರವಿನೊಂದಿಗೆ ಶನಿವಾರ ರಾತ್ರಿಯಿಂದ ನಡೆದಿರುವ ಮಾತುಕತೆಗಳು ಸಕಾರಾತ್ಮಕವಾಗಿವೆ ಎಂದು ಮೂಲಗಳು ತಿಳಿಸಿವೆ. ಇಸ್ರೇಲ್‌ನ ಒತ್ತೆಯಾಳುಗಳೊಂದಿಗೆ ಹಮಾಸ್ ಬಂಡುಕೋರರು ಪರಾರಿಯಾದ ಬಳಿಕ ದೋಹಾ ಮತ್ತು ಗಾಜಾದಲ್ಲಿನ ಹಮಾಸ್ ಪ್ರತಿನಿಧಿಗಳ ಜೊತೆ ಕತಾರ್ ಸಂಪರ್ಕದಲ್ಲಿದೆ ಎಂದು ಮೂಲಗಳು ತಿಳಿಸಿವೆ.

ಗಾಜಾದಲ್ಲಿ ಇಸ್ರೇಲ್ ಒತ್ತೆಯಾಳುಗಳ ಸಂಖ್ಯೆ ಎಷ್ಟು ಎಂಬುದು ಅಸ್ಪಷ್ಟವಾಗಿದೆ. ಹಮಾಸ್ ಬಂಡುಕೋರರು ಮಹಿಳೆಯರು, ಮಕ್ಕಳು, ವೃದ್ಧರು ಮತ್ತು ಸೈನಿಕರನ್ನು ಒತ್ತೆ ಇರಿಸಿಕೊಂಡಿದೆ ಎಂದು ನಂಬಲಾಗಿದೆ.

ಗಾಜಾ ಗಡಿ ಸಮೀಪವಿರುವ ಕಿಬುಟ್ಜೀಮ್‌ನಿಂದ ಸ್ಥಳಾಂತರಗೊಂಡಿರುವ ಇಸ್ರೇಲ್ ನಿರಾಶ್ರಿತರಿಗೆ ವಸ್ತ್ರಗಳನ್ನು ನೀಡಲಾಯಿತು –ಎಎಫ್‌ಪಿ ಚಿತ್ರ

ಪ್ಯಾಲೆಸ್ಟೀನ್‌ಗೆ ನೆರವು ಅಮಾನತು

ಬ್ರಸೆಲ್ಸ್ (ಎಎಫ್‌ಪಿ): ಐರೋಪ್ಯ ಒಕ್ಕೂಟವು ಪ್ಯಾಲೆಸ್ಟೀನಿಯನ್ನರ ನೆರವಿಗೆ ನೀಡುವ 728 ಮಿಲಿಯನ್ ಡಾಲರ್ (ಅಂದಾಜು ₹6,065 ಕೋಟಿ) ಅನುದಾನವನ್ನು ತಡೆ ಹಿಡಿದಿದೆ. ಹಮಾಸ್ ಬಂಡುಕೋರರು ಇಸ್ರೇಲ್ ಪ್ರಜೆಗಳ ಮೇಲೆ ನಡೆಸಿದ ದಾಳಿಯ ನಂತರ ಈ ತೀರ್ಮಾನ ಕೈಗೊಂಡಿದೆ.

'ಇಸ್ರೇಲ್ ಮತ್ತು ಅಲ್ಲಿನ ಪ್ರಜೆಗಳ ಮೇಲೆ ನಡೆಸಿದ ಭಯೋತ್ಪಾದಕ ದಾಳಿಯ ಒಂದು ತಿರುವು ಇದ್ದಂತೆ. ಇನ್ನು ಮುಂದೆ ಎಲ್ಲವೂ ಸಹಜವಾಗಿ ನಡೆಯಲು ಸಾಧ್ಯವಿಲ್ಲ' ಎಂದು ಐರೋಪ್ಯ ಒಕ್ಕೂಟದ ಅಧಿಕಾರಿ ಆಲಿವರ್ ವರ್ಹೇಲ್ಯಿ ತಿಳಿಸಿದ್ದಾರೆ.

ದಾಳಿ ಹಿಂದೆ ನಮ್ಮ ಪಾತ್ರವಿಲ್ಲ: ಇರಾನ್

ತೆಹ್ರಾನ್ (ಎಎಫ್‌ಪಿ): ಇಸ್ರೇಲ್ ಮೇಲೆ ಹಮಾಸ್ ಬಂಡುಕೋರರು ನಡೆಸಿದ ದಾಳಿಯ ಹಿಂದೆ ತನ್ನ ಪಾತ್ರವಿದೆ ಎಂಬ ಆರೋಪವು ಆಧಾರರಹಿತ ಎಂದು ಇರಾನ್ ಹೇಳಿದೆ.

'ದಾಳಿಯ ಹಿಂದೆ ಇರಾನ್‌ನ ಪಾತ್ರಕ್ಕೆ ಸಂಬಂಧಿಸಿದ ಆರೋಪಗಳು ರಾಜಕೀಯ ಕಾರಣಗಳನ್ನು ಆಧರಿಸಿವೆ. ಇಸ್ಲಾಮಿಕ್ ಗಣರಾಜ್ಯ ಇರಾನ್ ಪ್ಯಾಲೆಸ್ಟೀನ್ ಸೇರಿದಂತೆ ಇತರ ದೇಶಗಳಲ್ಲಿನ ನಿರ್ಣಯಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ನಾಸೆರ್ ಕನಾನಿ ಸುದ್ದಿಗಾರರಿಗೆ ತಿಳಿಸಿದರು.

'ತೆಹ್ರಾನ್ ಯಾವುದೇ ಸಹಾಯವಿಲ್ಲದೆ ಪ್ಯಾಲೆಸ್ಟೀನ್ ಜನ ತಮ್ಮ ರಾಷ್ಟ್ರವನ್ನು ರಕ್ಷಿಸಲು ಹಾಗೂ ತಮ್ಮ ಹಕ್ಕುಗಳನ್ನು ಮರಳಿ ಪಡೆಯಲು ಅಗತ್ಯವಾದ ಸಾಮರ್ಥ್ಯ ಮತ್ತು ಇಚ್ಛಾಶಕ್ತಿ ಹೊಂದಿದ್ದಾರೆ ಎಂದು ಕನಾನಿ ಹೇಳಿದರು.

ಹಮಾಸ್ ದಾಳಿ ಹಿಂದೆ ಇರಾನ್ ಪಾತ್ರವಿದೆ ಎಂಬ ಆರೋಪವನ್ನು ವಿಶ್ವಸಂಸ್ಥೆಯಲ್ಲಿನ ಇರಾನ್‌ನ ಕಾಯಂ ನಿಯೋಗವು ರಾತ್ರಿ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ನಿರಾಕರಿಸಿದೆ.

'ಇಸ್ರೇಲ್ ಮೇಲೆ ಹಮಾಸ್ ಅನಿರೀಕ್ಷಿತ ದಾಳಿ ಯೋಜಿಸಲು ಇರಾನ್ ಭದ್ರತಾ ಪಡೆ ಅಧಿಕಾರಿಗಳು ಸಹಾಯ ಮಾಡಿದರು ಮತ್ತು ಕಳೆದ ಸೋಮವಾರ ಬೈರುತ್‌ನಲ್ಲಿ ನಡೆದ ಸಭೆಯಲ್ಲಿ ದಾಳಿಗೆ ಹಸಿರು ನಿಶಾನೆ ತೋರಿದರು' ಎಂದು ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದ ನಂತರ ಈ ಬೆಳವಣಿಗೆ ನಡೆದಿದೆ.

ಹಮಾಸ್ ದಾಳಿಯ ಬಳಿಕ ಹಮಾಸ್ ಮತ್ತು ಗಾಜಾ ಮೂಲದ ಇಸ್ಲಾಮಿಕ್ ಜಿಹಾದ್ ಗುಂಪಿನ ನಾಯಕರೊಂದಿಗೆ ಮಾತನಾಡಿರುವ ಅಧ್ಯಕ್ಷ ಇಬ್ರಾಹಿಂ ರೈಸಿ, ಪ್ಯಾಲೆಸ್ಟೀನ್ ಬೆಂಬಲಿಸುವಂತೆ ಮುಸ್ಲಿಂ ಸರ್ಕಾರವಿರುವ ದೇಶಗಳನ್ನು ಒತ್ತಾಯಿಸಿದರು.

ಹಮಾಸ್ ದಾಳಿಯಲ್ಲಿ ಇರಾನ್ ನೇರವಾಗಿ ಭಾಗಿಯಾಗಿದೆಯೇ ಎಂದು ಹೇಳಲು ಸಾಧ್ಯವಿಲ್ಲ ಎಂದು ಅಮೆರಿಕ ಅಧಿಕಾರಿಗಳು ಹೇಳಿದ್ದಾರೆ. ಆದಾಗ್ಯೂ, ಹಮಾಸ್‌ಗೆ ಇರಾನ್ ಸೇರಿದಂತೆ ಇತರ ದೇಶಗಳು ಹಣಕಾಸು ಮತ್ತು ಶಸ್ತ್ರಾಸ್ತ್ರ ನೆರವು ನೀಡಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ ಎಂದೂ ಹೇಳಿದರು.

ಪ್ಯಾಲೆಸ್ಟೀನ್ ಹಕ್ಕುಗಳಿಗೆ ಬೆಂಬಲ

ನವದೆಹಲಿ (ಪಿಟಿಐ): ಪ್ಯಾಲೆಸ್ಟೀನ್ ಜನರಿಗೆ ನೆಲೆ, ಸ್ವಯಂ ಆಡಳಿತದ ಹಕ್ಕು ಹಾಗೂ ಘನತೆಯ ಬದುಕನ್ನು ಕಲ್ಪಿಸಬೇಕು ಎಂಬ ಬಹುಕಾಲದ ತನ್ನ ನಿಲುವನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಪುನರುಚ್ಚರಿಸಿದೆ. ಇಸ್ರೇಲ್–ಹಮಾಸ್ ನಡುವಿನ ಕದನಕ್ಕೆ ತಕ್ಷಣ ವಿರಾಮ ಘೋಷಿಸಬೇಕು, ಎಲ್ಲ ವಿಷಯಗಳನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು ಎಂದು ಅದು ಕರೆ ನೀಡಿದೆ.

ಈ ನಿರ್ಣಯವನ್ನು ಸಮಿತಿಯು ಸೋಮವಾರದ ಸಭೆಯಲ್ಲಿ ಕೈಗೊಂಡಿದೆ. ಇಸ್ರೇಲಿನ ನಾಗರಿಕರ ಮೇಲೆ ಹಮಾಸ್ ಬಂಡುಕೋರರು ನಡೆಸಿದ ದಾಳಿಯನ್ನು ಪಕ್ಷವು ಖಂಡಿಸಿದ ಮಾರನೆಯ ದಿನ ಈ ನಿರ್ಣಯ ಕೈಗೊಳ್ಳಲಾಗಿದೆ.

'ಇಸ್ರೇಲ್‌ನಿಂದ ಹಾಸನ ಜಿಲ್ಲೆ ಜನರನ್ನು ಕರೆತರಲು ಪ್ರಯತ್ನ'

ಪ್ರಜಾವಾಣಿ ವಾರ್ತೆ

ಹಾಸನ: 'ಯುದ್ಧ ಪೀಡಿತ ಇಸ್ರೇಲ್‌ನಲ್ಲಿರುವ ಜಿಲ್ಲೆಯ ಜನರನ್ನು ಕರೆತರಲು ಕೇಂದ್ರ ಸಚಿವರ ಜೊತೆ ಮಾತನಾಡುತ್ತೇನೆ' ಎಂದು ರಾಜ್ಯಸಭಾ ಸದಸ್ಯ ಎಚ್‌.ಡಿ. ದೇವೇಗೌಡ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇಸ್ರೇಲ್‌ನಲ್ಲಿ ಸಿಲುಕಿದ ಜಿಲ್ಲೆಯ ಜನ ಸುರಕ್ಷಿತವಾಗಿದ್ದಾರೆ ಎಂಬ ಮಾಹಿತಿ ಇದೆ. ಅವರನ್ನು ಸುರಕ್ಷಿತವಾಗಿ ಕರೆತರಲು ಶಕ್ತಿಮೀರಿ ಪ್ರಯತ್ನಿಸುತ್ತೇನೆ. ಈ ಸಲುವಾಗಿ ಕೇಂದ್ರದೊಂದಿಗೆ ಚರ್ಚಿಸುತ್ತೇನೆ' ಎಂದರು.

'ಈ ಬಗ್ಗೆ ತಕ್ಷಣವೇ ವಿದೇಶಾಂಗ ಸಚಿವರ ಜೊತೆ ಮಾತನಾಡುತ್ತೇನೆ. ಅಲ್ಲಿ ಭಾರತದವರು ಹೆಚ್ಚು ಮಂದಿ ಇದ್ದಾರೆ. ಜಿಲ್ಲೆಯ ಸಕಲೇಶಪುರ, ಬೇಲೂರು, ಚನ್ನರಾಯಪಟ್ಟಣದ ಮಂದಿ ಅಲ್ಲಿ ಸಿಲುಕಿದ್ದಾರೆ. ಅವರ ಹೆಸರನ್ನು ತಿಳಿದುಕೊಂಡ ತಕ್ಷಣವೇ ಯಾವ ಪ್ರದೇಶದಲ್ಲಿ ಇದ್ದಾರೆ ಎಂದು ಮಾಹಿತಿ ಪಡೆದುಕೊಂಡು ಚರ್ಚಿಸುತ್ತೇನೆ. ಈ ವಿಚಾರವಾಗಿ ರಾಜ್ಯ ಸರ್ಕಾರಕ್ಕೂ ಮನವಿ ಮಾಡುತ್ತೇನೆ' ಎಂದು ತಿಳಿಸಿದರು.

'ದಾಳಿಯಿಂದ ವಿಚಲಿತರಾಗಿಲ್ಲ; ಆತಂಕವೂ ಇಲ್ಲ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ದಾಳಿ, ಸಂಘರ್ಷ, ಪ್ರತಿದಾಳಿ ಇತ್ಯಾದಿ ನಮಗೆ ಮಾಮೂಲಿ. ಇಸ್ರೇಲ್ ತನ್ನ ದೇಶದ ಪ್ರತಿಯೊಬ್ಬ ಪ್ರಜೆಯ ಜೀವಕ್ಕೂ ಮಹತ್ವ ನೀಡುತ್ತದೆ. ಹೀಗಾಗಿ ಇಲ್ಲಿ ಈಗ ಶೋಕದ ವಾತಾವರಣ ಇದೆ. ಆದರೆ ಯಾರೂ ವಿಚಲಿತರಾಗಿಲ್ಲ. ವಲಸಿಗರಲ್ಲೂ ಹೇಳಿಕೊಳ್ಳುವಂತಹ ಆತಂಕವೇನೂ ಇಲ್ಲ...'

ಇದು, ಹಮಾಸ್ ಉಗ್ರರ ದಾಳಿಗೆ ಒಳಗಾಗಿರುವ ಇಸ್ರೇಲ್‌ನಲ್ಲಿ ನೆಲೆಸಿರುವ ದಕ್ಷಿಣ ಕನ್ನಡ ಜಿಲ್ಲೆ ನಾರಾವಿಯ ಸುಧೀರ್ ಕೋಟ್ಯಾನ್ ಅವರ ದಿಟ್ಟ ಮಾತು.

ಇಸ್ರೇಲ್‌ನ ಹರ್ಝ್ಲಿಯಾ ನಗರದಲ್ಲಿ ಶುಶ್ರೂಷಕರಾಗಿ 14 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಅವರು ಸಂಘರ್ಷಪೀಡಿತ ನೆಲದಿಂದ 'ಪ್ರಜಾವಾಣಿ' ಜೊತೆ ಮಾತನಾಡಿ ಅಲ್ಲಿನ ಸ್ಥಿತಿಗತಿಯ ಮಾಹಿತಿ ಹಂಚಿಕೊಂಡರು.

'ನಾನು 2009ರಲ್ಲಿ ಇಲ್ಲಿಗೆ ಬಂದು ನೆಲೆಸಿದ ಬಳಿಕ ಇಸ್ರೇಲ್–ಪ್ಯಾಲೆಸ್ಟೀನ್ ನಡುವೆ ಇಂತಹ ದೊಡ್ಡಮಟ್ಟದ ಸಂಘರ್ಷದ ಸ್ಥಿತಿ ಮೂರು ಸಲ ಎದುರಾಗಿದೆ. ಪ್ರತಿಸಲವೂ ಇಸ್ರೇಲ್ ತಕ್ಕ ಪ್ರತ್ಯುತ್ತರ ನೀಡಿದೆ. ರಾಕೆಟ್ ದಾಳಿಗಳು ಆಗಾಗ ನಡೆಯುತ್ತವೆ. ಅವುಗಳನ್ನು ಇಸ್ರೇಲ್ ಸೈನಿಕರು ಹೊಡೆದುರುಳಿಸುತ್ತಿದ್ದರು. ಈ ಸಲ ಹಮಾಸ್ ಉಗ್ರರು ಒಳಗೆ ನುಗ್ಗಿ ಸುಮಾರು 150ಕ್ಕೂ ಹೆಚ್ಚು ಮಂದಿಯನ್ನು ಅಪಹರಣ ಮಾಡಿದ್ದಾರೆ. ಹಲವು ಮಂದಿ ಈ ದಾಳಿಯಿಂದ ಸತ್ತಿದ್ದಾರೆ' ಎಂದು ಅವರು ತಿಳಿಸಿದರು.

'ಈಚಿನ ವರ್ಷಗಳಲ್ಲಿ ನಿರ್ಮಿಸಿರುವ ಪ್ರತಿಯೊಂದು ಕಟ್ಟಡದಲ್ಲೂ ಗಟ್ಟಿಮುಟ್ಟಾದ ಸುರಕ್ಷತಾ ಕೊಠಡಿಗಳಿವೆ. ಅಪಾರ್ಟ್‌ಮೆಂಟ್ ಸಮುಚ್ಚಯಗಳ ಪ್ರತಿ ಮಹಡಿಯಲ್ಲೂ ಇಂಥ ಕೊಠಡಿಗಳಿರುತ್ತವೆ. ಹಳೆಯ ಕಟ್ಟಡಗಳಲ್ಲಿ ಸುರಕ್ಷತಾ ಕೊಠಡಿಗಳಿಲ್ಲ. ಅಂತಹ ಕಟ್ಟಡಗಳ ನಿವಾಸಿಗಳು ಸಮೀಪದ ಯಾವುದಾದರೂ ಸಾರ್ವಜನಿಕ ಕಟ್ಟಡದಲ್ಲಿರುವ ಸುರಕ್ಷತಾ ಕೊಠಡಿಯನ್ನು ಬಳಸಬಹುದು. ಎಚ್ಚರಿಕೆಯ ಕರೆಗಂಟೆ (ಸೈರನ್) ಮೊಳಗಿದಾಗಲೆಲ್ಲ ನಾವು ಆ ಕೊಠಡಿಗೆ ಹೋಗಿ ರಕ್ಷಣೆ ಪಡೆಯುತ್ತೇವೆ. ಶನಿವಾರ ಮುಂಜಾನೆ ಹಾಗೂ ಸಂಜೆ ಎರಡು ಸಲ ಸೈರನ್ ಮೊಳಗಿತ್ತು. ಭಾನುವಾರ ಯಾವುದೇ ಸೈರನ್ ಇರಲಿಲ್ಲ. ಸೋಮವಾರ ಮಧ್ಯಾಹ್ನ ಮತ್ತೆ ಸೈರನ್ ಮೊಳಗಿದ್ದು, ನಾವು ಸುರಕ್ಷತಾ ಕೊಠಡಿಗಳಲ್ಲಿ ರಕ್ಷಣೆ ಪಡೆದೆವು' ಎಂದು ಸುಧೀರ್ ಕೋಟ್ಯಾನ್ ವಿವರಿಸಿದರು.

'ದಕ್ಷಿಣ ಕನ್ನಡ ಜಿಲ್ಲೆಯಿಂದ ಸಾವಿರಾರು ಮಂದಿ ಇಲ್ಲಿ ನೆಲೆಸಿದ್ದೇವೆ. ಹೆಚ್ಚಿನವರು ಇಸ್ರೇಲ್‌ನ ಮಧ್ಯಭಾಗದ ನಗರಗಳಲ್ಲಿ ಇದ್ದೇವೆ. ದಕ್ಷಿಣ ಭಾಗದ ಗಡಿಗಳಲ್ಲಿ ಹೆಚ್ಚಿನ ಸಂಘರ್ಷ ಇದೆ. ಅಲ್ಲಿ ಜನರು ಸುತ್ತಾಡಲು ಅವಕಾಶ ನೀಡುತ್ತಿಲ್ಲ. ಅಂಗಡಿಗಳು ಬಂದ್ ಆಗಿವೆ. ನಾವಿರುವ ಕಡೆ ಸೂಪರ್ ಮಾರ್ಕೆಟ್‌ಗಳು, ಮಳಿಗೆಗಳು ತೆರೆದಿವೆ' ಎಂದರು.

ಪಕ್ಕದ ಕಟ್ಟಡ ಸ್ಫೋಟ; ಪ್ರಾಣಾಪಾಯದಿಂದ ಪಾರು

ಉಡುಪಿ: ಇಸ್ರೇಲ್‌ನಲ್ಲಿ ಉಡುಪಿ ಜಿಲ್ಲೆಯ ಅನೇಕ ಮಂದಿ ಶುಶ್ರೂಷಕ ಹಾಗೂ ಕೇರ್ ಟೇಕರ್ ಆಗಿ ಕೆಲಸ ಮಾಡುತ್ತಿದ್ದು ಅವರ ಮನೆಗಳಲ್ಲಿ ಆತಂಕ ತುಂಬಿದೆ.

ಇಸ್ರೇಲ್‌ನಲ್ಲಿ ಶುಶ್ರೂಷಕಿ ಆಗಿರುವ ಮಣಿಪಾಲದ ನ್ಯಾನ್ಸಿ ನರೋನ್ಹಾ ಹಾಗೂ ಉಡುಪಿಯ ಪ್ರಮೀಳಾ ಪ್ರಭು ಯುದ್ಧದ ಭೀಕರತೆಯನ್ನು ಹಂಚಿಕೊಂಡಿದ್ದಾರೆ.

'ಅಕ್ಟೋಬರ್ 7ರಂದು ಬೆಳಿಗ್ಗೆ ಸೈರನ್ ಮೊಳಗಿತು. ಹೊರಗೆ ಬಂದು ನೋಡಿದಾಗ ರಾಕೆಟ್‌ಗಳು ಬೆಂಕಿಯುಗುಳುತ್ತ ನಾನಿದ್ದ ಕಡೆಗೆ ತೂರಿಬರುತ್ತಿದ್ದವು. ಪಕ್ಕದ ಕಟ್ಟಡಕ್ಕೆ ಬಂದು ಅಪ್ಪಳಿಸಿ ಸ್ಫೋಟವಾದವು. ಘಟನೆಯಲ್ಲಿ ಕೂದಲೆಳೆಯ ಅಂತರದಿಂದ ಬಚಾವಾದೆ' ಎಂದು ನ್ಯಾನ್ಸಿ ತಿಳಿಸಿದ್ದಾರೆ.

'ಇಸ್ರೇಲ್‌ನಲ್ಲಿ ಉಗ್ರರ ದಾಳಿ ಹೊಸತಲ್ಲ. ಆದರೆ, ಈ ಬಾರಿ ಭೀಕರ ವಾತಾವರಣ ನಿರ್ಮಾಣವಾಗಿದೆ. ಬಹುತೇಕರು ಜೀವಭಯದಲ್ಲಿ ಮನೆಯೊಳಗಿದ್ದಾರೆ. ಸದ್ಯ ಊಟ, ತಿಂಡಿಗೆ ಸಮಸ್ಯೆ ಎದುರಾಗಿಲ್ಲ' ಎಂದು ನ್ಯಾನ್ಸಿ ತಿಳಿಸಿದ್ದಾರೆ.

6 ವರ್ಷಗಳಿಂದ ಇಸ್ರೇಲ್‌ನಲ್ಲಿ ಶುಶ್ರೂಷಕಿಯಾಗಿರುವ ಪ್ರಮೀಳಾ ಪ್ರಭು, 'ಬಾಂಬ್ ಹೊತ್ತ ರಾಕೆಟ್‌ಗಳು ಮನೆಯ ಮೇಲೆ ಹಾರಾಡುತ್ತಿದ್ದು ಯುದ್ಧದ ಭೀತಿಯಲ್ಲಿದ್ದೇನೆ. ಬಂಕರ್‌ಗಳಲ್ಲಿ ಆಶ್ರಯ ಪಡೆದುಕೊಂಡಿದ್ದೇನೆ. ಮಕ್ಕಳು, ಮಹಿಳೆಯರನ್ನು ಅಪಹರಿಸಿ ಉಗ್ರರು ರಕ್ಕಸ ವರ್ತನೆ ತೋರುತ್ತಿದ್ದಾರೆ' ಎಂದು ಆತಂಕ ತೋಡಿಕೊಂಡಿದ್ದಾರೆ.

ಇಸ್ರೇಲ್‌ನಲ್ಲಿ ಉಡುಪಿ ಜಿಲ್ಲೆಯ ಯಾರಿಗೂ ಪ್ರಾಣಾಪಾಯವಾಗಿಲ್ಲ ಎಂದು ಜಿಲ್ಲಾಧಿಕಾರಿ ಕೆ.ವಿದ್ಯಾಕುಮಾರಿ ತಿಳಿಸಿದ್ದಾರೆ.

ಬಂಕರ್‌ನಲ್ಲಿ ಸುರಕ್ಷಿತ ಪ್ರವೀಣ್ ಪಿಂಟೊ

ಬಂಕರ್‌ನಲ್ಲಿ ಪ್ರವೀಣ್ ಪಿಂಟೊ

ಮೂಲ್ಕಿ (ದಕ್ಷಿಣ ಕನ್ನಡ): ಇಸ್ರೇಲ್‌ನ ಟೆಲ್ ಅವೀವ್‌ನಲ್ಲಿರುವ ಕಿನ್ನಿಗೋಳಿಯ ದಾಮಸ್‌ಕಟ್ಟೆ ನಿವಾಸಿ ಪ್ರವೀಣ್ ಪಿಂಟೊ ಬಂಕರ್ ಒಂದರಲ್ಲಿ ಸುರಕ್ಷಿತರಾಗಿದ್ದಾರೆ ಎಂದು ಅವರ ಪತ್ನಿ ನೀತಾ ಸಾಲ್ಡಾನ ತಿಳಿಸಿದ್ದಾರೆ.

'ಪ್ರವೀಣ್ ಪಿಂಟೊ 16 ವರ್ಷಗಳಿಂದ ಟೆಲ್ ಅವೀವ್‌ನಲ್ಲಿ ಉದ್ಯೋಗದಲ್ಲಿದ್ದು ಅರ್ಧ ತಾಸಿಗೊಮ್ಮೆ ದೂರವಾಣಿ ಮೂಲಕ ಮಾತನಾಡುತ್ತಿದ್ದಾರೆ. ಬಾಂಬ್ ಅಥವಾ ಮಿಸೈಲ್ ಬರುವಾಗ ಸೈರನ್ ಮೊಳಗುತ್ತದೆ. ಅನವಶ್ಯಕವಾಗಿ ಹೊರಗೆ ಓಡಾಡಬಾರದು ಎಂಬುದರ ಸೂಚನೆ ಅದು. ಉಗ್ರರು ಇಸ್ರೇಲಿಗರ ಮೇಲೆ ದಾಳಿ ನಡೆಸುತ್ತಿದ್ದಾರೆ. ಸಿಕ್ಕ ಸಿಕ್ಕಲ್ಲಿ ಇರಿದು ಕೊಲ್ಲುತ್ತಿದ್ದಾರೆ ಎಂದು ಪ್ರವೀಣ್ ಹೇಳುತ್ತಿದ್ದಾರೆ' ಎಂಬುದಾಗಿ ನೀತಾ ತಿಳಿಸಿದರು.

'ಉಚಿತ'ಗಳ ಮೇಲಾಟ: ಗೆಲುವು ಯಾರಿಗೆ?

ಪ್ರಜಾವಾಣಿ ವಾರ್ತೆ

ಪ್ರಜಾ ಮತ
ಜನತಂತ್ರದ ಹಬ್ಬ
ಪಂಚರಾಜ್ಯ ವಿಧಾನಸಭಾ ಚುನಾವಣೆ - 2023

2018ರ ಫಲಿತಾಂಶ	
ಕಾಂಗ್ರೆಸ್	114
ಬಿಜೆಪಿ	109
ಬಿಎಸ್ಪಿ	2
ಎಸ್ಪಿ	1
ಪಕ್ಷೇತರರು	4

ಕಣದ ಪ್ರಮುಖ ಅಭ್ಯರ್ಥಿಗಳು
- ಮುಖ್ಯಮಂತ್ರಿ ಶಿವರಾಜ್ ಚೌಹಾಣ್
- ಮಾಜಿ ಮುಖ್ಯಮಂತ್ರಿ ಕಮಲ್‌ನಾಥ್
- ಕೇಂದ್ರ ಸಚಿವ ನರೇಂದ್ರ ಸಿಂಗ್ ತೋಮರ್
- ಕೈಲಾಶ್ ವಿಜಯವರ್ಗಿಯ
- ನರೋತ್ತಮ್ ಮಿಶ್ರಾ
- ಅರುಣ್ ಯಾದವ್
- ಪ್ರಹ್ಲಾದ್ ಪಟೇಲ್

ಪ್ರಮುಖ ವಿಷಯಗಳು
- ಶಿವರಾಜ್ ಸಿಂಗ್ ಸರ್ಕಾರದ 19 ವರ್ಷಗಳ ಆಡಳಿತ ವಿರೋಧಿ
- ಕಾಂಗ್ರೆಸ್‌ನ ಆರು ಗ್ಯಾರಂಟಿ
- ಮುಖ್ಯಮಂತ್ರಿ ಅಭ್ಯರ್ಥಿ ಘೋಷಿಸದ ಬಿಜೆಪಿ
- ಭ್ರಷ್ಟಾಚಾರ, ಬೆಲೆ ಏರಿಕೆ, ನಿರುದ್ಯೋಗ

ನವದೆಹಲಿ: ಬಿಜೆಪಿಯಲ್ಲಿ ಮಧ್ಯ ಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಚೌಹಾಣ್ ಅವರನ್ನು ನರೇಂದ್ರ ಮೋದಿ ಅವರಿಗೆ ಪ್ರತಿಸ್ಪರ್ಧಿಯನ್ನಾಗಿ ಬಿಂಬಿಸುವ ಪ್ರಯತ್ನವನ್ನು ಆ ಪಕ್ಷದ ಕೆಲವು ನಾಯಕರೇ ದಶಕದ ಹಿಂದೆ ಮಾಡಿದ್ದರು. 'ಗುಜರಾತ್ ಮಾದರಿ'ಗೆ ಪ್ರತಿಯಾಗಿ ಮಧ್ಯಪ್ರದೇಶದ ಅಭಿವೃದ್ಧಿಯನ್ನು ಮುನ್ನೆಲೆಗೆ ತಂದಿದ್ದರು. ನಂತರ ನರೇಂದ್ರ ಮೋದಿ ಪ್ರಧಾನಿಯಾದರು. ಆದರೆ, ಈಗ ಚೌಹಾಣ್ ಅವರು ಟಿಕೆಟ್‌ಗಾಗಿ ಕಣ್ಣೀರು ಸುರಿಸುವ ಸ್ಥಿತಿ ನಿರ್ಮಾಣವಾಗಿದೆ. ಈ ಸಲದ ಚುನಾವಣೆಯಲ್ಲಿ ಅಳೆದು ತೂಗಿ ಪಕ್ಷ ಅವರಿಗೆ ಟಿಕೆಟ್ ನೀಡಿದೆ. ಅವರಿಗೆ ಟಿಕೆಟ್ ಸಿಕ್ಕಿದ್ದು ಸೋಮವಾರ ಪ್ರಕಟವಾದ ನಾಲ್ಕನೇ ಪಟ್ಟಿಯಲ್ಲಿ!

ಮಧ್ಯಪ್ರದೇಶದಲ್ಲಿ ಬಿಜೆಪಿ ಪಾಲಿಗೆ ಈಗ ಚೌಹಾಣ್ ಅವರೇ ದೊಡ್ಡ ಸಮಸ್ಯೆ. ನಾಲ್ಕು ಅವಧಿಗೆ ಮುಖ್ಯಮಂತ್ರಿಯಾಗಿದ್ದ ಒಬಿಸಿ ನಾಯಕನನ್ನು ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಪಕ್ಷ ಬಿಂಬಿಸಿಲ್ಲ. ಅವರನ್ನು ಸಂಪೂರ್ಣ ಕಡೆಗಣಿಸಿದರೆ ಒಬಿಸಿ ಮತ ಕೈಕೊಡಬಹುದು ಎಂಬ ಭೀತಿಯಲ್ಲಿ ಪಕ್ಷದ ರಾಷ್ಟ್ರೀಯ ನಾಯಕರು ಇದ್ದಾರೆ. ಚೌಹಾಣ್ ಕಾರಣಕ್ಕೆ 2018ರ ಚುನಾವಣೆಯಲ್ಲೇ ಮತದಾರರು ಬಿಜೆಪಿಗೆ ಸೋಲಿನ ರುಚಿ ತೋರಿಸಿದ್ದರು. ಕಾಂಗ್ರೆಸ್ ಸರ್ಕಾರ ರಚನೆಯಾಗಿತ್ತು. ನಂತರ ಕಾಂಗ್ರೆಸ್‌ನ ಶಾಸಕರನ್ನು ಸೆಳೆದುಕೊಂಡು ಬಿಜೆಪಿ ಸರ್ಕಾರ ರಚನೆ ಮಾಡಿತ್ತು. ಚೌಹಾಣ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿತ್ತು. 19 ವರ್ಷಗಳ ಆಡಳಿತದ ನಂತರ ಬಿಜೆಪಿ ಹಾಗೂ ಚೌಹಾಣ್ ವಿರುದ್ಧ ಆಡಳಿತ ವಿರೋಧಿ ಅಲೆ ದೊಡ್ಡ ಮಟ್ಟದಲ್ಲಿದೆ. ಕೇಂದ್ರ ಸಚಿವರನ್ನು ಹಾಗೂ ಸಂಸದರನ್ನು ಕಣಕ್ಕೆ ಇಳಿಸುವ ಮೂಲಕ ಬಿಜೆಪಿಯು ಈ ಅಲೆಯನ್ನು ತಗ್ಗಿಸುವ ಪ್ರಯತ್ನ ಮಾಡಿದೆ. ಕಳೆದ ಏಳು ತಿಂಗಳಲ್ಲಿ ಮೋದಿ ಅವರು ಏಳು ರ‍್ಯಾಲಿಗಳಲ್ಲಿ ಭಾಷಣ ಮಾಡಿದ್ದಾರೆ. ಕೆಲವು ದಿನಗಳ ಹಿಂದೆ ಹಲವು ಯೋಜನೆಗಳಿಗೆ ಚಾಲನೆ ನೀಡಿದ್ದಾರೆ.

ರಾಜ್ಯದಲ್ಲಿ ಉಚಿತ ಘೋಷಣೆ ಮತ್ತು ಭರವಸೆಗಳನ್ನು ನೀಡಲು ಪಕ್ಷಗಳ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಕರ್ನಾಟಕದ ಮಾದರಿಯಲ್ಲೇ ಮಧ್ಯಪ್ರದೇಶದಲ್ಲಿ ಹಲವು ಗ್ಯಾರಂಟಿಗಳನ್ನು ಕಾಂಗ್ರೆಸ್ ಘೋಷಿಸಿದೆ. ಚುನಾವಣೆಗೆ ಮುನ್ನ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಬಿಜೆಪಿ ಹಿಂದೆ ಬಿಟ್ಟಿಲ್ಲ. ಮಹಿಳೆಯರನ್ನು ಗುರಿಯಾಗಿಸಿಕೊಂಡು ಚೌಹಾಣ್ ಹಲವು ಯೋಜನೆಗಳ ಜಾರಿ ಮಾಡಿದ್ದಾರೆ. ಆರ್ಥಿಕವಾಗಿ ದುರ್ಬಲ ವರ್ಗದ ಮಹಿಳೆಯರನ್ನು ಗುರಿಯಾಗಿಸಿಕೊಂಡು ಯೋಜನೆಗಾಗಿ ರಾಜ್ಯ ಸರ್ಕಾರ ₹16,000 ಕೋಟಿ ಮೀಸಲಿಟ್ಟಿದೆ. ಅಲ್ಲದೆ, ಉಜ್ಜಯಿನಿಯ ಮಹಾಕಾಳೇಶ್ವರ ದೇಗುಲ ಸೇರಿದಂತೆ ದೇವಸ್ಥಾನಗಳನ್ನು ನಿರ್ಮಿಸಲು, ಪುನರ್‌ನಿರ್ಮಾಣ ಮಾಡಲು ಮುಖ್ಯಮಂತ್ರಿಯವರು ₹3,000 ಕೋಟಿಗೂ ಹೆಚ್ಚು ಖರ್ಚು ಮಾಡಿದ್ದಾರೆ.

ಬುಡಕಟ್ಟು, ಒಬಿಸಿ, ಮಹಿಳಾ ಮತಗಳನ್ನು ಸೆಳೆಯಲು 'ಕೈ' 'ಕಮಲ' ಪಾಳಯ ಹರಸಾಹಸ ಮಾಡಿವೆ. ಮತ ಸೆಳೆಯಲು ಎಎಪಿ ಹಾಗೂ ಬಿಎಸ್‌ಪಿ ತೀವ್ರ ಕಸರತ್ತು ನಡೆಸುತ್ತಿವೆ.

ಕಾಂಗ್ರೆಸ್ ಪರ ಪ್ರಿಯಾಂಕಾ ಗಾಂಧಿ ಮತ್ತು ರಾಹುಲ್ ಗಾಂಧಿ ಪ್ರಚಾರದ ನೇತೃತ್ವ ವಹಿಸಿದ್ದಾರೆ. ಜೂನ್‌ನಲ್ಲಿ ಕಾಂಗ್ರೆಸ್ ಪ್ರಚಾರ ಆರಂಭಿಸಿದ ಪ್ರಿಯಾಂಕಾ ಗಾಂಧಿ ಆ ಬಳಿಕ ಮೂರು ರ‍್ಯಾಲಿಗಳನ್ನು ಉದ್ದೇಶಿಸಿ ಭಾಷಣ ಮಾಡಿದ್ದಾರೆ. ಕಮಲ್‌ನಾಥ್ ಅವರನ್ನು ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸಲಾಗಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹಲವು ಕಡೆಗಳಲ್ಲಿ ರ‍್ಯಾಲಿಗಳನ್ನು ನಡೆಸಿದ್ದಾರೆ.

ಬಿಆರ್‌ಎಸ್ ಹಣಿಯಲು 'ಕೈ' ತಂತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ತೆಲಂಗಾಣ ರಾಜ್ಯದಲ್ಲಿ ಹತ್ತು ವರ್ಷಗಳಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ನೆಚ್ಚಿಕೊಂಡು ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ನೇತೃತ್ವದ 'ಭಾರತ ರಾಷ್ಟ್ರ ಸಮಿತಿ' (ಬಿಆರ್‌ಎಸ್) ಹ್ಯಾಟ್ರಿಕ್ ಗೆಲುವಿನ ಕನಸಿನಲ್ಲಿದೆ. ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿನ ಗೆಲುವಿನ ಬಳಿಕ ಹೊಸ ಸ್ಫೂರ್ತಿ ಪಡೆದಿರುವ ಕಾಂಗ್ರೆಸ್, ನೆರೆ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುವ ಹವಣಿಕೆಯಲ್ಲಿದೆ. 'ಆಪರೇಷನ್ ಕಮಲ' ನಡೆಸಲು ಪ್ರಯತ್ನಿಸಿ ಕೈ ಸುಟ್ಟುಕೊಂಡ ಬಳಿಕ ಬಿಜೆಪಿ ಸೊರಗಿದೆ.

3.17 ಕೋಟಿ ಮತದಾರರನ್ನು ಹೊಂದಿರುವ ತೆಲಂಗಾಣದಲ್ಲಿ 119 ವಿಧಾನಸಭಾ ಕ್ಷೇತ್ರಗಳಿವೆ. 2018ರ ಚುನಾವಣೆಯಲ್ಲಿ ಬಿಆರ್‌ಎಸ್ 88 ಕ್ಷೇತ್ರಗಳಲ್ಲಿ ದಿಗ್ವಿಜಯ ಸಾಧಿಸಿತ್ತು. ಕಾಂಗ್ರೆಸ್ 19 ಸ್ಥಾನಗಳಿಗೆ ತೃಪ್ತಿಪಟ್ಟುಕೊಂಡಿತ್ತು. ಎಂಐಎಂ 7 ಹಾಗೂ ಬಿಜೆಪಿ 1 ಕ್ಷೇತ್ರಗಳಲ್ಲಿ ಜಯ ಸಾಧಿಸಿದ್ದವು. ಈ ಸಲ ಬಿಆರ್‌ಎಸ್‌ಗೆ ಆಡಳಿತ ವಿರೋಧಿ ಅಲೆಯ ಸವಾಲು ಇದೆ. 'ಕೈ' ಪಾಳಯವು ಆರು ಗ್ಯಾರಂಟಿಗಳನ್ನು ಘೋಷಿಸಿ 'ಕರ್ನಾಟಕ ಮಾದರಿ' ಅನುಸರಿಸಲು ಹೊರಟಿದೆ. ಬಿಆರ್‌ಎಸ್‌ನ ಹಲವು ಶಾಸಕರು ಹಾಗೂ ಮಾಜಿ ಶಾಸಕರನ್ನು ಸೆಳೆದುಕೊಂಡಿದೆ. ಕರ್ನಾಟಕದ 'ಸಂಪನ್ಮೂಲ' ನಂಬಿಕೊಂಡು ರಾಜ್ಯದ ಮುಖಂಡರು ಮತ ಸೆಳೆಯುವ ಕಸರತ್ತಿನಲ್ಲಿ ತೊಡಗಿದ್ದಾರೆ.

ಪಕ್ಷದ ಜಾತಿ ಸಮೀಕರಣ (ಒಬಿಸಿ, ದಲಿತ, ಮುಸ್ಲಿಂ ಹಾಗೂ ರೆಡ್ಡಿ) ಕೆಲಸ ಮಾಡಬಹುದು ಎಂಬ ವಿಶ್ವಾಸದಲ್ಲಿ ಕಾಂಗ್ರೆಸ್ ನಾಯಕರು ಇದ್ದಾರೆ.

ಇನ್ನೊಂದೆಡೆ, ಪಕ್ಷದ ನಾಯಕರ ವಲಸೆ ತಡೆಗಟ್ಟಲು ಚುನಾವಣಾ ವೇಳಾಪಟ್ಟಿ ಘೋಷಣೆಗೆ ಎರಡು ತಿಂಗಳು ಮೊದಲೇ 115 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದ್ದರು. ಇದರಿಂದ ಪಕ್ಷದಲ್ಲಿ ಬಿಕ್ಕಟ್ಟು ಜಾಸ್ತಿಯಾಯಿತೇ ವಿನಾ ಕಡಿಮೆಯಾಗಲಿಲ್ಲ. ಮತ್ತಷ್ಟು ನಾಯಕರ ವಲಸೆಗೆ ಕಾರಣವಾಯಿತು.

ರೈತ ಬಂಧು ಹಾಗೂ ಕೆಸಿಆರ್ ಕಿಟ್‌ಗಳಂತಹ ಸರ್ಕಾರದ ಕೆಲವು ಯೋಜನೆಗಳು ಪಕ್ಷದ ಗೆಲುವಿಗೆ ಕಾರಣವಾಗಬಹುದು ಎಂಬ ನಿರೀಕ್ಷೆಯಲ್ಲಿ ಬಿಆರ್‌ಎಸ್ ನಾಯಕರು ಇದ್ದಾರೆ.

ಸುಮಾರು 20 ದಿನಗಳಿಂದ ಅನಾರೋಗ್ಯದ ಕಾರಣದಿಂದ ವಿಶ್ರಾಂತಿ ಪಡೆಯುತ್ತಿರುವ ಬಿಆರ್‌ಎಸ್ ಮುಖ್ಯಸ್ಥ ಚಂದ್ರಶೇಖರ ರಾವ್ ಅವರು ಅಕ್ಟೋಬರ್ 15 ರಂದು ಪ್ರಚಾರ ಕಣಕ್ಕೆ ಧುಮುಕುವ ನಿರೀಕ್ಷೆ ಇದೆ.

ಬಂಡಿ ಸಂಜಯ್ ಕುಮಾರ್ ಅವರು ಬಿಜೆಪಿಯ ತೆಲಂಗಾಣ ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು. ಅವರನ್ನು ಮೂರು ತಿಂಗಳ ಹಿಂದೆ ಬದಲಿಸಿ ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ಅವರನ್ನು ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಲಾಯಿತು. ಬಂಡಿ ಅವರಿಗೆ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಬಡ್ತಿ ನೀಡಲಾಯಿತು. ಆದರೆ, ಪಕ್ಷದಲ್ಲಿನ ಆಂತರಿಕ ಕಚ್ಚಾಟ ಕಡಿಮೆಯಾಗಿಲ್ಲ.

ರಾಜ್ಯದಲ್ಲಿ ಚಂದ್ರಶೇಖರ ರಾವ್ ಈಗಲೂ ಪ್ರಬಲ ನಾಯಕ. ಕೆಲವು ತಿಂಗಳುಗಳ ಹಿಂದಿನವರೆಗೂ ಅವರನ್ನು ಟೀಕಿಸಲು ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರು ಹಿಂದೇಟು ಹಾಕುತ್ತಿದ್ದರು. ಆದರೆ, ದೆಹಲಿ ಅಬಕಾರಿ ಹಗರಣದಲ್ಲಿ ಕೆಸಿಆರ್ ಪುತ್ರಿ ಹೆಸರು ತಳಕು ಹಾಕಿಕೊಂಡ ಬಳಿಕ ಸ್ವಲ್ಪ ಚಿತ್ರಣ ಬದಲಾಗಿದೆ. ಕಳೆದೊಂದು ದಶಕದಲ್ಲಿ ರಾಜ್ಯದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎಂದು ವಿಪಕ್ಷ ನಾಯಕರು ಆರೋಪ ಮಾಡುತ್ತಿದ್ದಾರೆ.

ಮರುಭೂಮಿ ರಾಜ್ಯದಲ್ಲಿ ಯಾರಿಗೆ ಸಿಹಿ

ಕಳೆದ ಒಂದು ವರ್ಷದಲ್ಲಿ ದೊಡ್ಡ ಮಟ್ಟದ ಧರ್ಮ ಹಾಗೂ ಜಾತಿ ಧ್ರುವೀಕರಣಕ್ಕೆ ಸಾಕ್ಷಿಯಾಗಿರುವ ರಾಜಸ್ಥಾನದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ನೇರ ಹಣಾಹಣಿ ನಡೆಯಲಿದೆ. ಆದರೆ, ಚುನಾವಣಾ ವೇಳಾಪಟ್ಟಿ ಘೋಷಣೆಯಾದರೂ ಬಿಜೆಪಿಯ ಆಂತರಿಕ ಬೇಗುದಿ ಶಮನವಾಗಿಲ್ಲ. ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಅಶೋಕ ಗೆಹಲೋಟ್ ಹಾಗೂ ಮುಖಂಡ ಸಚಿನ್ ಪೈಲಟ್ ನಡುವಿನ ಭಿನ್ನಮತ ಬೂದಿ ಮುಚ್ಚಿದ ಕೆಂಡದಂತಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ ಹಾಗೂ ರಾಜ್ಯದಲ್ಲಿ ಆರಂಭಿಸಲಾದ ಕೇಂದ್ರದ ಅಭಿವೃದ್ಧಿ ಯೋಜನೆಗಳು ಪಕ್ಷಕ್ಕೆ ಶ್ರೀರಕ್ಷೆಯಾಗಬಹುದು ಎಂಬ ನಿರೀಕ್ಷೆಯಲ್ಲಿ ಕಮಲ ಪಾಳಯದ ನಾಯಕರು ಇದ್ದಾರೆ. ರಾಜ್ಯದಲ್ಲಿ ಕಳೆದ 25 ವರ್ಷಗಳಲ್ಲಿ ಯಾವುದೇ ಪಕ್ಷ ಸತತವಾಗಿ ಗೆದ್ದ ಉದಾಹರಣೆ ಇಲ್ಲ. ಕಾಂಗ್ರೆಸ್ ಸರ್ಕಾರದ ವಿರುದ್ಧದ ಆಡಳಿತ ವಿರೋಧಿ ಅಲೆಯು ಬಿಜೆಪಿ ಗೆಲುವನ್ನು ಸುಲಭಗೊಳಿಸಬಹುದು ಎಂಬುದು ಬಿಜೆಪಿಯ ರಾಜ್ಯ ನಾಯಕರ ಲೆಕ್ಕಾಚಾರ.

ಕಳೆದ ಕೆಲವು ತಿಂಗಳುಗಳಿಂದ ಗೆಹಲೋಟ್ ಅವರು ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ಘೋಷಿಸಿ ಅನುಷ್ಠಾನ ಮಾಡಿದ್ದಾರೆ. ಈ ಕಾರ್ಯಕ್ರಮಗಳು ಮರಳಿ ಅಧಿಕಾರಕ್ಕೆ ಏರಿಸಬಹುದು ಎಂಬ ವಿಶ್ವಾಸದಲ್ಲಿ ಇದ್ದಾರೆ. ಮುಖ್ಯಮಂತ್ರಿ ಗೆಹಲೋಟ್ ವಿರುದ್ಧ ಸಚಿನ್ ಪೈಲಟ್ ಹಲವು ಸಲ ಧ್ವನಿ ಎತ್ತಿದ್ದರು. ಹಲವು ಗಡುವುಗಳನ್ನು ವಿಧಿಸಿದ್ದರು. ಸದ್ಯ ಅವರು ಕದನ ವಿರಾಮ ಘೋಷಿಸಿದ್ದಾರೆ.

ರಾಜಸ್ಥಾನದಲ್ಲಿ ಪಕ್ಷ ಸಂಘಟನೆಗೆ ಆಮ್ ಆದ್ಮಿ ಪಕ್ಷದ ನಾಯಕ ಅರವಿಂದ ಕೇಜ್ರಿವಾಲ್ ಕೆಲವು ತಿಂಗಳಿಂದ ಒತ್ತು ನೀಡಿದ್ದಾರೆ. ರಾಜಸ್ಥಾನ ವಿಧಾನಸಭೆ ಚುನಾವಣೆಗೆ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಾಗುವುದು ಎಂದು ಕೇಜ್ರಿವಾಲ್ ಪ್ರಕಟಿಸಿದ್ದಾರೆ.

ಬಘೇಲ್ ಜನಪ್ರಿಯತೆ ನೆಚ್ಚಿಕೊಂಡಿರುವ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

2018ರ ಫಲಿತಾಂಶ	
ಕಾಂಗ್ರೆಸ್	68
ಬಿಜೆಪಿ	15
ಜೆಸಿಸಿ	5
ಬಿಎಸ್ಪಿ	1

ಪ್ರಮುಖ ಅಭ್ಯರ್ಥಿಗಳು
- ಮುಖ್ಯಮಂತ್ರಿ ಭೂಪೇಶ್ ಬಘೇಲ್
- ಮಾಜಿ ಮುಖ್ಯಮಂತ್ರಿ ರಮಣ್ ಸಿಂಗ್
- ಟಿ.ಎಸ್. ಸಿಂಗ್ ದೇವ್
- ತಾಮ್ರಧ್ವಜ ಸಾಹು
- ವಿಜಯ್ ಬಘೇಲ್

ಪ್ರಮುಖ ವಿಷಯಗಳು
- ಬುಡಕಟ್ಟು ಕಲ್ಯಾಣ
- ಕಾಂಗ್ರೆಸ್‌ನ ಆರು ಗ್ಯಾರಂಟಿ
- ನಿರುದ್ಯೋಗ
- ನಕ್ಸಲ್ ಸಮಸ್ಯೆ

ನವದೆಹಲಿ: 15 ವರ್ಷಗಳ ಕಾಲ ರಾಜ್ಯವನ್ನು ಆಳಿದ ಬಿಜೆಪಿ ವಿರುದ್ಧ 'ಪ್ರಬಲ' ವಿರೋಧಿ ಆಡಳಿತದಿಂದಾಗಿ 2018ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಜಯ ಸಾಧಿಸಿತು. ಈಗ ಎರಡನೇ ಅವಧಿಗೆ ಆಡಳಿತ ಚುಕ್ಕಾಣಿ ಹಿಡಿಯುವ ಅಮಿತ ವಿಶ್ವಾಸದಲ್ಲಿದೆ.

90 ಸದಸ್ಯ ಬಲದ ವಿಧಾನಸಭೆಯಲ್ಲಿ ಕಾಂಗ್ರೆಸ್‌ನ 68 ಶಾಸಕರಿದ್ದಾರೆ. ಇತರೆ ಹಿಂದುಳಿದ ವರ್ಗಗಳು (ಒಬಿಸಿ) ಮತ್ತು ಗ್ರಾಮೀಣ ಮತದಾರರ ಮೇಲೆ ಗಮನಾರ್ಹ ಹಿಡಿತ ಹೊಂದಿರುವ ಭೂಪೇಶ್ ಬಘೇಲ್ ಅವರ ಜನಪ್ರಿಯತೆಯನ್ನೇ ಕಾಂಗ್ರೆಸ್ ನೆಚ್ಚಿಕೊಂಡಿದೆ.

ಐದು ವರ್ಷಗಳಲ್ಲಿ ನಡೆದ ಎಲ್ಲ ಉಪಚುನಾವಣೆಗಳಲ್ಲಿ ಗೆಲುವು ಸಾಧಿಸಿದೆ. ಆದರೆ, ಬಘೇಲ್ ಹಾಗೂ ಉಪಮುಖ್ಯಮಂತ್ರಿ ಟಿ.ಎಸ್.ಸಿಂಗ್ ದೇವ್ ನಡುವೆ ಭಿನ್ನಮತ ಇದೆ.

ನಾಯಕತ್ವ ಬಿಕ್ಕಟ್ಟು ಬಿಜೆಪಿಗೆ ದೊಡ್ಡ ಸಮಸ್ಯೆ. 2018ರ ಚುನಾವಣೆಯ ಸೋಲಿನ ನಂತರ ಮೂರು ಸಲ ರಾಜ್ಯ ಘಟಕದ ಅಧ್ಯಕ್ಷರನ್ನು ಬದಲಿಸಲಾಗಿದೆ. ಕಳೆದ ವರ್ಷ ವಿರೋಧ ಪಕ್ಷದ ನಾಯಕರನ್ನೂ ಬದಲಿಸಲಾಯಿತು. ಎರಡು ಸಲ ಮುಖ್ಯಮಂತ್ರಿಯಾಗಿದ್ದ ರಮಣ ಸಿಂಗ್ ಅವರ ಮೇಲೆ ಬಿಜೆಪಿ ವರಿಷ್ಠರು ಹೆಚ್ಚಿನ ವಿಶ್ವಾಸ ಇರಿಸಿಕೊಂಡಿಲ್ಲ. ಚುನಾವಣೆ ಘೋಷಣೆಯಾದ ಬಳಿಕವಷ್ಟೇ ಅವರಿಗೆ ಟಿಕೆಟ್ ನೀಡಲಾಗಿದೆ.

ಅಂಕಿ-ಅಂಶ
- **90** ಒಟ್ಟು ಸೀಟುಗಳು
- **2,03,80,079** ಒಟ್ಟು ಮತದಾರರು
- **1,02,39,410** ಮಹಿಳೆಯರು
- **1,01,20,040** ಪುರುಷರು
- **24,109** ಮತದಾನ ಕೇಂದ್ರಗಳು

ಮಿಜೋರಾಂ

ಈಶಾನ್ಯದ ರಾಜ್ಯದಲ್ಲಿ ಮಿಜೋ ನ್ಯಾಷನಲ್ ಫ್ರಂಟ್, ಕಾಂಗ್ರೆಸ್ ಹಾಗೂ ಜೋರಮ್ ಪೀಪಲ್ಸ್ ಮೂವ್‌ಮೆಂಟ್ ಮಧ್ಯೆ ಹಣಾಹಣಿ ಏರ್ಪಟ್ಟಿದೆ. ಸಣ್ಣ ಗುಡ್ಡಗಾಡು ಈಶಾನ್ಯ ರಾಜ್ಯದಲ್ಲಿ 2 ಪ್ರಾದೇಶಿಕ ಪಕ್ಷಗಳ ನೇರ ಸವಾಲನ್ನು ಕೈ ಪಾಳಯ ಮೆಟ್ಟಿ ನಿಂತಿತೇ ಎಂಬುದು ಕುತೂಹಲಕ್ಕೆ ಕಾರಣವಾಗಿದೆ. ಇಲ್ಲಿ ಬಿಜೆಪಿ ಅಷ್ಟೊಂದು ಪ್ರಬಲವಾಗಿಲ್ಲ. ಮಣಿಪುರ ಗಲಭೆ ನಿರ್ವಹಣೆ ವಿಷಯವು ಈ ರಾಜ್ಯದಲ್ಲಿ ಪ್ರಮುಖ ಚುನಾವಣಾ ವಿಷಯವಾಗುವ ಸಾಧ್ಯತೆ ಇದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಎಲ್ಲಾ ಧರ್ಮಗಳು ಮನುಷ್ಯ ಧರ್ಮವೇ ಶ್ರೇಷ್ಠ ಎಂದಿವೆ. ಅರ್ಥೈಸಿಕೊಳ್ಳುವಲ್ಲಿ ಸೋತ ನಾವು ನಮ್ಮದೇ ಶ್ರೇಷ್ಠ ಎನ್ನುತ್ತೇವೆ.

-ಕುವೆಂಪು

ಪಟಾಕಿ ಅಕ್ರಮ: ಕಾನೂನು ಬಿಗಿಯಾಗಲಿ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ಬರಲಿ

ಆನೇಕಲ್ ತಾಲ್ಲೂಕಿನ ಅತ್ತಿಬೆಲೆಯಲ್ಲಿ ಪಟಾಕಿ ಗೋದಾಮಿನಲ್ಲಿ ಶನಿವಾರ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ 14 ಮಂದಿ ಸಜೀವ ದಹನವಾಗಿದ್ದಾರೆ. ಇನ್ನೂ ಹಲವರು ಗಾಯಗೊಂಡಿದ್ದಾರೆ. ಕೂಲಿಯ ಆಸೆಗೆ ತಮಿಳುನಾಡಿನಿಂದ ಕೆಲಸಕ್ಕೆ ಬಂದಿದ್ದ ಯುವಕರು, ವಿದ್ಯಾರ್ಥಿಗಳು ಪಟಾಕಿಗೆ ಹೊತ್ತಿಕೊಂಡ ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ ಜೀವ ತೆತ್ತಿದ್ದಾರೆ. ಕರ್ನಾಟಕ– ತಮಿಳುನಾಡು ಗಡಿಯಲ್ಲಿರುವ ಅತ್ತಿಬೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಇರುವ 'ಬಾಲಾಜಿ ಟ್ರೇಡರ್ಸ್' ಹೆಸರಿನ ಮಳಿಗೆಯಲ್ಲಿ ಸಂಭವಿಸಿರುವ ಪಟಾಕಿ ಸ್ಫೋಟದ ದುರಂತವು ನೆರೆಯ ತಮಿಳುನಾಡಿನ ವಿವಿಧ ಗ್ರಾಮಗಳ ಕೆಲವು ಕುಟುಂಬಗಳನ್ನು ತೀವ್ರ ಸಂಕಷ್ಟಕ್ಕೆ ತಳ್ಳಿದೆ. ದೀಪಾವಳಿ ಹಬ್ಬ ಸಮೀಪಿಸುತ್ತಿದ್ದಂತೆಯೇ ರಾಜ್ಯದಲ್ಲಿ ಪಟಾಕಿ ಮಾರಾಟದ ವಹಿವಾಟಿನಲ್ಲಿ ಏರಿಕೆಯಾಗುವುದು ವಾಡಿಕೆ. ಅದರ ಜತೆಯಲ್ಲೇ ಪಟಾಕಿ ದಾಸ್ತಾನು ಮಾಡಿದ ಗೋದಾಮುಗಳು, ಮಾರಾಟ ಮಳಿಗೆಗಳಲ್ಲಿ ಅಗ್ನಿ ಅವಘಡ ಸಂಭವಿಸಿ ಸಾವು, ನೋವು ಸಂಭವಿಸುವುದೂ ಆಗಾಗ ನಡೆಯುತ್ತಲೇ ಇದೆ. ಆಗಸ್ಟ್ ತಿಂಗಳಲ್ಲಿ ಹಾವೇರಿ ತಾಲ್ಲೂಕಿನ ಆಲದಕಟ್ಟಿಯ ಹೊರವಲಯದ ಹಾವೇರಿ– ಹಾನಗಲ್ ಮುಖ್ಯರಸ್ತೆಯ ಪಕ್ಕದ ಪಟಾಕಿ ಗೋದಾಮಿನಲ್ಲಿ ಬೆಂಕಿ ಹೊತ್ತಿಕೊಂಡು ನಾಲ್ವರು ಸಜೀವ ದಹನಗೊಂಡಿದ್ದರು. ಅತಿಯಾದ ಶಬ್ದ ಹೊಮ್ಮಿಸುವ ಹಾಗೂ ಹೊಗೆ ಸೂಸುವ ಪಟಾಕಿಗಳ ಮಾರಾಟಕ್ಕೆ ನಿಷೇಧವಿದೆ. ಸುಪ್ರೀಂ ಕೋರ್ಟ್ ಆದೇಶದಂತೆ ಅಂತಹ ಪಟಾಕಿಗಳ ಮಾರಾಟವನ್ನು ನಿಷೇಧಿಸಿರುವ ಕೇಂದ್ರ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು ನಿರ್ದಿಷ್ಟ ಮಾನದಂಡಗಳ ವ್ಯಾಪ್ತಿಗೆ ಒಳಪಡುವ 'ಹಸಿರು ಪಟಾಕಿ'ಗಳ ಮಾರಾಟಕ್ಕಷ್ಟೇ ಅನುಮತಿ ನೀಡಬೇಕೆಂಬ ಮಾರ್ಗಸೂಚಿಗಳನ್ನು ನಿಯಮಿತವಾಗಿ ಹೊರಡಿಸುತ್ತಲೇ ಇವೆ. ಆದರೆ, ಎಲ್ಲ ಮಾರ್ಗಸೂಚಿಗಳನ್ನೂ ಗಾಳಿಗೆ ತೂರಿ ಪಟಾಕಿಗಳ ಮಾರಾಟ ಅವ್ಯಾಹತವಾಗಿ ನಡೆಯುತ್ತಲೇ ಇದೆ. ನೆರೆಯ ತಮಿಳುನಾಡಿನ ಶಿವಕಾಶಿಯಲ್ಲಿ ಪಟಾಕಿ ತಯಾರಿಕೆಯ ಉದ್ಯಮ ವ್ಯಾಪಕವಾಗಿ ಬೆಳೆದಿದೆ. ಲಾಭದ ಆಸೆಗೆ ಅಲ್ಲಿಂದ ಕಡಿಮೆ ದರಕ್ಕೆ ಪಟಾಕಿ ಖರೀದಿಸಿ ತಂದು, ನಿಯಮ ಮೀರಿ ದಾಸ್ತಾನು ಮಾಡಿಕೊಳ್ಳುವ ದೊಡ್ಡ ಜಾಲವೇ ಇದೆ. ಅತ್ತಿಬೆಲೆಯ ಗಡಿ ಭಾಗದಲ್ಲೇ ಅಂತಹ ನೂರಾರು ಮಳಿಗೆಗಳಿವೆ. ಬೆಂಗಳೂರು ನಗರದ ಪ್ರಮುಖ ವಾಣಿಜ್ಯ ಮತ್ತು ವಸತಿ ಪ್ರದೇಶಗಳಲ್ಲೂ ಅಕ್ರಮವಾಗಿ ಪಟಾಕಿ ದಾಸ್ತಾನು ಮಾಡಿ, ಮಾರಾಟ ಮಾಡುತ್ತಿರುವ ಆರೋಪಗಳೂ ಇವೆ.

ರಾಜ್ಯದಾದ್ಯಂತ ಅಕ್ರಮವಾಗಿ ಪಟಾಕಿಗಳ ದಾಸ್ತಾನು ಮತ್ತು ಮಾರಾಟ ಮಾಡುತ್ತಿರುವವರನ್ನು ಪತ್ತೆಮಾಡುವ ಕೆಲಸ ಆಗಬೇಕಾಗಿದೆ

ಪಟಾಕಿ ಮಾರಾಟ ಮತ್ತು ದಾಸ್ತಾನಿಗೆ ರಾಜ್ಯದಲ್ಲಿ ಎರಡು ಬಗೆಯ ಪರವಾನಗಿಗಳನ್ನು ನೀಡಲಾಗುತ್ತಿದೆ. ತಾತ್ಕಾಲಿಕವಾಗಿ ಪಟಾಕಿ ಮಾರಾಟ ಮಳಿಗೆ ತೆರೆಯಲು ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಮೂಲಕ ಪರವಾನಗಿ ನೀಡುವ ವ್ಯವಸ್ಥೆ ಇದೆ. ಪಟಾಕಿಗಳ ತಯಾರಿಕೆ, ಬೃಹತ್ ಪ್ರಮಾಣದ ದಾಸ್ತಾನು ಚಟುವಟಿಕೆ ನಡೆಸಲು ಜಿಲ್ಲಾಡಳಿತದ ನಿರಾಕ್ಷೇಪಣಾ ಪತ್ರದೊಂದಿಗೆ (ಎನ್‌ಒಸಿ) ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ಸ್ಫೋಟಕಗಳ ಸುರಕ್ಷತಾ ಸಂಸ್ಥೆಯು (ಪಿಇಎಸ್‌ಒ) ಪರವಾನಗಿ ನೀಡುತ್ತದೆ. ಈ ಪ್ರಕರಣದಲ್ಲಿ ಬಾಲಾಜಿ ಟ್ರೇಡರ್ಸ್ ಮಾಲೀಕರಾದ ರಾಮಸ್ವಾಮಿ ರೆಡ್ಡಿ ಮತ್ತು ನವೀನ್ ರೆಡ್ಡಿ ಅಕ್ರಮವಾಗಿ ಎನ್‌ಒಸಿಗಳನ್ನು ಪಡೆದು ಪಟಾಕಿ ಮಳಿಗೆ ನಡೆಸಲು ತಾತ್ಕಾಲಿಕ ಪರವಾನಗಿ ಪಡೆದಿದ್ದಾರೆ ಎಂಬುದು ತನಿಖೆಯಲ್ಲಿ ಪತ್ತೆಯಾಗಿದೆ. ಪಟಾಕಿ ದಾಸ್ತಾನು ಮಳಿಗೆಗೆ ಕಾಯಂ ಪರವಾನಗಿ ಪಡೆಯಲು ಜಿಲ್ಲಾಡಳಿತದಿಂದ ಎನ್‌ಒಸಿ ಪಡೆದು ಪಿಇಎಸ್‌ಒಗೆ ಸಲ್ಲಿಸಿರುವುದು ಕೂಡ ಪರಿಶೀಲನೆ ವೇಳೆ ಗೊತ್ತಾಗಿದೆ. ದುರಂತ ಸಂಭವಿಸಿರುವ ಪಟಾಕಿ ದಾಸ್ತಾನು ಮಳಿಗೆಯ ಅಕ್ಕಪಕ್ಕದಲ್ಲೇ ಮದ್ಯದಂಗಡಿ, ವಾಣಿಜ್ಯ ಮಳಿಗೆಗಳು, ಹೋಟೆಲ್‌ಗಳಿವೆ. ಎದುರಿನಲ್ಲೇ ರಾಷ್ಟ್ರೀಯ ಹೆದ್ದಾರಿ ಹಾದುಹೋಗಿದ್ದು, ಅಂಗಡಿಯ ಮುಂಭಾಗದಲ್ಲೇ ವಿದ್ಯುತ್ ಕಂಬವೂ ಇದೆ. ಇಂತಹ ಸ್ಥಳದಲ್ಲಿ ನಿಯಮ ಮೀರಿ ಪಟಾಕಿ ಮಾರಾಟ ಹಾಗೂ ದಾಸ್ತಾನು ಮಳಿಗೆಗೆ ಪರವಾನಗಿ ನೀಡಲಾಗಿದೆ. 1,000 ಕೆ.ಜಿ.ಯಷ್ಟು ಪಟಾಕಿಗಳನ್ನು ಮಾತ್ರ ದಾಸ್ತಾನು ಮಾಡಿಕೊಂಡು, ಮಾರಾಟ ಮಾಡಲು ತಾತ್ಕಾಲಿಕ ಪರವಾನಗಿ ನೀಡಲಾಗಿತ್ತು. ಅದನ್ನು ಉಲ್ಲಂಘಿಸಿ ಹತ್ತಾರು ಟನ್‌ಗಳಷ್ಟು ಪಟಾಕಿಗಳನ್ನು ದಾಸ್ತಾನು ಮಾಡಿದ್ದೇ ಇಷ್ಟೊಂದು ದೊಡ್ಡ ದುರಂತ ಸಂಭವಿಸಲು ಕಾರಣ ಎಂದು ತನಿಖೆಯಿಂದ ಬಯಲಾಗಿದೆ. ಪ್ರತಿ ಬಾರಿಯೂ ಇಂತಹ ದುರ್ಘಟನೆಗಳು ನಡೆದಾಗ ಒಂದಷ್ಟು ದಿನಗಳ ಕಾಲ ಸುತ್ತಮುತ್ತಲಿನ ಪಟಾಕಿ ಅಂಗಡಿಗಳನ್ನು ಬಂದ್ ಮಾಡಲಾಗುತ್ತದೆ. ನಿಯಮ ಪಾಲನೆ ಆಗುತ್ತಿದೆಯೇ ಎಂಬುದರ ತಪಾಸಣೆಯು ಕಣ್ಣೊರೆಸುವ ರೀತಿಯಲ್ಲಿ ನಡೆಯುತ್ತದೆ. ಇದರ ನಡುವೆ ಪಟಾಕಿಗಳ ಅಕ್ರಮ ದಾಸ್ತಾನು ಮತ್ತು ಮಾರಾಟ ಮಾತ್ರ ಅಬಾಧಿತವಾಗಿ ನಡೆಯುತ್ತಲೇ ಇರುತ್ತದೆ. ಪಟಾಕಿಗಳ ಮಾರಾಟ ಮತ್ತು ದಾಸ್ತಾನು ನಿಯಂತ್ರಣಕ್ಕೆ ಸಂಬಂಧಿಸಿದ ಅಧಿಕಾರವು ಸರ್ಕಾರದ ವಿವಿಧ ಇಲಾಖೆಗಳ ಮಧ್ಯೆ ಹರಿದು ಹಂಚಿಹೋಗಿದೆ. ಈ ಕಾರಣಕ್ಕಾಗಿಯೇ ನಿಯಮ, ಮಾರ್ಗಸೂಚಿಗಳ ಪಾಲನೆ ಬಿಗಿಯಾಗಿ ನಡೆಯುತ್ತಿಲ್ಲ. ಕಂದಾಯ ಮತ್ತು ಪೊಲೀಸ್ ಇಲಾಖೆಗಳಿಗೆ ಹೆಚ್ಚು ಅಧಿಕಾರವಿದ್ದರೂ ಇಂತಹ ಪ್ರಕರಣಗಳಲ್ಲಿ ಅದನ್ನು ನಿಷ್ಠುರವಾಗಿ ಚಲಾಯಿಸುತ್ತಿಲ್ಲ. ಪಟಾಕಿ ಮಳಿಗೆಗಳಿಗೆ ಅನುಮತಿ ನೀಡುವುದು, ತಪಾಸಣೆ, ನಿಯಂತ್ರಣವನ್ನು ಕೆಲವು ಇಲಾಖೆಗಳು ಲಂಚದ ದೊಡ್ಡ ಮೂಲವನ್ನಾಗಿ ಮಾಡಿಕೊಂಡಿವೆ ಎಂಬ ಆರೋಪದಲ್ಲಿ ಹುರುಳಿಲ್ಲದೇ ಇಲ್ಲ. ಅತ್ತಿಬೆಲೆಯ ಪ್ರಕರಣದಲ್ಲೂ ಭ್ರಷ್ಟಾಚಾರವೇ ಈ ಪರಿಯ ನಿಯಮ ಉಲ್ಲಂಘನೆಗೆ ಕಾರಣ ಎಂಬ ದೂರುಗಳಿವೆ. ರಾಜ್ಯ ಸರ್ಕಾರವು ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿದೆ. ತನಿಖೆಯು ಮಳಿಗೆ ಮಾಲೀಕರನ್ನು ಬಂಧಿಸುವುದಕ್ಕೆ ಸೀಮಿತವಾಗಬಾರದು. ಅಕ್ರಮವಾಗಿ ಪರವಾನಗಿ ನೀಡಲು ಕಾರಣರಾದ ಅಧಿಕಾರಿಗಳನ್ನೂ ಪತ್ತೆಹಚ್ಚಿ ಅವರನ್ನೂ ಕಾನೂನು ಕ್ರಮಕ್ಕೆ ಒಳಪಡಿಸಬೇಕು. ರಾಜ್ಯದಾದ್ಯಂತ ಈ ರೀತಿ ಅಕ್ರಮವಾಗಿ ಪಟಾಕಿಗಳ ದಾಸ್ತಾನು, ಮಾರಾಟ ನಡೆಸುತ್ತಿರುವವರನ್ನು ಪತ್ತೆಮಾಡುವ ಕೆಲಸವೂ ಆಗಬೇಕು. ಅದರ ಜತೆಯಲ್ಲೇ ಪಟಾಕಿಗಳ ಸಾಗಣೆ, ದಾಸ್ತಾನು ಮತ್ತು ಮಾರಾಟದಲ್ಲಿ ಅಕ್ರಮ ತಡೆಯಲು ನಿಯಮಗಳನ್ನು ಇನ್ನೂ ಬಿಗಿಗೊಳಿಸಿ, ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರುವ ಕೆಲಸವನ್ನು ಸರ್ಕಾರ ಮಾಡಬೇಕಿದೆ.

ದಿನದ ಟ್ವೀಟ್

ನಿರಾಳ ಮೂಡಿಸಿದ ಮೆಟ್ರೊ

ಚಲ್ಲಘಟ್ಟದಿಂದ ವೈಟ್‌ಫೀಲ್ಡ್‌ಗೆ! ಓಲಾ ಕ್ಯಾಬ್: ₹ 1,000, ಓಲಾ ಆಟೊ– ₹ 600, ಬಿಎಂಟಿಸಿ ಬಸ್ (ದಿನದ ಪಾಸ್): ₹ 70, ಮೆಟ್ರೊ: ₹ 60. ಬರೀ 60 ರೂಪಾಯಿಗೆ ಬೆಂಗಳೂರಿಗ ಇಂದು 42.5 ಕಿ.ಮೀ. ದೂರವನ್ನು 60ರಿಂದ 80 ನಿಮಿಷಗಳಲ್ಲಿ ಒಂದು ದಿಕ್ಕಿನಿಂದ ಮತ್ತೊಂದು ದಿಕ್ಕಿಗೆ ಆರಾಮವಾಗಿ ಪ್ರಯಾಣಿಸಬಹುದು. ಮಾಲಿನ್ಯ– ಕಡಿಮೆ, ಉಳಿತಾಯ– ಹೆಚ್ಚು, ಮನಃಶಾಂತಿ– ಇನ್ನಷ್ಟು ಹೆಚ್ಚು. ನೇರಳೆಮಾರ್ಗವು ಬೆಂಗಳೂರಿನಲ್ಲಿ ಪ್ರಸ್ತುತ ಅತಿ ದೊಡ್ಡ ಮೆಟ್ರೊ ಮಾರ್ಗವಾಗಿದೆ.

ಕಾರ್ತಿಕ್ ರೆಡ್ಡಿ

ಕಿಡಿನುಡಿ



ಗಾಜಾಗೆ ಆಹಾರ, ನೀರು, ವಿದ್ಯುತ್ ಮತ್ತು ಇಂಧನ ಸರಬರಾಜು ಸ್ಥಗಿತಗೊಳಿಸುವುದಾಗಿ ಇಸ್ರೇಲ್‌ನ ರಕ್ಷಣಾ ಸಚಿವರು ಘೋಷಿಸಿದ್ದಾರೆ (ಈ ಪ್ರದೇಶವು ಸಂಪೂರ್ಣವಾಗಿ ಇಸ್ರೇಲ್‌ನ ನಿಯಂತ್ರಣಕ್ಕೆ ಒಳಪಟ್ಟಿದೆ). ಗಾಜಾ ನಾಗರಿಕರನ್ನು ಅವರು 'ಮಾನವ ಮೃಗಗಳು' ಎಂದು ಕರೆದಿದ್ದಾರೆ. ಅಂತರರಾಷ್ಟ್ರೀಯ ಕಾನೂನಿನ ಪ್ರಕಾರ ಸಾಮೂಹಿಕ ಶಿಕ್ಷೆಯು ಯುದ್ಧಾಪರಾಧ! ಇದು ನಾಗರಿಕ ಪ್ರಪಂಚ...

ಮೊಹಮ್ಮದ್ ಶೆಹಾದ, ಲೇಖಕ, ಗಾಜಾ

25 ವರ್ಷಗಳ ಹಿಂದೆ

ಶನಿವಾರ, 10-10-1998

● ಶಾಸಕರ ಅನರ್ಹತೆ: ಮಾಯಾವತಿ ಅರ್ಜಿ ಸಂವಿಧಾನ ಪೀಠಕ್ಕೆ

ನವದೆಹಲಿ, ಅ. 9 (ಪಿಟಿಐ)– ಪಕ್ಷಾಂತರ ನಿಷೇಧ ಕಾಯ್ದೆ ಅನ್ವಯ ಉತ್ತರಪ್ರದೇಶದ 12 ಮಂದಿ ಬಿಎಸ್‌ಪಿ ಶಾಸಕರ ಸದಸ್ಯತ್ವವನ್ನು ಅನರ್ಹಗೊಳಿಸುವ ಸಂಬಂಧ ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಗಳು ತದ್ವಿರುದ್ಧ ತೀರ್ಪು ನೀಡುವುದರೊಂದಿಗೆ ಪ್ರಕರಣ ಅನಿರೀಕ್ಷಿತ ತಿರುವು ಪಡೆಯಿತು.

ಮುಖ್ಯ ನ್ಯಾಯಮೂರ್ತಿ ಎಂ.ಎಂ. ಪೂಂಚಿ ಅವರು ಪ್ರಕರಣದ ವಿಚಾರಣೆಯನ್ನು ಸಂವಿಧಾನ ಪೀಠಕ್ಕೆ ಒಪ್ಪಿಸಿದರು.

ಬಿಎಸ್‌ಪಿಯಿಂದ ಸಿಡಿದುಹೋಗಿ ಬಿಜೆಪಿ ನೇತೃತ್ವದ ಕಲ್ಯಾಣ್ ಸಿಂಗ್ ಸರ್ಕಾರವನ್ನು ಬೆಂಬಲಿಸಿದ 12 ಶಾಸಕರ ಗುಂಪಿಗೆ ಮಾನ್ಯತೆ ನೀಡಿದ ಸ್ಪೀಕರ್ ಕೇಸರಿನಾಥ್ ತ್ರಿಪಾಠಿ ಅವರ ತೀರ್ಪನ್ನು ಬಿಎಸ್‌ಪಿ ನಾಯಕಿ ಮಾಯಾವತಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

● ರಾಜ್ಯಕ್ಕೆ ಕೇಂದ್ರದ ಅಧ್ಯಯನ ತಂಡ

ಬೆಂಗಳೂರು, ಅ. 9– ಮಳೆಯಿಂದ ಹಾನಿಗೊಳಗಾದ ರಾಜ್ಯದ ವಿವಿಧ ಭಾಗಗಳಿಗೆ ಕೇಂದ್ರದ ಅಧ್ಯಯನ ತಂಡ ಸದ್ಯದಲ್ಲೇ ಭೇಟಿ ನೀಡಲಿದೆ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಬಾಬಾಗೌಡ ಪಾಟೀಲ್ ತಿಳಿಸಿದರು.

50 ವರ್ಷಗಳ ಹಿಂದೆ

ಬುಧವಾರ, 10-10-1973

● ಇಸ್ರೇಲಿ ವಿಮಾನಗಳ ಯಶಸ್ವಿ ದಾಳಿ

ಡಮಾಸ್ಕಸ್, ಅ. 9– ಇಸ್ರೇಲಿ ಫ್ಯಾಂಟಂ ಜೆಟ್ ವಿಮಾನಗಳು ಇಂದು, ಸಿರಿಯಾದ ರಾಜಧಾನಿ ಡಮಾಸ್ಕಸ್‌ನಲ್ಲಿರುವ ರಕ್ಷಣಾ ಸಚಿವಾಲಯ ಕಟ್ಟಡ ಮತ್ತು ರೇಡಿಯೊ ಕೇಂದ್ರದ ಮೇಲೆ ದಾಳಿ ನಡೆಸಿ, ಅವುಗಳಿಗೆ ನೇರ ಬಾಂಬ್ ಹೊಡೆತ ಕೊಟ್ಟವಲ್ಲದೆ ವಿಪರೀತ ಸಾವು–ನೋವು ಉಂಟುಮಾಡಿದವು.

ಇಸ್ರೇಲ್ ವಿಮಾನಗಳು ಇಲ್ಲಿನ ನಾಗರಿಕರ ವಾಸಸ್ಥಳಗಳ ಮೇಲೆ ಬಾಂಬ್ ದಾಳಿ ನಡೆಸಿದಾಗ, ಡಮಾಸ್ಕಸ್‌ನಲ್ಲಿರುವ ಭಾರತದ ರಾಯಭಾರಿಯ ಪತ್ನಿ ಮತ್ತು ಮಕ್ಕಳೂ ಸೇರಿ ಅನೇಕ ಮಂದಿ ಗಾಯಗೊಂಡರೆಂದು ಮಿಲಿಟರಿ ವಕ್ತಾರರು ತಿಳಿಸಿದ್ದಾರೆ.

ಎನ್‌ಸಿಎಫ್ ಪಠ್ಯಕ್ರಮವಲ್ಲ; ಪಠ್ಯಕ್ರಮದ ಅಭಿವೃದ್ಧಿಗೆ ಪೂರಕವಾದ ಒಂದು ಚೌಕಟ್ಟು

ಪಠ್ಯಕ್ರಮ ಚೌಕಟ್ಟು ಮತ್ತು ತಾತ್ವಿಕ ನೆಲೆಗಟ್ಟು

ವಿಶ್ಲೇಷಣೆ

ಅನುರಾಗ್ ಬೆಹರ್

ಕೇಂದ್ರ ಶಿಕ್ಷಣ ಸಚಿವಾಲಯ ಇತ್ತೀಚೆಗೆ ಬಿಡುಗಡೆ ಮಾಡಿರುವ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್), ಶಾಲಾ ಶಿಕ್ಷಣಕ್ಕೆ ಮಾರ್ಗದರ್ಶನ ನೀಡುವ ಉದ್ದೇಶವನ್ನು ಹೊಂದಿದೆ. ಶಿಕ್ಷಣ ಕ್ಷೇತ್ರದಲ್ಲಿ ಇರುವವರಿಗೆ ಮಾತ್ರವಲ್ಲದೆ ಇಡೀ ಸಮಾಜದ ಹಿತಕ್ಕೆ ಎನ್‌ಸಿಎಫ್ ನಿರ್ಣಾಯಕ ಎನಿಸಿರುವುದರಿಂದ, ಇದು ಏನನ್ನು ಒಳಗೊಂಡಿದೆ ಎಂಬುದನ್ನು ಅರಿಯುವುದು ಹೆಚ್ಚು ಉಪಯುಕ್ತ.

ನಾನು, ಈ ಪಠ್ಯಕ್ರಮ ಚೌಕಟ್ಟನ್ನು ಅಭಿವೃದ್ಧಿಪಡಿಸಲು ಸಚಿವಾಲಯವು ರೂಪಿಸಿದ್ದ ತಂಡದ ಸದಸ್ಯ. ಪಠ್ಯಕ್ರಮವೆಂದರೆ, ಶೈಕ್ಷಣಿಕ ಉದ್ದೇಶವನ್ನು ಸಾಧಿಸುವ ಹಾದಿಯಲ್ಲಿ ಮಗು ಶಾಲೆಯಲ್ಲಿ ಪಡೆಯುವ ಸಂಪೂರ್ಣ ಅನುಭವ. ಕಲಿಕೆಯ ಗುರಿಗಳು, ಪಠ್ಯವಿಷಯ, ಶಿಕ್ಷಣ ಶಾಸ್ತ್ರೀಯ ಅಭ್ಯಾಸಗಳು, ಬೋಧನಾ- ಕಲಿಕಾ ಸಾಮಗ್ರಿಗಳು, ತರಗತಿಯ ಅಭ್ಯಾಸಗಳು, ಶಾಲಾ ಸಂಸ್ಕೃತಿಯಂತಹ ಅನೇಕ ಸಂಗತಿಗಳನ್ನು ಅದು ಒಳಗೊಂಡಿರುತ್ತದೆ. ಈ ಎಲ್ಲಾ ಅಂಶಗಳು ಮಗುವಿನ ಕಲಿಕೆಯನ್ನು ರೂಪಿಸುವುದರಿಂದ, ಪಠ್ಯಕ್ರಮವನ್ನು ಸಂಕುಚಿತ ವ್ಯಾಖ್ಯಾನದ ಬದಲಿಗೆ ವಿಶಾಲವಾದ ದೃಷ್ಟಿಕೋನದಿಂದ ಪರಿಭಾವಿಸುವುದು ಮುಖ್ಯ. ಪಠ್ಯಕ್ರಮವನ್ನು ವಸ್ತುವಿಷಯ, ಶಿಕ್ಷಣಶಾಸ್ತ್ರ ಮತ್ತು ಮೌಲ್ಯಮಾಪನದ ಪರಿಮಿತಿಗೆ ಒಳಪಡಿಸದೆ, ಅದರ ಬಗ್ಗೆ ವಿಸ್ತೃತವಾದ ಅರಿವು ಮೂಡಿಸಿಕೊಳ್ಳುವುದು ಹೆಚ್ಚು ನೈಜತೆಯಿಂದ ಕೂಡಿರುತ್ತದೆ.

ಎನ್‌ಸಿಎಫ್ ಎನ್ನುವುದು ಪಠ್ಯಕ್ರಮವಲ್ಲ; ಪಠ್ಯಕ್ರಮವನ್ನು ಅಭಿವೃದ್ಧಿಪಡಿಸುವುದಕ್ಕೆ ಪೂರಕವಾದ ಒಂದು ಚೌಕಟ್ಟು. ಪಠ್ಯಕ್ರಮವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಅನುಸರಿಸಬೇಕಾದ ತತ್ವಗಳು, ಗುರಿಗಳು, ಸಂರಚನೆಗಳು ಮತ್ತು ಪೂರಕವಾದ ಅಂಶಗಳನ್ನು ಇದು ವಿವರಿಸುತ್ತದೆ ಹಾಗೂ ಆನಂತರ ಇದು ಪಠ್ಯವಿಷಯ, ಪಠ್ಯಪುಸ್ತಕಗಳು ಮತ್ತು ಮೌಲ್ಯಮಾಪನ (ಪರೀಕ್ಷೆಗಳು) ಸೇರಿದಂತೆ ಬೋಧನಾ- ಕಲಿಕಾ ಸಾಮಗ್ರಿಯಂಥವುಗಳಿಗೆ ಮಾರ್ಗದರ್ಶನ ನೀಡುತ್ತದೆ. ರಾಜ್ಯ ಮಟ್ಟದ ಸೂಕ್ತ ಸಂಸ್ಥೆಗಳು, ಅಂದರೆ ಶಾಲೆಗಳಿಗೆ ಜವಾಬ್ದಾರಿಯುತವಾದ ಮಂಡಳಿಗಳು ಅಥವಾ ಇತರ ಸಂಸ್ಥೆಗಳು ಇವೆಲ್ಲವುಗಳನ್ನು ಅಭಿವೃದ್ಧಿಪಡಿಸಬೇಕು.

ಶಾಲೆಯ ವಾತಾವರಣ, ಅಲ್ಲಿ ವಿದ್ಯಾರ್ಥಿಗಳಿಗೆ ದಕ್ಕುವ ಅನುಭವಗಳು ಮತ್ತು ಶಾಲಾ ವ್ಯವಸ್ಥೆಗಳು ಪೋಷಿಸಬೇಕಾದ, ಬದಲಿಸಬೇಕಾದ ಹಾಗೂ ಬೆಳೆಸಬೇಕಾದ ಕಾರ್ಯನೀತಿಗಳನ್ನು ಎನ್‌ಸಿಎಫ್ ನಿರ್ದೇಶಿಸಲಿದೆ.

ಶಾಲಾ ಶಿಕ್ಷಣವನ್ನು ರಾಜ್ಯದ ವಿಷಯ ಎಂದು ಪರಿಗಣಿಸಿರುವುದರಿಂದ, ಇಂತಹ ಸಾಮಾನ್ಯ ರಾಷ್ಟ್ರೀಯ ಚೌಕಟ್ಟು ದೇಶದ ರಾಜ್ಯಗಳಾದ್ಯಂತ ಶಾಲಾ ಶಿಕ್ಷಣಕ್ಕೆ ಅಗತ್ಯವಾದ ಸಾಮರಸ್ಯ ಮತ್ತು ಸುಸಂಬದ್ಧತೆಯನ್ನು ಒದಗಿಸುತ್ತದೆ. ಹೀಗೆ, ಎನ್‌ಸಿಎಫ್ ಎನ್ನುವುದು ದೇಶದ ಒಕ್ಕೂಟ ವ್ಯವಸ್ಥೆಯ ಸಮಗ್ರತೆಯನ್ನು ಎತ್ತಿಹಿಡಿಯುವ ಪ್ರಮುಖ ಕಾರ್ಯರೀತಿ ಎನಿಸಿದೆ. ಆದರೆ ರಾಜ್ಯಗಳು ತಮ್ಮ ಶಾಲಾ ವ್ಯವಸ್ಥೆಗೆ ತಕ್ಕಂತೆ ತಮ್ಮದೇ ಆದ ಆದ್ಯತೆಗಳನ್ನು ಹೊಂದಿರುತ್ತವೆ ಮತ್ತು ಪಠ್ಯಕ್ರಮವನ್ನು ನಿರ್ಧರಿಸುತ್ತವೆ.

ಎನ್‌ಸಿಎಫ್ ತನ್ನ ವಿಧಾನ ಮತ್ತು ತತ್ವಗಳಿಗೆ ಸಂಬಂಧಿಸಿದಂತೆ ಉನ್ನತ ಸ್ತರದಲ್ಲಿ ಅಮೂರ್ತವಾಗಿಯೇ ಉಳಿದುಬಿಡಬಹುದಿತ್ತು. ಆದರೆ ಶೈಕ್ಷಣಿಕ ಕ್ಷೇತ್ರದ ವೃತ್ತಿಪರರನ್ನು ಸಮರ್ಥರನ್ನಾಗಿಸಲು ಖಚಿತ ನಿಲುವು ಅತ್ಯಗತ್ಯ ಎಂಬುದನ್ನು ದಶಕಗಳ ಅನುಭವವು ನಮಗೆ ತಿಳಿಸುತ್ತದೆ. ಈ 'ವೃತ್ತಿಪರ'ರಲ್ಲಿ ಶಿಕ್ಷಕರು, ಶಾಲಾ ಮುಖ್ಯಸ್ಥರು, ಪಠ್ಯಕ್ರಮವನ್ನು ಅಭಿವೃದ್ಧಿಪಡಿಸುವವರು, ಪಠ್ಯಪುಸ್ತಕಗಳ ಲೇಖಕರು, ಶೈಕ್ಷಣಿಕ ಆಡಳಿತಗಾರರು ಹಾಗೂ ಇನ್ನಿತರರು ಸೇರಿದ್ದಾರೆ. ಎನ್‌ಸಿಎಫ್‌ನಲ್ಲಿನ ವಿವರಗಳು ತಳಹಂತದಲ್ಲಿ ನೈಜ ಅಭ್ಯಾಸಗಳನ್ನು ಬದಲಿಸಲು ನೆರವು ನೀಡುವ ಗುರಿಯನ್ನು ಹೊಂದಿವೆ. ಅಷ್ಟಾದರೂ ಈ ಚೌಕಟ್ಟಿನ ಯಾವುದೇ ವಿವರಗಳು ಆದೇಶಾತ್ಮಕ ಆಗಿರದೆ ಬರೀ ವಿವರಣಾತ್ಮಕವಾಗಿವೆ. ಉದಾಹರಣೆಗೆ, ಶಾಲೆಯೊಂದರ ಸಾಂಸ್ಕೃತಿಕ ಅಭ್ಯಾಸಗಳು ಸಮಾನತೆ ಮತ್ತು ಬಹುತ್ವವನ್ನು ಉತ್ತೇಜಿಸಬೇಕು ಎಂದಷ್ಟೇ ಎನ್‌ಸಿಎಫ್ ಹೇಳಬಹುದು. ಅದಕ್ಕೆ ಬದಲಾಗಿ, ಅದು ಈ ತತ್ವವನ್ನು ಸೂಚಿಸುವುದಲ್ಲದೆ, ಸಮಾನತೆ ಮತ್ತು ಬಹುತ್ವದ ಮೌಲ್ಯಗಳನ್ನು ಅಭಿವೃದ್ಧಿಪಡಿಸಲು ನೆರವಾಗುವ ಅಭ್ಯಾಸಗಳನ್ನು ನಿರ್ದಿಷ್ಟವಾಗಿ ಸ್ಪಷ್ಟಪಡಿಸುತ್ತದೆ. ಈ ನಿರ್ದಿಷ್ಟ ಅಭ್ಯಾಸಗಳು ತತ್ವಗಳಿಗೆ ನೆಲೆಗಟ್ಟನ್ನು ಒದಗಿಸುತ್ತವೆ ಹಾಗೂ ಅವುಗಳಿಗೆ ನೈಜತೆಯ ರೂಪವನ್ನು ನೀಡುತ್ತವೆ. ಈ ತತ್ವಗಳನ್ನು ಆಧರಿಸಿ ಶಾಲೆಗಳು ತಮ್ಮದೇ ಆದ ಅಭ್ಯಾಸ ಕ್ರಮಗಳನ್ನು ಅಭಿವೃದ್ಧಿಪಡಿಸುವ ಸ್ವಾತಂತ್ರ್ಯವನ್ನು ಹೊಂದಿವೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಶಿಕ್ಷಕರಾಗಲಿ ಅಥವಾ ಪಠ್ಯವಿಷಯವನ್ನು ಅಭಿವೃದ್ಧಿಪಡಿಸುವ ಯಾವುದೇ ವ್ಯಕ್ತಿಯಾಗಲಿ, 'ಶಿಕ್ಷಣ ತಜ್ಞ'ರ ಕನಿಷ್ಠ ಹಸ್ತಕ್ಷೇಪದೊಂದಿಗೆ, ತಮ್ಮ ಪಾತ್ರ ಕುರಿತಂತೆ ಎನ್‌ಸಿಎಫ್‌ನಿಂದ ಸೂಚ್ಯಾರ್ಥಗಳನ್ನು ಅರಿಯಲು ಸಾಧ್ಯವಾಗಬೇಕು. ಇಂತಹ ಎಲ್ಲ ದಾಖಲೆಗಳಿಗೆ ಇದೊಂದು ಮೂಲ ಅಗತ್ಯ ಎನಿಸಿದೆ. ಅಚ್ಚರಿಯ ವಿಷಯವೆಂದರೆ, ಹೆಚ್ಚಿನ ಸಂದರ್ಭಗಳಲ್ಲಿ ಈ ರೀತಿ ನಡೆದಿಲ್ಲ.

ತಳಹಂತದಲ್ಲಿನ ಅಭ್ಯಾಸಗಳಲ್ಲಿ ಅಪೇಕ್ಷಿತ ಬದಲಾವಣೆಗಳನ್ನು ಪರಿಣಾಮಕಾರಿಯಾಗಿ ತರಲು, ಶಾಲೆಯು ಸದ್ಯಕ್ಕೆ ಹೊಂದಿರುವ ಸಂಪನ್ಮೂಲಗಳನ್ನು ಬಳಸಿಯೇ ಕಾರ್ಯಗತಗೊಳಿಸಲು ಸಾಧ್ಯವಾಗುವಂತೆ ಎನ್‌ಸಿಎಫ್ ಅನ್ನು ವಿನ್ಯಾಸಗೊಳಿಸಲಾಗಿದೆ. ಹಾಗೆಂದ ಮಾತ್ರಕ್ಕೆ ಶಾಲೆಗಳಿಗೆ ಅಗತ್ಯವಿರುವ ಮತ್ತು ಅವು ಹೊಂದಲೇಬೇಕಾದ ಸಂಪನ್ಮೂಲಗಳನ್ನು ಖಾತರಿಪಡಿಸುವ ವಿಚಾರದಲ್ಲಿ ಎನ್‌ಸಿಎಫ್ ಬದ್ಧತೆಯನ್ನು ಹೊಂದಿಲ್ಲ ಎಂದು ಅರ್ಥೈಸಬಾರದು. ಆದರೆ ಎಲ್ಲ ಸಂಪನ್ಮೂಲಗಳೂ ಲಭ್ಯವಾದ ನಂತರವಷ್ಟೇ ಅನುಷ್ಠಾನ ಸಾಧ್ಯ ಎಂದುಕೊಳ್ಳುವುದು ಸರಿಯಲ್ಲ.

ಶಾಲೆಗೆ ಅಗತ್ಯವಿರುವ ಎಲ್ಲ ಸಂಪನ್ಮೂಲಗಳು ದೊರೆಯುವತನಕ ನಾವು ಕಾದು ಕುಳಿತಲ್ಲಿ ಫಲಶ್ರುತಿ ಬೇರೆ ರೀತಿಯೇ ಇರುತ್ತದೆ. ನಮ್ಮ ದೇಶದಲ್ಲಿ ವಾಸ್ತವ ಸ್ಥಿತಿ ಹೇಗಿದೆಯೆಂದರೆ, 'ನಮಗೆ ಸಂಪನ್ಮೂಲಗಳು ದೊರೆತಾಗಷ್ಟೇ ನಾವಿದನ್ನು ಕಾರ್ಯಗತಗೊಳಿಸುತ್ತೇವೆ' ಎಂಬ ನೆಪವನ್ನು ಹೇಳುತ್ತಾ ಅನುಷ್ಠಾನ ಕಾರ್ಯವನ್ನು ಮುಂದೂಡುತ್ತಲೇ ಹೋಗುತ್ತೇವೆ.

ಪ್ರಸ್ತುತ ಸನ್ನಿವೇಶಗಳಿಗೆ ಅನುಗುಣವಾಗಿ ಕಾರ್ಯಕ್ರಮ ಜಾರಿಗೊಳಿಸುವುದನ್ನು ಖಾತರಿಪಡಿಸುವ ಹಾಗೂ ಸಂಪನ್ಮೂಲಗಳು ಸುಧಾರಣೆಗೊಳ್ಳುತ್ತಾ ಹೋದಂತೆ ಮುಂದಿನ ದಾರಿಯನ್ನು ನಿರ್ಧರಿಸುವ ವಿಧಾನವನ್ನು ಎನ್‌ಸಿಎಫ್ ಅನುಸರಿಸುತ್ತದೆ. ಉದಾಹರಣೆಗೆ, ಸಂಗೀತ ಸೇರಿದಂತೆ ಕಲಾ ವಿಷಯಕ್ಕೆ ಗಣಿತಕ್ಕೆ ನೀಡಿದಷ್ಟೇ ಪ್ರಾಮುಖ್ಯವನ್ನು ಈ ಚೌಕಟ್ಟು ನೀಡುತ್ತದೆ. ಸಾಮಾನ್ಯವಾಗಿ, 'ನಾವು ಕಲಾ ತರಗತಿಗಳನ್ನು ನಡೆಸುವ ಮೊದಲು ಎಲ್ಲ ಶಾಲೆಗಳಲ್ಲಿ ಅದಕ್ಕೆ ಅಗತ್ಯವಾದ ಕಲಾ ಶಿಕ್ಷಕರು ನಮಗೆ ಬೇಕಾಗುತ್ತಾರೆ' ಎಂಬ ತತ್‌ಕ್ಷಣದ ಪ್ರತಿಕ್ರಿಯೆ ಬರುತ್ತದೆ. ಈ ಬೇಡಿಕೆ ಕಾರ್ಯರೂಪಕ್ಕೆ ಬರಲು 10-15 ವರ್ಷಗಳೇ ಬೇಕಾಗಬಹುದು.

ಇಂತಹ ವಾಸ್ತವ ಸ್ಥಿತಿಯನ್ನು ನಿಭಾಯಿಸುವುದಕ್ಕಾಗಿ ಎನ್‌ಸಿಎಫ್ ಮೂರು ಅಂಶಗಳನ್ನು ಮುಂದಿಡುತ್ತದೆ. ಮೊದಲನೆಯದಾಗಿ, ವಿಷಯಕ್ಕೆ ಸಂಬಂಧಿಸಿದ ನಿಗದಿತ ಶಿಕ್ಷಕರು ಲಭ್ಯವಿಲ್ಲದಿದ್ದರೂ, ಕಲಾ ವಿಷಯದಲ್ಲಿ ಸಾಧಿಸಬೇಕಾದ ಕಲಿಕಾ ಮಾನದಂಡಗಳನ್ನು ಇದು ಸ್ಪಷ್ಟಪಡಿಸುತ್ತದೆ. ಎರಡನೆಯದಾಗಿ, ಕಲಾ ವಿಷಯಕ್ಕೆ ಅದರ ಪ್ರಾಮುಖ್ಯಕ್ಕೆ ಅನುಗುಣವಾಗಿ, 'ವೇಳಾಪಟ್ಟಿಯಲ್ಲಿ ಅವಕಾಶ'ವನ್ನು ಇದು ಕಲ್ಪಿಸುತ್ತದೆ. ಮೂರನೆಯದಾಗಿ, ಪ್ರಸ್ತುತ ಸೇವಾನಿರತ ಶಿಕ್ಷಕರಿಗೆ (ಉದಾಹರಣೆಗೆ, ಭಾಷೆ ಅಥವಾ ಗಣಿತ ಶಿಕ್ಷಕರು) ಲಭ್ಯವಿರುವ ಇತರ ಸ್ಥಳೀಯ ಸಂಪನ್ಮೂಲಗಳ ಸಹಾಯದೊಂದಿಗೆ ತರಬೇತಿ ನೀಡುವ ಪ್ರಾಯೋಗಿಕ ವಿಧಾನವನ್ನು ಇದು ಸೂಚಿಸುತ್ತದೆ. ಹೀಗಾಗಿ, ಕಲಿಕಾ ಮಾನದಂಡಗಳನ್ನು ಸಾಧಿಸುವ ದಿಸೆಯಲ್ಲಿ ಅವರು ಕಲೆಯನ್ನು ಬೋಧಿಸಲು ಶಕ್ತರಾಗುತ್ತಾರೆ.

ಎನ್‌ಸಿಎಫ್ ಬಿಡುಗಡೆಯಾದಾಗಿನಿಂದ ಬಹುತೇಕ ಮಾಧ್ಯಮಗಳ ಶೀರ್ಷಿಕೆಗಳು ಬೋರ್ಡ್ ಪರೀಕ್ಷೆ ನಡೆಸುವ ಕುರಿತು ಅದು ನೀಡಿರುವ ಸಲಹೆಗಳ ಬಗ್ಗೆಯೇ ಹೆಚ್ಚು ಗಮನ ಕೇಂದ್ರೀಕರಿಸಿವೆ. ಇದು, ಪರೀಕ್ಷೆ ಕುರಿತು ನಮ್ಮ ಸಮಾಜಕ್ಕೆ ಇರುವ ಗೀಳನ್ನು ಪ್ರತಿಬಿಂಬಿಸುತ್ತದೆ. ಎನ್‌ಸಿಎಫ್ ಬದಲಿಸಲು ಪ್ರಯತ್ನಿಸುವ ಪ್ರಮುಖ ವಿಚಾರಗಳಲ್ಲಿ ಇದೂ ಒಂದಾಗಿದೆ. ಆದರೆ ಈ ಚೌಕಟ್ಟು ಶಾಲಾ ಶಿಕ್ಷಣದ ಎಲ್ಲ ಆಯಾಮಗಳನ್ನೂ ವ್ಯಾಪಕವಾಗಿ ಒಳಗೊಳ್ಳುತ್ತದೆ. ಶಾಲಾ ಶಿಕ್ಷಣದ ಇತರ ಅನೇಕ ನಿರ್ದಿಷ್ಟ ಮತ್ತು ಪ್ರಮುಖ ವಿಚಾರಗಳನ್ನು ಎನ್‌ಸಿಎಫ್ ಹೇಗೆ ನಿರ್ವಹಿಸುತ್ತದೆ ಹಾಗೂ ಅವುಗಳ ಸುಧಾರಣೆಗೆ ಇದು ಯಾವ ರೀತಿ ಸಹಾಯಕವಾಗಲಿದೆ ಎಂಬುದು ಮುಂದೆ ತಿಳಿಯುತ್ತಾ ಹೋಗುತ್ತದೆ.

ಲೇಖಕ: ಸಿಇಒ, ಅಜೀಂ ಪ್ರೇಮ್‌ಜಿ ಫೌಂಡೇಷನ್

ಚುರುಮುರಿ

ವರ್ಚುವಲ್ ಸ್ಪೇಸ್

● ಲಿಂಗರಾಜು ಡಿ.ಎಸ್.

'ಇದೇನ್ಲಾ ದಿನ ದಿನಕೂ 'ಹತ್ತು-ಇಪ್ಪತ್ತು ಡಿಸಿಎಂ ಪೋಸ್ಟು ಬೇಕು, ನನ್ನ ಮಂತ್ರಿ ಮಾಡಬಕು, ನಮಗೆ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ' ಅಂತ ಅತೃಪ್ತರು ಪಕ್ಷಕ್ಕೆ ಒಳಶುಂಟಿ ಕೊಡ್ತಾವ್ರೆ' ನನ್ನ ಬೇಜಾರು ತೋಡಿಕೊಂಡೆ.

'ಏನೇನೋ ಆಗಬಕು ಅಂತ ಎಲ್ಲಾರಿಗೂ ಆಸೆ ಇರತದೆ ಕಲಾ. ಕಮಲದವು ಅಧಿಕಾರ ಕಳಕಂದು ಶಂಕೆ ಬಂದೋರ ಥರಾ ಆಡತಾ ಇಲ್ಲವಾ?' ತುರೇಮಣೆ ಸಮಾಧಾನ ಹೇಳಿದರು.

'ಜನದ ವೋಟು ಕೊಟ್ಟಿದ್ದಾದರೂ ರವಷ್ಟು ಕೆಲಸ ಮಾಡಬ್ಯಾಡವ್ಲಾ. ಇದಕ್ಕೆ ಪರಿಹಾರ ಹ್ಯಂಗೆ?' ಯಂಟಪ್ಪಣ್ಣ ಕೇಳಿತು.

'ನೋಡಣ್ಣೆ, ನನ್ನ ತಾವು ಒಂದು ಐಡಿಯಾ ಅದೆ. ಅದುನ್ನ ತಕ್ಕಂದ್ರೆ ಈ ಕ್ಯಾತೆ ಎಲ್ಲಾ ಪರಿಹಾರ ಆಯ್ತದೆ' ತುರೇಮಣೆ ಕೊಸೆದರು.

'ಅದೇನ್ಲಾ ಅಂತ ಘನಂದಾರಿ ಐಡಿಯಾ?' ಯಂಟಪ್ಪಣ್ಣ ವಿಚಾರಿಸಿತು.

'ನೋಡಣ್ಣೆ, ಯಾವುದೇ ಪೋಸ್ಟು ಬೇಕಾದರೂ ಆಡ್ರು ಹೊಂಡುಸ್ಬೇಕು, ಜಾಗ ಬೇಕು, ಆಪೀಸು ಬೇಕು, ಸಿಬ್ಬಂದಿ- ಸವಲತ್ತು ಬೇಕು. ನನ್ನ ಐಡಿಯಾ ತಕಂದ್ರೆ ಇವ್ಯಾವೂ ಬೇಕಾಗಿಲ್ಲ' ತುರೇಮಣೆ ಪಿಸುಗುಟ್ಟಿದರು.

'ಅದೇನು ಅಂತ ಸರಿಯಾಗಿ ಹೇಳಿ ಸಾ, ಮಳ್ಳಿ ಆಟ ಆಡಬ್ಯಾಡಿ' ಅಂತಂದೆ.

'ಅಸೆಂಬ್ಲಿಗೂ ಬರದೇ ಶಾಸಕರು ಎಲ್ಲಲ್ಲೋ ಹೋಯಿರ್ತವೆ. ಸರ್ಕಾರದ ದುಡ್ಡು-ಟೈಮು ವೇಸ್ಟು. ಅದರ ಬದಲು ಶಾಸಕರನ್ನೆಲ್ಲಾ ಕಂಪ್ಯೂಟರ್ ಮುಂದೆ ಕುಂದುರ್ಸಿ ಒಬ್ಬೊಬ್ಬರಿಗೆ ಒಂದೊಂದು ಹ್ಯಾಲೋ ಡೆಕ್ ಅಂದ್ರೆ ಕೃತಕ ಭೌತಿಕ ಸ್ಥಳ ಸೃಷ್ಟಿ ಮಾಡಿ ಸಿಎಮ್ಮೋ, ಡಿಸಿಎಮ್ಮೋ, ಪಿಎಮ್ಮೋ ಬೇಕಾದ್ದು ಹೇಳಿದರೆ ಸಾಕು, ಅಲ್ಲೊಂದು ಆಪೀಸು, ಜನ-ಜಾತ್ರೆ ಕೃತಕವಾಗಿ ಸೃಷ್ಟಿಯಾಯ್ತದೆ. ಅವರವರೇ ಬೇಕಾದಂಗೆ ಅಧಿಕಾರ ಮಾಡಿಕ್ಯಂದು ವಾಲಾಡಬೈದು, ಯಾರಿಗೂ ತೊಂದರೆ ಇಲ್ಲ' ಅಂತಂದು ಉಸುರು ತಕ್ಕಂದರು.

ನಮಗೆ ಏನೂ ಅರ್ಥಾಗದೇ ಕಮಂಗಿಗಳ ಥರ ತುರೇಮಣೆ ಮಕ ನೋಡಿದೋ!

ಯಂಗನ್ನಾ ಆಗಲಿ, ನೀವೂ ಈ ಇಚಾರನ ಯಾರ ತಾವೂ ಹೇಳಕ್ಕೋಗಬ್ಯಾಡಿ, ಆಯ್ತಾ?!

ಸಂಗತ

ಪದವಿ ಆಯ್ಕೆ: ಪೋಷಕರದೇ ಪಾರುಪತ್ಯ!

ಮಕ್ಕಳು ಏನು ಓದಬೇಕೆಂಬುದನ್ನು ನಿರ್ಧರಿಸುವಾಗ, ಅವರಿಗೆ ಇರುವ ಆಸಕ್ತಿಯನ್ನು ಪರಿಗಣಿಸಬೇಕೆಂದು ಬಹುತೇಕ ಪೋಷಕರಿಗೆ ಅನ್ನಿಸುವುದೇ ಇಲ್ಲ

● ಎಚ್.ಕೆ.ಶರತ್

ಎಂಜಿನಿಯರಿಂಗ್ ಪದವಿಗೆ ಸೇರಿಕೊಂಡಿರುವ ಮೊದಲ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ 'ನಿಮ್ಮೆದುರು ಹಲವು ಆಯ್ಕೆಗಳಿದ್ದರೂ ನೀವೇಕೆ ಎಂಜಿನಿಯರಿಂಗ್ ಕೋರ್ಸ್, ಅದರಲ್ಲೂ ಸಿವಿಲ್ ಎಂಜಿನಿಯರಿಂಗ್ ವಿಭಾಗವನ್ನೇ ಆಯ್ಕೆ ಮಾಡಿಕೊಂಡ್ರಿ' ಎಂದು ವಿಚಾರಿಸಿದೆ. ಮೊದಲ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಬೋಧಿಸುವ ಅವಕಾಶ ಸಿಕ್ಕಾಗಲೆಲ್ಲ ಈ ಪ್ರಶ್ನೆ ಕೇಳಿ, ಒಟ್ಟಾರೆ ಟ್ರೆಂಡ್ ಏನಿರಬಹುದೆಂದು ತಿಳಿದುಕೊಳ್ಳುವುದು ರೂಢಿಗತ ಅಭ್ಯಾಸವೇ ಆಗಿದೆ.

58 ಮಂದಿ ಸಿವಿಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳಿದ್ದ ತರಗತಿಯಲ್ಲಿ, ಏಳೆಂಟು ವಿದ್ಯಾರ್ಥಿಗಳು ಮಾತ್ರ 'ನಮಗೆ ಸಿವಿಲ್ ಎಂಜಿನಿಯರಿಂಗ್ ಓದಲು ಆಸಕ್ತಿ ಇದ್ದ ಕಾರಣಕ್ಕೆ ಈ ಕೋರ್ಸಿಗೆ ಪ್ರವೇಶ ಪಡೆದಿದ್ದೇವೆ' ಎಂದರು. ಬಹುತೇಕ ವಿದ್ಯಾರ್ಥಿಗಳು ತಮಗೆ ಎಂಜಿನಿಯರಿಂಗ್ ಓದುವ ಆಸಕ್ತಿಯೇ ಇರದಿದ್ದರೂ, ಪೋಷಕರ ಒತ್ತಾಯಕ್ಕೆ ಮಣಿದು ಸೇರಿಕೊಂಡಿರುವುದಾಗಿ ಬೇಸರ ವ್ಯಕ್ತಪಡಿಸಿದರು. ಕೆಲವರು ಸಿವಿಲ್ ಎಂಜಿನಿಯರಿಂಗ್ ಓದಿದರೆ ಸರ್ಕಾರಿ ಕೆಲಸ ಸಿಗುವುದೆಂಬ ಕಾರಣಕ್ಕೆ ಇದನ್ನು ಆಯ್ಕೆ ಮಾಡಿಕೊಂಡಿರುವುದಾಗಿ ತಿಳಿಸಿದರು. ಎಂಬಿಬಿಎಸ್ ಸೀಟು ಸಿಗದ ಕಾರಣಕ್ಕೂ ಕೆಲವರು ಎಂಜಿನಿಯರಿಂಗ್‌ನತ್ತ ಮುಖ ಮಾಡಿದ್ದರು.

ತಮ್ಮ ಮಕ್ಕಳು ಏನು ಓದಬೇಕೆಂಬುದನ್ನು ನಿರ್ಧರಿಸುವಾಗ, ಅವರಿಗೆ ಯಾವುದರಲ್ಲಿ ಆಸಕ್ತಿ ಇದೆ ಎನ್ನುವುದನ್ನು ಪರಿಗಣಿಸಬೇಕೆಂದು ಬಹುತೇಕ ಪೋಷಕರಿಗೆ ಇಂದಿಗೂ ಅನ್ನಿಸುತ್ತಿಲ್ಲ ಎಂಬುದು ಪ್ರತಿ ಬಾರಿ ಈ ಪ್ರಶ್ನೆ ಕೇಳಿದಾಗ ಎದುರಾಗುವ ಪ್ರತಿಕ್ರಿಯೆಯಿಂದ ಮನದಟ್ಟಾಗುತ್ತದೆ. 'ಇಷ್ಟ ಇಲ್ಲದಿದ್ದರೂ ಬೇರೆ ದಾರಿ ಕಾಣದೆ ಸೇರಿದ್ದೇವೆ' ಎನ್ನುವವರ ಸಂಖ್ಯೆ ಹಿಂದಿನ ಬ್ಯಾಚುಗಳಿಗೆ ಹೋಲಿಸಿದರೆ ಈ ಬಾರಿ ಹೆಚ್ಚಿತ್ತು. ಮುಂದೆ ಏನು ಓದಬೇಕು ಎಂದು ನಿರ್ಧರಿಸುವಲ್ಲಿ ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ನೀಡುವುದಕ್ಕೂ, 'ಮಕ್ಕಳಿಗೆ ಏನ್ ಗೊತ್ತಾಗುತ್ತೆ' ಅಂತ ಅವರ ಒಲವು ನಿಲುವುಗಳನ್ನು ಗಣನೆಗೆ ತೆಗೆದುಕೊಳ್ಳದೆ, ಇದನ್ನೇ ಓದಬೇಕೆಂದು ದೂಡುವುದಕ್ಕೂ ಅಜಗಜಾಂತರ ಇದೆ. ಈ ವಾಸ್ತವವನ್ನು ಹಲವು ಪೋಷಕರು ಇಂದಿಗೂ ಮನಗಂಡಂತೆ ತೋರುತ್ತಿಲ್ಲ.

ಮೊದಮೊದಲಿಗೆ ಆಸಕ್ತಿ ಇಲ್ಲವೆಂದು ಗೊಣಗಿದರೂ, ಆನಂತರ ಒಗ್ಗಿಕೊಂಡು ಓದು ಮುಂದುವರಿಸುತ್ತಾರೆ ಎನ್ನುವ ಆಶಾಭಾವ ಪೋಷಕರದ್ದು. ಆದರೆ, ಕೆಲ ವಿದ್ಯಾರ್ಥಿಗಳ ಪಾಲಿಗೆ ಈ ಆಶಾಭಾವ ತೀರಾ ಸಮಸ್ಯಾತ್ಮಕ ಆಗುವುದೂ ಇದೆ. ಉದಾಹರಣೆಗೆ, ಗಣಿತ ವಿಷಯವನ್ನು ಕಬ್ಬಿಣದ ಕಡಲೆ ಎಂದೇ ಭಾವಿಸಿರುವ ವಿದ್ಯಾರ್ಥಿಗಳನ್ನು, ಅವರು ಬೇಡವೆಂದರೂ ಕೇಳದೆ ಎಂಜಿನಿಯರಿಂಗ್‌ಗೆ ಸೇರಿಸುವುದು. ಗಣಿತದಲ್ಲಿನ ಸಂಗತಿಗಳನ್ನು ಅರ್ಥೈಸಿಕೊಳ್ಳಲು ಪರದಾಡುವ ವಿದ್ಯಾರ್ಥಿಗಳ ಪಾಲಿಗೆ ಎಂಜಿನಿಯರಿಂಗ್ ಪದವಿ ಓದು ದೊಡ್ಡ ಸವಾಲೇ ಸರಿ.

ಕೆಲ ವಿದ್ಯಾರ್ಥಿಗಳು ಇತ್ತ ಎಂಜಿನಿಯರಿಂಗ್ ಪದವಿ ಪೂರೈಸಲೂ ಆಗದೆ, ಅತ್ತ ಮಧ್ಯದಲ್ಲಿ ಬಿಟ್ಟುಹೋಗಲೂ ಆಗದೆ ಅತಂತ್ರ ಪರಿಸ್ಥಿತಿಯಲ್ಲಿ 8ರಿಂದ 10 ವರ್ಷ ಕಳೆಯುತ್ತಾರೆ. ಆನಂತರ ವಿಶ್ವವಿದ್ಯಾಲಯದ ನಿಯಮದ ಪ್ರಕಾರ ಪದವಿ ಪಡೆಯಲು ಅನರ್ಹ ಎನಿಸಿಕೊಂಡು, ಓದಿಗೆ ಪೂರ್ಣವಿರಾಮ ಇಡುತ್ತಾರೆ. ಇದರ ಬದಲಿಗೆ ಗಣಿತ ವಿಷಯ ಓದುವ ಅಗತ್ಯವಿರದ ಇತರ ಪದವಿ ಕೋರ್ಸುಗಳಿಗೆ ಸೇರಿದ್ದರೆ, ಅವರ ಓದು ಪದವಿ ಶಿಕ್ಷಣದ ಹಂತ ದಾಟಿ ಮುಂದಕ್ಕೆ ಹೋಗುವ ಸಾಧ್ಯತೆ ಇರುತ್ತದೆ.

ನಾನಾ ಕಾರಣಗಳಿಗಾಗಿ ತಮಗೆ ಆಸಕ್ತಿ ಇರದ ಕೋರ್ಸಿಗೆ ಪ್ರವೇಶ ಪಡೆಯುವ ಕೆಲವರು, ಇದರಲ್ಲೇ ಮುಂದುವರಿಯಲು ತಮ್ಮಿಂದ ಸಾಧ್ಯವೇ ಇಲ್ಲ ಎಂಬುದನ್ನು ಪೋಷಕರಿಗೂ ಮನದಟ್ಟು ಮಾಡಿಸಿ, ಆ ಕೋರ್ಸು ತೊರೆದು ಇತರ ಆಸಕ್ತಿಯ ಕೋರ್ಸಿಗೆ ಪ್ರವೇಶ ಪಡೆಯುತ್ತಾರೆ. ಆದರೆ, ಇದು ಸಾಧ್ಯವಾಗುವುದು ಬೆರಳೆಣಿಕೆಯ ವಿದ್ಯಾರ್ಥಿಗಳಿಗೆ ಮಾತ್ರ.

ಹತ್ತನೇ ತರಗತಿವರೆಗೂ ಕನ್ನಡ ಮಾಧ್ಯಮದಲ್ಲಿ ಓದಿರುವ ಸ್ನೇಹಿತರೊಬ್ಬರ ಶಿಕ್ಷಣ ಪಿಯುಸಿಗೆ ಕೊನೆಗೊಂಡಿದೆ. ಶಾಲಾ ವಿದ್ಯಾರ್ಥಿಯಾಗಿದ್ದಾಗ ಅವರ ಪಾಲಿಗೆ ಇಂಗ್ಲಿಷ್ ಏನೊಂದೂ ಅರ್ಥವಾಗದ ವಿಷಯವಾಗಿತ್ತು. ಹೀಗಿದ್ದರೂ ಎಸ್‌ಎಸ್‌ಎಲ್‌ಸಿಯಲ್ಲಿ ಹೇಗೋ ಜಸ್ಟ್ ಪಾಸ್ ಆಗಿದ್ದರು. ಜೊತೆಗೆ ಓದಿದವರೆಲ್ಲ ಸೇರಿಕೊಂಡಿದ್ದಾರೆ ಎಂಬ ಕಾರಣಕ್ಕೆ ಪಿಯುಸಿಯಲ್ಲಿ ಅವರೂ ಸೈನ್ಸ್ ಆರಿಸಿಕೊಂಡಿದ್ದರು. ಪಿಯುಸಿಯಲ್ಲಿ ಸೈನ್ಸ್ ಆರಿಸಿಕೊಂಡವರಿಗೆ ಬೋಧನಾ ಮಾಧ್ಯಮ ಇಂಗ್ಲಿಷ್ ಮಾತ್ರವೇ ಇದ್ದುದರಿಂದ ಅವರಿಗೆ ಪಿಯುಸಿ ಪಾಸ್ ಮಾಡಲೇ ಆಗಲಿಲ್ಲ. ಅವರ ಓದು ಅಲ್ಲಿಗೇ ನಿಂತುಬಿಟ್ಟಿತು.

'ಪಿಯುಸಿಯಲ್ಲಿ ಆರ್ಟ್ಸ್ ಅಥವಾ ಕಾಮರ್ಸ್ ಆರಿಸಿಕೊಂಡಿದ್ದರೆ ಕನ್ನಡದಲ್ಲಿ ಕಲಿತು ಪರೀಕ್ಷೆ ಬರೆಯಬಹುದಿತ್ತು ಎಂದು ನನಗೆ ಅಂದು ಯಾರಾದರೂ ಮಾರ್ಗದರ್ಶನ ನೀಡಿದ್ದರೆ ಅನಾಯಾಸವಾಗಿ ಪದವಿ ಪೂರೈಸುತ್ತಿದ್ದೆ' ಎಂದು 45ರ ವಯೋಮಾನದ ಅವರು ಈಗಲೂ ನೊಂದುಕೊಳ್ಳುತ್ತಾರೆ.

ಏನು ಓದಬೇಕು? ಇಂತಹದ್ದನ್ನು ಓದಿದರೆ ಮುಂದೆ ಏನೆಲ್ಲಾ ಮಾಡಬಹುದು? ಈ ಕೋರ್ಸು ಎಲ್ಲಿದೆ?... ಹೀಗೆ ಶಿಕ್ಷಣಕ್ಕೆ ಸಂಬಂಧಿಸಿದ ಮಾಹಿತಿ, ಸಲಹೆ-ಸೂಚನೆಗಳೆಲ್ಲವೂ ಇಂದು ಬೆರಳತುದಿಯಲ್ಲಿವೆ. ಹಿಂದಿನವರ ಹಾಗೆ 'ನನಗೆ ಸೂಕ್ತ ಮಾರ್ಗದರ್ಶನ ನೀಡುವವರು ಅಂದು ಯಾರೂ ಇರಲಿಲ್ಲ' ಎಂದು ಅಲವತ್ತುಕೊಳ್ಳುವ ಅಗತ್ಯವೇ ಇಲ್ಲ. ಆದರೆ, ಇಲ್ಲಿ ಇಂದಿಗೂ ಸಮಸ್ಯೆಯಾಗಿಯೇ ಉಳಿದಿರುವುದು ಪೋಷಕರ ಪಾಲಿನ ಪ್ರತಿಷ್ಠೆ ಮತ್ತು ನಮ್ಮ ಆಯ್ಕೆ ತಪ್ಪಾಗಿರಲು ಸಾಧ್ಯವೇ ಇಲ್ಲ ಎನ್ನುವ ಅತಿಯಾದ ವಿಶ್ವಾಸ.

ವಾಚಕರ ವಾಣಿ

ಬೇಕು ಮೀಸಲಾತಿ ಮೀರಿದ ಹೊಸ ನೀತಿ

ಜಾತಿ ಜನಗಣತಿ ಮತ್ತು ಮೀಸಲಾತಿ ಕುರಿತ ಸದ್ಯದ ಚಿಂತನೆಯನ್ನು ಇನ್ನೊಂದು ದಿಕ್ಕಿನಿಂದಲೂ ನೋಡಬೇಕಾದ ಕಾಲ ಬಂದಿದೆ. ಮೀಸಲಾತಿಯನ್ನು ಬಳಸಿಕೊಳ್ಳಲಾಗದ ಜಾತಿಗಳೂ ಇವೆ. ಹಿಂದುಳಿದವರಲ್ಲಿ ಈ ಸೌಲಭ್ಯವನ್ನು ಉಪಯೋಗಿಸಿಕೊಂಡು ಈಗ ಮುಂದೆ ಬಂದಿರುವ ಜಾತಿಗಳಿಗೆ ಸಂಖ್ಯಾಬಲವಿತ್ತು. ಕೆಲವು ಜಾತಿಗಳು ಆಸ್ತಿವಂತ ಜಾತಿಗಳಾಗಿದ್ದವು. ಮೀಸಲಾತಿಯನ್ನು ಹೇಗೆ ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಬೇಕು ಎಂದು ಯೋಚಿಸುವುದಕ್ಕೆ ಸಂಖ್ಯಾಬಲ ಮತ್ತು ಆಸ್ತಿ ಒಡೆತನ ಪೂರಕವಾಗಿ ಕೆಲಸ ಮಾಡಿದವು. ಕ್ರಮೇಣ ಈ ಜಾತಿಗಳು ಬಲಿಷ್ಠವಾದವು; ಜಾತಿ ಜನಗಣತಿಯೇ ಬೇಡವೆನ್ನುವಷ್ಟು. ಸಂಖ್ಯಾಬಲವೂ ಇಲ್ಲದ, ಯಾವುದೇ ರೀತಿಯ ಆಸ್ತಿಯ ಒಡೆತನವೂ ಇಲ್ಲದ ನೂರಾರು ಜಾತಿಗಳ ಜನಸಂಖ್ಯೆಯೇ ಹಿಂದುಳಿದವರಲ್ಲಿ ಶೇಕಡ 15–20ರಷ್ಟು ಇದೆ. ಸಣ್ಣಪುಟ್ಟ ಜಾತಿಗಳು ಎಂದು ಇವರ ಅಸಹಾಯಕತೆಯನ್ನು ಗುರುತಿಸಲಾಗುತ್ತದೆ. ಯಾವುದೇ ರೀತಿಯ ಮೀಸಲಾತಿಯನ್ನೂ ಬಳಸಿಕೊಳ್ಳಲಾಗದ ಸ್ಥಿತಿಯಲ್ಲಿರುವ ಈ ವರ್ಗ ಏನು ಮಾಡಬೇಕು? ಜಾತಿಗಣತಿ ಮತ್ತು ಮೀಸಲಾತಿಯನ್ನು ಮೀರಿದ ಹೊಸ ನೀತಿಯ ಬಗ್ಗೆ ಯೋಚಿಸಲು ಇದು ಸಕಾಲವಾಗಿರಬಹುದೇ?

ಕೆ.ಸತ್ಯನಾರಾಯಣ, ಬೆಂಗಳೂರು

ನೇರ ಕೌನ್ಸೆಲಿಂಗ್ ಅವಕಾಶ ಸಿಗಲಿ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಖಾಸಗಿ, ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಕಾಲೇಜುಗಳಲ್ಲಿನ ಸರ್ಕಾರದ ಪಾಲಿನ ಎಂಜಿನಿಯರಿಂಗ್, ಪಶುವೈದ್ಯಕೀಯ, ದಂತವೈದ್ಯಕೀಯದಂತಹ ವೃತ್ತಿಪರ ಕೋರ್ಸುಗಳಿಗೆ ಮೂರು ಸುತ್ತುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತಿದೆ. ಆದರೆ ಗ್ರಾಮೀಣ ಮತ್ತು ನಗರ ಪ್ರದೇಶದ ಸಾವಿರಾರು ಅನಕ್ಷರಸ್ಥ ಪೋಷಕರ ಮಕ್ಕಳು ಸೂಕ್ತ ಮಾರ್ಗದರ್ಶನದ ಕೊರತೆಯಿಂದ ತಮ್ಮ ಆಯ್ಕೆಯ ಕೋರ್ಸ್ ಹಾಗೂ ಕಾಲೇಜನ್ನು ಸರಿಯಾದ ರೀತಿಯಲ್ಲಿ ಆಯ್ಕೆ ಮಾಡಿಕೊಳ್ಳದೆ, ವೃತ್ತಿಪರ ಕೋರ್ಸುಗಳ ಸೀಟುಗಳಿಂದ ವಂಚಿತರಾಗುತ್ತಿದ್ದಾರೆ. ಹೀಗಾಗಿ, ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಮೀಸಲು ವರ್ಗ ಮತ್ತು ಕಲ್ಯಾಣ ಕರ್ನಾಟಕ ಕೋಟಾ ಪ್ರವರ್ಗದ ಸೀಟುಗಳು ಕಾಲೇಜುಗಳಲ್ಲಿ ಭರ್ತಿಯಾಗದೇ ಉಳಿಯುತ್ತಿರುವುದನ್ನು ಕಾಣಬಹುದಾಗಿದೆ.

ಉನ್ನತ ಶಿಕ್ಷಣ ಸಚಿವರು ಈ ಬಗ್ಗೆ ಗಮನಹರಿಸಿ, ಕೊನೆಯ ಸುತ್ತಿನ ನಂತರ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ಭರ್ತಿಯಾಗದೇ ಉಳಿಯುವ ಎಲ್ಲಾ ಸೀಟುಗಳಿಗೆ ಮಾಪ್ ಅಪ್ ಸುತ್ತಿನಲ್ಲಿ ನೇರ ಕೌನ್ಸೆಲಿಂಗ್ ಮೂಲಕ ಇಂತಹ ಅವಕಾಶವಂಚಿತ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕು. ಇದಕ್ಕಾಗಿ ಸರ್ಕಾರವು ಕಾಲೇಜುಗಳ ಆಡಳಿತ ಮಂಡಳಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದರ ಜೊತೆಗೆ ಉಳಿಕೆ ಸೀಟುಗಳಿಗೆ ಲಭ್ಯವಾಗುವ ಶುಲ್ಕದಿಂದ ಕಾಲೇಜುಗಳಿಗೂ ಆರ್ಥಿಕವಾಗಿ ಅನುಕೂಲವಾಗುತ್ತದೆ.

ಆರ್.ಕುಮಾರ್, ಬೆಂಗಳೂರು

ಅನಗತ್ಯ ಧ್ವನಿ– ಪ್ರತಿಧ್ವನಿ

ಲಿಂಗಾಯತ ಅಧಿಕಾರಿಗಳಿಗೆ ಆಯಕಟ್ಟಿನ ಜಾಗಗಳಲ್ಲಿ ಅವಕಾಶಗಳು ಸಿಗುತ್ತಿಲ್ಲ ಎಂಬ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಹೇಳಿಕೆಗೆ ಇದೀಗ ಎಚ್.ಡಿ.ಕುಮಾರಸ್ವಾಮಿ ಅವರೂ ಧ್ವನಿಗೂಡಿಸಿದ್ದಾರೆ (ಪ್ರ.ವಾ., ಅ. 9). ಕೆಲವು ದಿನಗಳ ಹಿಂದೆ ಬಿಜೆಪಿ ಮುಖಂಡ ಯಡಿಯೂರಪ್ಪ ಅವರು ಸಹ ಶಾಮನೂರು ಅವರ ವಾದವನ್ನು ಬೆಂಬಲಿಸಿದ್ದುಂಟು. ಹಾಗೆ ನೋಡಿದರೆ ಈ ಧ್ವನಿ ಮತ್ತು ಪ್ರತಿಧ್ವನಿಗಳು ನಿಜಕ್ಕೂ ಅನಗತ್ಯವಾಗಿದ್ದವು. ಏಕೆಂದರೆ, ಸಾವಿರಾರು ವರ್ಷಗಳಿಂದ ಯಾವ ಜಾತಿಗಳಿಗೆ ಸಾಮಾಜಿಕವಾಗಿ ಅನ್ಯಾಯವಾಗಿದೆಯೋ ಅಂತಹ ಜಾತಿಗಳಿಗೆ ಮಾತ್ರ ಸಾಮಾಜಿಕ, ರಾಜಕೀಯ, ಉದ್ಯೋಗ, ಶಿಕ್ಷಣದ ಅವಕಾಶ ಕಲ್ಪಿಸಿ, ಮುಖ್ಯವಾಹಿನಿಯಲ್ಲಿ ಅವರು ಬೆರೆಯುವಂತೆ ಮಾಡಿ, ದೇಶದ ಭಾವೈಕ್ಯ ಕಾಪಾಡಬೇಕೆಂಬುದು ನಮ್ಮ ಸ್ವಾತಂತ್ರ್ಯ ಹೋರಾಟಗಾರರ ಆಶಯವಾಗಿತ್ತು. ಬುದ್ಧ, ಬಸವೇಶ್ವರ, ಅಂಬೇಡ್ಕರ್, ಮಹಾತ್ಮ ಗಾಂಧಿಯವರ ಕಾಳಜಿಯೂ ಅದೇ ಆಗಿತ್ತು. ಅದೇ ನಿಜವಾದ ಅಭಿವೃದ್ಧಿ ಎಂಬುದನ್ನು ನಾವು ಅರಿಯಬೇಕಿದೆ. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಈ ರೀತಿ ಪ್ರಬಲ ಜಾತಿಯ ಅಥವಾ ಸಮುದಾಯದ ಪರ ಧ್ವನಿ ಎತ್ತುವುದು, ಮತ್ತದನ್ನು ಬೆಂಬಲಿಸುವುದು ಸರಿಯಲ್ಲ.

ಇನ್ನೂ ಯಾವ ಪ್ರಾತಿನಿಧ್ಯವೂ ಸಿಗದ, ಅವಕಾಶವಂಚಿತವಾಗಿರುವ ಅನೇಕ ಜಾತಿ, ಸಮುದಾಯಗಳಿಲ್ಲವೇ? ಅವರ ಪರಿಸ್ಥಿತಿಯನ್ನು ಸಹ ನಾವು ಗಮನಿಸಬೇಕಲ್ಲವೇ?

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಅಡ್ಡಗೋಡೆ ಮೆಟ್ಟನಿಲ್ಲಲಿ ಕರುಣೆಯ ಗೋಡೆ

'ಹಿತಚಿಂತನ ಚಾರಿಟಬಲ್ ಟ್ರಸ್ಟ್' ವತಿಯಿಂದ 'ಅಗತ್ಯವಿಲ್ಲದಿದ್ದರೆ, ಇಲ್ಲಿ ಇಡಿ, ಅಗತ್ಯವಿದ್ದರೆ ತೆಗೆದುಕೊಳ್ಳಿ' ಎಂಬ ಧ್ಯೇಯವಾಕ್ಯದೊಂದಿಗೆ 'ಕರುಣೆಯ ಗೋಡೆ' ಎಂಬ ಕಪಾಟನ್ನು ನೆಲಮಂಗಲದಲ್ಲಿ ಸ್ಥಾಪಿಸಿರುವುದರ ಬಗ್ಗೆ ವರದಿಯಾಗಿದೆ (ಪ್ರ.ವಾ., ಅ. 7). ಉದ್ದೇಶ ಮೆಚ್ಚತಕ್ಕದ್ದೇ. ಆದರೆ 'ಕರುಣೆಯ ಗೋಡೆ'ಗೆ ಅಡ್ಡಗೋಡೆಗಳ ಕಾಟ ಇರುವಂತೆ ಆಗಬಾರದು. ಹಿಂದೆ ಬೆಂಗಳೂರಿನಲ್ಲಿ, ಹಸಿದವರಿಗೆ ಅನ್ನ ಕೊಡುವ ಇಂಥದ್ದೇ ಕೇಂದ್ರ ಪ್ರಾರಂಭವಾಯಿತು. ಅದು ಮುಂದುವರಿದ ಬಗ್ಗೆ ಮಾಹಿತಿಯಿಲ್ಲ. ಮನೆಗಳಲ್ಲಿ ದೂಳು ತಿನ್ನುತ್ತಾ ಬಿದ್ದಿರುವ ಪುಸ್ತಕಗಳನ್ನು ಕೊಡುವ ಮತ್ತು ಪುಸ್ತಕ ಬೇಕಾದವರು ತಲಾ ಎರಡು ಪುಸ್ತಕಗಳನ್ನು ಪಡೆಯುವ 'ಪುಸ್ತಕ ಜಾತ್ರೆ' ನ್ಯಾಷನಲ್ ಕಾಲೇಜು ಮೈದಾನದಲ್ಲಿ ಪ್ರತಿವರ್ಷ ನಡೆಯುತ್ತಿತ್ತು. ಕೋವಿಡ್‌ನಿಂದಾಗಿ ಅದೂ ನಿಂತಿದೆ.

ಅನಾಥಾಶ್ರಮದ ಸಿಬ್ಬಂದಿ ಮನೆಮನೆಗೆ ಬಂದು ಹಳೆ ಬಟ್ಟೆಬರೆ ಪಡೆಯುತ್ತಾರೆ. ಇದರಲ್ಲಿ ಬಹಳಷ್ಟು ಬಟ್ಟೆಗಳು ಕಸದ ತೊಟ್ಟಿಯ ಹತ್ತಿರ ಬಿದ್ದಿರುತ್ತವೆ. ಆಹಾರ ಪದಾರ್ಥ, ಪುಸ್ತಕ, ಬಟ್ಟೆಬರೆ, ಪಾತ್ರೆಪಗಡ ಇಂತಹವನ್ನೆಲ್ಲಾ ಜನ ಅವು ಪೂರ್ತಿ ಹಾಳಾಗಿ ತಾವು ಇನ್ನು ಅವುಗಳನ್ನು ಉಪಯೋಗಿಸಲು ಸಾಧ್ಯವೇ ಇಲ್ಲ ಎಂಬಂಥ ಸ್ಥಿತಿಯಲ್ಲಿ ಕೊಡುತ್ತಾರೆ. ಇದರಿಂದ, ಒಳ್ಳೆಯ ಧ್ಯೇಯೋದ್ದೇಶದಿಂದ ಪ್ರಾರಂಭವಾಗುವ ಇಂಥ ಯೋಜನೆಗಳು ಮುಂದುವರಿಯುವುದಿಲ್ಲ. ಒಂದುವೇಳೆ ಉತ್ತಮ ಸ್ಥಿತಿಯಲ್ಲಿರುವ ವಸ್ತುಗಳನ್ನು ಈ ಕಪಾಟುಗಳಲ್ಲಿ ಜನ ತಂದು ಇಟ್ಟರೆ, ತೆಗೆದುಕೊಂಡು ಹೋಗುವವರು ಅವುಗಳನ್ನು ಸ್ವಂತಕ್ಕೆ ಬಳಸುವರೇ ಅಥವಾ ಅವುಗಳನ್ನು ಮಾರಿಕೊಳ್ಳುವರೇ ಎಂಬುದನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ದಾನಿಗಳು ಮತ್ತು ದಾನ ಸ್ವೀಕರಿಸುವವರು ಮಾಡುವ ಎಡವಟ್ಟು ಕೆಲಸಗಳು ಈ ಇಬ್ಬರ ಮಧ್ಯೆ ಸೇತುವೆಯಾಗಿ ಕಾರ್ಯನಿರ್ವಹಿಸಬಯಸುವ 'ಕರುಣೆಯ ಗೋಡೆ'ಯಂತಹ ಕಾರ್ಯಕ್ರಮಗಳಿಗೆ ಅಡ್ಡಗೋಡೆಯಾಗದಂತೆ ನೋಡಿಕೊಳ್ಳಬೇಕಾಗಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಈ ಹೋರಾಟಗಳಿಗೆ ಪ್ರಜಾವಾಣಿ ಹೇಗೆ ಸ್ಪಂದಿಸುತ್ತಾ ಹೋಗಿದೆ ಎಂಬುದನ್ನು ಪರಾಮರ್ಶಿಸುತ್ತಾ ಹೋದರೆ, ಜನ ಚಳವಳಿಗಳ ಜತೆಗಾರನಂತೆ ಮಿಡಿಯುತ್ತಲೇ ಇರುವುದು ಕಣ್ಣಿಗೆ ಕಟ್ಟುತ್ತದೆ. ಈ ಏಳೂವರೆ ದಶಕಗಳಲ್ಲಿ ಜನರು ಕದನಕಲಿಗಳಂತೆ ಬೀದಿಯಲ್ಲಿ, ಹೊಲಗಳಲ್ಲಿ, ಕಾರ್ಖಾನೆಗಳಲ್ಲಿ, ಶಕ್ತಿಕೇಂದ್ರದ ಎದುರಿನಲ್ಲಿ ಬಡಿದಾಡುತ್ತಿದ್ದಾಗಲೆಲ್ಲ ಪ್ರಜಾವಾಣಿ ಸತ್ಯದ ಪರವಾಗಿ ಕದಲದೇ ನಿಂತಿದೆ

ಜನ ಚಳವಳಿಗಳ ಸಂಗಾತಿ

• ವೈ.ಗ. ಜಗದೀಶ್

ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಸೆಣಸಿ, ತಮ್ಮ ಅಮೂಲ್ಯ ಜೀವಗಳನ್ನೇ ಬಲಿಕೊಟ್ಟು ನಡೆಸಿದ ಸ್ವಾತಂತ್ರ್ಯ ಹೋರಾಟದ ಕಾವಿನಲ್ಲಿ ಜನರ ನರ ನಾಡಿಗಳಲ್ಲಿ ಅರಿದ ಹೊತ್ತಿನಲ್ಲಿ ಜೀವತಳೆದ 'ಪ್ರಜಾವಾಣಿ'ಯ ಭಾವಕೋಶಗಳಲ್ಲಿ ಚಳವಳಿಗಳ ಬಗೆಗಿನ ಅಕ್ಕರೆ ಜಿನುಗುತ್ತಲೇ ಇದ್ದುದು ಸಹಜವೇ ಆಗಿತ್ತು.

ಸ್ವಾತಂತ್ರ್ಯಕ್ಕಾಗಿ ನಡೆದ ಕಿಚ್ಚಿನಲ್ಲಿ ಹೋರಾಟಕ್ಕೆ ಹೆದರಿ ಬ್ರಿಟಿಷರೇನೋ ದೇಶಬಿಟ್ಟು ಹೋದರು; ಆದರೆ, ವಾರಸುದಾರರಂತೆ ಇದ್ದ ಭೂಮಾಲೀಕರು ಮತ್ತು ಜಾತಿಶ್ರೇಷ್ಠತೆಯ ಅಹಮಿಕೆಯಲ್ಲೇ ಇದ್ದ ಪ್ರಬಲ ಜಾತಿಗಳ ದಬ್ಬಾಳಿಕೆ 1947ರ ಆಗಸ್ಟ್ 15 ಕೊನೆಯ ಬಿಂದುವಾಗಿರಲಿಲ್ಲ. ಪ್ರಜಾಪ್ರಭುತ್ವ, ಸಮಾನತೆ ಮತ್ತು ಘನತೆಯ ಅರಿವು ಜನರಲ್ಲಿ ಮೆಲ್ಲಗೆ ಮೂಡತೊಡಗಿದ್ದಂತೆಯೇ ಅನ್ಯಾಯವನ್ನು ಪ್ರಶ್ನಿಸುವ, ಪ್ರತಿಭಟಿಸುವ ಮನೋಭಾವ ಕಾಣಿಸಿತು. ಪರಿಣಾಮವಾಗಿ ಜನ ಚಳವಳಿಗಳು ರೂಪುಗೊಳ್ಳತೊಡಗಿದವು.

ಈ ಹೋರಾಟಗಳಿಗೆ ಪ್ರಜಾವಾಣಿ ಹೇಗೆ ಸ್ಪಂದಿಸುತ್ತಾ ಹೋಗಿದೆ ಎಂಬುದನ್ನು ಪರಾಮರ್ಶಿಸುತ್ತಾ ಹೋದರೆ, ಜನ ಚಳವಳಿಗಳ ಜತೆಗಾರನಂತೆ ಮಿಡಿಯುತ್ತಲೇ ಇರುವುದು ಕಣ್ಣಿಗೆ ಕಟ್ಟುತ್ತದೆ. ಈ ಏಳೂವರೆ ದಶಕಗಳಲ್ಲಿ ಜನರು ಕದನಕಲಿಗಳಂತೆ ಬೀದಿಯಲ್ಲಿ, ಹೊಲಗಳಲ್ಲಿ, ಕಾರ್ಖಾನೆಗಳಲ್ಲಿ, ಶಕ್ತಿಕೇಂದ್ರದ ಎದುರಿನಲ್ಲಿ ಬಡಿದಾಡುತ್ತಿದ್ದಾಗಲೆಲ್ಲ ಪ್ರಜಾವಾಣಿ ಸತ್ಯದ ಪರವಾಗಿ ಕದಲದೇ ನಿಂತಿದೆ. ಎಡವಿದಾಗ ಸಕಾರಾತ್ಮಕ ವಿಮರ್ಶೆಗೆ ಒಳಗು ಮಾಡಿ ದಾರಿ ತಿದ್ದುವ ಕೆಲಸ ಮಾಡಿದೆ; ಗೊಂದಲದಲ್ಲಿ ಮುಳುಗಿದಾಗ ದಿಕ್ಕು ತೋರುವ ದಿಗ್ದರ್ಶಕನ ಪಾತ್ರವನ್ನೂ ಸಮರ್ಥವಾಗಿ ನಿರ್ವಹಿಸಿದೆ.

ಹೋರಾಟದ ದಾರಿಯಲ್ಲಿ ಸಾಗಿದವರ ವಿರುದ್ಧ ಪ್ರಭುತ್ವ ಮತ್ತು ಅಧಿಕಾರಸ್ಥ ಜನವರ್ಗಗಳು ದಂಡ ಪ್ರಯೋಗವನ್ನೂ ಮಾಡಿದವು. ಇದರ ವಿರುದ್ಧ ಹಲವು ಕವಲುಗಳಲ್ಲಿ ಹೋರಾಟಗಳು ಪುಟಿದೇಳತೊಡಗಿದವು. ರೈತರು, ದಲಿತರು, ಕಾರ್ಮಿಕರು, ಮಹಿಳೆಯರು ಹಾಗೂ ಕನ್ನಡ ಭಾಷೆಯ ಪರವಾದ ಹೋರಾಟಗಳು ನಾಡ ನೆಲದ ತುಂಬೆಲ್ಲ ಸದ್ದು ಮಾಡತೊಡಗಿದವು. 'ಪತ್ರಿಕೆ'ಯ ಅಷ್ಟು ವರ್ಷಗಳ ಆಯ್ದ ಸಂಚಿಕೆಗಳನ್ನು ತಿರುವಿ ಹಾಕಿದರೆ, ಜನಚಳವಳಿಗಳ ವಿಷಯದಲ್ಲಿ ಜನಪರವಾದ ಪತ್ರಿಕೆಯೊಂದು ತಾಳಿದ ನಿಲುವುಗಳು, ಹೋರಾಟದ ಕುರಿತಾಗಿ ಚಿಕಿತ್ಸಕ ನೋಟಗಳು ಗೋಚರವಾಗುತ್ತವೆ. ಪ್ರಜಾ ಹೋರಾಟದ ವಿಷಯದೊಳಗೆ ನೈಜ 'ಪ್ರಜಾ-ವಾಣಿ'ಯಂತೆ ದುಡಿದಿರುವುದು ಕಾಣಿಸುತ್ತದೆ.

ಸಾವಳಗಿ ದಲಿತರ ಮೇಲಿನ ದೌರ್ಜನ್ಯ ಸಂಬಂಧ 1989ರ ಮಾರ್ಚ್ 29ರಂದು ಪ್ರಕಟವಾಗಿದ್ದ ಸುದ್ದಿ ಚಿತ್ರಗಳು: ಪ್ರಜಾವಾಣಿ ಆರ್ಕೈವ್

ದಲಿತರಿಗೆ ಧ್ವನಿ

ಅಕ್ಷರ ಕಲಿತ ಮೊದಲ ತಲೆಮಾರು, ಸಂಘಟನೆಗೊಂಡು ಪ್ರಬಲ ಜಾತಿ ಕ್ರೌರ್ಯವನ್ನು ಪ್ರಶ್ನಿಸತೊಡಗಿ, ಸಂಘಟಿತರಾಗಿದ್ದು ಕರ್ನಾಟಕದ ಮಟ್ಟಿಗೆ ಬಹುದೊಡ್ಡ ಬೆಳವಣಿಗೆ. ಇದನ್ನು ಅಕ್ಷರದಲ್ಲಿ ದಾಖಲಿಸಿದ್ದು, ಹೋರಾಟಕ್ಕೆ ಬೆನ್ನೆಲುಬಾಗಿ ನಿಂತಿದ್ದು, ಹಾದಿ ತಪ್ಪುವ ಲಕ್ಷಣ ಕಾಣಿಸಿದಾಗ ತಿದ್ದುವ ಯತ್ನ ನಡೆಸಿದ್ದು 'ಪ್ರಜಾವಾಣಿ'.

ಅಲಕ್ಷಿತ ಸಮುದಾಯದ ಮೇಲೆ ಪ್ರಬಲ ಜಾತಿಗಳು ತೋರುತ್ತಿದ್ದ ಕೀಳುಭಾವ, ಜಾತೀಯ ತಾರತಮ್ಯದ ಬಗ್ಗೆ ಪತ್ರಿಕೆ ಧ್ವನಿಯಾಗುತ್ತಲೇ ಬಂದಿದೆ. ಮೈಸೂರು ದಸರಾ ಸಮಯದಲ್ಲಿ ಹರಿಜನ ಪೈಲ್ವಾನರು ಮೊದಲಿನಿಂದಲೂ ಭಾಗವಹಿಸುತ್ತಾ ಬಂದಿದ್ದರು. 1953ರಲ್ಲಿ ಹರಿಜನ ಪೈಲ್ವಾನರು ಕುಸ್ತಿಯಲ್ಲಿ ಭಾಗವಹಿಸುವುದಕ್ಕೆ ಸವರ್ಣೀಯ ಜಟ್ಟಿಗಳು ಮತ್ತು ಅವರ ಬೆಂಬಲಿಗರು ಆಕ್ಷೇಪಿಸಿದರು. ಉದ್ರಿಕ್ತ ಗುಂಪು ಚದುರಿಸಲು ಗೋಲಿಬಾರ್ ನಡೆಯಿತು. 1953ರ ಅಕ್ಟೋಬರ್ 9ರ ಸಂಚಿಕೆಯಲ್ಲಿ 'ಮೈಸೂರಿನಲ್ಲಿ ಗೋಲೀಬಾರು: ಮೂರು ಮಂದಿ ದುರ್ಮರಣ' ಎಂಬ ಎಂಟು ಕಾಲಂನ ಮುಖಪುಟದ ವರದಿ ಪ್ರಕಟಿಸಿತು. ಇದರ ಬೆನ್ನಲ್ಲೇ, ಸರಣಿ ವರದಿ ಬರೆದ ಪತ್ರಿಕೆ, ದಲಿತರ ಪರ ನಿಂತಿತು.

1988ರಲ್ಲಿ ಬೆಂಡಿಗೇರಿಯಲ್ಲಿ ದಲಿತರಿಗೆ ಮಲ ತಿನ್ನಿಸಿದ ಅಮಾನವೀಯ ಪ್ರಕರಣ ವರದಿಯಾಗಿತ್ತು. ಅದರ ಬೆನ್ನಲ್ಲೇ, ಶಿವಮೊಗ್ಗದ ತತ್ತೂರು-ವಡ್ಡಿಗೇರಿಯಲ್ಲಿ ಮಲ ತಿನ್ನಿಸಿದ ಪ್ರಕರಣ ನಡೆದಿತ್ತು. 'ಬೇಡಿದ್ದು ಪೂಜೆ, ದಕ್ಕಿದ್ದು ಮಲ ಮೆತ್ತಿದ ಚಪ್ಪಲಿ' ಎಂಬ ವರದಿಯನ್ನೂ ಪತ್ರಿಕೆ ಪ್ರಕಟಿಸಿತ್ತು. ಬೆಂಡಿಗೇರಿ ಪ್ರಕರಣದಲ್ಲಿ 13ಜನರ ಆರೋಪಿಗಳನ್ನು ಗಡಿಪಾರು ಮಾಡುವುದಾಗಿ ಸರ್ಕಾರ ಹೇಳಿತ್ತಾದರೂ, ಅದರ ವಿವೇಚನೆಯನ್ನು ಜಿಲ್ಲಾಧಿಕಾರಿಗೆ ಬಿಟ್ಟಿತ್ತು. ಈ ನಿಲುವನ್ನು ವಿಮರ್ಶಿಸಿದ್ದ 1988ರ ಜನವರಿ 28 ಸಂಪಾದಕೀಯ 'ಪರಿಶಿಷ್ಟರ ವಿಷಯದಲ್ಲಿ ಸರ್ಕಾರದ ತಾಮಸ ಧೋರಣೆ ಹಾಗೂ ಮೇಲ್ಜಾತಿಗಳನ್ನು ರಕ್ಷಿಸುವುದರಲ್ಲಿ ಅದಕ್ಕಿರುವ ಆಸಕ್ತಿ ಬೆಂಡಿಗೇರಿ ಪ್ರಕರಣದಲ್ಲಿ ನೀಡಿರುವ ಶಿಕ್ಷೆ ನಿದರ್ಶನ ಮಾತ್ರ' ಎಂದಿತ್ತು.

1988ರ ಆಗಸ್ಟ್‌ನಲ್ಲಿ ಪ್ರಕಟವಾದ ಮತ್ತೊಂದು ಸಂಪಾದಕೀಯದಲ್ಲಿ, 'ಐದರಷ್ಟು ಶಿಕ್ಷೆ'ಯಡಿ ಪ್ರಕಟವಾದ ಸಂಪಾದಕೀಯ ಹೀಗೆ ಹೇಳಿತ್ತು: 'ದಲಿತರ ಮೇಲೆ ದೌರ್ಜನ್ಯ ಪ್ರಕರಣಗಳಲ್ಲಿ ಬೆಂಡಿಗೇರಿಯ ಪ್ರಕರಣ ತೀರ ಹೇಯವಾದುದು. ಅಮಾನವೀಯ, ಅನಾಗರಿಕ ಕೂಡ. ಅನಾಗರಿಕ ಕ್ರೌರ್ಯ ನಡೆಸಿದ ಆರೋಪಿಗಳ ವಿರುದ್ಧ ಕ್ರಮ ಸಾರಲು ಜನತಾ ಸರ್ಕಾರ ಆರು ತಿಂಗಳು ತೆಗೆದುಕೊಂಡಿರುವುದು ಪರಿಶಿಷ್ಟರ ರಕ್ಷಣೆ ವಿಷಯದಲ್ಲಿ ಅದಕ್ಕಿರುವ ತಾಮಸಪ್ರವೃತ್ತಿಯನ್ನು ಪುಷ್ಟೀಕರಿಸುವಂತಿದೆ' ಎಂದು ಟೀಕಿಸಿತ್ತು.

2000ದ ಮಾರ್ಚ್ 11ರಂದು ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕಂಬಾಲಪಲ್ಲಿಯಲ್ಲಿ ಏಳು ಜನ ದಲಿತರನ್ನು ಸಜೀವವಾಗಿ ಸುಟ್ಟುಹಾಕಿದ ಬರ್ಬರ ಕೃತ್ಯಕ್ಕೆ ನಾಡು ಬೆಚ್ಚಿಬಿದ್ದಿತ್ತು. ಈ ಕುರಿತು ಸವಿಸ್ತಾರವಾಗಿ, ಮಾನವೀಯ ನೆಲೆಯಲ್ಲಿ ಸರಣಿ ವರದಿಗಳನ್ನು ಬರೆದ ಪತ್ರಿಕೆ, ದಲಿತ ಸಮುದಾಯ ಗ್ರಾಮೀಣ ಪ್ರದೇಶದಲ್ಲಿ ಎದುರಿಸುತ್ತಿರುವ ಪ್ರಬಲ ಜಾತಿಗಳ ದೌರ್ಜನ್ಯಗಳನ್ನು ನಾಡಿನ ಜನರ ಮುಂದಿಟ್ಟಿತು.

ಅದಾದ ಬಳಿಕ, ನಾಡಿನಾದ್ಯಂತ ನಡೆದ ದಲಿತ ಹೋರಾಟಗಳ ವರದಿಯು ಸಾದ್ಯಂತ ಚಿತ್ರಗಳ ಪತ್ರಿಕೆಯ ಪುಟಗಳನ್ನು ತುಂಬಿದ್ದುಂಟು. 1996ರ ಡಿಸೆಂಬರ್‌ನಲ್ಲಿ ದಲಿತ ಸಂಘರ್ಷ ಸಮಿತಿ ಒಡಕಿನತ್ತ ಸಾಗಿತು. ಅದಾದ ಒಂದು ತಿಂಗಳು, ಪ್ರತಿ ಜಿಲ್ಲೆಯಿಂದ ದಸಂಸ ಹೋರಾಟ, ಅದು ಬೆಳೆದ ಬಂದು ಹಿನ್ನೆಲೆ, ಒಡಕಿನ ಪರಿಣಾಮದ ಕುರಿತ ವಿಶೇಷ ವರದಿಗಳನ್ನು ಪತ್ರಿಕೆ ಬರೆಸಿತ್ತು. ಹೋರಾಟವೊಂದು ಹಳ್ಳ ಹಿಡಿದಿದ್ದನ್ನು ಮರುಕದಿಂದ ವಿಶ್ಲೇಷಿಸಿ, ಚಿಕಿತ್ಸೆ ನೀಡುವ ಆಶಯ ಇದರ ಹಿಂದಿರುವುದು ವರದಿಯಲ್ಲಿ ಕಾಣಿಸುತ್ತದೆ.



ವಾಚಕರ ಪತ್ರಗಳು

ಶಿವಮೊಗ್ಗ ಜಿಲ್ಲಾಧಿಕಾರಿಗಳ ವಿನಯಿಕ "ಸತ್ಯದೂರ"

... ಲೆ ಆಕ್ರಮಗಳು ನಡೆದಿರುವುದನ್ನು ನಡೆಯುತ್ತಿರುವುದನ್ನು ನನ್ನೊಡನೆ ಬಂದರೆ ತೋರಿಸುತ್ತೇನೆ. ಈ ಬಗ್ಗೆ ನನ್ನ ಸವಾಲ್ ಇರಲಿ.

ಇತಿ "ರಾಮಶರ್ಮ"

ಕಾಗೋಡು ಸತ್ಯಾಗ್ರಹದ ಸಂದರ್ಭದಲ್ಲಿ 1951ರ ಮೇ 17ರಂದು ಪ್ರಕಟವಾಗಿದ್ದ ವಾಚಕರ ಪತ್ರ

ಹೀಗೆ, ಏಳೂವರೆ ದಶಕಗಳುದ್ದಕ್ಕೂ ನಡೆದ ಹೋರಾಟಗಳ ಬಗೆಗೆ 'ಲೋಕದೃಷ್ಟಿ', 'ಆಡಳಿತ ದೃಷ್ಟಿ', ಪತ್ರಕರ್ತರ 'ವಿಚಕ್ಷಣ ದೃಷ್ಟಿ' ಹಾಗೂ ಸಂಪಾದಕೀಯ ನೆಲೆಯ 'ಚಿಕಿತ್ಸಕ ದೃಷ್ಟಿ'ಗಳು ಪತ್ರಿಕೆಯ ಚರಿತ್ರೆಯ ಪುಟಗಳಲ್ಲಿ ದಾಖಲಾಗಿವೆ.

ಹೋರಾಟಗಳ ವರದಿ ಪ್ರಕಟಿಸುವಲ್ಲಿ ವಸ್ತುನಿಷ್ಠತೆ, ಬಹು ಆಯಾಮಗಳ ನೋಟ, ಪರ-ವಿರೋಧಗಳ ಅಭಿಪ್ರಾಯ ಸಹಿತ ವಿವರಗಳನ್ನು ಪತ್ರಿಕೆ ಕಾಲಕಾಲಕ್ಕೂ ಪ್ರಕಟಿಸುತ್ತಾ ಬಂದಿದೆ. ವಿಶ್ಲೇಷಣಾತ್ಮಕ ಬರಹ ಹಾಗೂ ಸಂಪಾದಕೀಯ ವಿಷಯಗಳಲ್ಲಿ ಯಾರ ಪರವಾಗಿ ನಿಲ್ಲಬೇಕು, ಯಾರನ್ನು ಕಟಕಟೆಗೆ ನಿಲ್ಲಿಸಬೇಕು, ಯಾರನ್ನು ವಿಮರ್ಶೆಗೆ ಗುರಿಪಡಿಸಿ ತಪ್ಪು ತಿದ್ದುವ ಕೆಲಸ ಮಾಡಬೇಕು ಎಂಬುದನ್ನು ನಿರುದ್ವಿಗ್ನವಾಗಿ, ನಿಷ್ಠುರತೆಯಿಂದ ಮಾಡುತ್ತಲೇ ಇದೆ. ಅದೇ ಪತ್ರಿಕೆಯ ವೈಶಿಷ್ಟ್ಯ ಮತ್ತು ವಿಶ್ವಾಸಾರ್ಹತೆಯ ಪ್ರತೀಕ.

ಕಾಗೋಡು ಭೂ ಹೋರಾಟ: ಸ್ವಾತಂತ್ರ್ಯ ಚಳವಳಿ ಮುಗಿದು, ನಮ್ಮದೇ ನೆಲದಲ್ಲಿ ನಾವೇ ಆಡಳಿತ ನಡೆಸುವ ಕಾಲ ಶುರುವಾದಾಗ ಮೊದಲು ನಡೆದಿದ್ದು ಶಿವಮೊಗ್ಗ ಜಿಲ್ಲೆಯ ಕಾಗೋಡು ಭೂ ಹೋರಾಟ. ಸುದ್ದಿಯನ್ನು ಹೊತ್ತು ತರಲು ಈಗಿನಂತಹ ಸೌಲಭ್ಯಗಳು ಇಲ್ಲದ 1951ರ ಕಾಲದೊಳಗೆ ತೀರಾ ಕುಗ್ರಾಮದಂತಿದ್ದ ಸಾಗರದಂತಹ ಊರಿನಿಂದ ಈ ಹೋರಾಟಗಳ ಬಗ್ಗೆ ಪತ್ರಿಕೆ ವಿಶದವಾಗಿ ವರದಿಗಳನ್ನು ಪ್ರಕಟಿಸಿದೆ. ನಿತ್ಯದ ಆಗುಹೋಗುಗಳನ್ನು ನಾಡಿನ ದಶದಿಕ್ಕುಗಳಿಗೆ ತಲುಪಿಸುವ ಕೆಲಸವನ್ನು ಹೋರಾಟದ 'ಅಂಚೆಗಾರ'ನಂತೆ ಮಾಡಿದೆ.

1951ರ ಮೇ 16ರಂದು 'ಸಿಡಿದೀತು' ಶೀರ್ಷಿಕೆಯಡಿ ಪ್ರಕಟವಾದ ಸಂಪಾದಕೀಯ ಹೀಗಿದೆ; 'ಎರಡು ತಿಂಗಳ ಹೋರಾಟದ ಬಳಿಕವೂ, ವಿರಾಮ-ಜೀವಿ ಜಮೀನುದಾರರನ್ನು ಪೋಷಣೆ ಮಾಡಿಕೊಂಡು ಬಂದ ಹಸುಮಕ್ಕಳಂತ ರೈತರನ್ನು ಪೊಲೀಸರ ಲಾಠಿ, ಬಂಧನದ ಹಿಂಸೆಗಳಿಗೆ ಗುರಿ ಮಾಡಿರುವುದನ್ನಂತೂ 'ಕ್ರೌರ್ಯ' ಎಂದೇ ಕರೆಯಬೇಕಾಗಿದೆ' ಎಂಬ ಸ್ಪಷ್ಟ ಮಾತುಗಳು ಪತ್ರಿಕೆಯ ಧೋರಣೆಯನ್ನು ಬಿಡಿಸಿಡುತ್ತವೆ.

ಭೂ ಮಾಲೀಕರಿಂದ ಶೋಷಣೆಗೊಳಗಾಗಿದ್ದ ಕಾಗೋಡು ಪ್ರಾಂತ್ಯದ ರೈತರ ವೀರೋಚಿತ ಹೋರಾಟ ಇಡೀ ಭಾರತದ ಗಮನವನ್ನು ಸೆಳೆಯಲು ಪತ್ರಿಕೆಯ ಹಲವು ವರದಿಗಳು ನೆರವಿಗೆ ನಿಂತಿದ್ದವು. ಕರ್ನಾಟಕ ನೆಲದಲ್ಲಿ ಮೊದಲು ನಡೆದ ಸಮಾಜವಾದಿ ಹೋರಾಟದ ಹಲವು ಮಜಲುಗಳನ್ನು ತೆರೆದಿಟ್ಟಿದ್ದವು.

ಹೋರಾಟಗಳ ಕಥನ: 1980ರ ಮೊದಲು ಮತ್ತು ಬಳಿಕ ರಾಜ್ಯದಲ್ಲಿ ಹತ್ತು ಹಲವು ಹೋರಾಟಗಳು ನಡೆದಿವೆ. ಕರ್ನಾಟಕ ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ರೈತ ಸಂಘಗಳು ಆ ಸಂಘಟನೆಗಳ ಹೆಸರೇ ಹೇಳುವಂತೆ ನಿರ್ದಿಷ್ಟ ಸಮುದಾಯಗಳ ಮೇಲಿನ ಅನ್ಯಾಯದ ವಿರುದ್ಧ, ಸಮುದಾಯದ ಅಸ್ಮಿತೆಯನ್ನು ಕಾಪಿಡುವ ಪರವಾದ ಹೋರಾಟಗಳಾಗಿದ್ದವು. ಸರ್ಕಾರವು ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಅದನ್ನು ಖಂಡಿಸಿ ಭುಗಿಲೆದ್ದ ನರಗುಂದ-ನವಲಗುಂದ ರೈತ ಚಳವಳಿ ಆಳುವವರನ್ನು ಕಂಗೆಡಿಸಿತ್ತು. ಇದರ ಬೆನ್ನಲ್ಲೇ, ಹಳ್ಳಿಹಳ್ಳಿಗಳಲ್ಲಿ ಬೆಳೆದ ರೈತ ಸಂಘ, ಗ್ರಾಮಗಳನ್ನೇ ತನ್ನ ಹಿಡಿತಕ್ಕೆ ಪಡೆದು ಪರ್ಯಾಯ ಆಡಳಿತವನ್ನು ರೂಪಿಸಿತ್ತು. ಈ ಎಲ್ಲಾ ಸಂದರ್ಭಗಳಲ್ಲೂ ಪತ್ರಿಕೆಯು ವರದಿ, ಸಂಪಾದಕೀಯ ಮತ್ತು ವಿಶ್ಲೇಷಣೆಗಳನ್ನು ಪ್ರಕಟಿಸಿ, ಚಳವಳಿಗಳ ಪರವಾಗಿ ನಿಂತಿತ್ತು.

ರೈತ ಹೋರಾಟ: ರೈತರಲ್ಲೂ ಸ್ವಾಭಿಮಾನವಿದೆ, ಅವರನ್ನೂ ಮನುಷ್ಯರಂತೆ ಕಾಣಬೇಕು, ಅನ್ನದಾತರ ಉತ್ಪನ್ನಗಳಿಗೆ ಬೆಲೆ ಸಿಕ್ಕಿ, ಸರ್ಕಾರ-ದಲ್ಲಾಳಿಗಳ ಸುಲಿಗೆ ತಪ್ಪಬೇಕು ಎಂಬ ಬೇಡಿಕೆ ಮುಂದಿಟ್ಟುಕೊಂಡು ರೈತರ ಅಸ್ಮಿತೆಗಾಗಿ ಶುರುವಾದ ರೈತ ಹೋರಾಟ ಕರ್ನಾಟಕದ ಮಹತ್ವದ ವಿದ್ಯಮಾನಗಳಲ್ಲೊಂದು. ನರಗುಂದ-ನವಲಗುಂದ ಚಳವಳಿ, ಗೋಲಿಬಾರ್, ಹೋರಾಟದ ಕಿಚ್ಚು ರಾಜ್ಯವಿಡೀ ಹರಡಿದ್ದನ್ನು ಪತ್ರಿಕೆ ಬಿಂಬಿಸಿತು. ಅದರ ಮುಂದಿನ ಹಂತವೇ ರೈತರ ಸಾಲದ ಬಾಕಿಗಾಗಿ ಜಮೀನು ಮುಟ್ಟುಗೋಲು ಹಾಕಿಕೊಳ್ಳುವ ಸರ್ಕಾರ/ಬ್ಯಾಂಕುಗಳ ಕ್ರಮದ ವಿರುದ್ಧ ಹೋರಾಟ.

1985ರ ನವೆಂಬರ್ 2ರಂದು 'ಸರ್ಕಾರಕ್ಕೆ ರೈತರ ಗಡುವು; ಧರಣಿ ಆರಂಭ' ಶೀರ್ಷಿಕೆಯಡಿ ಎರಡನೇ ಪ್ರಮುಖ ಸುದ್ದಿಯಾಗಿ ಪ್ರಕಟವಾಗಿತ್ತು. ಮಾರನೇ ದಿನವೇ ಹೋರಾಟ ತೀವ್ರಗೊಂಡಿತು. 'ರೈತರಿಂದ ತಿದ್ದುಪಡಿ ಕಾಯ್ದೆ ಪ್ರತಿ ದಹನ: ರದ್ದು ಆಜ್ಞೆ ಘೋಷಣೆ' ಎಂಬ ತಲೆ ಬರಹದಡಿ ಮುಖಪುಟದ ಪ್ರಮುಖ ಸುದ್ದಿ ಬಿತ್ತರಗೊಂಡಿತ್ತು. ಸರ್ಕಾರ ವಾಪಸ್ ಪಡೆಯದೇ ಇದ್ದ ಕಾಯ್ದೆಯನ್ನು ರೈತರೇ ರದ್ದುಪಡಿಸುವ ನಿರ್ಣಯವನ್ನು ಅಂದಿನ ಬೃಹತ್ ಸಮಾವೇಶ ಘೋಷಿಸಿತ್ತು. ಇಡೀ ಸಮಾವೇಶದ ವೈಶಿಷ್ಟ್ಯ, ರೈತರ ಹುರುಪು, ಸರ್ಕಾರವನ್ನು ಎಚ್ಚರಿಸುವ ರೈತರ ಮಾತುಗಳನ್ನು ವರದಿ ಕಟ್ಟಿ ಕೊಟ್ಟಿತು.

ಡಂಕೆಲ್ ಪ್ರಸ್ತಾವದ ವಿರುದ್ಧ ಭಾರತದಲ್ಲಿ ಹೋರಾಟ ಮೊದಲಾಗಿದ್ದು ಕರ್ನಾಟಕದಿಂದಲೇ. 1993ರ ಅಕ್ಟೋಬರ್ 3ರ ಸಂಚಿಕೆಯಲ್ಲಿ 'ಡಂಕೆಲ್ ಪ್ರಸ್ತಾವದ ವಿರುದ್ಧ ವಿಸ್ತೃತ ಹೋರಾಟ' ಶೀರ್ಷಿಕೆಯಡಿ ಮುಖಪುಟದ ಪ್ರಮುಖ ವರದಿ ಪ್ರಕಟವಾಗಿತ್ತು. ಭಾಷಣಕ್ಕೆ ಸೀಮಿತವಾಗದೇ ರೈತರ ಶಕ್ತಿಯ ವಿರಾಟ್ ರೂಪವನ್ನು ವರದಿ ಕಟ್ಟಿಕೊಟ್ಟಿತ್ತು. ರೈತ ಹೋರಾಟದ ಹಲವು ಹಂತಗಳನ್ನು ದಾಖಲಿಸಿದ ಪತ್ರಿಕೆ, ರೈತ ಸಂಘಟನೆ ಛಿದ್ರವಾಗತೊಡಗಿದಾಗ, ಅದರ ಬಗ್ಗೆ ಹಲವು ವರದಿಗಳನ್ನು ಪ್ರಕಟಿಸಿತ್ತಲ್ಲದೇ, ವಿಶ್ಲೇಣಾತ್ಮಕ ಬರಹಗಳನ್ನೂ ಬರೆದಿತ್ತು.

ಕನ್ನಡದ ಅಗ್ರಸ್ಥಾನಕ್ಕೆ ಚ್ಯುತಿ ಬರದಂತೆ ಶೀಘ್ರವೇ ಹೊಸ ಆಜ್ಞೆ

ಮುಖ್ಯಮಂತ್ರಿ ಪ್ರಕಟಣೆಗೆ ಕ್ರಿಯಾ ಸಮಿತಿ ಆಶಾಭಾವನೆ

ಒಟ್ಟಿರೆ ಅನುಷ್ಠಾನಕ್ಕೆ ಆಗ್ರಹ

ಸಿಮೆಂಟ್ ಹಗರಣ ರಾವ್ ವಿರುದ್ಧ ದೂರು

ಗೋಕಾಕ ಚಳವಳಿಯ ಸಂದರ್ಭದಲ್ಲಿ ಪ್ರಜಾವಾಣಿಯ ಮುಖಪುಟ

ಗೋಕಾಕ ಚಳವಳಿ

ಕಲಿಕೆಯ ಎಲ್ಲ ಹಂತಗಳಲ್ಲೂ ಕನ್ನಡವನ್ನು ಪ್ರಥಮ ಭಾಷೆಯಾಗಿ ಜಾರಿ ಮಾಡಬೇಕು ಎಂಬ ಶಿಫಾರಸನ್ನು ಒಳಗೊಂಡಂತೆ ಹಲವು ಶಿಫಾರಸುಗಳನ್ನು ಒಳಗೊಂಡಿದ್ದ 'ಗೋಕಾಕ ವರದಿ'ಯ ಅನುಷ್ಠಾನಕ್ಕೆ ಆಗ್ರಹಿಸಿ ನಡೆದ ಚಳವಳಿಯ ವಿಸ್ತೃತ ವರದಿ, ವಿಶ್ಲೇಷಣೆಗೆ ಪತ್ರಿಕೆ ಆದ್ಯತೆ ನೀಡಿತ್ತು. ಬಹುತೇಕ ದಿನಗಳಲ್ಲಿ ಮುಖಪುಟದ ಪ್ರಮುಖ ವರದಿಯಾಗಿ, ಎಂಟು ಕಾಲಂಗಳಲ್ಲಿ ಪ್ರಕಟವಾಗಿತ್ತು.

ಈ ಹೋರಾಟದ ಕುರಿತು ಯಾವುದೇ ಭಾವೋದ್ವೇಗವಿಲ್ಲದೇ ಸಮಚಿತ್ತದ ವರದಿಯನ್ನು ಪ್ರಜಾವಾಣಿ ಕಟ್ಟಿಕೊಟ್ಟಿತ್ತು. ಎಲ್ಲಿಯೂ ವಕಾಲತ್ತಿನ ಧೋರಣೆ ಕಾಣುತ್ತಿರಲಿಲ್ಲ. ಇಲ್ಲಿಯೇ ಬದುಕು ಕಟ್ಟಿಕೊಂಡ ಕನ್ನಡ ಮಾತೃಭಾಷೆ ಅಲ್ಲದವರಲ್ಲಿ ಹೋರಾಟವು ಅಸುರಕ್ಷಿತ ಭಾವ ಮೂಡಿಸಬಾರದು ಎಂಬ ಎಚ್ಚರಿಕೆಯನ್ನು ಪತ್ರಿಕೆಯು ನೀಡಿತ್ತು. ಆಗಷ್ಟೇ ಬಹುಭಾಷಿಕ ನಗರವಾಗಿ ರೂಪು ತಳೆಯುತ್ತಿದ್ದ ಬೆಂಗಳೂರಿನ ವರ್ಚಸ್ಸಿಗೆ ಮುಕ್ಕಾಗದಂತೆ ಇರಲೇಬೇಕಾದ ವಿವೇಕ ವರದಿಗಳ ಆತ್ಮದಂತಿತ್ತು.

1982ರ ಏಪ್ರಿಲ್ 20ರ ಮುಖಪುಟದ ಪ್ರಮುಖ ಸುದ್ದಿ, 'ಕನ್ನಡ ಕಲಿಕೆ ಕಡ್ಡಾಯ; ಏಕೈಕ ಪ್ರಥಮ ಭಾಷೆ ಸ್ಥಾನವಿಲ್ಲ' ಎಂಬ ಶೀರ್ಷಿಕೆಯಡಿ ಮುಖಪುಟದಲ್ಲಿ ಪ್ರಕಟವಾಗಿತ್ತು. ಅದೇ ದಿನ, 'ಅಲ್ಪ ಸಂಖ್ಯಾತರ ನಿಲುವಿಗೆ ಗೆಲುವು' ಎಂಬ ತಲೆ ಬರಹದ ಅಡಿ, ವಿಶ್ಲೇಷಣಾತ್ಮಕ ವರದಿ ಇತ್ತು. 'ವರದಿಯ ಮೂಲತತ್ವಗಳನ್ನು ಸರ್ಕಾರ ಇಷ್ಟೊಂದು ಲಘುವಾಗಿ ತಳ್ಳಿ ಹಾಕುವುದೆಂದು ಬಹುಮಂದಿ ಎಣಿಸಿರಲಿಲ್ಲ' ಎಂಬ ವಿಮರ್ಶೆಯನ್ನೂ ಮಾಡಲಾಗಿತ್ತು.

ಸರ್ಕಾರದ ಧೋರಣೆ ಕುರಿತು ಏಪ್ರಿಲ್ 21ರ ಸಂಪಾದಕೀಯ, 'ಇನ್ನು ಮುಂದೆ ತಾನು ಕನ್ನಡ ಕಲಿಯದೆಯೇ ಬದುಕು ಬಲ್ಲೆನೆಂಬ ಅಹಂಕಾರ ಮಾಡುವಂತಿಲ್ಲ' ಎಂದು ಕನ್ನಡದ ಬಗೆಗಿನ ಕಾಳಜಿಯನ್ನು ಪತ್ರಿಕೆ ಪ್ರದರ್ಶಿಸಿತ್ತು.

ಹೋರಾಟ ನಿರತ ಅನೇಕ ಸಾಹಿತಿಗಳು ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿದ್ದರು. ಅದನ್ನು ಉಲ್ಲೇಖಿಸಿ, 'ಸರ್ಕಾರಿ ಸೂತ್ರಕ್ಕೆ ಸ್ವಾಗತವೇಕೆ?' ಎಂಬ ಶೀರ್ಷಿಕೆಯಡಿ ವಿಶ್ಲೇಷಣೆ ಪ್ರಕಟವಾಗಿತ್ತು. 'ಸುಮಾರು ಒಂದು ವಾರ ಕನ್ನಡ ನಾಡಿನುದ್ದಕ್ಕೂ ಉಕ್ಕಿ ಹರಿದ ಕನ್ನಡಾಭಿಮಾನ, ನೀರಿಗೆ ಬಿದ್ದ ಕೆಂಡದಂತೆ ಟುಸ್ಸೆಂದು ಹೋದ ರೀತಿ ವಿಲಕ್ಷಣವಾಗಿದೆ. ಗೋಕಾಕ ವರದಿ ಪರ ಚಳವಳಿಯಲ್ಲಿ ವಿಚಾರವಂತ ಜನರಿಗೆ ಸಾಹಿತಿಗಳ ಮೇಲಿದ್ದ ಗೌರವ ಕಳಚಿಬಿತ್ತು. ಒಂದು ಸಮೂಹ ಚಳವಳಿಯಲ್ಲಿ ವ್ಯಕ್ತಿಗತ ವಿಚಾರಗಳನ್ನು ಬದಿಗೊತ್ತಿ ತತ್ವಗಳಿಗೆ ಅಂಟಿಕೊಳ್ಳುವ ಧೀಮಂತಿಕೆ ಸಾಹಿತಿಗಳಲ್ಲಿ ಇಲ್ಲವಾದುದೇ ಕನ್ನಡ ಚಳವಳಿಯ ದುರ್ಮರಣಕ್ಕೆ ಕಾರಣವೆನ್ನಬಹುದು' ಎನ್ನುವ ಮೂಲಕ ಸಾಹಿತಿಗಳನ್ನು ತೀಕ್ಷ್ಣವಾಗಿಯೇ ಕುಟುಕಲಾಗಿತ್ತು.

ಗಡಿ ಸಮಸ್ಯೆ ಹಾಗೂ ಕನ್ನಡದ ನೆಲ ಉಳಿಸಬೇಕೆನ್ನುವ ಗಡಿ ಹೋರಾಟಗಳಲ್ಲೂ ಪತ್ರಿಕೆಯ ಪಾತ್ರ ಹಿರಿದು. ಮಹಾಜನ ವರದಿಗೆ ಆಗ್ರಹಿಸಿ ನಡೆದ ಚಳವಳಿಗೆ ವಿಸ್ತೃತ ಪ್ರಚಾರ ನೀಡಿತ್ತು. 1982ರ ಏಪ್ರಿಲ್ 4ರಂದು 'ಬೆಂಕಿ ಬಿದ್ದಿದೆ ಮನೆಗೆ ಬನ್ನಿರೋ: ರೈ ಕೂಗು' ತಲೆ ಬರಹದಡಿ ಅರ್ಧಪುಟದ ಬರಹವನ್ನು ಪ್ರಕಟಿಸಿತ್ತು. ಅಲ್ಲದೇ ನಿತ್ಯವೂ ವರದಿಗಳನ್ನು ಮುದ್ರಿಸಿತ್ತು.



ಶಿವರಾಜ್‌ಕುಮಾರ್

ಸ್ಯಾಂಡಲ್‌ವುಡ್‌ನ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಅವರ ಈ ವರ್ಷದ ಮೊದಲ ಸಿನಿಮಾ 'ಘೋಸ್ಟ್' ಅ.19ರಂದು ರಿಲೀಸ್ ಆಗುತ್ತಿದೆ. ಅಕ್ಟೋಬರ್ 18ರ ಮಧ್ಯರಾತ್ರಿ 12 ಗಂಟೆಗೆ ಬೆಂಗಳೂರಿನ ಕೆ.ಜಿ.ರಸ್ತೆಯ ಪ್ರಮುಖ ಚಿತ್ರಮಂದಿರದಲ್ಲಿ ಚಿತ್ರದ ಮೊದಲ ಪ್ರದರ್ಶನ (ಫ್ಯಾನ್ ಶೋ) ನಡೆಯಲಿದೆ ಎಂದು ಘೋಷಿಸಿದೆ ಚಿತ್ರತಂಡ.

ಸಂದೇಶ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಸಂದೇಶ್ ನಾಗರಾಜ್ ಅವರು ಅರ್ಪಿಸಿರುವ, ಸಂದೇಶ್ ಎನ್. ನಿರ್ಮಾಣದ ಈ ಚಿತ್ರವನ್ನು ಶ್ರೀನಿ ನಿರ್ದೇಶಿಸಿದ್ದಾರೆ. ಶಿವರಾಜ್‌ಕುಮಾರ್ ಅಭಿನಯದ 'ಭಜರಂಗಿ' ಚಿತ್ರದ ಪ್ರದರ್ಶನ ಬೆಳಗ್ಗೆ 6ರಿಂದ ಆರಂಭವಾಗಿತ್ತು. ಆದರೆ ಮಧ್ಯ-ರಾತ್ರಿಯಿಂದಲೇ ಪ್ರದರ್ಶನ ಕಾಣುತ್ತಿರುವ ಮೊದಲ ಚಿತ್ರ 'ಘೋಸ್ಟ್' ಎಂದಿದೆ ಚಿತ್ರತಂಡ. ಬಹುನಿರೀಕ್ಷಿತ ಈ ಚಿತ್ರವನ್ನು ಅಭಿಮಾನಿಗಳು ಅದ್ದೂರಿಯಾಗಿ ಬರಮಾಡಿಕೊಳ್ಳಲು ಸಿದ್ಧತೆ ಆರಂಭಿಸಿದ್ದಾರೆ. ಈಗಾಗಲೇ ಬಿಡುಗಡೆಯಾಗಿರುವ ಚಿತ್ರದ ಟ್ರೈಲರ್ ಶಿವರಾಜ್‌ಕುಮಾರ್ ಅವರ ಹಲವು ಶೇಡ್ಸ್ ಪರಿಚಯಿಸಿದೆ.

ಅ.11ರಂದು ಹೊಸಪೇಟೆ ಮೀರಾಲಂ ಚಿತ್ರಮಂದಿರದಲ್ಲಿ 'ಘೋಸ್ಟ್ ಫ್ಯಾಂಥಮ್' ಬಿಡುಗಡೆಯಾಗಲಿದ್ದು, ಅಭಿಮಾನಿಗಳೇ ಇದನ್ನು ರಿಲೀಸ್ ಮಾಡುತ್ತಿರುವುದು ವಿಶೇಷವಾಗಿರಲಿದೆ. ಸಿನಿಮಾ ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಪ್ಯಾನ್ ಇಂಡಿಯಾ ಸಿನಿಮಾವಾಗಿ ರಿಲೀಸ್ ಆಗಲಿದೆ. ❖

ರಜನೀಶ್ ಹಾಗೂ ನಾಗಶ್ರೀ

ಅ.13ಕ್ಕೆ 'ಜಲಪಾತ' ಬಿಡುಗಡೆ

ರಜನೀಶ್ ಹಾಗೂ ನಾಗಶ್ರೀ ಬೇಗಾರ್ ನಟಿಸಿರುವ 'ಜಲಪಾತ' ಸಿನಿಮಾ ಅ.13ರಂದು ಬಿಡುಗಡೆಯಾಗಲಿದೆ. ಕಳೆದ ಶುಕ್ರವಾರವೇ (ಅ.6) ತೆರೆಕಾಣಬೇಕಿದ್ದ ಈ ಸಿನಿಮಾ ಕಾರಣಾಂತರಗಳಿಂದ ಮುಂದೂಡಲ್ಪಟ್ಟಿತ್ತು.

ಸೆನ್ಸಾರ್ ಮಂಡಳಿಯಿಂದ ಸಿನಿಮಾಗೆ 'ಯು' ಪ್ರಮಾಣಪತ್ರ ದೊರೆತಿದೆ. 'ಪದವಿ ಪೂರ್ವ' ಸಿನಿಮಾದಲ್ಲಿ ಪ್ರಮುಖ ಪಾತ್ರ-ವೊಂದರಲ್ಲಿ ನಟಿಸಿದ್ದ ರಜನೀಶ್, 'ಜಲಪಾತ' ಸಿನಿಮಾ ಮೂಲಕ ನಾಯಕನಾಗಿ ಬೆಳ್ಳಿಪರದೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ನಟ ಪ್ರಮೋದ್ ಶೆಟ್ಟಿ ಅವರೂ ಈ ಸಿನಿಮಾದಲ್ಲಿ ವಿಭಿನ್ನವಾದ ಪಾತ್ರವೊಂದನ್ನು ನಿಭಾಯಿಸಿದ್ದಾರೆ. 'ವೈಶಂಪಾಯನ ತೀರ' ಸಿನಿಮಾ ಮೂಲಕ ಗಮನ ಸೆಳೆದ ಮಲೆನಾಡಿನ ನಾಗಶ್ರೀ ಈ ಚಿತ್ರದ ನಾಯಕಿ.

ಈ ಚಿತ್ರವನ್ನು ರಮೇಶ್ ಬೇಗಾರ್ ನಿರ್ದೇಶಿಸಿದ್ದಾರೆ. ಟಿ.ಎಸ್. ರವೀಂದ್ರ ತುಂಬರಮನೆ ನಿರ್ಮಿಸಿದ್ದಾರೆ. ಮಲೆನಾಡ ಪರಿಸರ ಹಾಗೂ ಅಲ್ಲಿನ ಸಮಸ್ಯೆಗಳನ್ನು ಸಿನಿಮಾ ಪ್ರದರ್ಶಿಸಲಿದೆ ಎಂದಿದೆ ಚಿತ್ರತಂಡ. ಸಾಧ್ವಿನಿ ಕೊಪ್ಪ ಸಂಗೀತವಿರುವ ಚಿತ್ರದ ಮೂರು ಹಾಡುಗಳು ಈಗಾಗಲೇ ಜನಪ್ರಿಯವಾಗಿದ್ದು, ವಿಜಯಪ್ರಕಾಶ್ ಚಿತ್ರದ ಥೀಮ್ ಹಾಡಿಗೆ ಧ್ವನಿಯಾಗಿದ್ದಾರೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಅಕ್ಟೋಬರ್ 10, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಏಕಾದಶಿ ಗಂ. 15-09 ನಕ್ಷತ್ರ: ಮಘ ಅಹೋರಾತ್ರ ಯೋಗ: ಸಾಧ್ಯಾ ಗಂ 07-46 ಕರಣ: ಬಾಲವ ಗಂ. 15-09, ಕನ್ಯಾ ಮಾಸದ 23 ನೇ ದಿನ, ಮಳೆನಕ್ಷತ್ರ: ಹಸ್ತ 4. ರಾಹುಕಾಲ : ಮಧ್ಯಾಹ್ನ 03-00 - 04-30, ಸೂರ್ಯೋದಯ : 06-24 ಸೂರ್ಯಾಸ್ತ : 06-11, ಮುಸ್ಲಿಂ ದಿನಾಂಕ : 24 ರಬಿಉಲ್ಲಾವಲ್

ದಿನ ವಿಶೇಷ : ಇಂದಿರಾ ಏಕಾದಶಿ

ಅದೃಷ್ಟ ಸಂಖ್ಯೆ : 11, 6

ಮೇಷ: ಮಕ್ಕಳೊಂದಿಗೆ ಮನರಂಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಭೇಟಿ ಕೊಡುವಂತಾಗಬಹುದು. ಕೋರ್ಟು-ಕಚೇರಿ ಕಾರ್ಯಭಾಗದಲ್ಲಿ ನಿರೀಕ್ಷಿತ ಯಶಸ್ಸು ಪಡೆಯುವಲ್ಲಿ ತೊಡಕು ಇರಲಿದೆ. ಸುಬ್ರಹ್ಮಣ್ಯನನ್ನು ಆರಾಧಿಸಿ.

ವೃಷಭ: ರಾಜಕೀಯ ವ್ಯಕ್ತಿಗಳಿಗೆ ವಿವಿಧ ವಿಚಾರಗಳಲ್ಲಿ ಪ್ರಗತಿ ಇದ್ದು ಸಾಮಾಜಿಕವಾಗಿ ಸ್ಥಾನಮಾನ ಹಾಗೂ ಗೌರವ ಪ್ರಾಪ್ತಿ. ವೈದ್ಯರ ಸಲಹೆಯಂತೆ ನಡೆದರೆ ಮಕ್ಕಳ ಆರೋಗ್ಯವು ಉತ್ತಮವಾಗಿರುವುದು.

ಮಿಥುನ: ಸಮಸ್ಯೆಗಳನ್ನು ನಾಜೂಕಾಗಿ ಬಗೆಹರಿಸಿಕೊಳ್ಳುವ ರೀತಿಯನ್ನು ತಿಳಿದುಕೊಳ್ಳಿರಿ. ಮದುವೆಯ ಸಂಬಂಧ ಮಾತನಾಡಲು ಯಾರ ಮಧ್ಯಸ್ಥಿಕೆಯೂ ಬೇಡ. ಕಲಾವಿದರ ಅಭ್ಯಾಸದ ಫಲದಿಂದ ಅವಕಾಶಗಳು ಲಭ್ಯವಾಗುತ್ತದೆ.

ಕರ್ಕಾಟಕ: ಲೇವಾದೇವಿ ವ್ಯವಹಾರಗಳಿಂದ ಗಳಿಸಿದ ಹಣ ಒಳ್ಳೆಯ ಕಾರ್ಯಗಳಿಗೆ ಸಹಾಯವಾಗುವುದು. ಸಂಬಂಧಿಕರ ವಲಯದಲ್ಲಿದ್ದ ತಪ್ಪು ಅಭಿಪ್ರಾಯಗಳು ದೂರಾಗುವುದು. ವಿಮೆಯಿಂದ ಲಾಭ ಪಡೆದುಕೊಳ್ಳುವಿರಿ.

ಸಿಂಹ: ಉದ್ಯಮಿಗಳಿಗೆ ಕಾರ್ಮಿಕರ ಬದಲಾವಣೆಯಂಥ ವಿಷಯಗಳು ಹಲವು ರೀತಿಯಲ್ಲಿ ನಷ್ಟ ಅನುಭವಿಸಲು ಕಾರಣವಾಗುತ್ತದೆ. ಕುಟುಂಬದ ಸದಸ್ಯರ ಜತೆಯಲ್ಲಿ ಅಧಿಕ ಸಮಯ ಕಳೆಯುವಂತಾಗುವುದು.

ಕನ್ಯಾ: ಎಂಥ ಪರಿಸ್ಥಿತಿಯನ್ನೂ ಎದುರಿಸಬಲ್ಲೆನೆಂಬ ಆತ್ಮವಿಶ್ವಾಸದಿಂದ ಜೀವನ ನಡೆಸಿ. ನಿಮ್ಮೆಲ್ಲಾ ನೂತನ ಯೋಚನೆಗಳನ್ನು ಜನರು ಇಷ್ಟ ಪಡುತ್ತಾರೆ. ಕಾಲು ನೋವು ಅಥವಾ ಮೂಳೆಗೆ ಸಂಬಂಧಿಸಿದಂತೆ ನೋವುಗಳು ಬಾಧಿಸಲಿವೆ.

ತುಲಾ: ದಕ್ಷತೆಗೆ ಅಡ್ಡಿಯಾಗುವಂತಹ ಘಟನೆಗಳು ನಡೆಯಬಹುದು, ಅಂಥ ಅವಕಾಶಗಳನ್ನು ನೀಡಬೇಡಿ. ಹಿತಶತ್ರುಗಳ ಕಾಟದಿಂದ ತಪ್ಪಿಸಿಕೊಳ್ಳಲು ಬುದ್ಧಿವಂತಿಕೆಯನ್ನು ಉಪಯೋಗಿಸಿ. ಕಥೆ ಬರಹಗಾರರಿಗೆ ಶುಭ ದಿನ.

ವೃಶ್ಚಿಕ: ಇಂದು ಅತಿ ಅವಸರ ಮತ್ತು ಅತಿ ಉದ್ವೇಗ ಇವೆರಡು ತಲೆ ತಗ್ಗಿಸುವಂತೆ ಮಾಡುತ್ತದೆ. ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳು ನಿವಾರಣೆಯಾಗಲಿವೆ. ಔಷಧ ಪದಾರ್ಥಗಳ ಮಾರಾಟದಿಂದ ಲಾಭ ಪಡೆಯುವಿರಿ.

ಧನು: ಆರ್ಥಿಕವಾಗಿ ಉತ್ತಮ ಪ್ರಗತಿ ಇದ್ದರೂ ಧನವ್ಯಯದಲ್ಲಿ ಆಗುತ್ತಿರುವ ಅನವಶ್ಯಕ ಖರ್ಚುಗಳನ್ನು ತಡೆಗಟ್ಟುವ ಪ್ರಯತ್ನ ಮಾಡುವುದರಿಂದ ಇನ್ನೂ ಲಾಭ ಗಳಿಸಬಹುದು. ಉದಯೋನ್ಮುಖ ತಾರೆಯರಿಗೆ ಹೆಚ್ಚಿನ ಲಾಭ ಬರಲಿದೆ.

ಮಕರ: ಹೋಟೆಲ್ ಉದ್ಯಮದವರಿಗೆ ಮತ್ತು ಟ್ರಾವೆಲಿಂಗ್ ಏಜೆಂಟರಿಗೆ ಲಾಭದ ನಿರೀಕ್ಷೆಯಲ್ಲಿ ಅಲ್ಪ ಮಟ್ಟದ ವ್ಯತ್ಯಾಸಗಳಾಗುವುದು. ಕೃಷಿ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ.

ಕುಂಭ: ಮಕ್ಕಳೊಂದಿಗೆ ವ್ಯವಹಾರದ ಎಲ್ಲಾ ವಿಚಾರಗಳ ಬಗ್ಗೆ ಮಾತುಕತೆ ನಡೆಸಿ ತೀರ್ಮಾನಕ್ಕೆ ಬರುವುದು ಒಳ್ಳೆಯದು. ಇಂದು ಪೂರ್ವ ನಿಯಾಮಕವಾಗಿ ಕೆಲಸ ಮಾಡುವುದು ಬಹಳ ಕಷ್ಟವಾಗುವುದು.

ಮೀನ: ಯಾವುದೇ ತೀರ್ಮಾನಗಳನ್ನು ತೆಗೆದುಕೊಳ್ಳುವ ವಿಚಾರದಲ್ಲಿ ನಿಮ್ಮ ಚಂಚಲ ಮನಸ್ಸು ಹೆದರಿದಂತಾಗುತ್ತದೆ. ಷೇರು ಮಾರುಕಟ್ಟೆ ವ್ಯವಹಾರಗಳು ಹೆಚ್ಚಿನ ವರಮಾನ ತರಲಿದೆ. ಸಾಧನೆ ಅಭಿನಂದನೆಗೆ ಪಾತ್ರವಾಗಲಿವೆ.

ಸಾಮಾನ್ಯ ಜ್ಞಾನ

ಪಿ. ಚಂದ್ರಿಕಾ

ಮರದ ವ್ಯಾಪಾರಿಯ ಬಳಿಗೆ ಕೆಲಸ ಕೇಳಿಕೊಂಡು ಒಬ್ಬ ಬಂದ. ತೀರಾ ಹಸಿದವನಂತೆ ಕಂಡ ಅವನಿಗೆ ಮರದ ವ್ಯಾಪಾರಿಯು ಅತ್ಯಂತ ಕರುಣೆಯಿಂದ ಊಟ ಕೊಟ್ಟು ನಂತರ ಕೆಲಸ ಮಾಡು ಎಂದು ಬಿಟ್ಟ. ಕೆಲಸಗಾರ ಮೊದಲ ದಿನ ಅತ್ಯಂತ ಶ್ರದ್ಧೆಯಿಂದ ಮರ ಕಡಿಯ ತೊಡಗಿದ. ಅವನು ಕೆಲಸ ಮಾಡುವ ವೇಗವನ್ನು ನೋಡಿ ಸ್ವತಃ ಮರದ ವ್ಯಾಪಾರಿಯೇ ದಂಗಾದ. ತಾನು ಇಷ್ಟು ವರ್ಷಗಳಲ್ಲಿ ಇಂಥಾ ಕೆಲಸಗಾರನನ್ನು ಮಾತ್ರ ನೋಡಲೇ ಇಲ್ಲ, ಇನ್ನು ಬಹಳ ಲಾಭವನ್ನು ಗಳಿಸಿಕೊಳ್ಳಬಹುದು ಎಂದು ಸಂತಸಗೊಂಡ.

ಎರಡನೆಯ ದಿನವೂ ಅದೇ ಉತ್ಸಾಹದಲ್ಲಿ ಕೆಲಸ ಮಾಡಿದ ಆ ಕೆಲಸಗಾರ. ಮರದ ವ್ಯಾಪಾರಿಗೆ ನಿಜಕ್ಕೂ ಖುಷಿಯಾಗಿಬಿಟ್ಟಿತ್ತು. ಎಂಥಾ ಕೆಲಸಗಾರ ತಾನಾಗೇ ಒದಗಿಬಂದನಲ್ಲಾ ಎಂದು. ಮೂರನೇ ದಿನ ನಾಲ್ಕನೇ ದಿನ ಹೀಗೆ ಆ ಕೆಲಸಗಾರನ ಉತ್ಸಾಹ ಸ್ವಲ್ಪವೂ ಕುಂದಲಿಲ್ಲ. ಆದರೆ ಅಚ್ಚರಿ ಎಂದರೆ, ಎರಡನೇ ದಿನ... ಮೂರನೇ ದಿನ... ಹೀಗೆ ದಿನದಿಂದ ದಿನಕ್ಕೆ ಅವನು ಕಡಿದ ಮರಗಳ ಸಂಖ್ಯೆ ಕಡಿಮೆಯಾಗುತ್ತಾ ಬಂದಿತು. ಕೆಲಸಗಾರನಿಗೆ ಶಕ್ತಿ ಸಾಲದೇನೋ ಎಂದು ವ್ಯಾಪಾರಿ ಒಳ್ಳೆಯ ಊಟ ಕೊಟ್ಟ. ಊಹುಂ. ಏನಂದರೂ ಕೆಲಸಗಾರ ಮೊದಲ ದಿನದ ಕೆಲಸಕ್ಕೆ ಸಮನಾಗಿ ಮಾಡಲಾಗದೆ ಹೋದ.

ಇದು ಮರದ ವ್ಯಾಪಾರಿಗೆ ಕಗ್ಗಂಟಾಗುತ್ತಾ ಬಂತು. ಆತ ಕೆಲಸಗಾರನನ್ನೇ ಗಮನಿಸುತ್ತ ಬಂದ. ಕೆಲಸದಲ್ಲಿ ಉತ್ಸಾಹವಿದೆ, ಮಾಡುವ ನಿಷ್ಠೆ ಇದೆ. ಆದರೆ ಕೆಲಸ ಸಾಗುತ್ತಿಲ್ಲ ಯಾಕೆ? ಎಂದು ಯೋಚಿಸುವಾಗ, ಇದ್ದಕ್ಕಿದ್ದಂತೆ ಅವನಿಗೆ ಏನೋ ಹೊಳೆದಂತಾಗಿ ಕೆಲಸಗಾರನ ಕೊಡಲಿಯನ್ನು ಪರೀಕ್ಷಿಸಿದ. ಅದು ಚೂಪಾಗಿರದೆ ಮೊಂಡು ಬಿದ್ದಿತ್ತು. ಅಚ್ಚರಿಯಿಂದ, 'ಅಲ್ಲಯ್ಯ ಈ ಕೊಡಲಿಯನ್ನು ಯಾಕೆ ಹರಿತ ಮಾಡಿಕೊಂಡಿಲ್ಲ' ಎಂದು ಕೇಳಿದ.

ಕೆಲಸಗಾರ ತೋಚದೆ, 'ಏನು ಮಾಡಬೇಕಿತ್ತು' ಎಂದು ಕೇಳಿದ. 'ನಿಜವಾದ ಕೆಲಸಗಾರನಿಗೆ ಬರಿಯ ಉತ್ಸಾಹ, ನಿಷ್ಠೆ ಇದ್ದರೆ ಸಾಲದು, ಹತಾರಗಳನ್ನು ಹರಿತವಾಗಿಟ್ಟುಕೊಳ್ಳಬೇಕು. ಶ್ರಮದ ಜೊತೆ ಬುದ್ಧಿವಂತಿಕೆಯೂ ಬೇಕು. ಅದು ನಮ್ಮ ಉತ್ಸಾಹ ಮತ್ತು ನಿಷ್ಠೆಗಳಿಗೆ ಸರಿಯಾದ ಫಲಿತವನ್ನು ಕೊಡುತ್ತದೆ' ಎನ್ನುವುದನ್ನು ಹೇಳಿಕೊಟ್ಟ. ಆ ಕೆಲಸಗಾರನೂ ಬರಿಯ ಹತಾರವನ್ನಲ್ಲ; ಬುದ್ಧಿಯನ್ನೂ ಚುರುಕಾಗಿರಿಸಿಕೊಂಡು ಮುಂದೊಂದು ದಿನ ದೊಡ್ಡ ವ್ಯಾಪಾರಿಯಾದ.

ಪದಬಂಧ 5466

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಗೆಲುವು ದೊರೆತಾಗ ಆಚರಿಸುವ ಹಬ್ಬ (5)
4.ಪಾಕದಲ್ಲೇ ದೋಷವಿದೆಯಲ್ಲಾ? (3)
5.ನಡು ದಾರಿಯಲ್ಲಿಯೇ ಪ್ರಾರಂಭವಾದ ಕಂಪನ (3)
7.ಈತ ಸೀತೆಯ ತಂದೆ (3)
9.ನಾಯಿ ಜಾತಿಯ ಒಂದು ಕಾಡುಮೃಗ (2)
10.ನಗಾರಿ ಹತ್ತಿರವಿರುವ ಜಂಬೂಕ (2)
11.ಸಂಕುಲದ ಬಳಿ ಮುಂಗುಸಿ ಕಾಣುತ್ತಿದೆಯಲ್ಲಾ? (3)
13.ಕರದೊಳಗಿರುವ ದೇವರು (3)
15.ಸರಾಗವಾಗಿ ಒಳನುಗ್ಗಿರುವ ಗಂಡಾನೆ (3)
16.ಇದು ಅತ್ಯಂತ ಚಲುವಾದುದು (5)

ಮೇಲಿಂದ ಕೆಳಕ್ಕೆ

1.ಕೊನೆಗೆ ಜನವಿದ್ದರೆ ಮಾತ್ರ ಇದು ಉಪಯೋಗ! (4)
2.ಬರಹಗಾರ ಉಲ್ಟಾ ನಿಂತಿದ್ದಾನಲ್ಲಾ? (2)
3.ಯೌವ್ವನದಲ್ಲಿ ಪ್ರವೇಶಿರುವ ಕಾಡು (2)
4.ಪಾಕಕ್ಕೆ ದೊರೆತ ಬಹುಮಾನ (5)
6.ಸುಗಂಧದ್ರವ್ಯವನ್ನು ನೀಡುವ ಒಂದು ಜಾತಿಯ ಜಿಂಕೆ (5)
7.ಜನರ ಮಧ್ಯೆ ನುಸುಳಿರುವ ಆಳು (3)
8.ಕೆಸರಿನಲ್ಲೂ ಅರಳುವ ಹೂ (3)
12.ಕಣ್ಣಿನ ಕೊನೆಯ ನೋಟವಿದು (4)
14.ತಿರುಗಿದ್ದಾಗ ಪ್ರತ್ಯಕ್ಷವಾದ ದೇವತೆ (2)
15.ಸರಕ್ಕನೆ ಧರಿಸಿರುವ ಮಾಲೆ (2)

5465ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಭಾಸದ 3.ನಶ್ವರ
4.ಶಸ್ತ್ರಾಗಾರ 6.ದಿನ
8.ಜಲಪಾತ 9.ಜಡಿಮಳೆ
10.ಯಶ 12.ಮಿತವ್ಯಯ
14.ಬಡವ 15.ಮಹಾದ್ವಾರ

ಮೇಲಿಂದ ಕೆಳಕ್ಕೆ:
1.ಸರದಿ 2.ದಶ
3.ನದೀಮುಖಜಭೂಮಿ
5.ರಜತಮಹೋತ್ಸವ
7.ನವಿರೆಳೆ 8.ಜಲಾಶಯ
11.ಶಬರ 13.ಯವ

ಸುಡೊಕು 5852

	4				1		2	6
8		7		3				9
	2				9		8	
	6			4		3		8
	7	4	1	8	3			
3						5		1
	8		3		4			5
		1		9		8		4
4			5			2		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5851 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

27ನೇಯ ವರುಷದ ಪುಣ್ಯಸ್ಮರಣೆ



ಪೂಜ್ಯ ಶ್ರೀ. ಪಿ. ವೀರಪ್ಪನವರು
ಮಾಜಿ ಕಾರ್ಪೊರೇಟರ್, ಬೆಂಗಳೂರು
1920 - 1996
"ನಿಮ್ಮಲ್ಲಿತ್ತು ದಿವ್ಯ ಸಂಕಲ್ಪಶಕ್ತಿ ನೀವು ನಡೆದಿರಿ ಎಂದೂ ಸತ್ಯ ಪಥದಿ ನೀಡೆಮಗೆ ನಿಮ್ಮ ದಿವ್ಯಶಕ್ತಿ ಕ್ರಮಿಸಲು ಈ ಬಾಳಹಾದಿ"
ಪುಷ್ಪಾಂಜಲಿ ಅರ್ಪಿಸುವ
ದುಃಖತಪ್ತ: ಪತ್ನಿ ಶ್ರೀಮತಿ. ಪಿ. ವಿ. ಗಿರಿಜಾಂಬ, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗು ಬಂಧುಗಳು

Ahalya Garudachar
Daughter of VS Aiyangar of Kollegal attained her hevenly abode on 09 Oct 23 at the age of 98 years.
In grief all brothers, sisters, nephews and nieces.

17ನೇ ವರ್ಷದ ಪುಣ್ಯಸ್ಮರಣೆ

ಕೆ.ವಿ. ಪ್ರಕಾಶ್
ಮರಣ: 10–10–2006
ನಿಮ್ಮ ಸವಿನೆನಪು, ಆದರ್ಶಗಳು ಸದಾ ನಮಗೆ ಮಾರ್ಗದರ್ಶನ, ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ
ಪತ್ನಿ–ಮಂಜುಳ
ಮಕ್ಕಳು–ಪವನ್ ಪಿ., ಬಾಲಾಜಿ ಪಿ.

For Online Classified Booking
Name Change / Education / Property / Job / Services & many more
Log on to :
dhclassifieds.com

20ನೇ ಸವಿನೆನಪು
"ಬದುಕಿನ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಿ, ನಮಗೂ ಸವಾಲುಗಳನ್ನು ನಿಭಾಯಿಸಲು ಮಾರ್ಗದರ್ಶನ ಮತ್ತು ಚೈತನ್ಯ ತುಂಬಿದ ನೀವು ನಮ್ಮ ಮನಗಳಲ್ಲಿ ನಿತ್ಯ ನೂತನ ನಿರಂತರ ಹಾಗೂ ಅಮರ"
ಶ್ರೀ ಎಂ.ಆರ್. ರಾಮಯ್ಯನವರು
(30.06.1937 - 10.10.2003)
ITI, Ex-KPCCI Secretary (Labour Cell)
ಶ್ರೀಮತಿ ವೈ. ಶಾಂತಮ್ಮನವರು, ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು
ನಾಗರಭಾವಿ, ಬೆಂಗಳೂರು–72

ವೈಕುಂಠ ಸಮಾರಾಧನೆ
ಇವರು ದಿನಾಂಕ 01–10–2023ನೇ ಭಾನುವಾರದಂದು ದೈವಾಧೀನರಾಗಿದ್ದು, ತತ್ಸಂಬಂಧವಾದ ಇವರ ಉತ್ತರ ಕ್ರಿಯಾದಿ ಕಾರ್ಯವು ದಿ: 11–10–2023ನೇ ಬುಧವಾರ ಬೆಳಿಗ್ಗೆ 10 ಗಂಟೆಗೆ ಮೃತರ ಸ್ವಗೃಹವಾದ ದೇವರಹುಲಿಮಂಗಲ ಗ್ರಾಮ, ಡೆಂಕಣಿಕೊಟ್ಟೈ ತಾಲ್ಲೂಕು ಇಲ್ಲಿ ನೆರವೇರಲಿದೆ.
ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಶ್ರೀ ಓ. ಬಯ್ಯಾ ರೆಡ್ಡಿ
ನಿವೃತ್ತ ಮುಖ್ಯ ಕಾರ್ಮಿಕ ಮತ್ತು ಕಲ್ಯಾಣ ಅಧಿಕಾರಿ (ಕೆಎಸ್‌ಆರ್‌ಟಿಸಿ)
ಇಂತಿ ದುಃಖತಪ್ತರು: ಮೃತರ ಪತ್ನಿ ಹಾಗೂ ಕುಟುಂಬಸ್ಥರು
9341226837, 8050501215

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,653
ಇಂದಿನ ಅಂತ್ಯ	19,512
▼	141
ದಿನದ ಕನಿಷ್ಠ	19,480

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1650)
ಸೋಯಾ (ರಿಫೈನ್ಡ್)	₹865 (860)
ಸೂರ್ಯಕಾಂತಿ (ರಿಫೈನ್ಡ್)	₹875 (875)
ಪಾಮೋಲಿನ್	₹815 (805)

ವಿನಿಮಯ ದರ

$ ಡಾಲರ್	83.29
£ ಪೌಂಡ್	101.36
€ ಯುರೊ	87.70
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ತಿಪಟೂರು	₹7100-9800
ತುಮಕೂರು	₹3850-4800
ತುರುವೇಕೆರೆ	₹8500-8500

ಮಧ್ಯಪ್ರಾಚ್ಯ ಬಿಕ್ಕಟ್ಟು: ಸೆನ್ಸೆಕ್ಸ್ ಇಳಿಕೆ

ಮುಂಬೈ (ಪಿಟಿಐ): ಮಧ್ಯಪ್ರಾಚ್ಯದಲ್ಲಿ ಉದ್ಭವಿಸಿರುವ ಬಿಕ್ಕಟ್ಟು ಮತ್ತು ಕಚ್ಚಾ ತೈಲ ದರ ಏರಿಕೆಯ ಕಾರಣಗಳಿಂದಾಗಿ ದೇಶದ ಷೇರುಪೇಟೆಗಳಲ್ಲಿ ಸೋಮವಾರ ನಕಾರಾತ್ಮಕ ವಹಿವಾಟು ನಡೆಯುವಂತಾಯಿತು.

ಇಸ್ರೇಲ್ – ಹಮಾಸ್ ಸಮರದಿಂದಾಗಿ ಅನಿಶ್ಚಿತ ಸ್ಥಿತಿ ನಿರ್ಮಾಣ ಆಗಿದೆ. ಹೀಗಾಗಿ ಹೂಡಿಕೆದಾರರು ಷೇರುಪೇಟೆಯಿಂದ ತುಸು ದೂರ ಉಳಿದರು ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 483 ಅಂಶ ಇಳಿಕೆ ಕಂಡು 65,512 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 141 ಅಂಶ ಇಳಿಕೆ ಕಂಡು 19,512 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಗರಿಷ್ಠ ಬಡ್ಡಿದರ ಮತ್ತು ಹಣದುಬ್ಬರದ ಸುಳಿಗೆ ಸಿಲುಕಿರುವ ಜಾಗತಿಕ ಆರ್ಥಿಕತೆಯ ಮೇಲೆ ಇಸ್ರೇಲ್–ಹಮಾಸ್ ಬಿಕ್ಕಟ್ಟು ಇನ್ನಷ್ಟು ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ.

ಹೀಗಾಗಿ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡುವಂತೆ ಆಯಿತು ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಹಣದುಬ್ಬರ ಏರಿಕೆ ಆದಲ್ಲಿ ಗಳಿಕೆ ಕಡಿಮೆ ಆಗಬಹುದು ಎನ್ನುವ ಆತಂಕದಿಂದಾಗಿ ಹಣಕಾಸು ಮತ್ತು ಗ್ರಾಹಕ ಬಳಕೆ ವಿಭಾಗದ ಷೇರುಗಳ ಮೌಲ್ಯ ಇಳಿಕೆ ಕಂಡಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 3.32ರಷ್ಟು ಏರಿಕೆ ಕಂಡು ಬ್ಯಾರಲ್‌ಗೆ 87.39 ಡಾಲರ್‌ಗೆ ತಲುಪಿತು.

ರಿಲಯನ್ಸ್: 'ಸ್ವರ್ಣ ಬಂಗ' ಆಭರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಜುವೆಲ್ಸ್ ಕಂಪನಿಯು 'ಸ್ವರ್ಣ ಬಂಗ' ಎನ್ನುವ ಆಭರಣಗಳ ಹೊಸ ಸಂಗ್ರಹವನ್ನು ಬಿಡುಗಡೆ ಮಾಡಿದೆ. ಬಾಲಿವುಡ್ ನಟಿ ಕರಿಷ್ಮಾ ಕಪೂರ್ ಈ ಸಂಗ್ರಹವನ್ನು ಬಿಡುಗಡೆ ಮಾಡಿದರು.

ಬಂಗಾಳವು ವೈಭವಯುತ ಕಲಾತ್ಮಕ ಪರಂಪರೆಯನ್ನು ಹೊಂದಿದೆ. ಭಾರತದ ವಿವಿಧ ವಲಯಗಳಿಂದ ಪ್ರೇರಿತವಾಗಿ ನಾವು ಅನಾವರಣಗೊಳಿಸಿದ 8ನೇ ಸರಣಿ ಇದಾಗಿದೆ.

ಸ್ವರ್ಣ ಬಂಗ ಸಂಗ್ರಹವು ಕಾಲಾತೀತ ವಿನ್ಯಾಸ, ಸೂಕ್ಷ್ಮ ಕೆತ್ತನೆಯಿಂದಾಗಿ ಗ್ರಾಹಕರಿಗೆ ಮೆಚ್ಚುಗೆಯಾಗುವ ವಿಶ್ವಾಸ ಇದೆ ಎಂದು ರಿಲಯನ್ಸ್ ಜುವೆಲ್ಸ್‌ನ ಸಿಇಒ ಸುನಿಲ್ ನಾಯಕ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಐಷಾರಾಮಿ ಮನೆಗಳಿಗೆ ಬೇಡಿಕೆ ತೀವ್ರ ಹೆಚ್ಚಳ: ಅನರಾಕ್ ವರದಿ

ತಗ್ಗಿದ ಕೈಗೆಟಕುವ ಮನೆ ಮಾರಾಟ

ನವದೆಹಲಿ (ಪಿಟಿಐ): ಬೆಂಗಳೂರು ಸೇರಿದಂತೆ ಪ್ರಮುಖ 7 ನಗರಗಳಲ್ಲಿ ಹೊಸ ಮನೆಗಳ ಮಾರಾಟದಲ್ಲಿ ಕೈಗೆಟಕುವ ಮನೆಗಳ (₹ 40 ಲಕ್ಷಕ್ಕಿಂತ ಕಡಿಮೆ ಬೆಲೆ) ಪಾಲು ಇಳಿಕೆ ಕಂಡುಬರುತ್ತಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ಹೇಳಿದೆ.

ಕೋವಿಡ್ ಸಾಂಕ್ರಾಮಿಕಕ್ಕೂ ಮುನ್ನ ಅಂದರೆ 2018ರ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಹೊಸ ಮನೆಗಳಲ್ಲಿ ಮಾರಾಟದಲ್ಲಿ ಕೈಗೆಟಕುವ ಮನೆಗಳ ಪಾಲು ಶೇ 42ರಷ್ಟು ಇತ್ತು. ಆದರೆ, 2023ರ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಶೇ 18ಕ್ಕೆ ಇಳಿಕೆ ಕಂಡಿದೆ ಎಂದು ಅದು ಮಾಹಿತಿ ನೀಡಿದೆ.

ಬೆಂಗಳೂರು, ದೆಹಲಿ–ಎನ್‌ಸಿಆರ್, ಮುಂಬೈ ಮೆಟ್ರೊಪಾಲಿಟನ್ ರೀಜನ್, ಚೆನ್ನೈ, ಕೋಲ್ಕತ್ತ, ಹೈದರಾಬಾದ್ ಮತ್ತು ಪುಣೆ ನಗರಗಳ ಮಾಹಿತಿಯನ್ನು ಸಂಸ್ಥೆಯು ನೀಡಿದೆ.

ಮುಖ್ಯಾಂಶಗಳು

- ಕೈಗೆಟಕುವ ಮನೆಗಳಿಗೆ ತಗ್ಗಿದ ಬೇಡಿಕೆ
- ಹೆಚ್ಚಿನ ಲಾಭ: ಐಷಾರಾಮಿ ಮನೆಗಳ ನಿರ್ಮಾಣಕ್ಕೆ ಕಂಪನಿಗಳ ಆಸಕ್ತಿ

ಐಷಾರಾಮಿ ಮನೆಗಳಿಗೆ ಬೇಡಿಕೆ: ಹೆಚ್ಚಿನ ಲಾಭ ಗಳಿಸುವ ಉದ್ದೇಶದಿಂದ ರಿಯಲ್ ಎಸ್ಟೇಟ್ ನಿರ್ಮಾಣಗಾರರು ಐಷಾರಾಮಿ ಮನೆಗಳ ನಿರ್ಮಾಣ ಯೋಜನೆಗಳತ್ತ ಹೆಚ್ಚು ಗಮನ ಹರಿಸಿದ್ದಾರೆ. ಕೈಗೆಟಕುವ ಮನೆಗಳ ನಿರ್ಮಾಣದಿಂದ ಬರುವ ಲಾಭದ ಪ್ರಮಾಣ ಕಡಿಮೆ. ಜಾಗ ಖರೀದಿಸುವುದರ ಮೇಲಿನ ವೆಚ್ಚವೂ ದುಬಾರಿ ಆಗುತ್ತಿರುವುರಿಂದ ಕೈಗೆಟಕುವ ಮನೆಗಳ ನಿರ್ಮಾಣ ಸಾಧ್ಯವಾಗುತ್ತಿಲ್ಲ ಎಂದು ಸಂಸ್ಥೆಯು ತಿಳಿಸಿದೆ.

₹1.5 ಕೋಟಿ ಮೌಲ್ಯದ ಐಷಾರಾಮಿ ಮನೆಗಳಿಗೆ ಬೇಡಿಕೆಯು ತೀವ್ರವಾಗಿ ಹೆಚ್ಚಾಗುತ್ತಿದೆ. 2023 ಜುಲೈ–ಸೆಪ್ಟೆಂಬರ್‌ನಲ್ಲಿ ಮಾರಾಟ ಆಗಿರುವ ಹೊಸ ಮನೆಗಳಲ್ಲಿ ಐಷಾರಾಮಿ ಮನೆಗಳ ಪಾಲು ಶೇ 27 ಇದೆ. 2018ರ ಜುಲೈ–ಸೆಪ್ಟೆಂಬರ್‌ನಲ್ಲಿ ಐಷಾರಾಮಿ ಮನೆಗಳ ಪಾಲು ಶೇ 9 ಇತ್ತು ಎಂದು ತಿಳಿಸಿದೆ.

ಕೋವಿಡ್ ಬಳಿಕ ಜನರು ದೊಡ್ಡ ಮನೆಗಳನ್ನು ಹೊಂದಲು ಹೆಚ್ಚು ಗಮನಹರಿಸುತ್ತಿದ್ದಾರೆ. ಉತ್ತಮ ಸ್ಥಳದಲ್ಲಿ ಗರಿಷ್ಠ ಸೌಲಭ್ಯಗಳನ್ನು ಹೊಂದಿರುವ ಐಷಾರಾಮಿ ಮನೆಗಳಿಗೆ ಬೇಡಿಕೆಯು ಹೆಚ್ಚಾಗುತ್ತಿದೆ ಎಂದು ಅನಾರಕ್ ಸಮೂಹದ ಪ್ರಾದೇಶಿಕ ನಿರ್ದೇಶಕ ಪ್ರಶಾಂತ್ ಠಾಕೂರ್ ತಿಳಿಸಿದ್ದಾರೆ.

ಕೆನರಾ ಬ್ಯಾಂಕ್: ಭವೇಂದ್ರ ಕುಮಾರ್ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ

ಭವೇಂದ್ರ ಕುಮಾರ್

ಬೆಂಗಳೂರು: ಕೆನರಾ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಭವೇಂದ್ರ ಕುಮಾರ್ ಸೋಮವಾರ ಅಧಿಕಾರ ವಹಿಸಿಕೊಂಡರು.

1997ರಲ್ಲಿ ಕೆನರಾ ಬ್ಯಾಂಕ್‌ನ ಅಧಿಕಾರಿಯಾಗಿ ನೇಮಕವಾದ ಅವರು, ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. 2018ರಲ್ಲಿ ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕ, 2022ರಲ್ಲಿ ಬ್ಯಾಂಕ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ ಎಂದು ಕೆನರಾ ಬ್ಯಾಂಕ್ ಪ್ರಕಟಣೆ ತಿಳಿಸಿದೆ.

ಆವಕ ತಗ್ಗಿದ ಪರಿಣಾಮ ಬೇಳೆ ಬೆಲೆ ಏರಿಕೆ

ತೊಗರಿಬೇಳೆ ಕೆ.ಜಿಗೆ ₹180

ಪ್ರಜಾವಾಣಿ ವಾರ್ತೆ

ಕಲಬುರಗಿ: ಈ ಬಾರಿ ತೊಗರಿ ಕಣಜ ಕಲಬುರಗಿಯಲ್ಲಿ ನೆಟೆ ರೋಗ ಹಾಗೂ ಅತಿವೃಷ್ಟಿಯಿಂದಾಗಿ ಇಳುವರಿ ಕಡಿಮೆಯಾಗಿದ್ದರಿಂದ ತೊಗರಿಬೇಳೆ ಬೆಲೆ ದಿಢೀರ್ ಏರಿಕೆಯಾಗಿದ್ದು, ಗ್ರಾಹಕರು ಕಂಗಾಲಾಗಿದ್ದಾರೆ. ತಿಂಗಳ ಹಿಂದೆ ₹ 130ಕ್ಕೆ ಕೆ.ಜಿ.ಯಂತೆ ಮಾರಾಟವಾಗುತ್ತಿದ್ದ ತೊಗರಿಬೇಳೆ ಇತ್ತೀಚೆಗೆ ಕೆ.ಜಿ.ಗೆ ₹ 175ರಿಂದ ₹ 180ಕ್ಕೆ ಏರಿಕೆಯಾಗಿದೆ. ಐದು ಕೆ.ಜಿ. ಪ್ಯಾಕ್ ಮಾಡಿದ ತೊಗರಿಬೇಳೆ ಬೆಲೆ ₹ 892ಕ್ಕೆ ಸಿಗುತ್ತಿದೆ.

ಮಾರುಕಟ್ಟೆಗೆ ತೊಗರಿ ಆವಕ ಗಣನೀಯವಾಗಿ ಕಡಿಮೆಯಾಗಿದ್ದು, ದರವೂ ಪ್ರತಿ ಕ್ವಿಂಟಲ್‌ಗೆ ₹ 12 ಸಾವಿರಕ್ಕೆ ಏರಿಕೆಯಾಗಿದೆ.

ಸಹಜವಾಗಿಯೇ ಬೇಳೆ ಉತ್ಪಾದನೆ ಮೇಲೆಯೂ ದರ ಏರಿಕೆ ಪರಿಣಾಮ ಬೀರಿದೆ. ಕಲಬುರಗಿಯಲ್ಲಿ 250ಕ್ಕೂ ಅಧಿಕ ದಾಲ್‌ಮಿಲ್‌ಗಳಿದ್ದು, ತೊಗರಿಯನ್ನು ಖರೀದಿಸಿ ಸಂಸ್ಕರಣೆ ಮಾಡಿ ತೊಗರಿ ಬೇಳೆಯನ್ನು ತಯಾರಿಸುತ್ತಾರೆ. ಇಲ್ಲಿನ ತೊಗರಿ ಬೇಳೆಯು ರಾಜ್ಯದ ಬೆಂಗಳೂರು, ಮಂಗಳೂರು ಅಷ್ಟೇ ಅಲ್ಲದೇ ದೂರದ ತಮಿಳುನಾಡು, ಗುಜರಾತ್‌ಗೂ ರವಾನೆಯಾಗುತ್ತದೆ.

'ತಿಂಗಳ ಹಿಂದೆ ಪ್ರತಿ ಕೆ.ಜಿ.ಗೆ ₹ 130ರಂತೆ ತೊಗರಿಬೇಳೆ ಮಾರಾಟವಾಗುತ್ತಿತ್ತು. ಇದೀಗ ₹ 175ಕ್ಕೆ ಮಾರಾಟವಾಗುತ್ತಿದೆ. ಮುಂಚೆ ಒಮ್ಮೆಲೇ ಐದು ಕೆ.ಜಿ. ಒಯ್ಯುತ್ತಿದ್ದ ಗ್ರಾಹಕರು ಈಗ ಒಂದು ಅಥವಾ ಎರಡು ಕೆ.ಜಿ. ಮಾತ್ರ ಖರೀದಿ ಮಾಡುತ್ತಿದ್ದಾರೆ' ಎಂದು ಕಲಬುರಗಿ ಕಿರಾಣಿ ಅಂಗಡಿಯೊಂದರ ಮಾಲೀಕ ಶ್ರವಣ್ ತಿಳಿಸಿದರು.

ಕಲಬುರಗಿಯ ನಾಡಾರ್ ದಾಲ್ ಮಿಲ್‌ನ ವಿಜಯನ್ ಮಾತನಾಡಿ, 'ತೊಗರಿ ಉತ್ಪಾದನೆ ಕಡಿಮೆಯಾಗಿದ್ದರಿಂದ ಬೇಡಿಕೆಯಷ್ಟು ತೊಗರಿ ದೊರೆಯುತ್ತಿಲ್ಲ. ಹೀಗಾಗಿ, ತೊಗರಿ ಬೇಳೆಯ ದರವನ್ನು ಅನಿವಾರ್ಯವಾಗಿ ಹೆಚ್ಚಳ ಮಾಡಿದ್ದೇವೆ' ಎಂದರು.

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143.50
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹127

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹10500
ಎಸಿ	₹6300
ಆರ್‌ಪಿ	₹9400
ಆರ್‌ಸಿ	₹5830

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	15000-27500
ಹೊಸತು	26000-36000
ಹಳತು	46000-48500
ಹೊನ್ನಾವರ	
ಹೊಸಚಾಲಿ	37500-41000
ಕುಮಟ	
ಚಿಪ್ಪು	3209-34669
ಕೋಕ	20109-32529
ಫ್ಯಾಕ್ಟರಿ	10169-25299
ಹಳೆಚಾಲಿ	39899-40799
ಹೊಸಚಾಲಿ	37789-40019
ಮಡಿಕೇರಿ	
ಕಚ್ಚಾ	42244-42244
ಪುತ್ತೂರು	
ಹೊಸತು	34000-45000
ಸಾಗರ	
ಬಿಳಿಗೋಟು	19119-33100
ಚಾಲಿ	32699-38709
ಕೋಕ	26099-32699
ಕೆಂಪುಗೋಟು	30599-35809
ರಾಶಿ	37899-46999
ಸಿಪ್ಪೆಗೋಟು	13300-22309
ಶಿವಮೊಗ್ಗ	
ಬೆಟ್ಟೆ	43010-52277
ಗೊರಬಲು	17009-36569
ಹೊಸತು	42049-45961
ರಾಶಿ	40009-47161
ಸರಕು	49900-79796
ಸಿದ್ದಾಪುರ	
ಬಿಳಿಗೋಟು	32299-35109
ಚಾಲಿ	38099-40299
ಕೋಕ	29099-34299
ರಾಶಿ	42699-46889
ತಟ್ಟಿಬೆಟ್ಟೆ	38099-38099
ಶಿರಸಿ	
ಬೆಟ್ಟೆ	37099-44606
ಬಿಳಿಗೋಟು	29099-36209
ಚಾಲಿ	37210-41500
ಕೆಂಪುಗೋಟು	35099-36099
ರಾಶಿ	45099-46709
ಯಲ್ಲಾಪುರ	
ಬಿಳಿಗೋಟು	29899-35530
ಚಾಲಿ	36705-40840
ಕೋಕ	23599-28829
ಕೆಂಪುಗೋಟು	32199-36766
ರಾಶಿ	44225-50679
ತಟ್ಟಿಬೆಟ್ಟೆ	40001-43090

ಮುಂಬೈ ಧಾರಣೆ

ಶೇಂಗಾ

09-10-2023

ಜಾವಾ 70/80(ಹೊಸ)	12300-12400
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	10600-10700
ದಪ್ಪ ಗುಜರಾತ್(ಹೊಸ)	11400-11500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1660)
ಒಂದು ವಾರದ ಡೆಲಿವರಿ	1625 (1655)
ಸೋಯಾ ಕಚ್ಚಾ	830 (820)
ಪಾಮ್ ವಾರದ ಡೆಲಿವರಿ	813 (803)
ಸೂರ್ಯಕಾಂತಿ ಎಣ್ಣೆ ಕಚ್ಚಾ	805(800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
57,000 (57,200)
ಬೆಳ್ಳಿ ಕೆ.ಜಿ 68,500 (69,300)

ಆವರಣದಲ್ಲಿ ಶನಿವಾರ ದಿನದ ಧಾರಣೆ

ಸಂಕ್ಷಿಪ್ತ ಸುದ್ದಿ

ಕಚ್ಚಾ ತೈಲ ಬೇಡಿಕೆ: ಅಂದಾಜು ಹೆಚ್ಚಿಸಿದ ಒಪೆಕ್

ಲಂಡನ್ (ರಾಯಿಟರ್ಸ್): ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುವ ದೇಶಗಳ ಸಂಘಟನೆಯು (ಒಪೆಕ್) ಜಾಗತಿಕ ತೈಲ ಬೇಡಿಕೆಯ ಮುನ್ನೋಟವನ್ನು ಮಧ್ಯಮಾವಧಿ ಮತ್ತು ದೀರ್ಘಾವಧಿಗೆ ಹೆಚ್ಚಳ ಮಾಡಿದೆ.

2023ರಲ್ಲಿ ತೈಲ ಬೇಡಿಕೆಯು ಪ್ರತಿ ದಿನಕ್ಕೆ 10.2 ಕೋಟಿ ಬ್ಯಾರಲ್ ಆಗಲಿದೆ. 2028ರ ವೇಳೆಗೆ 11.02 ಕೋಟಿ ಬ್ಯಾರಲ್‌ಗೆ ತಲುಪುವ ಅಂದಾಜು ಮಾಡಲಾಗಿದೆ ಎಂದು ಹೇಳಿದೆ. ಜಾಗತಿಕ ತೈಲ ಬೇಡಿಕೆಯು 2045ರ ವೇಳೆಗೆ ಪ್ರತಿ ದಿನಕ್ಕೆ 11.6 ಕೋಟಿ ಬ್ಯಾರಲ್‌ಗೆ ತಲುಪಲಿದೆ ಎಂದು ಅದು ಹೇಳಿದೆ. ಕಳೆದ ವರ್ಷ ಮಾಡಿದ್ದ ಅಂದಾಜಿನಲ್ಲಿ ಪ್ರತಿ ದಿನಕ್ಕೆ 11 ಕೋಟಿ ಬ್ಯಾರಲ್‌ನಷ್ಟು ಬೇಡಿಕೆ ಬರಲಿದೆ ಎಂದು ಹೇಳಿತ್ತು. ಇದಕ್ಕೆ ಹೋಲಿಸಿದರೆ ಬೇಡಿಕೆಯು ದಿನಕ್ಕೆ 60 ಲಕ್ಷ ಬ್ಯಾರಲ್‌ನಷ್ಟು ಹೆಚ್ಚಾಗಲಿದೆ ಎಂದು ತಿಳಿಸಿದೆ.

ನಿರುದ್ಯೋಗ: ನಗರದಲ್ಲಿ ಇಳಿಕೆ

ನವದೆಹಲಿ (ಪಿಟಿಐ): ನಗರ ಪ್ರದೇಶದಲ್ಲಿ ನಿರುದ್ಯೋಗ ಪ್ರಮಾಣವು 2022ರ ಏಪ್ರಿಲ್–ಜೂನ್ ಅವಧಿಯಲ್ಲಿ ಶೇ 7.6ರಷ್ಟು ಇದ್ದಿದ್ದು 2023ರ ಏಪ್ರಿಲ್–ಜೂನ್ ಅವಧಿಯಲ್ಲಿ ಶೇ 6.6ಕ್ಕೆ ಇಳಿಕೆ ಕಂಡಿದೆ ಎಂದು ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿ (ಎನ್‌ಎಸ್‌ಎಸ್‌ಒ) ತಿಳಿಸಿದೆ.ಕೋವಿಡ್ ತಡೆಗೆ ದೇಶದಾದ್ಯಂತ ಹಲವು ನಿರ್ಬಂಧ ವಿಧಿಸಲಾಗಿತ್ತು. 2022ರ ಏಪ್ರಿಲ್–ಜೂನ್ ಅವಧಿಯಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚಿಗೆ ಇರಲು ಇದು ಕಾರಣ ಆಗಿತ್ತು ಎಂದು ಹೇಳಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಯೋಜನಾ ವಿಭಾಗ, ಪಶ್ಚಿಮ ವಲಯ, ಜಂಟಿ ಆಯುಕ್ತರು (ಪಶ್ಚಿಮ) ಕಛೇರಿ ಆವರಣ, 2ನೇ ಮಹಡಿ, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560020.
ಸಂಖ್ಯೆ: ಕಾಅ/ಯೋಪ/ಟೆಂಡರ್/06/2023–24 ದಿನಾಂಕ: 09–10–2023
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ) (ಸರ್ವೀಸ್ ಟೆಂಡರ್) – (2ನೇ ಕರೆ)
(ದ್ವಿ–ಲಕೋಟೆ ಪದ್ಧತಿ) (ಜಿಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ – ಪಶ್ಚಿಮ), ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಗೆ ವಿವರಿಸಿದ ಕಾಮಗಾರಿಗಾಗಿ ಹೆಸರಾಂತ ಸೇವಾ ಪೂರೈಕೆದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ಬಿಬಿಎಂಪಿ, ಪಶ್ಚಿಮ ವಲಯದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಗಳು ಮತ್ತು ಹೆರಿಗೆ ಕೇಂದ್ರಗಳಿಗೆ ಸ್ವಚ್ಛತಾ ಸಾಮಗ್ರಿಗಳೊಂದಿಗೆ ಹೌಸ್‌ಕೀಪಿಂಗ್ ಸಿಬ್ಬಂದಿಯನ್ನು 12 ತಿಂಗಳ ಅವಧಿಗೆ ಪೂರೈಸುವುದು.	47000000/-	705000/-

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://eproc.karnataka.gov.in ನಲ್ಲಿ ದಿನಾಂಕ: 11–10–2023 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ: 16–10–2023 ರಂದು ಸಂಜೆ 4.00 ಗಂಟೆಗೆ. 3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: 21–10–2023 ರಂದು ಸಂಜೆ 4.00 ಗಂಟೆವರೆಗೆ. 4) ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ: 25–10–2023 ರಂದು ಸಂಜೆ 4.30 ಗಂಟೆಗೆ (ಸಾಧ್ಯವಾದಲ್ಲಿ). ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ–ಪಶ್ಚಿಮ, ಬಿಬಿಎಂಪಿ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ಸಂಖ್ಯೆ:ಕ.ವಿ.ನಿ.ಆ–5/ಉನಿ(ಜ)/2023–24/ಎಫ್‌ಟಿಎಸ್–1345/657 ದಿನಾಂಕ: 27–09–2023
ಸಾರ್ವಜನಿಕ ವಿಚಾರಣಾ ಬಗ್ಗೆ ಸೂಚನೆ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ದಿನಾಂಕ: 22–09–2023 ರ ಅಧಿಸೂಚನೆ ಸಂಖ್ಯೆ: ಉನಿ(ಜ)/2023–24/ಎಫ್.ಟಿ.ಎಸ್–1345 ರಲ್ಲಿ ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಬಹು ವಾರ್ಷಿಕ ಪ್ರಸರಣೆ, ವಿತರಣೆ ಮತ್ತು ಸಗಟು ಮಾರಾಟ) ವಿನಿಯಮಗಳು, 2023 ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಸಾರ್ವಜನಿಕರಿಂದ / ಆಸಕ್ತರಿಂದ ವಿಮರ್ಶೆ / ಅಭಿಪ್ರಾಯ / ಸಲಹೆ / ಆಕ್ಷೇಪಣೆಗಳನ್ನು ಆಹ್ವಾನಿಸಿತ್ತು. ಸದರಿ ಕರಡು ವಿನಿಯಮಗಳನ್ನು ಆಯೋಗದ ಅಂತರ್ಜಾಲ ತಾಣ: https://kerc.karnataka.gov.in ನಲ್ಲಿ ಪ್ರಕಟಿಸಲಾಗಿತ್ತು.
ಆಯೋಗವು ಈ ವಿಷಯದಲ್ಲಿ ಭಾಗಿದಾರರು / ಆಸಕ್ತರ ಅಭಿಪ್ರಾಯಗಳನ್ನು ಪಡೆಯಲು ದಿನಾಂಕ: 25–10–2023 ರಂದು 11.00 ಗಂಟೆಗೆ ನಂ.16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560052 ರ 1ನೇ ಮಹಡಿಯಲ್ಲಿರುವ ಆಯೋಗದ ಕೋರ್ಟ್ ಹಾಲ್‌ನಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಡೆಸಲಾಗುವುದು. ಆಸಕ್ತ ವ್ಯಕ್ತಿಗಳು / ಭಾಗಿದಾರರು ಸದರಿ ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಲಿಖಿತ / ಮೌಖಿಕ ಅಭಿಪ್ರಾಯಗಳನ್ನು ಆಯೋಗದ ಮುಂದೆ ಸಲ್ಲಿಸಬಹುದಾಗಿದೆ.
ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
ವಾಸಾಸಂಇ/ವಾ.ಪ್ರ/1634/2023–24

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕು.ಕ. ಸೊಸೈಟಿ
ಉತ್ತರ–ಕನ್ನಡ, ಕಾರವಾರ–581301 ಫೋನಂ: 08382–222351
No. DPMU/NHM/ RBSK/305/2023-24 DATE: 07-10-2023
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಉತ್ತರ ಕನ್ನಡ ಜಿಲ್ಲೆಯ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ 2023–24ನೇ ಆರ್ಥಿಕ ಸಾಲಿಗೆ ಷರತ್ತಿಗೊಳಪಟ್ಟು ಹೊರಗುತ್ತಿಗೆ ಆಧಾರದ ಮೇಲೆ ಎಲ್ಲ 11 ತಾಲೂಕುಗಳಿಗೆ ಪ್ರತಿ ತಾಲೂಕಿಗೆ 02 ಟ್ಯಾಕ್ಸಿ ವಾಹನಗಳ ಜೊತೆಗೆ ಚಾಲಕರ ಸೇವೆಯನ್ನು ಪಡೆದುಕೊಳ್ಳಲು ಈ ಕೆಳಕಾಣಿಸಿದಂತೆ ಪೂರೈಸಲು ಅರ್ಹ ಸಂಸ್ಥೆ/ಏಜೆನ್ಸಿಗಳಿಂದ ಈ ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ನೋಡಬಹುದಾಗಿದೆ.

ಕ್ರಸಂ.	ಮಾಹಿತಿ	ದಿನಾಂಕ ಮತ್ತು ಸಮಯ	ಷರಾ
1	ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	09–10–2023 ಬೆಳಿಗ್ಗೆ 10:00 ಘಂಟೆ	
2	ಆಕ್ಷೇಪಣೆಗಳಿಗೆ ಅಂತಿಮ ದಿನಾಂಕ	20–10–2023 ಸಂಜೆ 05:00 ಘಂಟೆಯವರೆಗೆ	
3	ಟೆಂಡರ್ ಅರ್ಜಿ ಹಾಕಲು ಅಂತಿಮ ದಿನಾಂಕ	24–10–2023 ಸಂಜೆ 05:30 ಘಂಟೆಯವರೆಗೆ	
4	ಇ–ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ	24–10–2023 ಬೆಳಿಗ್ಗೆ 10:30 ಘಂಟೆ	

ಟೆಂಡರ್ ಅಂದಾಜು ಒಟ್ಟು ಮೊತ್ತ: 76.00 ಲಕ್ಷ,ಇ.ಎಂ.ಡಿ : Rs 1,90,000.00.
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳು, ಉತ್ತರ ಕನ್ನಡ, ಕಾರವಾರ
DIPR/KWR/KSMCA/264/23-24 Dt.09.10.2023

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
Part-Time Jobs
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.
ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.
General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673
ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ,ಬ್ರಿಟಾನಿಯಾ, ಟಿ.ವಿ.ಎಸ್, MNCಗಳಿಗೆ SSLC, PUC, Degree, Diplomaದವರು 18,000- 56,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036125229
ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9148525233, 7899235388
Domestic Helpers / Housekeeping
NO FEE (labour contractor) ಬೇಕಾಗಿದ್ದಾರೆ TATA Warehouse: Hoskote, Bangalore, Salary 18000/- , OT. 128 per/ hour work: Packing Loading helpers, 250 Nos Room &Food (Deduct) Ph 9844434996/ 9035240677 SSLC Pass/Fail. Male Female
Wanted
ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಊಟ ವಸತಿ 18,500 - 67,000/- SSLC, PUC,Degree ಸಂಪರ್ಕಿಸಿ 9945791526, 8861041526
Multiple Vacancy
REQUIRED SUPERVISOR, Telecaller & Field Executive For Bank_Loan Collection. Direct Recruitment to Company:- 7899040499, 9620206756.
ವ್ಯಾಪಾರ
Business to Business
Others
ಮಹಿಳೆಯರಿಗೆ ರೇಷ್ಮೆ ಸೀರೆ, ಸಿಲ್ಕ್ ಸೀರೆ, ಕಾಟನ್ ಸೀರೆ, ಚೂಡಿದಾರಗಳು, ಕಂತಿನ ಮುಖಾಂತರ ಮಾರಾಟ ಮಾಡಲಾಗುತ್ತದೆ ಸಂಪರ್ಕಿಸಿ: 8892501007/ 9606701007
ಪ್ರವಾಸ
Travel
12 ದಿನಗಳ ನೇಪಾಳ, ಮುಕ್ತಿನಾಥಯಾತ್ರೆ. 10 ದಿನಗಳ ಗುಜರಾತ್. 12 ದಿನಗಳ ಮಧ್ಯಪ್ರದೇಶ. 8 ದಿನಗಳ ಕಾಶಿ,ನೈಮಿಶಾರಣ್ಯ. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ 9980270467, 9740228186, 080-41467722
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು
ಸಾರ್ವಜನಿಕ ಪ್ರಕಟಣೆ
GHOUSIA INDUSTRIAL TRAINING INSTITUTE
Managed by: Ghousia Industrial & Engineering Trust
Recognised & Aided by the Government of Karnataka & Permanently Affiliated to the National Council for Vocational Training, Government of India
Website: www.ghousiaiti.org Email: ghousiaiti@yahoo.co.in
Hosur Road, DRC Post, Bengaluru- 560029. Phone: 080-25536268
ಪತ್ರಿಕಾ ಪ್ರಕಟಣೆ
ಗೌಸಿಯಾ ಖಾಸಗಿ ಅನುದಾನಿತ ಕೈಗಾರಿಕಾ ಸಂಸ್ಥೆಯಲ್ಲಿ ಶ್ರೀ ನರಸಿಂಹಯ್ಯ ನವರು ದಿನಾಂಕ: 09/10/1997ರಿಂದ ದಿನಾಂಕ:22/02/2015 ರವರೆಗೆ ಅನುದಾನಿತ ಹುದ್ದೆಯಲ್ಲಿ ಕಾರ್ಯಗಾರ ಸಹಾಯಕರಾಗಿ ಕಾರ್ಯನಿರ್ವಹಿಸಿದ್ದು, ದಿನಾಂಕ: 22/02/2015ರಂದು ಅಪಘಾತಕ್ಕೆ ಗುರಿಯಾಗಿ ಮೃತಪಟ್ಟಿರುತ್ತಾರೆ. ತದನಂತರ ಸದರಿ ನೌಕರರ ಅವಲಂಬಿತರಿಗೆ ನಿಯಮಾನುಸಾರ ಸರ್ಕಾರದಿಂದ ಬರಬೇಕಾದ ಪಿಂಚಣಿ ಗ್ರಾಚುಯಿಟಿ ಮತ್ತು ಇಲಾಖೆಯ ಎಲ್ಲಾ ಆರ್ಥಿಕ ಸೌಲಭ್ಯಗಳು ನನಗೆ ನೀಡಬೇಕೆಂದು ದಿ॥ ನರಸಿಂಹಯ್ಯ ಕಾ.ಸ.ರವರ ಸಹೋದರಿಯಾದ ಕುಮಾರಿ ಶ್ರೀ ಜಯಲಕ್ಷ್ಮಿ ಬಿ.ಟಿ.ರವರು ಈಗಾಗಲೇ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುವ ರಿಟ್ ಅರ್ಜಿ ಸಂಖ್ಯೆ: 5899/2022 ಆದೇಶ ದಿನಾಂಕ:31/03/2023.
ಆದರೆ ಸದರಿ ನೌಕರರು ವಿವಾಹಿತರಾಗಿದ್ದು ಅವರ ಧರ್ಮಪತ್ನಿ ಅಥವಾ ಮಕ್ಕಳಿದ್ದಲ್ಲಿ ಈ ಪತ್ರಿಕಾ ಪ್ರಕಟಣೆಯಾದ 20 ದಿನದೊಳಗಾಗಿ ಸಂಬಂಧಿಸಿದ ಸೂಕ್ತ ದಾಖಲಾತಿಗಳೊಂದಿಗೆ ಪ್ರಾಚಾರ್ಯರು ಗೌಸಿಯಾ ಕೈಗಾರಿಕಾ ತರಬೇತಿ ಸಂಸ್ಥೆ, ಬೆಂ–29.ಇವರನ್ನು ಖುದ್ದಾಗಿ ಸಂಪರ್ಕಿಸಿ ಅವರಿಗೆ ದಾಖಲಾತಿಗಳನ್ನು ನೀಡುವುದು. ಇಲ್ಲದಿದ್ದಲ್ಲಿ ಯಾವುದೇ ತಂಟೆ ತಕರಾರು ಇಲ್ಲವೆಂದು ಪರಿಗಣಿಸಿ ಸದರಿ ನೌಕರನು ದಿ॥ ನರಸಿಂಹಯ್ಯರವರ ಸೇವಾಪುಸ್ತಕದಲ್ಲಿ ನಾಮನಿರ್ದೇಶನ ನೀಡಿರುವ ಮತ್ತು ಮಾನ್ಯ ಉಚ್ಚ ನ್ಯಾಯಾಲಯ ದಾವೆ ಹೂಡಿರುವ ಸದರಿ ನೌಕರನಿಗೆ ಸೇರಬೇಕಾದ ಎಲ್ಲಾ ಇಲಾಖೆಯ ಆರ್ಥಿಕ ಸೌಲಭ್ಯಗಳು ಕುಮಾರಿ ಶ್ರೀ ಜಯಲಕ್ಷ್ಮಿ ಬಿ.ಟಿ.ಯವರಿಗೆ ನೀಡಲಾಗುವುದೆಂದು ಈ ಮೂಲಕ ಪತ್ರಿಕಾ ಪ್ರಕಟಣೆ ನೀಡಲಾಗಿದೆ. ಈ ಪತ್ರಿಕಾ ಪ್ರಕಟನೆಯನ್ನು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯು ಮಾನ್ಯ ಆಯುಕ್ತರು ಹಾಗೂ ಜಂಟಿ ನಿರ್ದೇಶಕರವರ ಆದೇಶದಂತೆ ನೀಡಲಾಗಿದೆ.
ಇಂತಿ, ಪ್ರಾಚಾರ್ಯರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752 | +91 9845114560 | +91 9900428036 | +91 9731810277 | 080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 | Tanveer: +91 9886213331 | Ravichandra: +91 9901641752 | Anitha: +91 9900428036

ಮಿಂಚಿದ ಯಂಗ್ • ಸ್ಯಾಂಟ್ನರ್ ಆಲ್‌ರೌಂಡ್ ಆಟ • ನೆದರ್ಲೆಂಡ್ಸ್‌ಗೆ ಮತ್ತೆ ಸೋಲು

ನ್ಯೂಜಿಲೆಂಡ್ ಗೆಲುವಿನ ಓಟ

ಹೈದರಾಬಾದ್ (ಪಿಟಿಐ): ವಿಲ್ ಯಂಗ್, ರಚಿನ್ ರವೀಂದ್ರ ಮತ್ತು ಟಾಮ್ ಲಥಾಮ್ ಗಳಿಸಿದ ಅರ್ಧಶತಕಗಳು ಮತ್ತು ಮಿಚೆಲ್ ಸ್ಯಾಂಟ್ನರ್ ಅವರ ಕೈಚಳಕ, ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ನ್ಯೂಜಿಲೆಂಡ್ ತಂಡಕ್ಕೆ ಸತತ ಎರಡನೇ ಗೆಲುವು ತಂದುಕೊಟ್ಟಿತು.

ರಾಜೀವ್‌ಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಕಿವೀಸ್ ತಂಡ 99 ರನ್‌ಗಳಿಂದ ನೆದರ್ಲೆಂಡ್ಸ್ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ನ್ಯೂಜಿಲೆಂಡ್, ನಿಗದಿತ ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 322 ರನ್ ಪೇರಿಸಿತು. ಆರಂಭಿಕ ಬ್ಯಾಟರ್ ಯಂಗ್ (70; 80 ಎ., 4X7, 6X2), ಯುವ ಆಟಗಾರ ರಚಿನ್ (51; 51 ಎ., 4X3, 6X1) ಮತ್ತು ನಾಯಕ ಲಥಾಮ್ (53; 46 ಎ., 4X6, 6X1) ಅವರು ತಂಡದ ಸವಾಲಿನ ಮೊತ್ತಕ್ಕೆ ಕಾರಣರಾದರು.

ನೆದರ್ಲೆಂಡ್ಸ್ ತಂಡದ ಹೋರಾಟ 46.3 ಓವರ್‌ಗಳಲ್ಲಿ 223 ರನ್‌ಗಳಿಗೆ ತೆರೆಕಂಡಿತು. 59 ರನ್‌ಗಳಿಗೆ ಐದು ವಿಕೆಟ್ ಪಡೆದ ಎಡಗೈ ಸ್ಪಿನ್ನರ್ ಮಿಚೆಲ್ ಸ್ಯಾಂಟ್ನರ್, ಡಚ್ ತಂಡದ ಪತನಕ್ಕೆ ಕಾರಣರಾದರು. ಮೊದಲ ಪಂದ್ಯದಲ್ಲಿ ಪಾಕಿಸ್ತಾನಕ್ಕೆ ಶರಣಾಗಿದ್ದ ಸ್ಕಾಟ್ ಎಡ್ವರ್ಡ್ಸ್ ಬಳಗಕ್ಕೆ ಎದುರಾದ ಸತತ ಎರಡನೇ ಸೋಲು ಇದು.

ಸವಾಲಿನ ಗುರಿ ಬೆನ್ನಟ್ಟಿದ ನೆದರ್ಲೆಂಡ್ಸ್ ಪರ ಕಾಲಿನ್ ಎಕರ್ಮನ್ (69; 73 ಎ., 4X5) ಮಾತ್ರ ಛಲದ ಆಟವಾಡಿದರು. ಇತರ ಬ್ಯಾಟರ್‌ಗಳು ಸ್ಯಾಂಟನರ್ ಮತ್ತು ಮ್ಯಾಟ್ ಹೆನ್ರಿ (40ಕ್ಕೆ 3) ಅವರ ದಾಳಿಯನ್ನು ಎದುರಿಸಿ ನಿಲ್ಲುವಲ್ಲಿ ವಿಫಲರಾದರು.

ವಿಕ್ರಮ್‌ಜೀತ್ ಸಿಂಗ್ (12) ಅವರ ವಿಕೆಟ್ ಪಡೆದ ಹೆನ್ರಿ, ಎದುರಾಳಿ ತಂಡಕ್ಕೆ ಮೊದಲ ಆಘಾತ ನೀಡಿದರು. ಇನ್ನೊಬ್ಬ ಆರಂಭಿಕ ಬ್ಯಾಟರ್ ಮ್ಯಾಕ್ಸ್ ಒಡೋವ್ಡ್ (16) ಅವರನ್ನು ಸ್ಯಾಂಟ್ನರ್ ಪೆವಿಲಿಯನ್‌ಗೆ ಕಳುಹಿಸಿದರು.

ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಉತ್ತಮ ಆರಂಭ ಪಡೆದರೂ, ದೊಡ್ಡ ಜತೆಯಾಟ ನೀಡುವಲ್ಲಿ ವಿಫಲರಾದರು. ಆಗಿಂದಾಗ್ಗೆ ವಿಕೆಟ್‌ಗಳನ್ನು ಕಳೆದುಕೊಳ್ಳುತ್ತಾ ಸೋಲಿನ ಹಾದಿ ಹಿಡಿಯಿತು.

ಉತ್ತಮ ಆರಂಭ: ನ್ಯೂಜಿಲೆಂಡ್ ತಂಡಕ್ಕೆ ಕಾನ್ವೆ (32) ಮತ್ತು ಯಂಗ್ ಅವರು ಮೊದಲ ವಿಕೆಟ್‌ಗೆ 67ರನ್ ಸೇರಿಸಿ ಭದ್ರ ಬುನಾದಿ ಹಾಕಿಕೊಟ್ಟರು.

ನೆದರ್ಲೆಂಡ್ಸ್ ವೇಗಿಗಳು ಮೂರು 'ಮೇಡನ್' ಓವರ್‌ಗಳನ್ನು ಹಾಕುವ ಮೂಲಕ ಕಿವೀಸ್ ಆರಂಭಿಕ ಬ್ಯಾಟರ್‌ಗಳನ್ನು ಕಾಡಿದ್ದರು. ಆದರೆ ಪರಿಸ್ಥಿತಿಗೆ ಹೊಂದಿಕೊಂಡ ಬಳಿಕ ಇವರಿಬ್ಬರೂ ರಟ್ಟೆಯರಳಿಸಿದರು. ರನ್ ವೇಗ ಹೆಚ್ಚಿಸುವ ಭರದಲ್ಲಿ ಕಾನ್ವೆ, ರೊಲಾಫ್ ವ್ಯಾನ್ ಡೆರ್ ಮರ್ವ್‌ಗೆ ವಿಕೆಟ್ ಒಪ್ಪಿಸಿದರು.

ಕಳೆದ ಪಂದ್ಯದ 'ಹೀರೊ' ರಚಿನ್ ಅವರು ಯಂಗ್ ಜತೆ ಎರಡನೇ ವಿಕೆಟ್‌ಗೆ 77 ರನ್ ಕಲೆಹಾಕಿದರು. ಇವರಿಬ್ಬರು ಔಟಾದ ಬಳಿಕ ಮಿಚೆಲ್ (48) ಮತ್ತು ಲಥಾಮ್ ಅವರು ಇನಿಂಗ್ಸ್ ಬೆಳೆಸಿದರು.

ಅಂತಿಮ ಓವರ್‌ಗಳಲ್ಲಿ ಸ್ಯಾಂಟ್ನರ್ (ಔಟಾಗದೆ 36, 17 ಎ, 4X3, 6X2) ಅಬ್ಬರಿಸಿದ್ದರಿಂದ ತಂಡದ ಮೊತ್ತ 300ರ ಗಡಿ ದಾಟಿತು. ಕೊನೆಯ ಮೂರು ಓವರ್‌ಗಳಲ್ಲಿ ಕಿವೀಸ್, 50 ರನ್ ಕಲೆಹಾಕಿತು.

ಸಂಕ್ಷಿಪ್ತ ಸ್ಕೋರ್: ನ್ಯೂಜಿಲೆಂಡ್ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 322 (ಡೆವೊನ್ ಕಾನ್ವೆ 32, ವಿಲ್ ಯಂಗ್ 70, ರಚಿನ್ ರವೀಂದ್ರ 51, ಡೆರಿಲ್ ಮಿಚೆಲ್ 48, ಟಾಮ್ ಲಥಾಮ್ 53, ಮಿಚೆಲ್ ಸ್ಯಾಂಟ್ನರ್ ಔಟಾಗದೆ 36, ಆರ್ಯನ್ ದತ್ 62ಕ್ಕೆ 2, ಪಾಲ್ ವ್ಯಾನ್ ಮೀಕೆರೆನ್ 59ಕ್ಕೆ 2, ರೊಲಾಫ್ ವ್ಯಾನ್ ಡೆರ್ ಮರ್ವ್ 56ಕ್ಕೆ 2)

ನೆದರ್ಲೆಂಡ್ಸ್: 46.3 ಓವರ್‌ಗಳಲ್ಲಿ 223 (ಕಾಲಿನ್ ಎಕರ್ಮನ್ 69, ತೇಜಾ ನಿಡಮಾನುರು 21, ಸ್ಕಾಟ್ ಎಡ್ವರ್ಡ್ಸ್ 30, ಸೈಬ್ರಾಂಡ್ 29, ಮಿಚೆಲ್ ಸ್ಯಾಂಟ್ನರ್ 59ಕ್ಕೆ 5, ಮ್ಯಾಟ್ ಹೆನ್ರಿ 40ಕ್ಕೆ 3) **ಫಲಿತಾಂಶ:** ನ್ಯೂಜಿಲೆಂಡ್‌ಗೆ 99 ರನ್ ಗೆಲುವು

ವಿಕೆಟ್ ಪಡೆದ ನ್ಯೂಜಿಲೆಂಡ್ ತಂಡದ ಮಿಚೆಲ್ ಸ್ಯಾಂಟ್ನರ್ (ಬಲದಿಂದ ಎರಡನೆಯವರು) ಅವರನ್ನು ಸಹ ಆಟಗಾರರು ಅಭಿನಂದಿಸಿದರು –ಎಎಫ್‌ಪಿ ಚಿತ್ರ

ಇಂಗ್ಲೆಂಡ್‌ಗೆ ಮೊದಲ ಜಯ ನಿರೀಕ್ಷೆ

ಧರ್ಮಶಾಲಾದಲ್ಲಿ ಇಂದು ಬಾಂಗ್ಲಾದೇಶ ವಿರುದ್ಧ ಸೆಣಸು

ಧರ್ಮಶಾಲಾ (ಪಿಟಿಐ): ವಿಶ್ವಕಪ್ ಟೂರ್ನಿಯ ಆರಂಭಿಕ ಪಂದ್ಯದಲ್ಲಿ ನ್ಯೂಜಿಲೆಂಡ್ ಕೈಯಲ್ಲಿ ಎದುರಾಗಿದ್ದ ಸೋಲಿನ ಆಘಾತದಿಂದ ಹೊರಬರುವ ಪ್ರಯತ್ನದಲ್ಲಿರುವ ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡ, ಮಂಗಳವಾರ ಇಲ್ಲಿ ಬಾಂಗ್ಲಾದೇಶ ವಿರುದ್ಧ ಹಣಾಹಣಿ ನಡೆಸಲಿದೆ.

ನ್ಯೂಜಿಲೆಂಡ್ ಎದುರು ಅನುಭವಿಸಿದ್ದ 9 ವಿಕೆಟ್‌ಗಳ ಸೋಲು ಇಂಗ್ಲೆಂಡ್‌ಗೆ ಟೂರ್ನಿಯ ಆರಂಭದಲ್ಲೇ ಎಚ್ಚರಿಕೆಯನ್ನು ನೀಡಿದೆ. ಆದ್ದರಿಂದ ಬಾಂಗ್ಲಾ ವಿರುದ್ಧದ ಪಂದ್ಯದಲ್ಲಿ ತಂಡದ ಆಟಗಾರರು ಪುಟಿದೆದ್ದು ನಿಲ್ಲುವರು ಎಂಬ ವಿಶ್ವಾಸವನ್ನು ನಾಯಕ ಜೋಸ್ ಬಟ್ಲರ್ ಹೊಂದಿದ್ದಾರೆ.

ಅಹಮದಾಬಾದ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ಇಂಗ್ಲೆಂಡ್ 282 ರನ್ ಪೇರಿಸಿತ್ತು. ಡೆವೊನ್ ಕಾನ್ವೆ ಮತ್ತು ರಚಿನ್ ರವೀಂದ್ರ ಅವರ ಅಬ್ಬರದ ಶತಕದ ನೆರವಿನಿಂದ ನ್ಯೂಜಿಲೆಂಡ್, 37 ಓವರ್‌ಗಳಲ್ಲಿ ಕೇವಲ ಒಂದು ವಿಕೆಟ್ ಕಳೆದುಕೊಂಡು ಗೆಲುವು ಸಾಧಿಸಿತ್ತು.

ಕಿವೀಸ್ ಬ್ಯಾಟರ್‌ಗಳು ಇಂಗ್ಲೆಂಡ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ್ದರು. ನ್ಯೂಜಿಲೆಂಡ್‌ನ ವೇಗಿಗಳಾದ ಟ್ರೆಂಟ್ ಬೌಲ್ಟ್, ಮ್ಯಾಟ್ ಹೆನ್ರಿ ಅವರು ಇಂಗ್ಲೆಂಡ್ ಬ್ಯಾಟರ್‌ಗಳಿಗೆ ಕಡಿವಾಣ ತೊಡಿಸಿದ್ದರು. ಆದರೆ ಅದೇ ಪಿಚ್‌ನಲ್ಲಿ ಇಂಗ್ಲೆಂಡ್‌ನ ಬೌಲರ್‌ಗಳಾದ ಕ್ರಿಸ್ ವೋಕ್ಸ್, ಮಾರ್ಕ್ ವುಡ್ ಮತ್ತು ಸ್ಯಾಮ್ ಕರನ್ ಅವರು ಪ್ರಭಾವಿ ಎನಿಸಿರಲಿಲ್ಲ. ಕಾನ್ವೆ ಮತ್ತು ರಚಿನ್ ಮುರಿಯದ ಎರಡನೇ ವಿಕೆಟ್‌ಗೆ 272 ರನ್‌ಗಳ ಜತೆಯಾಟ ನೀಡಿದ್ದರು.

ಇದೇ ಕ್ರೀಡಾಂಗಣದಲ್ಲಿ ನಡೆದಿದ್ದ ತನ್ನ ಮೊದಲ ಪಂದ್ಯದಲ್ಲಿ ಅಫ್ಗಾನಿಸ್ತಾನ ತಂಡವನ್ನು ಮಣಿಸಿರುವ ಬಾಂಗ್ಲಾದೇಶ ತಂಡ ಆತ್ಮವಿಶ್ವಾಸದಲ್ಲಿದ್ದು, ಇಂಗ್ಲೆಂಡ್‌ಗೆ ಪ್ರಬಲ ಪೈಪೋಟಿ ಒಡ್ಡುವ ನಿರೀಕ್ಷೆಯಿದೆ.

ನಾಯಕ ಶಕೀಬ್ ಅಲ್ ಹಸನ್ ಅವರು ಯಾವುದೇ ಎದುರಾಳಿಗೂ ಸವಾಲಾಗಿ ಪರಿಣಮಿಸಬಲ್ಲರು. ಅಗ್ರ ಕ್ರಮಾಂಕದ ಬ್ಯಾಟರ್‌ಗಳಾದ ಲಿಟನ್ ದಾಸ್, ಮೆಹಿದಿ ಹಸನ್ ಮಿರಾಜ್ ಮತ್ತು ನಜ್ಮುಲ್ ಹೊಸೇನ್ ಶಾಂತೊ ಅವರು ಈಚೆಗಿನ ಕೆಲ ವರ್ಷಗಳಲ್ಲಿ ಉತ್ತಮ ಪ್ರದರ್ಶನ ನೀಡುತ್ತಾ ಬಂದಿದ್ದಾರೆ.

'ಔಟ್‌ಫೀಲ್ಡ್ ಗುಣಮಟ್ಟ ಕಳಪೆ': ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್ ಅವರು ಧರ್ಮಶಾಲಾ ಅಂಗಳದ ಔಟ್‌ಫೀಲ್ಡ್‌ನ ಗುಣಮಟ್ಟದ ಬಗ್ಗೆ ಅಸಮಾಧಾನ ಹೊರಹಾಕಿದ್ದಾರೆ. ಬಾಂಗ್ಲಾ ಎದುರು ಸೋತಿದ್ದ ಅಫ್ಗಾನಿಸ್ತಾನ ತಂಡದ ಕೋಚ್ ಜೊನಾಥನ್ ಟ್ರಾಟ್ ಅವರೂ ಔಟ್‌ಫೀಲ್ಡ್ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ್ದರು.

ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್ ಸೋಮವಾರ ತಾಲೀಮು ನಡೆಸಿದರು –ಪಿಟಿಐ ಚಿತ್ರ

'ಔಟ್‌ಫೀಲ್ಡ್ ಗುಣಮಟ್ಟ ಕಳಪೆ ಯಾಗಿದೆ ಎಂಬುದು ನನ್ನ ಅಭಿಪ್ರಾಯ. ಚೆಂಡನ್ನು ತಡೆಯಲು ಡೈವ್ ಅಥವಾ ಫೀಲ್ಡಿಂಗ್ ಮಾಡುವಾಗ ಜಾಗರೂಕತೆ ವಹಿಸಬೇಕಾಗುತ್ತದೆ' ಎಂದರು.

'ಯಾವುದೇ ಅಂಗಳದಲ್ಲಿ ಆಡು ವಾಗಲೂ ಗಾಯ ಉಂಟಾಗಬಹುದು. ಆದರೆ ಗಾಯಗೊಳ್ಳುವ ಸಾಧ್ಯತೆಯಿದೆ ಎಂಬ ಭಯವನ್ನು ಮನಸ್ಸಿನಲ್ಲಿಟ್ಟುಕೊಂಡು ಪಂದ್ಯಕ್ಕಾಗಿ ಕಣಕ್ಕಿಳಿಯುವುದು ಒಳ್ಳೆಯ ಬೆಳವಣಿಗೆಯಲ್ಲ' ಎಂದು ಅಭಿಪ್ರಾಯಪಟ್ಟರು.

ಬಾಂಗ್ಲಾ– ಅಫ್ಗನ್ ಪಂದ್ಯ ವೇಳೆ ಚೆಂಡನ್ನು ಹಿಡಿಯಲು ಓಡುವಾಗ ಫೀಲ್ಡರ್‌ಗಳು ಹಲವು ಸಲ ಜಾರಿಬಿದ್ದಿದ್ದರು. ಟೂರ್ನಿಯ ಆರಂಭದಲ್ಲೇ ಯಾವುದೇ ಪ್ರಮುಖ ಆಟಗಾರ ಗಾಯಗೊಂಡರೆ ಅದು ತಂಡಕ್ಕೆ ಹಿನ್ನಡೆ ಉಂಟುಮಾಡಲಿದೆ. ಅಂತಹ ಸನ್ನಿವೇಶ ಎದುರಾಗದಂತೆ ನೋಡಿಕೊಳ್ಳುವ ಹೆಚ್ಚುವರಿ ಸವಾಲು ಕೂಡಾ ಉಭಯ ತಂಡಗಳ ಮೇಲಿವೆ.

ಇಂಗ್ಲೆಂಡ್ ತಂಡ ಗೆಲ್ಲುವ 'ಫೇವರಿಟ್' ಎನಿಸಿದೆಯಾದರೂ, ಅಚ್ಚರಿ ಉಂಟುಮಾಡಬಲ್ಲ ಸಾಮರ್ಥ್ಯ ಬಾಂಗ್ಲಾಕ್ಕೆ ಇರುವುದಿಂದ ಈ ಪಂದ್ಯ ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ.

ಪಂದ್ಯ ಆರಂಭ: ಬೆಳಿಗ್ಗೆ 10.30

ನೇರ ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್

ಅಫ್ಗನ್ ವಿರುದ್ಧದ ಪಂದ್ಯಕ್ಕೂ ಗಿಲ್ ಅಲಭ್ಯ

ನವದೆಹಲಿ (ಪಿಟಿಐ): ಭಾರತ ತಂಡದ ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಅವರು ಅ.11 ರಂದು ಅಫ್ಗಾನಿಸ್ತಾನ ವಿರುದ್ಧ ನಡೆಯಲಿರುವ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ.

ಶಂಕಿತ ಡೆಂಗಿ ಜ್ವರದಿಂದ ಬಳಲಿದ್ದ ಅವರು ಚೆನ್ನೈನಲ್ಲಿ ಭಾನುವಾರ ನಡೆದಿದ್ದ ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಆಡಿರಲಿಲ್ಲ. ಅಫ್ಗನ್ ವಿರುದ್ಧದ ಪಂದ್ಯಕ್ಕಾಗಿ ಭಾರತ ತಂಡದ ಆಟಗಾರರು ಸೋಮವಾರ ಚೆನ್ನೈನಿಂದ ನವದೆಹಲಿಗೆ ಬಂದಿಳಿದರು. ಆದರೆ ಗಿಲ್ ಅವರು ಚೆನ್ನೈನಲ್ಲೇ ಉಳಿದುಕೊಂಡಿದ್ದಾರೆ.

'ಗಿಲ್, ತಂಡದ ಜತೆ ನವದೆಹಲಿಗೆ ಪ್ರಯಾಣಿಸುವುದಿಲ್ಲ. ಚೆನ್ನೈನಲ್ಲೇ ಉಳಿದುಕೊಂಡಿದ್ದು, ವೈದ್ಯರ ನಿಗಾದಲ್ಲಿದ್ದಾರೆ' ಎಂದು ಬಿಸಿಸಿಐ ಹೇಳಿದೆ. ಗಿಲ್ ಅವರ ಜ್ವರದ ಸ್ವರೂಪದ ಬಗ್ಗೆ ಮಂಡಳಿಯು ಇದುವರೆಗೆ ಏನನ್ನೂ ಹೇಳಿಲ್ಲ.



ಶುಭಮನ್ ಗಿಲ್

ಗಿಲ್ ಅವರ ಅನುಪಸ್ಥಿತಿಯಲ್ಲಿ ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಇಶಾನ್ ಕಿಶನ್ ಆಡಿದ್ದರು. ಆದರೆ ಅವರು ಶೂನ್ಯಕ್ಕೆ ಔಟಾಗಿದ್ದರು. ಈ ಪಂದ್ಯವನ್ನು ಭಾರತ ತಂಡ, ಆರು ವಿಕೆಟ್‌ಗಳಿಂದ ಗೆದ್ದುಕೊಂಡಿತ್ತು.

ಇಂದು ಅಭ್ಯಾಸ: ಚೆನ್ನೈನಿಂದ ನವದೆಹಲಿಗೆ ಬಂದಿಳಿದ ರೋಹಿತ್ ಶರ್ಮಾ ಬಳಗ ಸೋಮವಾರ ವಿಶ್ರಾಂತಿ ಪಡೆಯಿತು. ಮಂಗಳವಾರ ಸಂಜೆ ಫಿರೋಜ್ ಷಾ ಕೋಟ್ಲಾ ಕ್ರೀಡಾಂಗಣದಲ್ಲಿ ಅಭ್ಯಾಸ ಕೈಗೊಳ್ಳಲಿದೆ. ಅಫ್ಗಾನಿಸ್ತಾನ ತಂಡದ ಆಟಗಾರರು ಸೋಮವಾರ ಅಭ್ಯಾಸ ನಡೆಸಿದರು.

ಭಾರತ ತೊರೆದ ಪಾಕ್ ನಿರೂಪಕಿ

ನವದೆಹಲಿ (ಪಿಟಿಐ): ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯಗಳ ವರದಿಗಾರಿಕೆಗೆ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಡಿಜಿಟಲ್ ತಂಡದ ಜತೆ ಹೈದರಾಬಾದ್‌ಗೆ ಬಂದಿದ್ದ ಪಾಕಿಸ್ತಾನದ ಕ್ರೀಡಾ ನಿರೂಪಕಿ ಝೈನಬ್ ಅಬ್ಬಾಸ್ ಅವರು ಸೋಮವಾರ ದೇಶ ಬಿಟ್ಟು ತೆರಳಿದ್ದಾರೆ.

ಝೈನಬ್ ಈ ಹಿಂದೆ ನೀಡಿದ್ದ ಭಾರತ ವಿರೋಧಿ ಹೇಳಿಕೆಗಳು ಸಾಮಾಜಿಕ ಮಾಧ್ಯಮಗಳಲ್ಲಿ ಮತ್ತೆ ಹರಿದಾಡಿದ್ದು, ಅಭದ್ರತೆ ಕಾಡಿದ್ದ ರಿಂದ ಅವರು ಭಾರತ ಪ್ರವಾಸ ಅರ್ಧದಲ್ಲೇ ಮೊಟಕುಗೊಳಿಸಿದ್ದಾರೆ ಎನ್ನಲಾಗಿದೆ. ಆದರೆ 'ವೈಯಕ್ತಿಕ ಕಾರಣ'ಗಳಿಂದ ಭಾರತ ತೊರೆದಿದ್ದಾರೆ ಎಂದು ಐಸಿಸಿ ಹೇಳಿದ್ದು, ಅವರನ್ನು ಗಡಿಪಾರು ಮಾಡಲಾಗಿದೆ ಎಂಬ ಸುದ್ದಿಯನ್ನು ಅಲ್ಲಗಳೆದಿದೆ.

ವಿಶ್ವಕಪ್ ಟೂರ್ನಿಯ ವರದಿಗಾರಿಕೆಗೆ ಭಾರತಕ್ಕೆ ಪ್ರಯಾಣಿಸುವುದಾಗಿ ಅವರು 'ಎಕ್ಸ್' ಖಾತೆಯಲ್ಲಿ ಪ್ರಕಟಿಸಿದ್ದರು. ಅದರ ಬೆನ್ನಲ್ಲೇ ಅವರ ಹಳೆಯ ಟ್ವೀಟ್‌ಗಳು ಹರಿದಾಡಿದ್ದವು. ಕಳೆದ ವಾರ ಹೈದರಾಬಾದ್‌ಗೆ ಬಂದಿಳಿದಿದ್ದ ಅವರು, ಪಾಕ್– ನೆದರ್ಲೆಂಡ್ಸ್ ಪಂದ್ಯದ ವೇಳೆ ರಾಜೀವ್‌ಗಾಂಧಿ ಕ್ರೀಡಾಂಗಣ ದಲ್ಲಿ ಹಾಜರಿದ್ದರು. ಪಾಕಿಸ್ತಾನ ತಂಡದ ಪಂದ್ಯಗಳ ವರದಿಗಾರಿಕೆಗಾಗಿ ಅವರು ಬೆಂಗಳೂರು, ಚೆನ್ನೈ ಮತ್ತು ಅಹಮದಾಬಾದ್‌ಗೂ ಪ್ರಯಾಣಿಸಬೇಕಿತ್ತು.

ಬ್ಯಾಟರ್‌ಗಳು ಆಕ್ರಮಣಶೀಲರಾಗಬೇಕಿತ್ತು: ಫಿಂಚ್

ಚೆನ್ನೈ (ಪಿಟಿಐ): ಭಾರತದ ವಿಶ್ವ ದರ್ಜೆಯ ಸ್ಪಿನ್ನರ್‌ಗಗಳ ಎದುರು ಆಸ್ಟ್ರೇಲಿಯಾದ ಬ್ಯಾಟರ್‌ಗಳು ಯೋಜನೆ ರೂಪಿಸಿದಂತೆ ಕಾಣಲಿಲ್ಲ. ಅವರು ಆಕ್ರಮಣಕಾರಿ ಮನೋಭಾವ ಪ್ರದರ್ಶಿಸಲಿಲ್ಲ ಎಂದು ಆ ತಂಡದ ಮಾಜಿ ನಾಯಕ ಆ್ಯರನ್ ಫಿಂಚ್ ಹೇಳಿದ್ದಾರೆ. ಮುಂಚೂಣಿಯಲ್ಲಿ ಇರಬೇಕಾದರೆ ಆ ತಂಡ ಮನಸ್ಥಿತಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾದ ಅಗತ್ಯವಿದೆ ಎಂದೂ ಅಭಿಪ್ರಾಯಪಟ್ಟಿದ್ದಾರೆ.

ಭಾನುವಾರ ಇಲ್ಲಿ ನಡೆದ ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ಭಾರತದ ಸ್ಪಿನ್ನರ್‌ಗಳು, ಆರು ವಿಕೆಟ್ ಕಿತ್ತು ಆಸ್ಟ್ರೇಲಿಯಾ ತಂಡ 199 ರನ್‌ಗಳಿಗೆ ಸೀಮಿತಗೊಳ್ಳಲು ಕಾರಣರಾಗಿದ್ದರು.

ಸ್ಪಿನ್ ಸ್ನೇಹಿಯಾಗಿದ್ದ ಎಂ.ಎ. ಚಿದಂಬರಂ ಕ್ರೀಡಾಂಗಣದ ಪಿಚ್‌ನಲ್ಲಿ ಆಸ್ಟ್ರೇಲಿಯಾದ ಬ್ಯಾಟರ್‌ಗಳು ಅತೀವ ಎಚ್ಚರಿಕೆ ವಹಿಸಿ ಆಡಿದ್ದ ಕಾರಣ ಎದುರಾಳಿ ಸ್ಪಿನ್ನರ್ ಗಳು ಹತೋಟಿ ಪಡೆಯಲು ಅವಕಾಶವಾಯಿತು ಎಂದು ಅಭಿಪ್ರಾಯಪಟ್ಟಿದ್ದಾರೆ.

'ಜಡೇಜ, ಕುಲದೀಪ್ ಮತ್ತು ಅಶ್ವಿನ್ ಅವರಿಗೆ ನಿಯಂತ್ರಣ ಸಾಧಿಸಲು ಬಿಡಬಾರದಿತ್ತು. ಅವರು ಕರಾರುವಾಕ್ ಆಗಿ ಬೌಲಿಂಗ್ ಮಾಡಬಲ್ಲ ಜಾಣರು. ಜಡೇಜ ಈಗಾಗಲೇ ಹಲವು ಬಾರಿ ಆಸ್ಟ್ರೇಲಿಯಾ ಎದುರು ಈ ರೀತಿ ಯಶಸ್ಸು ಪಡೆದಿದ್ದಾರೆ' ಎಂದು ಅವರು ಐಸಿಸಿಗೆ ಬರೆದ ಅಂಕಣದಲ್ಲಿ ವಿಶ್ಲೇಷಿಸಿದ್ದಾರೆ.

'ಆಸ್ಟ್ರೇಲಿಯಾ ಕೂಡ ಸಾಕಷ್ಟು ಅವಕಾಶಗಳನ್ನು ಹೊಂದಿತ್ತು. ವಿರಾಟ್ ನೀಡಿದ್ದ ಕ್ಯಾಚ್ ಪಡೆದಿದ್ದರೆ ಪಂದ್ಯದ ಗತಿಯೇ ಬದಲಾಗುತಿತ್ತು' ಎಂದು ಬರೆದಿದ್ದಾರೆ.

'ಭಾರತ ಸಮತೋಲನ ಹೊಂದಿರುವ ತಂಡ. ಮೂವರು ಅತ್ಯುತ್ತಮ ಸ್ಪಿನ್ನರ್‌ಗಳಿದ್ದಾರೆ. ಮೂವರು ನುರಿತ ವೇಗದ ಬೌಲರ್‌ಗಳಿದ್ದಾರೆ. ಅವರಿಗೆ ಬೆಂಬಲವಾಗಿ ಹಾರ್ದಿಕ್ ಪಾಂಡ್ಯ ಇದ್ದಾರೆ. ಇದು ತಂಡಕ್ಕೆ ಸಂತುಲನ ನೀಡಿದೆ. ಇಂಥ ಅನುಕೂಲಕರ ಪರಿಸ್ಥಿತಿಯಲ್ಲಿ ಅವರನ್ನು ಸೋಲಿಸುವುದು ಕಷ್ಟ' ಎಂದೂ ಉಲ್ಲೇಖಿಸಿದ್ದಾರೆ.

'ಬಿಜೆಪಿ ಮುಖಂಡರಿಂದ ದೇಗುಲ ಅತಿಕ್ರಮಣ'

₹5,381 ಕೋಟಿ ಮೌಲ್ಯದ ಸ್ವತ್ತು ವಶ: ಪ್ರಧಾನಿ ಮೋದಿ ಟೀಕೆಗೆ ಡಿಎಂಕೆ ಪಕ್ಷದ ತಿರುಗೇಟು

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿ 2021ರ ಮೇ ತಿಂಗಳಿನಿಂದ ಅಧಿಕಾರದ ಚುಕ್ಕಾಣಿ ಹಿಡಿದ ಬಳಿಕ ಬಿಜೆಪಿಯ ಪ್ರಭಾವಿ ಮುಖಂಡರು ಸೇರಿದಂತೆ ಕೆಲವು ಖಾಸಗಿ ಪಟ್ಟಭದ್ರರು ಅತಿಕ್ರಮಿಸಿಕೊಂಡಿದ್ದ ಹಿಂದೂ ದೇವಾಲಯಗಳಿಗೆ ಸೇರಿದ 5,700 ಎಕರೆ ಜಮೀನನ್ನು ವಶಕ್ಕೆ ಪಡೆಯಲಾಗಿದೆ ಎಂದು ಡಿಎಂಕೆ ಹೇಳಿದೆ.

ತೆಲಂಗಾಣದಲ್ಲಿ ಇತ್ತೀಚೆಗೆ ನಡೆದ ಚುನಾವಣಾ ರ‍್ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ತಮಿಳುನಾಡು ಸರ್ಕಾರವು ಹಿಂದೂ ದೇವಾಲಯಗಳನ್ನು ತನ್ನ ಸುಪರ್ದಿಗೆ ಪಡೆಯಲು ಪಿತೂರಿ ನಡೆಸುತ್ತಿದೆ. ಆ ಮೂಲಕ ಲೂಟಿಗೆ ಇಳಿದಿದೆ' ಎಂದು ಆರೋಪಿಸಿದ್ದರು. ಈ ಆರೋಪಕ್ಕೆ ಸೋಮವಾರ ವಿಧಾನಸಭೆಯಲ್ಲಿ ಡಿಎಂಕೆ, ತಿರುಗೇಟು ನೀಡಿದೆ.

'ದೇವಾಲಯಗಳಿಗೆ ಸೇರಿದ ಈ ಭೂಮಿಯ ಮೌಲ್ಯ ₹ 5,381.65 ಕೋಟಿ ಆಗಿದೆ' ಎಂದು ಹಿಂದೂ ಧಾರ್ಮಿಕ ಮತ್ತು ದತ್ತಿ ಸಚಿವ ಪಿ.ಕೆ. ಸೇಕರಬಾಬು ಅವರು, ಶಾಸಕ ಟಿ. ವೇಲ್‌ಮುರುಗನ್ ಅವರು ಕೇಳಿದ ಪ್ರಶ್ನೆಗೆ ಅಧಿವೇಶನದಲ್ಲಿ ಉತ್ತರ ನೀಡಿದರು.

'₹700 ಕೋಟಿ ಮೌಲ್ಯದ ಒಂಬತ್ತು ಸ್ವತ್ತುಗಳು ಬಿಜೆಪಿಯ ಕೆಲವು ಪ್ರಭಾವಿ ಮುಖಂಡರ ಹಿಡಿತದಲ್ಲಿದ್ದವು. ಅವುಗಳನ್ನೂ ಸರ್ಕಾರ ವಶಕ್ಕೆ ಪಡೆದಿದೆ' ಎಂದರು.

'ಸರ್ಕಾರವು ಹಿಂದೂಗಳ ನಂಬಿಕೆಗೆ ವಿರುದ್ಧವಾಗಿಲ್ಲ. ಹಿಂದೂ ಧರ್ಮಕ್ಕೆ ನಾವು ಬೆಂಬಲ ನೀಡುತ್ತೇವೆ. ಸರ್ಕಾರವು ಆಸ್ತಿಕರು ಮತ್ತು ನಾಸ್ತಿಕರ ನಂಬಿಕೆಗಳನ್ನು ಗೌರವಿಸಲಿದೆ' ಎಂದು ಸ್ಪಷ್ಟಪಡಿಸಿದರು.

'ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಇಲಾಖೆಯಿಂದ 1,077 ಹೊಸ ದೇಗುಲಗಳ ಪ್ರತಿಷ್ಠಾಪನಾ ಕಾರ್ಯಕ್ರಮ ನಡೆಸಲಾಗಿದೆ. ಇದು ಸರ್ಕಾರದ ಕೊಡುಗೆಯಾಗಿದೆ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

'ಶತಮಾನಗಳ ಹಿಂದೆ ದೇಗುಲಗಳಿಗೆ ಸೇರಿದ ಈ ಆಸ್ತಿಯನ್ನು ರಾಜಮಹಾರಾಜರು ದಾನದ ರೂಪದಲ್ಲಿ ನೀಡಿದ್ದಾರೆ. ಕೆಲವು ದಾನಿಗಳು ಕೊಡುಗೆಯಾಗಿ ನೀಡಿದ್ದಾರೆ. ಕೆಲವೆಡೆ ದೇವಾಲಯದ ಆಡಳಿತ ಮಂಡಳಿಗಳಿಂದ ಭೂಮಿ ಖರೀದಿಸಲಾಗಿದೆ. ಈ ಸ್ವತ್ತುಗಳಿಂದ ಬರುತ್ತಿದ್ದ ಆದಾಯವನ್ನು ಈಗ ದೇವಾಲಯಗಳ ಖಾತೆಗೆ ವರ್ಗಾಯಿಸಲಾಗಿದೆ' ಎಂದು ವಿವರಿಸಿದರು.

ತಮಿಳುನಾಡಿನಲ್ಲಿ ಒಟ್ಟು 44,121 ದೇಗುಲಗಳು ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆ ಸುಪರ್ದಿಯಲ್ಲಿವೆ.

ಲಘು ವಾಹನಗಳಿಗೆ ವಿನಾಯಿತಿ: ಎಂಎನ್‌ಎಸ್ ಆಗ್ರಹ

'ಟೋಲ್ ಬೂತ್ ಸುಡುತ್ತೇವೆ'

ಪ್ರಜಾವಾಣಿ ವಾರ್ತೆ

ಮುಂಬೈ: 'ಮಹಾರಾಷ್ಟ್ರದಲ್ಲಿ ಲಘು ವಾಹನಗಳಿಗೆ ಟೋಲ್ ಶುಲ್ಕದಿಂದ ವಿನಾಯಿತಿ ನೀಡುವುದನ್ನು ಖಚಿತಪಡಿಸದಿದ್ದರೆ ನಮ್ಮ ಪಕ್ಷದ ಕಾರ್ಯಕರ್ತರು ಟೋಲ್ ಬೂತ್‌ಗಳಿಗೆ ಬೆಂಕಿ ಹಚ್ಚುತ್ತಾರೆ' ಎಂದು ಮಹಾರಾಷ್ಟ್ರ ನವನಿರ್ಮಾಣ ಸೇನಾ (ಎಂಎನ್‌ಎಸ್) ಅಧ್ಯಕ್ಷ ರಾಜ್ ಠಾಕ್ರೆ ಮಹಾರಾಷ್ಟ್ರ ಸರ್ಕಾರಕ್ಕೆ ಸೋಮವಾರ ಎಚ್ಚರಿಕೆ ನೀಡಿದ್ದಾರೆ.

2024ರ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗೂ ಮುನ್ನ ಟೋಲ್ ಶುಲ್ಕ ಪಾವತಿ ಕುರಿತ ಜನರ ಸಮಸ್ಯೆಯನ್ನು ಎಂಎನ್‌ಎಸ್ ಮುನ್ನೆಲೆಗೆ ತಂದಿದೆ.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ರಾಜ್ಯದ ರಾಜಕಾರಣಿಗಳಿಗೆ ಟೋಲ್‌ಬೂತ್‌ಗಳು ಜೀವನೋಪಾಯದ ಮಾರ್ಗವಾಗಿದೆ' ಎಂದು ಆರೋಪಿಸಿದ ಅವರು, 'ಇದು ದೊಡ್ಡ ಹಗರಣವಾಗಿದೆ' ಎಂದು ದೂರಿದರು.

'ಈ ಸಂಬಂಧ ಮಾತುಕತೆ ನಡೆಸಲು ನಾನು ಮುಖ್ಯಮಂತ್ರಿ ಅವರ ಭೇಟಿಗೆ ಸಮಯ ಕೇಳಿದ್ದೇನೆ. ಸಭೆಯಲ್ಲಿ ಏನಾಗುತ್ತದೆ ಎಂಬುದನ್ನು ನೋಡೋಣ. ಇಲ್ಲದಿದ್ದರೆ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿಕೆ ಆಧರಿಸಿ ಎಂಎನ್‌ಎಸ್ ಕಾರ್ಯಕರ್ತರು ಎಲ್ಲ ಟೋಲ್ ಬೂತ್‌ಗಳ ಬಳಿ ಜಮಾಯಿಸುತ್ತಾರೆ. ಅಲ್ಲಿ ನಾಲ್ಕು ಚಕ್ರ, ತ್ರಿ ಚಕ್ರ ಮತ್ತು ದ್ವಿ ಚಕ್ರ ವಾಹನಗಳಿಗೆ ಶುಲ್ಕ ವಿಧಿಸದಂತೆ ನೋಡಿಕೊಳ್ಳುತ್ತಾರೆ. ನಮ್ಮ ಈ ಕಾರ್ಯವನ್ನು ತಡೆಯಲು ಮುಂದಾದರೆ, ಟೋಲ್‌ಗೆ ಬೆಂಕಿ ಹಚ್ಚುತ್ತೇವೆ' ಎಂದು ರಾಜ್ ಎಚ್ಚರಿಸಿದರು.



ರಾಜ್ ಠಾಕ್ರೆ

'ರಾಜ್ಯದಲ್ಲಿ ಇತ್ತೀಚಿನ ಕೆಲ ವರ್ಷಗಳಲ್ಲಿ ಎಲ್ಲ ರಾಜಕೀಯ ಪಕ್ಷಗಳು ಆಡಳಿತ ನಡೆಸಿವೆ. ಆದರೆ, ಯಾರೊಬ್ಬರೂ ಮಹಾರಾಷ್ಟ್ರವನ್ನು ಟೋಲ್ ಮುಕ್ತಗೊಳಿಸುವ ಭರವಸೆಯನ್ನು ಈಡೇರಿಸಿಲ್ಲ' ಎಂದರು.

'ರಾಜ್ಯದಲ್ಲಿ ಶಿವಸೇನಾ ಮತ್ತು ಬಿಜೆಪಿ ಮೈತ್ರಿಕೂಟವು ಹಿಂದೆ ಟೋಲ್ ಮುಕ್ತ ರಾಜ್ಯದ ಭರವಸೆ ನೀಡಿತ್ತು. ಆದರೆ 2014–19ರ ಅವಧಿಯಲ್ಲಿ ಫಡಣವೀಸ್ ನೇತೃತ್ವದ ಮೈತ್ರಿಕೂಟ ಅಧಿಕಾರದಲ್ಲಿದ್ದಾಗ ಅದು ಈಡೇರಲಿಲ್ಲ. ಬಳಿಕ ಉದ್ಧವ್ ಠಾಕ್ರೆ ನೇತೃತ್ವದ ಮಹಾ ವಿಕಾಸ ಅಘಾಡಿ ಅಧಿಕಾರದಲ್ಲಿತ್ತು. ಆಗಲೂ ಈ ವಿಚಾರದಲ್ಲಿ ಏನೂ ಆಗಲಿಲ್ಲ' ಎಂಬ ಅಂಶಗಳನ್ನು ರಾಜ್ ಠಾಕ್ರೆ ಉಲ್ಲೇಖಿಸಿದ್ದಾರೆ.

ಕ್ಲಾಡಿಯಾ ಗೋಲ್ಡಿನ್‌ಗೆ ಅರ್ಥಶಾಸ್ತ್ರದ ನೊಬೆಲ್

ಸ್ಟಾಕ್‌ಹೋಂ (ಎಪಿ): ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಈ ಬಾರಿ ಹಾರ್ವರ್ಡ್ ವಿಶ್ವವಿದ್ಯಾಲಯದ ಪ್ರೊಫೆಸರ್ ಕ್ಲಾಡಿಯಾ ಗೋಲ್ಡಿನ್ ಅವರಿಗೆ ಘೋಷಿಸಲಾಗಿದೆ. ಕಾರ್ಮಿಕ ಮಾರುಕಟ್ಟೆಯಲ್ಲಿ ಲಿಂಗ ಅಸಮಾನತೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅವರು ನೀಡಿರುವ ಕೊಡುಗೆಯನ್ನು ಗಮನಿಸಿ ಈ ಘೋಷಣೆ ಮಾಡಲಾಗಿದೆ.

ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿಗೆ ಪಾತ್ರರಾಗಿರುವ ಮೂರನೆಯ ಮಹಿಳೆ ಗೋಲ್ಡಿನ್. 'ಕಾರ್ಮಿಕ ಮಾರುಕಟ್ಟೆಯಲ್ಲಿ ಮಹಿಳೆಯರ ಪಾತ್ರವನ್ನು ಅರ್ಥ ಮಾಡಿಕೊಳ್ಳಬೇಕಿರುವುದು ಸಮಾಜದ ಪಾಲಿಗೆ ಬಹಳ ಮಹತ್ವದ್ದು. ಗೋಲ್ಡಿನ್ ಅವರ ಸಂಶೋಧನೆಯ ಕಾರಣದಿಂದಾಗಿ, ಮುಂದೆ ನಾವು ನಿವಾರಿಸಬೇಕಿರುವ ಅಡೆತಡೆಗಳು ಯಾವುವು ಎಂಬ ಬಗ್ಗೆ ನಮಗೆ ಹೆಚ್ಚು ತಿಳಿವಳಿಕೆ ಮೂಡಿದೆ' ಎಂದು ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿಯನ್ನು ಘೋಷಿಸುವ ಸಮಿತಿಯ ಅಧ್ಯಕ್ಷ ಜಾಕಬ್ ಸ್ವೆನ್ಸನ್ ಹೇಳಿದ್ದಾರೆ.

ಕ್ಲಾಡಿಯಾ ಗೋಲ್ಡಿನ್ (ಎಎಫ್‌ಪಿ ಚಿತ್ರ)

ನೊಬೆಲ್ ಪ್ರಶಸ್ತಿಯು 1 ಮಿಲಿಯನ್ ಡಾಲರ್ (ಅಂದಾಜು ₹8.32 ಕೋಟಿ) ನಗದು, ಚಿನ್ನದ ಪದಕ ಹಾಗೂ ಪ್ರಶಂಸಾ ಪತ್ರವನ್ನು ಒಳಗೊಂಡಿದೆ.

'ನಾನು ಯಾವಾಗಲೂ ಆಶಾವಾದಿ. ಆದರೆ 1990ರ ದಶಕದಲ್ಲಿ ಅಮೆರಿಕದ ಕಾರ್ಮಿಕ ಶಕ್ತಿಯಲ್ಲಿ ಮಹಿಳೆಯರ ಪಾಲು ವಿಶ್ವದಲ್ಲೇ ಅತಿ ಹೆಚ್ಚಿನ ಮಟ್ಟದಲ್ಲಿತ್ತು. ಈಗ ಅದು ಆ ಮಟ್ಟದಲ್ಲಿ ಉಳಿದಿಲ್ಲ. ಕುಟುಂಬ, ಮನೆಯನ್ನು ಮಾರುಕಟ್ಟೆ, ಉದ್ಯೋಗದ ಜೊತೆ ಒಗ್ಗೂಡಿಸುವ ಕುರಿತು ನಾವು ಈಗ ಪ್ರಶ್ನೆಕೇಳಬೇಕಿದೆ' ಎಂದು ಗೋಲ್ಡಿನ್ ಹೇಳಿದ್ದಾರೆ.

ಲಡಾಕ್‌ನ ಗುಡ್ಡಗಾಡು ಪ್ರದೇಶ ಅಭಿವೃದ್ಧಿ ಸ್ವಾಯತ್ತ ಮಂಡಳಿಯ ಚುನಾವಣಾ ಫಲಿತಾಂಶ ಪ್ರಕಟವಾದ ಬಳಿಕ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಕಾರ್ಯಕರ್ತರು ಸಂಭ್ರಮಿಸಿದರು –ಪಿಟಿಐ ಚಿತ್ರ

'ಎಲ್‌ಎಎಚ್‌ಡಿಸಿ– ಕಾರ್ಗಿಲ್ ಫಲಿತಾಂಶ: ಜನಮತಗಣನೆ ಮನ್ನಣೆ'

ಕಾರ್ಗಿಲ್ (ಲಡಾಕ್) (ಪಿಟಿಐ): ಲಡಾಕ್‌ನ ಗುಡ್ಡಗಾಡು ಪ್ರದೇಶ ಅಭಿವೃದ್ಧಿ ಸ್ವಾಯತ್ತ ಮಂಡಳಿಯ (ಎಲ್‌ಎಎಚ್‌ಡಿಸಿ- ಕಾರ್ಗಿಲ್) ಚುನಾವಣಾ ಫಲಿತಾಂಶವು, ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ ನಿರ್ಧಾರದ ವಿರುದ್ಧದ ಜನಮತಗಣನೆ ಎಂದು ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಮತ್ತು ಕಾಂಗ್ರೆಸ್ ಮೈತ್ರಿಕೂಟ ಸೋಮವಾರ ಬಣ್ಣಿಸಿದೆ.

'ಜಮ್ಮು ಮತ್ತು ಕಾಶ್ಮೀರವನ್ನು ವಿಭಜಿಸುವ ಕೇಂದ್ರ ಸರ್ಕಾರದ ನಿರ್ಧಾರದ ವಿರುದ್ಧದ ಜನಮತಗಣನೆಯೇ ಈ ಫಲಿತಾಂಶ. ಲಡಾಕ್‌ನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪುನರ್ ಸ್ಥಾಪಿಸಬೇಕು ಎಂಬುದು ನಮ್ಮ ಮೊದಲ ಆಗ್ರಹ. ಲಡಾಕ್‌ಗೆ ಸಂಪೂರ್ಣ ರಾಜ್ಯದ ಸ್ಥಾನಮಾನ ನೀಡಬೇಕೋ ಅಥವಾ ವಿಶೇಷ ಸ್ಥಾನವನ್ನು ಮರು ಸ್ಥಾಪಿಸಬೇಕೋ ಎಂಬುದು ಕೇಂದ್ರಕ್ಕೆ ಬಿಟ್ಟದ್ದು' ಎಂದು ಕಾರ್ಗಿಲ್‌ನ ಎನ್‌ಸಿ ಪಕ್ಷದ ಜಿಲ್ಲಾಧ್ಯಕ್ಷ ಹನಿಫಾ ಜಾನ್ ತಿಳಿಸಿದ್ದಾರೆ.

'ಲೆಫ್ಟಿನೆಂಟ್ ಗವರ್ನರ್ ಅವರ ಆಡಳಿತ ಅಡಿಯ ಅಧಿಕಾರಶಾಹಿ ಗುಲಾಮಗಿರಿಯಿಂದ ಹೊರಬರಲು ಹೊರಬರಲು ಕಾರ್ಗಿಲ್‌ನ ಜನ ಬಯಸಿದ್ದಾರೆ. ಕೇಂದ್ರ ಸರ್ಕಾರ ತಪ್ಪು ನಿರ್ಧಾರ ಕೈಗೊಂಡು, ನಮಗೆ ದ್ರೋಹ ಬಗೆದಿದೆ' ಎಂದು ಟೀಕಿಸಿದ್ದಾರೆ.

'ಎನ್‌ಸಿ– ಕಾಂಗ್ರೆಸ್ ಮೈತ್ರಿಕೂಟ 22 ಸ್ಥಾನ ಗೆದ್ದಿದೆ. ನಮ್ಮ ಸಿದ್ಧಾಂತದ ಕುರಿತು ಒಲವಿರುವ ಇಬ್ಬರು ಪಕ್ಷೇತರರು ಜಯ ಗಳಿಸಿದ್ದಾರೆ. ಹಾಗಾಗಿ ನಾವು 24 ಕ್ಷೇತ್ರಗಳಲ್ಲಿ ಗೆದ್ದಂತಾಗಿದೆ. ಬಿಜೆಪಿ ಕೇವಲ ಎರಡು ಸ್ಥಾನಗಳಲ್ಲಿ ಜಯ ದಾಖಲಿಸಿದೆ' ಎಂದು ಜಾನ್ ವಿವರಿಸಿದ್ದಾರೆ.

ಎಲ್‌ಎಎಚ್‌ಡಿಸಿ–ಕಾರ್ಗಿಲ್‌ನ 26 ಸ್ಥಾನಗಳಿಗೆ ಅಕ್ಟೋಬರ್ 4ರಂದು ಮತದಾನ ನಡೆದಿತ್ತು. ನ್ಯಾಷನಲ್ ಕಾನ್ಫರೆನ್ಸ್ 12 ಸ್ಥಾನಗಳಲ್ಲಿ ಗೆಲ್ಲುವ ಮೂಲಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದರೆ, ಕಾಂಗ್ರೆಸ್ 10 ಸ್ಥಾನಗಳಲ್ಲಿ ವಿಜಯ ಪತಾಕೆ ಹಾರಿಸಿದೆ.

ಒಟ್ಟು 95,388 ಮತದಾರರ ಪೈಕಿ 74,026 ಮಂದಿ ಮತ ಚಲಾಯಿಸುವ ಮೂಲಕ ಶೇ 77.61ರಷ್ಟು ಮತದಾನವಾಗಿತ್ತು. ಲಡಾಕ್‌ನ ಗುಡ್ಡಗಾಡು ಪ್ರದೇಶ ಅಭಿವೃದ್ಧಿ ಸ್ವಾಯತ್ತ ಮಂಡಳಿಯ ಅಧ್ಯಕ್ಷರಾಗಿದ್ದ ನ್ಯಾಷನಲ್ ಕಾನ್ಫರೆನ್ಸ್‌ನ ಫಿರೋಜ್ ಅಹ್ಮದ್ ಖಾನ್ ಅವರ ಐದು ವರ್ಷದ ಅಧಿಕಾರಾವಧಿಯು ಈಗಾಗಲೇ ಪೂರ್ಣಗೊಂಡಿದೆ. ಅ. 11ರೊಳಗೆ ಹೊಸ ಮಂಡಳಿ ಅಸ್ತಿತ್ವಕ್ಕೆ ಬರಲಿದೆ.

'ಚೀನಾದಿಂದ ನಯಾ ಪೈಸೆ ಬಂದಿಲ್ಲ'

ನವದೆಹಲಿ (ಪಿಟಿಐ): 'ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತರಲು, ದೇಶದ ವಿರುದ್ಧ ಅವಿಶ್ವಾಸ ಮೂಡಿಸಲು ಚೀನಾದಿಂದ ಭಾರಿ ಪ್ರಮಾಣದಲ್ಲಿ ಹಣ ಪಡೆದಿರುವ ಆರೋಪವು ಸಂಪೂರ್ಣ ಸುಳ್ಳು. ಚೀನಾದಿಂದ ಒಂದು ನಯಾ ಪೈಸೆ ಪಡೆದಿಲ್ಲ' ಎಂದು ನ್ಯೂಸ್‌ಕ್ಲಿಕ್ ಸಂಸ್ಥಾಪಕ, ಪ್ರಧಾನ ಸಂಪಾದಕ ಪ್ರಬೀರ್ ಪುರಕಾಯಸ್ಥ ದೆಹಲಿ ಹೈಕೋರ್ಟ್‌ಗೆ ತಿಳಿಸಿದ್ದಾರೆ.

ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣದ ವಿರುದ್ಧ ನ್ಯೂಸ್ ಪೋರ್ಟಲ್‌ನ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಅಮಿತ್ ಚಕ್ರವರ್ತಿ ಹಾಗೂ ಪುರಕಾಯಸ್ಥ ಅವರು ಸಲ್ಲಿಸಿದ ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ತುಷಾರ್ ರಾವ್ ಗೆಡೆಲಾ ಅವರು ತೀರ್ಪನ್ನು ಕಾಯ್ದಿರಿಸಿದರು.

'ದಲಿತರು, ಒಬಿಸಿಗೆ ಸೇರಿದ ಎಷ್ಟು ಪತ್ರಕರ್ತರು ಇದ್ದೀರಾ?'

ನವದೆಹಲಿ: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಪಾಲ್ಗೊಂಡಿದ್ದ ಪತ್ರಕರ್ತರ ಪೈಕಿ ದಲಿತ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ (ಒಬಿಸಿ) ಸೇರಿದವರು ಎಷ್ಟು ಜನ ಇದ್ದಾರೆ ಎಂಬುದನ್ನು ಕೈ ಎತ್ತಿ ತೋರಿಸುವಂತೆ ಕೇಳಿದರು.

ಸಮಾಜದ ದುರ್ಬಲ ವರ್ಗಗಳಿಗೆ ಸೇರಿದ ಜನರಿಗೆ ದೇಶದ ಸಂಸ್ಥೆಗಳಲ್ಲಿ ಸರಿಯಾದ ಪ್ರಾತಿನಿಧ್ಯ ಸಿಗುತ್ತಿಲ್ಲ ಎಂಬ ಸಂದೇಶ ರವಾನಿಸಲು ಈ ಪ್ರಶ್ನೆ ಕೇಳಿದರು.

'ದಲಿತರು, ಆದಿವಾಸಿಗಳು ಮತ್ತು ಒಬಿಸಿ ವರ್ಗಗಳಿಗೆ ಸೇರಿ ದವರು ದೇಶದ ಆಸ್ತಿಯಲ್ಲಿ ಹಾಗೂ ಸಂಸ್ಥೆಗಳಲ್ಲಿ ಎಷ್ಟು ಪಾಲು ಹೊಂದಿದ್ದಾರೆ ಎಂಬ ಪ್ರಶ್ನೆಯನ್ನು ಕಾಂಗ್ರೆಸ್ ಕೇಳುತ್ತಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು.

'ಈ ಕೊಠಡಿಯಲ್ಲಿ ಎಷ್ಟು ಮಂದಿ ದಲಿತರಿದ್ದೀರಿ? ಒಬಿಸಿ ವರ್ಗಗಳಿಗೆ ಸೇರಿದವರು ಎಷ್ಟು ಜನ ಇದ್ದೀರಿ? ನಿಮ್ಮ ಕೈ ಎತ್ತಿ ತೋರಿಸಿ... ಅಲ್ಲಿ ಒಬ್ಬರು ಕ್ಯಾಮೆರಾ ಸಿಬ್ಬಂದಿ ಇದ್ದಾರೆ, ಅವರ ಬಗ್ಗೆ ನಾನು ಮಾತನಾಡುತ್ತಿಲ್ಲ. ನಾನು ನಿಮ್ಮ ಬಗ್ಗೆ (ಪತ್ರಕರ್ತರನ್ನು ಉದ್ದೇಶಿಸಿ) ಮಾತನಾಡುತ್ತಿದ್ದೇನೆ' ಎಂದು ರಾಹುಲ್ ಹೇಳಿದರು.

ದೇಶದಾದ್ಯಂತ ಜಾತಿಗಣತಿ ನಡೆಸುವುದರ ಪರವಾಗಿ ತಾವು ನೂರರಕ್ಕೆ ನೂರರಷ್ಟು ನಿಲ್ಲುವುದಾಗಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಸಿಡಬ್ಲ್ಯುಸಿ ಸಭೆಯಲ್ಲಿ ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ. ಜಾತಿಗಣತಿ ನಡೆಸುವುದು ಪಕ್ಷದ ಪಾಲಿಗೆ ಅತ್ಯಂತ ಹೆಚ್ಚಿನ ಆದ್ಯತೆಯ ಕೆಲಸ ಆಗಬೇಕು ಎಂದು ಅವರು ಹೇಳಿದ್ದಾರೆ ಎನ್ನಲಾಗಿದೆ.

ಜಾತಿಗಣತಿಗೆ ಸಿಡಬ್ಲ್ಯುಸಿ ಬೆಂಬಲ

ಒಂದನೇ ಪುಟದಿಂದ...

ಅಧಿಕಾರದಲ್ಲಿ ಇದ್ದಾಗ ಜಾತಿಗಣತಿಯನ್ನು ನಡೆಸದೆ ಇದ್ದುದು ಒಂದು ಲೋಪ ಎಂಬುದನ್ನು ಒಪ್ಪಿಕೊಂಡ ರಾಹುಲ್, 'ಹಿಂದೆ ಮಾಡಲು ಆಗದೆ ಇದ್ದುದನ್ನು ನಾವು ಮುಂದೆ ಮಾಡುತ್ತೇವೆ. ಎಲ್ಲರಿಗೂ ನ್ಯಾಯ ಸಿಗುವ ರೀತಿಯಲ್ಲಿ ಅಭಿವೃದ್ಧಿಯ ಹೊಸ ಮಾದರಿಯನ್ನು ರೂಪಿಸಲು ಜಾತಿ ಗಣತಿ ಅಗತ್ಯ' ಎಂದರು.

'ದೇಶದಲ್ಲಿ ದಲಿತರು, ಇತರೆ ಹಿಂದುಳಿದ ವರ್ಗಗಳು (ಒಬಿಸಿ) ಹಾಗೂ ಆದಿವಾಸಿಗಳಿಗೆ ಅವರ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಹಕ್ಕುಗಳು ದೊರೆತಿಲ್ಲ ಎಂದು ನಾವು ಭಾವಿಸಿದ್ದೇವೆ. ಇದು ನಮ್ಮ ಅನುಮಾನ, ಈ ಅನುಮಾನದಲ್ಲಿ ಸತ್ಯವಿದೆಯೇ ಎಂದು ತಿಳಿಯಬೇಕಿದೆ. ಜಾತಿ ಗಣತಿಯನ್ನು ನಡೆಸಲು ನರೇಂದ್ರ ಮೋದಿ ಹೆದರುತ್ತಿದ್ದಾರೆ' ಎಂದು ರಾಹುಲ್ ಟೀಕಿಸಿದರು.

ವರ್ಚುವಲ್ ವಿಚಾರಣೆಗೆ ಅವಕಾಶ ನೀಡಿ: 'ಸುಪ್ರೀಂ'

ನವದೆಹಲಿ (ಪಿಟಿಐ): ವರ್ಚುವಲ್ ಆಗಿ ವಿಚಾರಣೆಗೆ ಹಾಜರಾಗುವ ಅವಕಾಶವನ್ನು ಅರ್ಜಿದಾರರಿಗೆ ನೀಡುವಂತೆ ಎಲ್ಲ ರಾಜ್ಯಗಳ ಮಾಹಿತಿ ಆಯೋಗಗಳಿಗೆ (ಎಸ್‌ಐಸಿ) ಸುಪ್ರೀಂ ಕೋರ್ಟ್ ಸೋಮವಾರ ಸೂಚಿಸಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠ ಈ ನಿರ್ದೇಶನ ನೀಡಿದೆ. ಆನ್‌ಲೈನ್ ಮೂಲಕ ಮನವಿ ಮತ್ತು ದೂರು ಸಲ್ಲಿಸಲು ಎಲ್ಲ ಅರ್ಜಿದಾರರಿಗೆ ಅವಕಾಶ ನೀಡಬೇಕು ಎಂದೂ ನ್ಯಾಯಪೀಠ ಹೇಳಿದೆ.

ಎಸ್‌ಐಸಿಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ನಿರ್ದೇಶನ ನೀಡುವಂತೆ ಕೋರಿ ಅರ್ಜಿ ಸಲ್ಲಿಸಲಾಗಿತ್ತು. ದೂರುಗಳು ಮತ್ತು ಮನವಿಗಳ ವಿಚಾರಣೆಯನ್ನು ಎಸ್‌ಐಸಿಗಳು ಭೌತಿಕವಾಗಿ ನಡೆಸುವುದರ ಜೊತೆ ಡಿಜಿಟಲ್ ವೇದಿಕೆಗಳನ್ನು ಬಳಸಿ ನಡೆಸುವಂತೆ ನಿರ್ದೇಶನ ನೀಡುವಂತೆ ಅರ್ಜಿಯಲ್ಲಿ ಕೋರಲಾಗಿತ್ತು.

ಬಾಬರ್ ಬಳಗದ ಬ್ಯಾಟಿಂಗ್ ವಿಭಾಗಕ್ಕೆ ಪರೀಕ್ಷೆ • ಶನಕ ಪಡೆಗೆ ಚೇತರಿಸುವ ಸವಾಲು

ಪಾಕ್ ತಂಡಕ್ಕೆ ಲಂಕಾ ಸವಾಲು

ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ

ಶ್ರೀಲಂಕಾ ತಂಡದ ದುನಿತ್ ವೆಲ್ಲಾಳಗೆ

ಹೈದರಾಬಾದ್ (ಪಿಟಿಐ/ ರಾಯಿಟರ್ಸ್): ನೆದರ್ಲೆಂಡ್ಸ್ ತಂಡದ ಮೇಲೆ ಏಕದಿನ ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ಪಾಕಿಸ್ತಾನದ ಗೆಲುವು ಅಧಿಕಾರಯುತ ಆಗಿರಲಿಲ್ಲ. ಆದರೆ ದಕ್ಷಿಣ ಆಫ್ರಿಕಾ ವಿರುದ್ಧ ಭಾರಿ ಸೋಲಿನಿಂದ ಎದೆಗುಂದಿರುವ ಶ್ರೀಲಂಕಾ ವಿರುದ್ಧ ಮಂಗಳವಾರ ನಡೆಯುವ ಪಂದ್ಯದಲ್ಲಿ ಪಾಕ್ ತಂಡವೇ ಹೆಚ್ಚು ಅವಕಾಶ ಹೊಂದಿರುವಂತೆ ಕಾಣುತ್ತಿದೆ.

ಮೊದಲ ಪಂದ್ಯದಲ್ಲಿ, ಪಾಕಿಸ್ತಾನ ತಂಡದ ಬ್ಯಾಟಿಂಗ್ ಗಮನಿಸಿದರೆ, ಮುಂಬರುವ ಪಂದ್ಯಗಳಲ್ಲಿ ಆ ತಂಡದ ಬ್ಯಾಟರ್‌ಗಳು ಹೆಚ್ಚು ತೊಡಗಿಸಿಕೊಳ್ಳಬೇಕಾದ ಅಗತ್ಯ ಕಾಣುತ್ತಿದೆ. ಶ್ರೀಲಂಕಾ ತಂಡದ ಸ್ಪಿನ್ನರ್‌ಗಳು ಅನುಕೂಲಕರ ಪಿಚ್‌ನಲ್ಲಿ ಎದುರಾಳಿ ತಂಡದ ಬ್ಯಾಟಿಂಗ್‌ಗೆ ಪ್ರಹಾರ ಎಸಗುವ ಸಾಮರ್ಥ್ಯವುಳ್ಳವರು.

ಪಾಕಿಸ್ತಾನ ತಂಡ ಸಾಂಪ್ರದಾಯಿಕವಾಗಿ ಸ್ಪಿನ್ನರ್‌ಗಳನ್ನು ಉತ್ತಮವಾಗಿ ಎದುರಿಸುವ ತಂಡಗಳಲ್ಲಿ ಒಂದು. ಆದರೆ ಬಾಬರ್ ಆಜಂ ಬಳಗ, ಪ್ರತಿಭಾನ್ವಿತ ದುನಿತ್ ವೆಲ್ಲಾಳಗೆ, ಮಹೀಷ ತೀಕ್ಷಣ ಸೇರಿದಂತೆ ಲಂಕಾದ ಸ್ಪಿನ್ನರ್‌ಗಳನ್ನು ಲಘುವಾಗಿ ಪರಿಗಣಿಸುವಂತಿಲ್ಲ.

ಮಂಡಿರಜ್ಜು ನೋವಿನಿಂದ ಮೊದಲ ಪಂದ್ಯ ಕಳೆದುಕೊಂಡಿದ್ದ ತೀಕ್ಷಣ ಈಗ ಆಡಲು ಸಿದ್ಧರಾಗಿದ್ದಾರೆ ಎಂದು ಶ್ರೀಲಂಕಾ ತಂಡದ ಸಹಾಯಕ ಕೋಚ್ ನವೀದ್ ನವಾಜ್ ಸುದ್ದಿಗಾರರಿಗೆ ತಿಳಿಸಿದ್ದಾರೆ. ಏಷ್ಯಾ ಕಪ್ ವೇಳೆ ತೀಕ್ಷಣ ಮಂಡಿರಜ್ಜು ನೋವಿಗೆ ಒಳಗಾಗಿದ್ದರು.

ಹತ್ತು ದಿನಗಳಿಂದ ಇಲ್ಲಿಯೇ ಠಿಕಾಣಿ ಹೂಡಿರುವ ಪಾಕಿಸ್ತಾನ ತಂಡ, ಉಪ್ಪಳದ ರಾಜೀವ ಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಅಭ್ಯಾಸ ಪಂದ್ಯ ಸೇರಿ ಕೆಲವು ಪಂದ್ಯಗಳನ್ನು ಆಡಿದ್ದರಿಂದ ಇಲ್ಲಿನ ಹವೆ, ಪರಿಸ್ಥಿತಿಗೆ ಒಗ್ಗಿಕೊಂಡಿದೆ.

ಪಾಕ್ ತನ್ನ ಮೊದಲ ಪಂದ್ಯದಲ್ಲಿ ನೆದರ್ಲೆಂಡ್ಸ್ ಬೌಲರ್‌ಗಳ ಎದುರು ವಿಶ್ವಾಸದಿಂದ ಆಡಿರಲಿಲ್ಲ. 38 ರನ್‌ಗಳಾಗುವಷ್ಟರಲ್ಲಿ ನಾಯಕ ಬಾಬರ್ ಆಜಂ ವಿಕೆಟ್ ಸೇರಿದಂತೆ 3 ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಮೊಹಮ್ಮದ್ ರಿಜ್ವಾನ್ ಮತ್ತು ಸಾದ್ ಶಕೀಲ್ ಅವರ ಅರ್ಧಶತಕಗಳು ಹಾಗೂ ಶತಕದ ಜೊತೆಯಾಟದಿಂದ ತಂಡ ಚೇತರಿಸಿಕೊಂಡಿತು. ಕೊನೆಯಲ್ಲಿ ಮೊಹಮ್ಮದ್ ನವಾಜ್, ಶಾದಾಬ್ ಖಾನ್ ಅವರು ಬ್ಯಾಟ್ ಬೀಸಿದ್ದರಿಂದ ಹೋರಾಟದ ಮೊತ್ತ ದಾಖಲಿಸಲು ಸಾಧ್ಯವಾಯಿತು. ಈ ಅಂಶವೇ ಪಾಕ್‌ಗೆ ಸಕಾರಾತ್ಮಕವಾಗಿದೆ. ಆದರೆ 1992ರ ಚಾಂಪಿಯನ್ ತಂಡ, ಡಚ್ಚರಿಗಿಂತ, ಅನುಭವಿ ಲಂಕನ್ನರಿಂದ ಹೆಚ್ಚು ಪ್ರತಿರೋಧ ಎದುರಿಸಬಹುದು.



ಕೊನೆಯ 10 ಏಕದಿನ ಪಂದ್ಯಗಳ ಮುಖಾಮುಖಿಯಲ್ಲಿ ಪಾಕಿಸ್ತಾನ ಎಂಟರಲ್ಲಿ ಜಯ ಗಳಿಸಿದರೆ, ಶ್ರೀಲಂಕಾ ಕೊನೆಯ ಪಂದ್ಯ (ಕಳೆದ ಸೆ. 14) ಸೇರಿ ಎರಡರಲ್ಲಿ ಗೆಲುವು ಕಂಡಿದೆ.

ತಂಡಗಳು: ಪಾಕಿಸ್ತಾನ: ಬಾಬರ್ ಆಜಂ (ನಾಯಕ), ಶಾದಾಬ್ ಖಾನ್, ಫಕ್ರ್ ಜಮಾನ್, ಇಮಾಂ–ಉಲ್–ಹಕ್, ಅಬ್ದುಲ್ಲಾ ಶಫೀಕ್, ಮೊಹಮ್ಮದ್ ರಿಜ್ವಾನ್, ಸಾದ್ ಶಕೀಲ್, ಇಫ್ತಿಕಾರ್ ಅಹ್ಮದ್, ಸಲ್ಮಾನ್ ಆಘಾ, ಮೊಹಮ್ಮದ್ ನವಾಜ್, ಉಸ್ಮಾನ್ ಮಿರ್, ಹ್ಯಾರಿಸ್ ರವೂಫ್, ಹಸನ್ ಅಲಿ, ಶಾಹೀನ್ ಶಾ ಅಫ್ರೀದಿ, ಮೊಹಮದ್ ವಾಸಿಂ.
ಶ್ರೀಲಂಕಾ: ದಾಸುನ್ ಶನಕ (ನಾಯಕ) ಕುಸಲ್ ಮೆಂಡಿಲ್, ಕುಸಲ್ ಪೆರೆರಾ, ಪಥುಮ್ ನಿಸಾಂಕ, ಲಹಿರು ಕುಮಾರ, ದಿಮುತ್ ಕರುಣಾರತ್ನೆ, ಸದೀರ ಸಮರವಿಕ್ರಮ, ಚರಿತ್ ಅಸಳಂಕ, ಧನಂಜಯ ಡಿಸಿಲ್ವ, ಮಹೀಷ ತೀಕ್ಷಣ, ದುನಿತ್ ವೆಲ್ಲಾಳಗೆ, ಕಸುನ್ ರಜಿತ, ಮಥೀಶ ಪಥಿರಾಣ, ದಿಲ್ಶನ್ ಮಧುಶಂಕ, ದುಶನ್ ಹೇಮಂತ. **ಪಂದ್ಯ ಆರಂಭ: ಮಧ್ಯಾಹ್ನ 2**

ಪಾಕಿಸ್ತಾನಕ್ಕೆ ಉತ್ತಮ ಆರಂಭ ಸಿಗುತ್ತಿಲ್ಲ. ಸತತವಾಗಿ ವಿಫಲರಾಗುತ್ತಿರುವ ಎಡಗೈ ಆಟಗಾರ ಫಕ್ರ್ ಜಮಾನ್ ಬದಲಿಗೆ ಅಬ್ದುಲ್ಲಾ ಶಫೀಖ್ ಅವಕಾಶ ಪಡೆಯುವ ಸಾಧ್ಯತೆಯಿದೆ. ಕಳೆದ 11 ಇನಿಂಗ್ಸ್‌ಗಳಲ್ಲಿ ಜಮಾನ್ 33 ರನ್ ಗಳಿಸಿದ್ದೇ ಅತ್ಯಧಿಕ ಎನಿಸಿದೆ.

ಇನ್ನೊಂದೆಡೆ ಶ್ರೀಲಂಕಾ ತನ್ನದೇ ಆದ ಸಮಸ್ಯೆಗಳನ್ನು ಎದುರಿಸುತ್ತಿದೆ. 1996ರ ಚಾಂಪಿಯನ್ನರು ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಕೈಲಿ ಸಖತ್ ಆಗಿ ದಂಡಿಸಿಕೊಂಡು 102 ರನ್‌ಗಳಿಂದ ಸೋತಿದ್ದರು. ಹಲವು ದಾಖಲೆಗಳೂ ಅದರ ವಿರುದ್ಧ ಮೂಡಿಬಂದವು. ಆದರೆ ಬೃಹತ್ ಮೊತ್ತ ಬೆಂಬತ್ತುವ ದಾರಿಯಲ್ಲಿ ಹೋರಾಟ ಪ್ರದರ್ಶಿಸಿತು.

ಶ್ರೀಲಂಕಾ ತಂಡಕ್ಕೆ ಇರುವ ಅನುಕೂಲ ಎಂದರೆ ಅದರ ಆಟಗಾರರು, ಭಾರತದ ನೆಲದಲ್ಲಿ ಪಂದ್ಯಗಳನ್ನು ಆಡಿದ ಅನುಭವ ಹೊಂದಿರುವುದು.

ಪಿಕೆಎಲ್: ₹2.60 ಕೋಟಿ ದಾಖಲೆ ಮೊತ್ತಕ್ಕೆ ಟೈಟನ್ಸ್ ಪಾಲಾದ ಪವನ್

ಪವನ್ ಸೆಹ್ರಾವತ್

ಶಾಡ್ಲೋಯಿ

ಮುಂಬೈ: ಭಾರತ ಕಬಡ್ಡಿ ತಂಡದ ನಾಯಕ ಪವನ್ ಸೆಹ್ರಾವತ್ ಈ ಬಾರಿಯೂ ಪ್ರೊ ಕಬಡ್ಡಿ ಲೀಗ್‌ನ (ಪಿಕೆಎಲ್) ಅತಿ ದುಬಾರಿ ಆಟಗಾರನೆಂಬ ದಾಖಲೆ ಬರೆದರು. ಸೋಮವಾರ ರಾತ್ರಿ ಆರಂಭವಾದ ಲೀಗ್ 10ನೇ ಸೀಸನ್‌ಗೆ ನಡೆದ ಹರಾಜಿನಲ್ಲಿ ತೆಲುಗು ಟೈಟನ್ಸ್ ತಂಡ ಈ ಅನುಭವಿ ಆಟಗಾರರನ್ನು ಪೈಪೋಟಿಯ ನಡುವೆ ₹ 2.60 ಕೋಟಿ ಮೊತ್ತಕ್ಕೆ ತನ್ನದಾಗಿಸಿಕೊಂಡಿತು.

ಇರಾನ್‌ನ ಆಲ್‌ರೌಂಡರ್ ಮೊಹಮ್ಮದ್‌ರೇಜಾ ಶಾಡ್ಲೋಯಿ ಚಿಯೆನಾ ಹರಾಜಿನ ಆರಂಭದಲ್ಲಿ ₹2.35 ಕೋಟಿ ಮೊತ್ತಕ್ಕೆ ಪುಣೇರಿ ಪಲ್ಟನ್ಸ್ ತಂಡದ ಪಾಲಾಗಿ ದಾಖಲೆ ಸ್ಥಾಪಿಸಿದ್ದರು. ಆದರೆ, ದಿನದ ಕೊನೆಗೆ ಸೆಹ್ರಾವತ್ ದಾಖಲೆಯನ್ನು ಮತ್ತೆ ತಮ್ಮ ಹೆಸರಿಗೆ ಬರೆಸಿಕೊಂಡರು.

ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ತಂಡದ ನಾಯಕತ್ವ ವಹಿಸಿದ್ದ ಪವನ್, ಹಿಂದಿನ ಋತುವಿನಲ್ಲಿ ₹2.26 ಕೋಟಿಗೆ ತಮಿಳು ತಲೈವಾಸ್ ಪಾಲಾಗಿದ್ದು, ಈ ಹಿಂದಿನ ದಾಖಲೆಯಾಗಿತ್ತು.

ಇರಾನ್‌ನ ಇನ್ನೊಬ್ಬ ಆಟಗಾರ, ಡಿಫೆಂಡರ್ ಫಝಲ್ ಅತ್ರಾಚೆಲಿ ಅವರನ್ನು ಗುಜರಾತ್ ಜೈಂಟ್ಸ್ ₹1.60 ಕೋಟಿಗೆ ಪಡೆಯಿತು. ಇದೇ ದೇಶದ ಮಹಮ್ಮದ್ ಇಸ್ಮಾಯಿಲ್ ನಬಿಬಕ್ಷ್ ₹22 ಲಕ್ಷಕ್ಕೆ ಗುಜರಾತ್ ಜೈಂಟ್ಸ್‌ಗೆ ಮಾರಾಟವಾದರು.

ಅನುಭವಿ ವಿಕಾಸ್ ಖಂಡೋಲ ಅವರನ್ನು ₹ 55.25 ಲಕ್ಷಕ್ಕೆ ಬೆಂಗಳೂರು ಬುಲ್ಸ್ ತಂಡ ತನ್ನಲ್ಲೇ ಉಳಿಸಿಕೊಂಡರೆ, ₹20 ಲಕ್ಷಕ್ಕೆ ವಿಕಾಸ್ ಅವರನ್ನು ತನ್ನದಾಗಿಸಿಕೊಂಡಿತು. ಆಲ್‌ರೌಂಡರ್ ರೋಹಿತ್ ಗುಲಿಯಾ ಅವರನ್ನೂ ಗುಜರಾತ್ ಜೈಂಟ್ಸ್ 58.50 ಲಕ್ಷ ರೂಪಾಯಿಗೆ ತಂಡಕ್ಕೆ ಸೇರಿಸಿಕೊಂಡಿತು. ನಿತಿನ್ ರಾವಲ್ ಅವರನ್ನು ₹30 ಲಕ್ಷಕ್ಕೆ ಬೆಂಗಾಲ್ ವಾರಿಯರ್ಸ್ ಖರೀದಿಸಿತು.

ಆಲ್‌ರೌಂಡರ್ ವಿಜಯ್ ಮಲಿಕ್ ಅವರು ₹85 ಲಕ್ಷಕ್ಕೆ ಯುಪಿ ಯೋಧಾಸ್ ತಂಡದ ಪಾಲಾದರು. ರೈಡರ್ ಮಣಿಂದರ್ ಸಿಂಗ್ ಅವರನ್ನು ಬೆಂಗಾಲ್ ವಾರಿಯರ್ಸ್ ತಂಡ ₹2.12 ಕೋಟಿಗೆ ತನ್ನಲ್ಲೇ ಉಳಿಸಿಕೊಂಡಿತು. ಸಿದ್ಧಾರ್ಥ್ ದೇಸಾಯಿ ಅವರನ್ನು ₹ 1 ಕೋಟಿಗೆ ಹರಿಯಾಣ ಸ್ಟೀಲರ್ಸ್ ತಂಡ ತೆಕ್ಕೆಗೆ ಪಡೆದುಕೊಂಡಿತು.

ಇನ್ನೊಬ್ಬ ರೈಡರ್ ಮಂಜೀತ್ ₹92 ಲಕ್ಷಕ್ಕೆ ಪಟ್ನಾ ಪೈರೇಟ್ಸ್ ಪಾಲಾದರು. ಆಲ್‌ರೌಂಡರ್ ಅಕ್ರಂ ಶೇಖ್ ಅವರನ್ನು ಗುಜರಾತ್ ಜೈಂಟ್ಸ್ ₹20.25 ಲಕ್ಷಕ್ಕೆ ಉಳಿಸಿಕೊಂಡಿತು. ಆಟಗಾರರ ಹರಾಜು ಪ್ರಕ್ರಿಯೆ ಮಂಗಳವಾರವೂ ಮುಂದುವರಿಯಲಿದೆ.

ನ.4ರಿಂದ ಕರ್ನಾಟಕ ಓಪನ್ ನ್ಯಾಷನಲ್ ಮಾಸ್ಟರ್ಸ್ ಗೇಮ್ಸ್

ಧಾರವಾಡ: ಮಾಸ್ಟರ್ಸ್ ಗೇಮ್ಸ್ ಅಸೋಸಿಯೇಷನ್ ವತಿಯಿಂದ ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ನವೆಂಬರ್ 4 ಮತ್ತು 5ರಂದು ಕರ್ನಾಟಕ ಓಪನ್ ನ್ಯಾಷನಲ್ ಮಾಸ್ಟರ್ಸ್ ಗೇಮ್ಸ್ ಆಯೋಜಿಸಲಾಗಿದೆ' ಎಂದು ಅಸೋಸಿಯೇಷನ್ ಕಾರ್ಯದರ್ಶಿ ಜಿ.ಎ.ನಟರಾಜ ತಿಳಿಸಿದರು.

'ನಗರದ ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ನವೆಂಬರ್ 4ರಂದು ಬೆಳಿಗ್ಗೆ 9 ಗಂಟೆಗೆ ಉದ್ಘಾಟನೆ ನಡೆಯಲಿದೆ. ಕ್ರೀಡಾ ಸಚಿವ ಬಿ.ನಾಗೇಂದ್ರ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. 30 ವರ್ಷ ದಾಟಿದವರು ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಬಹುದು. ದೇಶದ ವಿವಿಧೆಡೆಯಿಂದ 5 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ' ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ನವೆಂಬರ್ 4 ಮತ್ತು 5ರಂದು ಧಾರವಾಡದ ಆರ್.ಎನ್. ಶೆಟ್ಟಿ ಕ್ರೀಡಾಂಗಣದಲ್ಲಿ (ಒಳಾಂಗಣ ಮತ್ತು ಹೊರಾಂಗಣ) ಅಥ್ಲೆಟಿಕ್ಸ್, ಥ್ರೋಬಾಲ್, ಬ್ಯಾಡ್ಮಿಂಟನ್ ಮತ್ತು ಟೇಬಲ್ ಟೆನಿಸ್ ಸ್ಪರ್ಧೆಗಳು ನಡೆಯಲಿವೆ. ಮಲ್ಲಸಜ್ಜನ ವ್ಯಾಯಾಮ ಶಾಲೆ ಅಂಗಳದಲ್ಲಿ ವಾಲಿಬಾಲ್, ಕಬಡ್ಡಿ, ವೇಟ್‌ಲಿಫ್ಟಿಂಗ್, ಪವರ್ ಲಿಫ್ಟಿಂಗ್ ಹಾಗೂ ಬಾಸ್ಕೆಟ್ ಬಾಲ್ ಸ್ಪರ್ಧೆಗಳು ನಡೆಯಲಿವೆ.

ಮಾಹಿತಿಗೆ ಸಂಪರ್ಕಿಸಬೇಕಾದ ವೆಬ್‌ಸೈಟ್: htttps:// mastersgameskarnataka.com

ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್: ಶಿಫಾರಸು

ಲಾಸ್ ಏಂಜಲೀಸ್ (ಎಎಫ್‌ಪಿ): ಕ್ರಿಕೆಟ್ ಅನ್ನು 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಸೇರ್ಪಡೆ ಮಾಡುವ ಕುರಿತು ಕೂಟದ ಸಂಘಟಕರು ಸೋಮವಾರ ಔಪಚಾರಿಕವಾಗಿ ಶಿಫಾರಸು ಮಾಡಿದ್ದಾರೆ.

ಬೇಸ್‌ಬಾಲ್/ ಸಾಫ್ಟ್‌ಬಾಲ್, ಫ್ಲ್ಯಾಗ್ ಫುಟ್‌ಬಾಲ್ ಮತ್ತು ಸ್ಕ್ವಾಷ್‌ಗಳ ಜೊತೆಗೆ ಉದ್ದೇಶಿತ ಹೊಸ ಕ್ರೀಡೆಗಳಲ್ಲಿ ಕ್ರಿಕೆಟ್‌ನ ಟಿ20 ಮಾದರಿಯನ್ನು ಪಟ್ಟಿ ಮಾಡಲಾಗಿದೆ.

ಈ ಕ್ರೀಡೆಗಳ ಆಯ್ಕೆಗೆ ಇನ್ನೂ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ (ಐಒಸಿ) ಅನುಮೋದನೆ ಅಗತ್ಯವಿದೆ.

ಈ ಮಧ್ಯೆ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಸೇರ್ಪಡೆ ಪ್ರಸ್ತಾವವನ್ನು ಐಸಿಸಿ ಸ್ವಾಗತಿಸಿದೆ.

ಸಂಕ್ಷಿಪ್ತ ಸುದ್ದಿ

ಫುಟ್‌ಬಾಲ್: 'ದಿ ಫ್ರೀಡಂ ಪ್ರಾಜೆಕ್ಟ್' ತಂಡ ಚಾಂಪಿಯನ್

ಬೆಂಗಳೂರು: 'ದಿ ಫ್ರೀಡಂ ಪ್ರಾಜೆಕ್ಟ್' ತಂಡ ಸೌತ್ ಯುನೈಟೆಡ್ ಫುಟ್‌ಬಾಲ್ ಕ್ಲಬ್ ವತಿಯಿಂದ ಆಯೋಜಿಸಿದ್ದ 'ಕಿಕ್ ಫಾರ್ ಎ ಕಾಸ್ ವಿದ್ ಎಸ್‌ಯುಎಫ್‌ಸಿ' ಫುಟ್‌ಬಾಲ್ ಟೂರ್ನಿಯಲ್ಲಿ 13 ವರ್ಷ ಮತ್ತು 15 ವರ್ಷದೊಳಗಿನವರ ವಿಭಾಗಗಳಲ್ಲಿ ಚಾಂಪಿಯನ್ ಆಯಿತು.

13 ವರ್ಷದೊಳಗಿನ ವಿಭಾಗದ ಫೈನಲ್‌ನಲ್ಲಿ ಫ್ರೀಡಂ ಪ್ರಾಜೆಕ್ಟ್ 'ಬಿ' ತಂಡ 2–0 ಗೋಲುಗಳಿಂದ ಫ್ರೀಡಂ ಪ್ರಾಜೆಕ್ಟ್ 'ಎ' ತಂಡವನ್ನು ಮಣಿಸಿತು. 15 ವರ್ಷದೊಳಗಿನವರ ವಿಭಾಗದ ಫೈನಲ್‌ನಲ್ಲಿ ಫ್ರೀಡಂ ಪ್ರಾಜೆಕ್ಟ್ 'ಎ' ತಂಡ 6–0 ಗೋಲುಗಳಿಂದ 'ಬಾಲ್ ಫಾರ್ ಆಲ್' ತಂಡವನ್ನು ಸೋಲಿಸಿತು.

ಅವಕಾಶವಂಚಿತ ಮಕ್ಕಳಿಗೆ ಪ್ರತಿಭೆ ತೋರಿಸಲು ವೇದಿಕೆಯೊದಗಿಸುವ ನಿಟ್ಟಿನಲ್ಲಿ ಏರ್ಪಡಿಸಿದ್ದ ಈ ಟೂರ್ನಿಯಲ್ಲಿ ನಗರದ 7 ಎನ್‌ಜಿಒಗಳ 153 ಮಕ್ಕಳು ಪಾಲ್ಗೊಂಡಿದ್ದರು.

ಬಿಎಫ್‌ಸಿ ತಂಡಕ್ಕೆ ಗೆಲುವು

ಬೆಂಗಳೂರು: ಬಿಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 4–0 ಯಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡದ ವಿರುದ್ಧ ಜಯ ಸಾಧಿಸಿತು.

ಮತ್ತೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಸಿ ತಂಡವು 2–1 ರಿಂದ ಸೌತ್ ಯುನೈಟೆಡ್ ಎಫ್‌ಸಿ ತಂಡವನ್ನು ಮಣಿಸಿತು.

29ರಂದು ಚೆಸ್ ಟೂರ್ನಿ

ಬೆಂಗಳೂರು: ಚಾಂಪಿಯನ್ಸ್ ಚೆಸ್ ಅಕಾಡೆಮಿಯು, ಇದೇ 29ರಂದು ಎರಡು ವಯೋವರ್ಗಗಳಲ್ಲಿ– 10 ವರ್ಷದೊಳಗಿನವರ ಮತ್ತು 16 ವರ್ಷದೊಳಗಿ ನವರ– ವಿಭಾಗಗಳಲ್ಲಿ ಚೆಸ್ ಟೂರ್ನಿಯನ್ನು ನಡೆಸಲಿದೆ. ನೋಂದಾಯಿಸಲು ಕೊನೆ ದಿನ ಅ. 27. ವಿವರಗಳಿಗೆ ಬಾಲಕೃಷ್ಣ ಪ್ರಭು (98454 66416) ಸಂಪರ್ಕಿಸ ಬಹುದು. www. championschessacademy. com ಮೂಲಕವೂ ನೋಂದಾಯಿಸಬಹುದು.

ಹಾಕಿ: ಭಾರತ ಜೂನಿಯರ್ ತಂಡಕ್ಕೆ ಉತ್ತಮ್ ಸಿಂಗ್ ನಾಯಕ

ಬೆಂಗಳೂರು: ಸುಲ್ತಾನ್ ಜೊಹರ್ ಕಪ್ ಹಾಕಿ ಟೂರ್ನಿಯಲ್ಲಿ ಪಾಲ್ಗೊಳ್ಳಲಿರುವ ಭಾರತ ಜೂನಿಯರ್ ತಂಡವನ್ನು ಉತ್ತಮ್ ಸಿಂಗ್ ಮುನ್ನಡೆಸಲಿದ್ದಾರೆ.

ಅ.27 ರಿಂದ ನ.4ರ ವರೆಗೆ ಮಲೇಷ್ಯಾದಲ್ಲಿ ನಡೆಯಲಿರುವ ಟೂರ್ನಿಗೆ 20 ಸದಸ್ಯರ ಭಾರತ ತಂಡವನ್ನು, ಹಾಕಿ ಇಂಡಿಯಾ (ಎಚ್‌ಐ) ಸೋಮವಾರ ಪ್ರಕಟಿಸಿತು. 11ನೇ ಅವೃತ್ತಿಯ ಟೂರ್ನಿಯಲ್ಲಿ ಎಂಟು ತಂಡಗಳು ಪಾಲ್ಗೊಳ್ಳಲಿವೆ. ಈ ಹಿಂದಿನ ಟೂರ್ನಿಗಳಲ್ಲಿ ಆರು ತಂಡಗಳಿಗೆ ಮಾತ್ರ ಅವಕಾಶ ನೀಡಲಾಗಿತ್ತು.

ಭಾರತ ತಂಡವು ಮಲೇಷ್ಯಾ, ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ತಂಡಗಳ ಜತೆ 'ಬಿ' ಗುಂಪಿನಲ್ಲಿ ಸ್ಥಾನ ಪಡೆದಿದೆ. ಜರ್ಮನಿ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಮತ್ತು ಬ್ರಿಟನ್ ತಂಡಗಳು 'ಬಿ' ಗುಂಪಿನಲ್ಲಿವೆ.

ತಂಡ ಹೀಗಿದೆ: ಗೋಲ್‌ಕೀಪರ್ಸ್: ಮೋಹಿತ್ ಎಚ್.ಎಸ್., ರಣವಿಜಯ್ ಸಿಂಗ್ ಯಾದವ್; **ಡಿಫೆಂಡರ್ಸ್:** ಅಮನ್‌ದೀಪ್ ಲಾಕ್ರ, ರೋಹಿತ್, ಸುನಿಲ್ ಜೊಜೊ, ಸುಖ್ವಿಂದರ್, ಅಮೀರ್ ಅಲಿ, ಯೋಗಂಬರ್ ರಾವತ್; **ಮಿಡ್‌ಫೀಲ್ಡರ್ಸ್:** ವಿಷ್ಣುಕಾಂತ್ ಸಿಂಗ್, ಪೂವಣ್ಣ ಸಿ.ಬಿ., ರಾಜೀಂದರ್ ಸಿಂಗ್, ಅಮನ್‌ದೀಪ್, ಸುನಿತ್ ಲಾಕ್ರ, ಅಬ್ದುಲ್ ಅಹದ್; **ಫಾರ್ವರ್ಡ್ಸ್:** ಉತ್ತಮ್ ಸಿಂಗ್, ಅರುಣ್ ಸಹಾನಿ, ಆದಿತ್ಯ, ಅಂಗದ್ ಬೀರ್ ಸಿಂಗ್, ಗುರುಜ್ಯೋತ್ ಸಿಂಗ್, ಸತೀಶ್ ಬಿ.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda2wheelersindia.com

*Terms and Condition apply. Product shown in the picture may vary from the actual product available in the market. Accessories shown in the product are not part of the standard equipment. Features may vary with colours & variants.

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9844478636; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com